
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

21 ಜನವರಿ 2015 ಪುಟ 20 ರೂ. 15/-

ಹಾಸ್ಯಲೇಖನ

ಬಾಸ್ ಮಗಳ ಮದುವೆ



ನಿತ್ಯಾ ಭಕ್ತೆಯ ನಿಗೂಢ ಸಾವು


ಮಂಡ್ಯ

ರಾಡಿ ೀಪಕ್ ಟಾಶ್



ಪರಮೇಶ್

ಔಟ್ ಉಗ್ರಪ್ಪ ಇನ್?



ಕೊಡಗು

ಪ್ರತಾಪನ ಅಸಂಬದ್ಧ ಪ್ರಲಾಪ


ಸಗಣಿ ಸ್ವಾಮಿ ವಿರುದ್ಧ ಹವ್ಯಕರ ಬಂಡಾಯ



ದೇವನೂರರ ನಿಲುವು ಜನಾಂದೋಲನಕ್ಕೆ ದಾರಿಯಾಗಲಿ - 1

ಮಾತೃಭಾಷಾ ಮಾಧ್ಯಮದ ಕುರಿತು ಸುಪ್ರೀಂಕೋರ್ಟ್ ಹೇಳಿರುವುದೇನು?

ಅಂಚಿನಿಂದ...



ಡಾ.ವಾಸು ಎಚ್.ವಿ.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಒಪ್ಪಿಕೊಳ್ಳಲು ನಿರಾಕರಿಸಿರುವ ದೇವನೂರ ಮಹಾದೇವರು, ಬಹುಮುಖ್ಯವಾದ ಚರ್ಚೆಗೆ ಮತ್ತೊಮ್ಮೆ ಚಾಲನೆ ನೀಡಿದ್ದಾರೆ. ಆದರೆ, ಚರ್ಚೆಯ ಹಂತದಿಂದ ಆಂದೋಲನವಾಗುವ ಕಡೆಗೆ ಅದನ್ನು ತೆಗೆದುಕೊಂಡು ಹೋಗುವ ಜವಾಬ್ದಾರಿ ದೇವನೂರರದ್ದು ಮಾತ್ರವಲ್ಲ. ಹಾಗಾಗಿ, ಕೆಲವು ದಶಕಗಳಿಂದ ಮತ್ತು ಈಗಲೂ ಕನ್ನಡ ಮಾಧ್ಯಮದ ಪರ ಕೆಲಸ ಮಾಡುತ್ತಿರುವ ಎಲ್ಲಾ ಕನ್ನಡಪರ ಹೋರಾಟಗಾರರು, ಸಾಹಿತಿ-ಕಲಾವಿದರು ಇದನ್ನು ಒಂದು ಮುಖ್ಯ ಸಂದರ್ಭವೆಂದು ಪರಿಗಣಿಸುವ ಅಗತ್ಯವಿದೆ. ಶಿಕ್ಷಣದಲ್ಲಿನ ಅಸಮಾನತೆಯ ವಿರುದ್ಧ ಹೋರಾಡುತ್ತಿರುವ ಎಡಪಂಥೀಯ- ದಲಿತ ಸಂಘಟನೆಗಳು ಜೊತೆಗೂಡಬೇಕಿದೆ. ಏಕೆಂದರೆ, ಶಿಕ್ಷಣದಲ್ಲಿನ ಅಸಮಾನತೆ ಹೋಗದೇ, ಸಮಾನ ಭಾಷಾ ನೀತಿಯೂ ಜಾರಿಗೆ ಬರದು; ಸಮಾನ ಭಾಷಾನೀತಿ ಜಾರಿಗೆ ಬರದೇ ಶಿಕ್ಷಣದಲ್ಲಿನ ಅಸಮಾನತೆಯೂ ಹೋಗದು. ಇವೆಲ್ಲವನ್ನೂ ಸಮಗ್ರವಾಗಿ ಚರ್ಚಿಸಲು ಮತ್ತು ಎಲ್ಲರೂ ಒಗ್ಗೂಡಿ ಜನಭಾಷೆಗಳ ಹಾಗೂ ಸಮಾನ ಶಿಕ್ಷಣದ ತೇರನ್ನು ಮುಂದಕ್ಕೊಯ್ಯಲು ಬೇಕಾದ ಸಂದರ್ಭವನ್ನು ದೇವನೂರರು ಮತ್ತೊಮ್ಮೆ ನಿರ್ಮಿಸಿಕೊಟ್ಟಿದ್ದಾರೆ.


ಆ ಸಂದರ್ಭದಲ್ಲಿ ತಾವು ವಹಿಸಬೇಕಾದ ಪಾತ್ರವನ್ನು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಸಮ್ಮೇಳನಗಳು ಎಷ್ಟರಮಟ್ಟಿಗೆ ನಿಭಾಯಿಸುತ್ತವೋ ಗೊತ್ತಿಲ್ಲ. ಕಸಾಪ ನಿಜಕ್ಕೂ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯೆಂಬ ಹೆಗ್ಗಳಿಕೆಯನ್ನು ಉಳಿಸಿಕೊಳ್ಳಬೇಕಾದರೆ, ಅದು ಈ ಆಂದೋಲನದಲ್ಲಿ ಸಕ್ರಿಯ ಪಾತ್ರವನ್ನು ವಹಿಸಬೇಕೆಂಬ ಒತ್ತಡ ತರುವ ಕೆಲಸವನ್ನು ಉಳಿದವರೇ ಮಾಡಬೇಕಿದೆ. ಇನ್ನು ನಾಲ್ಕು ವಾರಗಳಲ್ಲಿ ಸಾಹಿತ್ಯ ಸಮ್ಮೇಳನವು ನಡೆಯಲಿದೆ. ಅದಕ್ಕೆ ಮುಂಚೆ ಸದರಿ ವಿಚಾರದ ಕುರಿತ ಪ್ರಾಥಮಿಕ ಸಂಗತಿಗಳನ್ನು ಈ ಅಂಕಣದಲ್ಲಿ ಚರ್ಚಿಸಲಾಗುತ್ತದೆ.

ಮೊದಲಿಗೆ, ಇಂದು ಮಾತೃಭಾಷಾ ಮಾಧ್ಯಮವನ್ನು ಜಾರಿಗೆ ತರಲು ಪ್ರಧಾನ ಅಡ್ಡಿಯೆಂದು ಭಾವಿಸಲಾಗಿರುವ ಸುಪ್ರೀಂಕೋರ್ಟಿನ ತೀರ್ಪಿನಲ್ಲಿನ ಅಂಶಗಳತ್ತ ನೋಡೋಣ. 2014ರ ಮೇ 6ರಂದು ಸುಪ್ರೀಂಕೋರ್ಟಿನ ಸಂವಿಧಾನ ಪೀಠವು (Civil Appeal Nos.5166-5190 of 2013, 5191-5199 of 2013, the Civil Appeal arising out of S.L.P. (ಅ) No.32858 of 2013 and Writ Petition (ಅ) No.290 of 2009 ಮೊಕದ್ದಮೆಯಲ್ಲಿ) ನೀಡಿದ ಆ ಆದೇಶವು ಕರ್ನಾಟಕ ಸರ್ಕಾರವು ಏಪ್ರಿಲ್ 29, 1994ರಂದು ಹೊರಡಿಸಿದ್ದ ಸರ್ಕಾರೀ ಆದೇಶದ ಕುರಿತಾಗಿತ್ತು. ಸರ್ಕಾರೀ, ಖಾಸಗಿ (ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೂ ಸೇರಿದಂತೆ) ಶಾಲೆಗಳಲ್ಲಿ 1ನೇ ತರಗತಿಯಿಂದ 4ನೇ ತರಗತಿಯವರೆಗೆ ಮಾತೃಭಾಷೆ ಅಥವಾ ಕನ್ನಡವೇ ಮಾಧ್ಯಮವಾಗಿರಬೇಕು ಎಂಬ ಆ ಆದೇಶವನ್ನು ಸುಪ್ರೀಂಕೋರ್ಟ್ ರದ್ದುಪಡಿಸಿತು. ಅದರ ಪರಿಣಾಮವಾಗಿ ಬೋಧನಾ ಕ್ರಮದ ಎಲ್ಲಾ ವೈಜ್ಞಾನಿಕ ಸಿದ್ಧಾಂತಗಳಿಗೆ ವಿರುದ್ಧವಾಗಿ ಈ ದೇಶದಲ್ಲಿ ಇನ್ನು ಮುಂದೆ ಇಂಗ್ಲಿಷ್ ಮಾಧ್ಯಮವನ್ನೇ, ಕಲಿಕಾ ಮಾಧ್ಯಮವನ್ನಾಗಿ ಜಾರಿಗೆ ತರುವ ಸಾಧ್ಯತೆ ತೆರೆದುಕೊಂಡಿದೆ.

ಗೋಕಾಕ್ ಚಳವಳಿಯ ನಂತರದ ಕಾಲದ ಜನರ ಒತ್ತಾಸೆ ಹಾಗೂ ಶಿಕ್ಷಣ ತಜ್ಞರ ಅಭಿಮತದಂತೆ, ಕರ್ನಾಟಕ ಸರ್ಕಾರವು 19.06.1989ರಂದು (ಅದನ್ನು 22.06.1989ರಂದು ತಿದ್ದುಪಡಿ ಮಾಡಿ) ಆದೇಶ ಹೊರಡಿಸಿತ್ತು. ಈ ಆದೇಶವನ್ನು ಸುಪ್ರೀಂಕೋರ್ಟಿನಲ್ಲಿ ಇಂಗ್ಲಿಷ್ ಮಾಧ್ಯಮ ವಿದ್ಯಾರ್ಥಿಗಳ ಪೋಷಕರ ಸಂಘವು -(1994) 1 SCC 550- ಪ್ರಶ್ನಿಸಿತ್ತು. ಆದರೆ ಸುಪ್ರೀಂಕೋರ್ಟಿನ ವಿಭಾಗೀಯ ಪೀಠವು ಕರ್ನಾಟಕ ಸರ್ಕಾರದ ಆ ಆದೇಶ ಸಂವಿಧಾನಾತ್ಮಕವಾಗಿ ಸರಿಯಿದೆಯೆಂದು ಹೇಳಿ, ಮೊಕದ್ದಮೆಯನ್ನು ವಜಾಗೊಳಿಸಿತ್ತು. ಇದರನ್ವಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಭಾಷಾ ನೀತಿ ಏನಿರಬೇಕೆಂಬ ಕುರಿತು 1994-95ರ ಸಾಲಿನಿಂದ ಜಾರಿಗೆ ಬರುವ ಹಾಗೆ 29.04.1994ರಂದು ಕರ್ನಾಟಕ ಸರ್ಕಾರವು ಆದೇಶವನ್ನು ಹೊರಡಿಸಿತ್ತು.

ಆಶ್ಚರ್ಯದಾಯಕ ಬೆಳವಣಿಗೆಯಲ್ಲಿ ಕರ್ನಾಟಕ ಹೈಕೋರ್ಟ್ ಈ ಆದೇಶದ 2, 3, 6 ಮತ್ತು 8ನೇ ಅಂಶಗಳನ್ನು ರದ್ದುಪಡಿಸಿತು. ಈ ನಾಲ್ಕು ಅಂಶಗಳು ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದ್ದಾಗಿತ್ತು. ಮೊದಲು ನೀಡಿದ ತಡೆಯಾಜ್ಞೆಯನ್ನು ತೆರವುಗೊಳಿಸಲು ಸುಪ್ರೀಂಕೋರ್ಟಿನ ಆದೇಶವನ್ನು ಬಳಸಿಕೊಳ್ಳಬೇಕು ಮತ್ತು ಮಾತೃಭಾಷಾ ಮಾಧ್ಯಮವನ್ನು ಕೂಡಲೇ ಜಾರಿ ಮಾಡಬೇಕು ಎಂಬುದು ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವವರೆಲ್ಲರ ಅಭಿಪ್ರಾಯವಾಗಿತ್ತು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಚಂದ್ರಶೇಖರ ಪಾಟೀಲ ಮತ್ತು ಬರಗೂರು ರಾಮಚಂದ್ರಪ್ಪನವರು ನೀಡಿದ ವರದಿಗಳಲ್ಲೂ ಇದೇ ಅಭಿಪ್ರಾಯ ವ್ಯಕ್ತವಾಗಿತ್ತು.

ಹೈಕೋರ್ಟ್ ತೀರ್ಪಿನ ನಂತರ ಸುಪ್ರೀಂಕೋರ್ಟ್‌ಗೆ ಹೋದ ಕರ್ನಾಟಕ ಸರ್ಕಾರದ ಮೇಲ್ಮನವಿಯನ್ನು ಹಲವು ಸಾಹಿತಿ - ಶಿಕ್ಷಣ ತಜ್ಞರೂ ಬೆಂಬಲಿಸಿ ಅರ್ಜಿ ದಾಖಲಿಸಿದ್ದರು. ಇದೀಗ ಸುಪ್ರೀಂಕೋರ್ಟ್ ಕರ್ನಾಟಕ ಸರ್ಕಾರದ 1994ರ ಆದೇಶವನ್ನು ರದ್ದು ಮಾಡಿರುವುದಷ್ಟೇ ಅಲ್ಲ, ಮಾತೃಭಾಷಾ ಶಿಕ್ಷಣ ಮಾಧ್ಯಮದ ಕುರಿತು ಇಡೀ ದೇಶಕ್ಕೆ ಅನ್ವಯವಾಗುವಂತಹ ತೀರ್ಪನ್ನು ನೀಡಿದೆ. ತಾನು ತೀರ್ಪು ನೀಡಲು ತನ್ನ ಮುಂದೆ ಸರ್ವೋಚ್ಚ ನ್ಯಾಯಾಲಯವು ಹಾಕಿಕೊಂಡಿದ್ದು ಐದು ಪ್ರಶ್ನೆಗಳು. ಅವು ಯಾವುವು, ಅದಕ್ಕೆ ನ್ಯಾಯಾಲಯ ಏನು ತೀರ್ಮಾನಕ್ಕೆ ಬಂದು ನಿಂತಿದೆ ಮತ್ತು ಅದರ ಕುರಿತು ನಮ್ಮ ವಿಶ್ಲೇಷಣೆ ಏನಾಗಿರಬಹುದು ಎಂಬುದನ್ನು ನೋಡೋಣ.



ಪ್ರಶ್ನೆ 1: ಮಾತೃಭಾಷೆ ಎನ್ನುವುದರ ಅರ್ಥವೇನು? ಮಗುವಿಗೆ ಯಾವ ಭಾಷೆ ಸಲೀಸಾಗಿರುತ್ತದೋ ಅದು ಮಾತೃಭಾಷೆ ಎನ್ನುವುದಾದರೆ, ಅದನ್ನು ತೀರ್ಮಾನಿಸುವವರು ಯಾರು?

ಇದಕ್ಕೆ ಸುಪ್ರೀಂಕೋರ್ಟ್ ನೀಡಿದ ತೀರ್ಮಾನವೇನು? ಸಂವಿಧಾನದಲ್ಲಿ 'ಮಾತೃಭಾಷೆ' ಎಂಬುದರ ಉಲ್ಲೇಖ ಬರುವುದು ಒಂದೇ ಕಡೆ. ಅದು ಕಲಂ 350ಎ ರಲ್ಲಿ. ಆ ಕಲಂ ಹೀಗೆ ಹೇಳುತ್ತದೆ: ಭಾಷಾ ಅಲ್ಪಸಂಖ್ಯಾತ ಸಮುದಾಯಗಳ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಅವರ ಮಾತೃಭಾಷೆಯಲ್ಲೇ ಶಿಕ್ಷಣವನ್ನು ನೀಡಲು ಬೇಕಾದ ಎಲ್ಲಾ ಸೌಲಭ್ಯಗಳನ್ನು ನೀಡುವುದು ಪ್ರತಿಯೊಂದು ಸರ್ಕಾರದ ಕರ್ತವ್ಯ.

ಇದನ್ನು ಉಲ್ಲೇಖಿಸುತ್ತಾ, ನ್ಯಾಯಾಲಯವು ಈ ಅಭಿಪ್ರಾಯಕ್ಕೆ ಬರುತ್ತದೆ. ನಿರ್ದಿಷ್ಟ ರಾಜ್ಯವೊಂದರಲ್ಲಿ ಭಾಷಾ ಅಲ್ಪಸಂಖ್ಯಾತ ಗುಂಪಿನ ಮಾತೃಭಾಷೆಯೆಂದರೆ, ಅದು ಸಹಜವಾಗಿ ಆ ಭಾಷಾ ಅಲ್ಪಸಂಖ್ಯಾತ ಗುಂಪಿನ ಭಾಷೆ ಯಾವುದಿರುತ್ತದೋ ಅದಾಗಿರುತ್ತದೆ. ಈ ಅಭಿಪ್ರಾಯಕ್ಕೆ ಬಂದಮೇಲೆ, ಮಾತೃಭಾಷೆಯ ಕುರಿತ ಮತ್ತೊಂದು ಅಭಿಪ್ರಾಯಕ್ಕೆ ಬರುವುದು ಕಷ್ಟವೇನಾಗಿರಲಿಲ್ಲ. ಇದು ಭಾಷಾ ಅಲ್ಪಸಂಖ್ಯಾತರಿಗೆ ಅನ್ವಯಿಸುವಂತೆಯೇ, ಭಾಷಾ ಬಹುಸಂಖ್ಯಾತರ ಮಾತೃಭಾಷೆಯೆಂದರೆ ಆ ಬಹುಸಂಖ್ಯಾತರ ಭಾಷೆ ಯಾವುದಾಗಿರುತ್ತದೋ ಅದೇ ಆಗಿರುತ್ತದೆ. ಇದರ ಬಗ್ಗೆ ನ್ಯಾಯಾಲಯವು ಯಾವುದೇ ಮಾತನ್ನು ಆಡಿಲ್ಲ ಮತ್ತು ಇಲ್ಲಿಂದಲೇ ಸಮಸ್ಯೆ ಆರಂಭವಾಗುತ್ತದೆ. ಮುಂದುವರೆದು ತೀರ್ಪಿನ 26ನೇ ಪ್ಯಾರಾದಲ್ಲಿ ಹೀಗೆ ಹೇಳಲಾಗುತ್ತದೆ. 'ಸಂವಿಧಾನದ ಹಿನ್ನೆಲೆಯಲ್ಲಿ ನೋಡುವುದಾದರೆ ಮಾತೃಭಾಷೆಯೆನ್ನುವುದು ರಾಜ್ಯವೊಂದರ ಭಾಷಾ ಅಲ್ಪಸಂಖ್ಯಾತ ಗುಂಪಿನ ಭಾಷೆ ಯಾವುದೋ ಅದಾಗಿರುತ್ತದೆ ಮತ್ತು ಅದನ್ನು ಮಗುವಿನ ತಂದೆ ತಾಯಂದಿರು ಅಥವಾ ಪೋಷಕರು ನಿರ್ಧರಿಸುತ್ತಾರೆ'. ಇದು ವಿಚಿತ್ರವಾಗಿದೆ. ಒಂದು ವೇಳೆ ಮಾತೃಭಾಷೆಯೆನ್ನುವುದು ಆಯಾ ಭಾಷಿಕ ಅಲ್ಪಸಂಖ್ಯಾತರ ಭಾಷೆ ಯಾವುದೋ ಅದಾಗಿರುವುದಾದರೆ, ಅದನ್ನು ಮಗುವಿನ ತಾಯ್ತಂದೆಯರು ಅಥವಾ ಪೋಷಕರು ನಿರ್ಧರಿಸುವ ಅಗತ್ಯವಾದರೂ ಎಲ್ಲಿಂದ ಹುಟ್ಟಿಕೊಳ್ಳುತ್ತದೆ. ಅದಕ್ಕೆ ಸಂವಿಧಾನ ಪೀಠವು ಉತ್ತರವನ್ನೇನೂ ನೀಡಿಲ್ಲ.


ಈ ಅಗತ್ಯವು ಒಮ್ಮೆ ತಲೆದೋರಿತ್ತು. 1949ರ ಆಗಸ್ಟ್‌ನಲ್ಲಿ ನಡೆದ ಪ್ರಾಂತೀಯ ಶಿಕ್ಷಣ ಸಚಿವರ ಸಮ್ಮೇಳನವು ಇದನ್ನು ಒಂದು ಪ್ರಶ್ನೆಯನ್ನಾಗಿ ಹಾಕಿಕೊಂಡು ಉತ್ತರಿಸಿತ್ತು. ಅದರಲ್ಲಿ 'ಪ್ರಾಥಮಿಕ ಹಂತದಲ್ಲಿ ಮಗುವಿನ ಮಾತೃಭಾಷೆಯಲ್ಲೇ ಶಿಕ್ಷಣ ನೀಡುವುದು ಕಡ್ಡಾಯವಾಗಿದೆ. ಒಂದು ವೇಳೆ ಆ ಪ್ರಾಂತದ ಅಥವಾ ರಾಜ್ಯದ ಭಾಷೆಗಿಂತ ಮಗುವಿನ ಮಾತೃಭಾಷೆ ಭಿನ್ನವಾಗಿರುವುದಾದಲ್ಲಿ, ಆ ಶಾಲೆಯಲ್ಲಿ 40ಕ್ಕಿಂತ ಹೆಚ್ಚು ಅಥವಾ ತರಗತಿಯೊಂದರಲ್ಲಿ 10 ಮಕ್ಕಳು ಆ ನಿರ್ದಿಷ್ಟ ಭಾಷಿಕರಾಗಿರುವುದಾದಲ್ಲಿ ಅಲ್ಲಿಗೆ ಆ ಭಾಷೆಯ ಒಬ್ಬ ಶಿಕ್ಷಕರನ್ನು ಒದಗಿಸತಕ್ಕದ್ದು. ಆ ಪ್ರಾಂತದ ಅಥವಾ ರಾಜ್ಯದ ಭಾಷೆಯನ್ನು 3ನೇ ತರಗತಿಗಿಂತ ಮುಂಚೆ ಪರಿಚಯಿಸಬಾರದು ಮತ್ತು ಪ್ರಾಥಮಿಕ ಹಂತಕ್ಕಿಂತ ತಡವಾಗಿಯೂ ಪರಿಚಯಿಸಬಾರದು. ಪ್ರೌಢ ಶಿಕ್ಷಣಕ್ಕೆ ಹೊರಳಿಕೊಳ್ಳುವ ಸಂದರ್ಭದಲ್ಲಿ ಮಗುವಿಗೆ ಕಷ್ಟವಾಗುವುದಾದರೆ ಮೊದಲೆರಡು ವರ್ಷ ಅದು ತನ್ನ ಮಾತೃಭಾಷೆಯಲ್ಲೇ ಉತ್ತರ ನೀಡಲೂ ಅವಕಾಶವಿರಬೇಕು.'

ಬಹಳ ಅದ್ಭುತವಾದ, ಪ್ರಜಾತಾಂತ್ರಿಕವಾದ ಮತ್ತು ವೈಜ್ಞಾನಿಕವಾದ ಅಂಶವನ್ನು ನಮ್ಮ ಹಿರಿಯರು ಇಲ್ಲಿ ಮುಂದಿಟ್ಟಿದ್ದಾರೆ. ಇದರಿಂದ ಸ್ಪಷ್ಟವಾಗುವುದೇನೆಂದರೆ, ಆ ಸಮ್ಮೇಳನವು ಮಾತೃಭಾಷೆಯಲ್ಲೇ ಪ್ರಾಥಮಿಕ ಶಿಕ್ಷಣ ನೀಡಬೇಕೆಂಬುದನ್ನು ಪದೇಪದೇ ಒತ್ತಿ ಹೇಳಿದೆ. ನಿರ್ದಿಷ್ಟ ಸಂದರ್ಭದಲ್ಲಿ ಒಂದು ನಿರ್ದಿಷ್ಟ ಭಾಷೆಯನ್ನಾಡುವ ಮಕ್ಕಳು ಕಡಿಮೆ ಸಂಖ್ಯೆಯಲ್ಲಿದ್ದರೂ, ಅವರಿಗೆ ಅನ್ಯಾಯವೂ ಆಗಬಾರದು, ವೈಜ್ಞಾನಿಕವಾದ ಕಲಿಕೆಯೂ ಸಾಧ್ಯವಾಗಬೇಕು ಅಂತಹ ಕ್ರಮವನ್ನು ಅವರು ಮುಂದಿಟ್ಟಿದ್ದಾರೆ. ಇದನ್ನು ಗಮನಿಸದ ಸುಪ್ರೀಂಕೋರ್ಟ್ ಬಹಳ ಆಶ್ಚರ್ಯಕರ ರೀತಿಯಲ್ಲಿ ಇದರ ಮುಂದುವರೆದ ಭಾಗವನ್ನು ಮಾತ್ರ ಎತ್ತಿಕೊಂಡಿದೆ. ಅದೇನೆಂದರೆ 'ಈ ರೀತಿ ಅಲ್ಲಿನ ಮಗುವಿನ ಮಾತೃಭಾಷೆ ಯಾವುದೆನ್ನುವುದನ್ನು ಆ ಮಗುವಿನ ತಾಯ್ತಂದೆಯರು ನಿರ್ಧರಿಸುತ್ತಾರೆ'. ಇಲ್ಲಿಯೂ ಸಮ್ಮೇಳನವು ಸೂಕ್ತವಾದ ನಿರ್ಣಯವನ್ನೇ ತೆಗೆದುಕೊಂಡಿದೆ, ಆದರೆ ಸುಪ್ರೀಂಕೋರ್ಟ್ ಮಾತ್ರ ಅದನ್ನು ವಿಚಿತ್ರವಾಗಿ ಬಳಸಿಕೊಂಡಿದೆ.

ಸಮ್ಮೇಳನ ಯಾಕೆ ಸರಿ ಎಂದರೆ, ಅದು ಈ ಮಾತನ್ನು ಬರೆದದ್ದು 1949ರಲ್ಲಿ, ಅಂದರೆ ಈ ದೇಶದಲ್ಲಿ ಭಾಷಾವಾರು ಪ್ರಾಂತಗಳು ಇನ್ನೂ ರಚನೆಯಾಗಿರಲಿಲ್ಲ; ಆದರೆ ಭಾಷಾವಾರು ಪ್ರಾಂತ್ಯಗಳಿಗಾಗಿ ಒತ್ತಾಯಿಸಿ ಚಳವಳಿ ತೀವ್ರವಾಗುತ್ತಿತ್ತು. ವಿಭಿನ್ನ ಪ್ರಾಂತಗಳಲ್ಲಿ ಹಲವು ರೀತಿಯ 'ಅಲ್ಪಸಂಖ್ಯಾತ' ಭಾಷಿಕರಿರುತ್ತಿದ್ದರು; ಮತ್ತು ಕೆಲವು ಸಾರಿ ತಂದೆ ಮತ್ತು ತಾಯಿ ಇಬ್ಬರ ಮಾತೃಭಾಷೆಗಳು ಬೇರೆಯಾಗಿರುವ ಸಂಭವವೂ ಸಾಕಷ್ಟಿತ್ತು; ನಂತರದಲ್ಲಿ ಸಂವಿಧಾನದ 8ನೇ ಷೆಡ್ಯೂಲ್‌ನಲ್ಲಿ ಸೇರಿಸಿದ ಭಾಷೆಗಳಲ್ಲದೇ, ಲಿಪಿ ಇರುವ ಇಲ್ಲದಿರುವ ಇನ್ನೂ ಹಲವು ಭಾಷೆಗಳನ್ನಾಡುವ ಜನರು ಒಂದೇ ರಾಜ್ಯದಲ್ಲಿ ಇದ್ದ ಸಂದರ್ಭವಾಗಿತ್ತು, ಆ ನಿರ್ದಿಷ್ಟ ಪ್ರಾಂತದ ಸರ್ಕಾರವು ತನ್ನದೇ ಕಾರಣಗಳಿಂದಾಗಿ, ತನ್ನ 'ಅಧಿಕೃತ' ಅಥವಾ 'ಬಹುಸಂಖ್ಯಾತ' ಭಾಷೆಯನ್ನು ಮಿಕ್ಕವರ ಮೇಲೆ ಹೇರಿಬಿಡುವ ಸಾಧ್ಯತೆಯಿತ್ತು. 1956ರಲ್ಲಿ ಇದು ಸಂಪೂರ್ಣವಾಗಿ ಬಗೆಹರಿಯಲಿಲ್ಲವಾದರೂ, ಒಂದು ಮಟ್ಟಿಗೆ ಸಮಾಧಾನಕರವಾದ ಭಾಷಾವಾರು ಪ್ರಾಂತ ರಚನೆಯಾಯಿತು.

ಅಂತಹ ಸಂದರ್ಭದಲ್ಲೂ ತಾಯ್ತಂದೆಯರು ತೀರ್ಮಾನಿಸುವ ಭಾಷೆಯಲ್ಲಿ ಶಿಕ್ಷಣವನ್ನು ನೀಡಬೇಕೆಂದು ಹೇಳಿದ್ದು ಮಾತೃಭಾಷೆಗೆ ನೀಡುವ ಒತ್ತೇ ಆಗಿತ್ತು ಎಂಬುದು ಸ್ಪಷ್ಟವಾಗಿದೆ. ಆದರೂ ಸುಪ್ರೀಂಕೋರ್ಟ್ ಪ್ರಾಂತೀಯ ಶಿಕ್ಷಣ ಸಚಿವರ ಸಮ್ಮೇಳನದ ಈ ಮಾತನ್ನು ಇವತ್ತಿನ ಸಂದರ್ಭ ಹಾಗೂ ಅವತ್ತಿನ ಆಶಯ ಎರಡನ್ನೂ ಮರೆತು ಭಿನ್ನ ರೀತಿಯಲ್ಲಿ ಅರ್ಥೈಸಿದೆ.

ಪ್ರಶ್ನೆ 2: ಯಾವುದೇ ವಿದ್ಯಾರ್ಥಿಗೆ ತಾಯ್ತಂದೆಯರಿಗೆ ಅಥವಾ ನಾಗರಿಕರಿಗೆ ತಮಗಿಷ್ಟ ಬಂದ ಭಾಷೆಯನ್ನು ಪ್ರಾಥಮಿಕ ಹಂತದಲ್ಲಿ ಕಲಿಕಾ ಮಾಧ್ಯಮವನ್ನಾಗಿ ಆರಿಸಿಕೊಳ್ಳುವ ಹಕ್ಕಿದೆಯೇ?



ತನ್ನ ತೀರ್ಪಿನ ಪ್ಯಾರಾ 30 ಮತ್ತು 31ರಲ್ಲಿ ಇದಕ್ಕೆ ನ್ಯಾಯಾಲಯವು ಉತ್ತರ ನೀಡುತ್ತದೆ. 'ಈ ನ್ಯಾಯಾಲಯವು ಕಾಲದಿಂದ ಕಾಲಕ್ಕೆ ಸಂವಿಧಾನದ 19 (1)(ಎ) ಕಲಂನಲ್ಲಿ ಪ್ರದತ್ತವಾಗಿರುವ ಅಭಿವ್ಯಕ್ತಿ ಮತ್ತು ವಾಕ್ ಸ್ವಾತಂತ್ರ್ಯದ ಅರ್ಥವ್ಯಾಪ್ತಿಯನ್ನು ವಿಸ್ತರಿಸುತ್ತಾ ಬಂದಿದೆ. ಇದನ್ನು ಮಗುವಿನ ಕಲಿಕೆಯ, ಮಾಹಿತಿ ಪಡೆದುಕೊಳ್ಳುವ ಮತ್ತು ಮನರಂಜನೆ ಪಡೆದುಕೊಳ್ಳುವ ಹಕ್ಕಾಗಿ ಸಹ ವಿಸ್ತರಿಸುವ ಅಗತ್ಯವಿದೆ ಮತ್ತು ಇದಕ್ಕೆ ಪೂರಕವಾಗಿ ಈ ಹಿಂದೆ ಕೆಲವು ನಿರ್ದಿಷ್ಟ ಮೊಕದ್ದಮೆಗಳಲ್ಲಿ ಅದನ್ನು ಸರ್ವೋಚ್ಚ ನ್ಯಾಯಾಲಯವು ಗುರುತಿಸಿದೆ. ಇಲ್ಲೂ ಸಹ ನ್ಯಾಯಾಲಯವು ಎಡವಿರುವುದು ಸ್ಪಷ್ಟವಾಗಿದೆ. ಈ ರೀತಿ ಅದರ ಅರ್ಥವ್ಯಾಪ್ತಿಯನ್ನು ವಿಸ್ತರಿಸುವುದು ಅಪೇಕ್ಷಣೀಯವೇ ಆಗಿದ್ದರೂ, ಅದನ್ನು ವಿಸ್ತರಿಸಿದ ರೀತಿಯಲ್ಲಿ ಸಮಸ್ಯೆಯಿದೆ. ಮಗುವಿಗೆ ಪರಕೀಯವಾದ ಒಂದು ಭಾಷೆಯಲ್ಲಿ ಶಿಕ್ಷಣವನ್ನು ನೀಡುವುದರ ಕುರಿತ ತೀರ್ಮಾನವನ್ನು ಯಾರು ತೆಗೆದುಕೊಳ್ಳುತ್ತಾರೆ? ಇಂದಿನ ಮಟ್ಟಿಗೆ ಹೇಳುವುದಾದರೆ, ಅದರ ತಾಯ್ತಂದೆಯರು, ಖಾಸಗಿ ಶಿಕ್ಷಣ ಸಂಸ್ಥೆ ಲಾಬಿ, ಸರ್ಕಾರ ಮತ್ತು ಸರ್ವೋಚ್ಚ ನ್ಯಾಯಾಲಯ. ಮಗುವಿನ ಪರವಾಗಿ ಪೋಷಕರಿಗಿರುವ ಹಕ್ಕನ್ನು ಸರ್ವೋಚ್ಚ ನ್ಯಾಯಾಲಯವು 'ಈಗಾಗಲೇ ಸಿದ್ಧಗೊಂಡಿರುವುದು' ಎಂಬ ರೀತಿಯಲ್ಲಿ ತೆಗೆದುಕೊಂಡಿದೆಯೇ ಹೊರತು ಚರ್ಚಿಸಲು ಹೋಗಿಲ್ಲ.


ಸಂವಿಧಾನದ ಈ ಕಲಂನಡಿ ಇರುವ ಅರ್ಥವ್ಯಾಪ್ತಿಯನ್ನು ಮಗುವಿನ ಹಕ್ಕಾಗಿ ಹೇಳಲು ಬರುವುದಿಲ್ಲ ಎಂದು ಕರ್ನಾಟಕದ ನ್ಯಾಯವಾದಿಗಳೂ ವಾದಿಸಿದ್ದಾರೆ. ಮಗುವಿಗೆ ವಯಸ್ಕರಿಗಿರುವ ಎಲ್ಲಾ ಹಕ್ಕುಗಳನ್ನು ನಮ್ಮ ಸಂವಿಧಾನವಾಗಲೀ, ಸರ್ಕಾರವಾಗಲೀ ಕೊಟ್ಟಿಲ್ಲ. ನಿರ್ದಿಷ್ಟ ಬಗೆಯ ಸಿನೆಮಾಗಳನ್ನು ವೀಕ್ಷಿಸುವ, ಉದ್ಯೋಗ ಮಾಡುವ, ಮತದಾನ ಮಾಡುವ, ಮದುವೆಯಾಗುವ ಹಕ್ಕುಗಳನ್ನು ಸಕಾರಣಗಳಿಗಾಗಿಯೇ ನಿರ್ಬಂಧಿಸಲಾಗಿದೆ ಎಂಬುದನ್ನು ಮರೆಯಲಾಗದು.

ಇದನ್ನೇ ವಿಸ್ತರಿಸುವುದಾದರೆ, ಸಂವಿಧಾನದ ಕಲಂ 21 ಎ (86ನೇ ತಿದ್ದುಪಡಿ ಮೂಲಕ ಶಿಕ್ಷಣದ ಹಕ್ಕನ್ನು 6ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ನೀಡಿದ ಭಾಗ) ಸಹ ತಪ್ಪಾಗುತ್ತದೆ. ಏಕೆಂದರೆ ಅದು ಕೇವಲ ಉಚಿತ ಶಿಕ್ಷಣ ನೀಡುವ ಬಗ್ಗೆ ಮಾತನಾಡುವುದಿಲ್ಲ, ಕಡ್ಡಾಯ ಶಿಕ್ಷಣ ನೀಡುವ ಕುರಿತೂ ಮಾತನಾಡುತ್ತದೆ. ಅಂದರೆ, ಮಗುವಿಗೆ ಮತ್ತು ಪೋಷಕರಿಗೆ ಒಪ್ಪಿಗೆಯಿಲ್ಲದಿದ್ದಾಗ್ಯೂ ಈ ವಯಸ್ಸಿನಲ್ಲಿ ಶಿಕ್ಷಣವನ್ನು ಪಡೆದುಕೊಳ್ಳುವುದು ಕಡ್ಡಾಯವಾಗಿದೆ. ಈ ಕುರಿತು ಸರ್ವೋಚ್ಚ ನ್ಯಾಯಾಲಯವು ಮಾತನಾಡುವುದೇ ಇಲ್ಲ.

ಬದಲಿಗೆ, ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಪೂರಕವಾಗುವ ರೀತಿಯಲ್ಲಿ ಶಿಕ್ಷಣ ಮಾಧ್ಯಮವನ್ನು ಆಯ್ದುಕೊಳ್ಳುವ ಹಕ್ಕನ್ನು ಪೋಷಕರ ವ್ಯಾಪ್ತಿಗೆ ಬಿಡಲಾಗಿದೆ. ತನ್ನ ತಲೆಯನ್ನು ತಾನು ಕಾಯ್ದುಕೊಳ್ಳಬೇಕಾದ ಮತ್ತು ಕಾಯ್ದುಕೊಳ್ಳಬಹುದಾದ ವಯಸ್ಕರಿಗೇ, 'ಆ ತಲೆಯ ಜವಾಬ್ದಾರಿ ನನ್ನದು' ಎಂದು ಹೆಲ್ಮೆಟ್‌ಅನ್ನು ಕಡ್ಡಾಯಗೊಳಿಸುವ ಸರ್ಕಾರವು, ಮುಂದಿನ ಪೀಳಿಗೆಯನ್ನು ರೂಪಿಸುವ ಮಹತ್ತರವಾದ ಸಾಧನ ಶಿಕ್ಷಣದ ಕುರಿತಾಗಿ ಈ ರೀತಿಯಾದ ಅಭಿಪ್ರಾಯಕ್ಕೆ ಬಂದಿರುವುದು ಸೋಜಿಗದ ಸಂಗತಿಯಾಗಿದೆ.

(ಉಳಿದ ಮೂರು ಪ್ರಶ್ನೆಗಳು, ಕೋರ್ಟಿನ ಉತ್ತರ ಮತ್ತು ವಿಶ್ಲೇಷಣೆ ಮುಂದಿನ ವಾರ)

ಪ್ರಾಚೀನ ವಿಮಾನಗಳು ಮತ್ತು ಕತ್ತೆ ಮೂತ್ರ ಇಂಧನ!






ಕಂಡಹಾಗೆ


• ಗೌರಿ ಲಂಕೇಶ್
editorlankesh@gmail.com

ಸದ್ಯದಲ್ಲೇ ಎಚ್‌ಎಎಲ್, ಎನ್‌ಎಎಲ್, ಡಿಆರ್‌ಡಿಓ, ...ಸ್ರೋ, ಗಿಸ್ರೋಗಳನ್ನೆಲ್ಲ ಮುಚ್ಚುವ ಮೂಲಕ ಅವುಗಳಿಗೆ ...ಡಲಾಗುತ್ತಿದ್ದ ಕೋಟ್ಯಂತರ ರೂಪಾಯಿಗಳನ್ನು ...ಳಿಸಲಾಗುತ್ತದೆ. ಹಾಗೆಯೇ ದೇಶದ ಎಲ್ಲಾ ಮೆಡಿಕಲ್, ...ಜಿನಿಯರಿಂಗ್, ಐಐಟಿ, ಐಐಎಮ್‌ಗಳನ್ನೂ ಬಂದ್ ...ಾಡಲಾಗುತ್ತದೆ. ಯಾಕೆ ಅಂತ ಕೇಳುತ್ತೀರಾ? ಯಾಕೆ ...ದರೆ ವಿಜ್ಞಾನಿಗಳು ಕಷ್ಟಪಟ್ಟು ಸಂಶೋಧನೆ ಹೆಸರಲ್ಲಿ ...ಮ್ಮ ಅಮೂಲ್ಯ ಸಮಯವನ್ನು ಮತ್ತು ದೇಶದ ಹಣವನ್ನು ...ಸ್ಟ್ ಮಾಡುವ ಅಗತ್ಯ ಇನ್ನು ಮುಂದೆ ಇಲ್ಲ. ಹಾಗೆಯೇ ...ದ್ಯಾರ್ಥಿಗಳು ಹಗಲು ರಾತ್ರಿ ಓದಿ ಡಾಕ್ಟರ್, ...ಜಿನಿಯರ್‌ಗಳಾಗುವ ಜರೂರತ್ತೂ ಇಲ್ಲ. ಎಲ್ಲರೂ ...ನ್ನು ಮುಂದೆ ಸಂಸ್ಕೃತ ಕಲಿತು ಋಗ್ವೇದ ತರಹದ ...ಾಚೀನ ಗ್ರಂಥಗಳನ್ನು ಓದಿದರೆ ಸಾಕು, ಎಂತೆಂತಹದ್ದೋ ...ಶೋಧನೆಗಳನ್ನು ಮಾಡಬಹುದು, ಯಾರೂ ಊಹಿಸದೇ ...ುವಂತಹ ಸ್ಪೇಸ್ ಶಟಲ್‌ಗಳನ್ನು ನಿರ್ಮಿಸಬಹುದು, ...ನೆಗೂ ನಿಲುಕದ ಬಾಂಬ್‌ಗಳನ್ನು, ಅಸ್ತ್ರಗಳನ್ನೂ ...ಯಾರಿಸಬಹುದು.

ನಾನು ತಮಾಷೆ ಮಾಡುತ್ತಿಲ್ಲ ಕಣ್ರೀ. ಇತ್ತೀಚೆಗೆ ...ಂಬೈಯಲ್ಲಿ ಭಾರತೀಯ ವಿಜ್ಞಾನ ಕಾಂಗ್ರೆಸ್ ಎಂಬ ...ಂತರರಾಷ್ಟ್ರೀಯ ಸಮಾವೇಶ ನಡೆಯಿತು. ಅಲ್ಲಿ ಕ್ಯಾಪ್ಟನ್ ...ನಂದ್ ಜೆ ಬೊಡಾಸ್ ಎಂಬಾತ ಎಂತೆಂತಹ ...ಚಾರಗಳನ್ನು ಮಂಡಿಸಿದ್ದಾನೆ ಗೊತ್ತಾ? ಅದು 'ವಿಜ್ಞಾನಿ'ಗಳ ...ೆ ಆಗಿತ್ತು ನಿಜ, ಆದರೆ ಅದಕ್ಕೆ ವಿಜ್ಞಾನಿ ಅಲ್ಲದ ...ೊಡಾಸ್‌ನನ್ನು ಆಹ್ವಾನಿಸಲಾಗಿತ್ತು, ಯಾಕೆ ಅಂದರೆ ಆತನಿಗೆ ...ಸ್ಕೃತ ಗೊತ್ತು. 'ಸಂಸ್ಕೃತದ ಮೂಲಕ ಪುರಾತನ ವಿಜ್ಞಾನ' ...ಬ ಚರ್ಚೆಯಲ್ಲಿ ಭಾಗವಹಿಸಿದ ಬೊಡಾಸ್ "7,000 ...ರ್ಷಗಳ ಹಿಂದೆಯೇ ಭಾರತದಲ್ಲಿ ವಿಮಾನಗಳಿದ್ದವು. ...ವು ಸಾಮಾನ್ಯ ವಿಮಾನಗಳಾಗಿರಲಿಲ್ಲ, ದೇಶದಿಂದ ದೇಶಕ್ಕೆ, ...ಂಡದಿಂದ ಖಂಡಕ್ಕೆ ಮಾತ್ರವಲ್ಲ ಈ ಗ್ರಹದಿಂದ ಬೇರೆ ...ಹಗಳಿಗೂ ಹಾರಬಲ್ಲಂತಹ ಸ್ಪೇಸ್ ಶಟಲ್‌ಗಳಾಗಿದ್ದವು" ...ಂದಿದ್ದಾನೆ. ಅಷ್ಟೇ ಅಲ್ಲ "ಈಗಿನ ವಿಮಾನಗಳು ಮುಂದಕ್ಕೆ ...ಾತ್ರ ಹಾರಬಲ್ಲವು. ಆದರೆ ಸಾವಿರಾರು ವರ್ಷಗಳ ಹಿಂದೆ ...ಾರತದಲ್ಲಿ ನಿರ್ಮಿಸಲಾಗಿದ್ದ ಹಾರುವ ಯಂತ್ರಗಳು ...ುಂದಕ್ಕೆ, ಹಿಂದಕ್ಕೆ, ಅಕ್ಕಕ್ಕೆ, ಪಕ್ಕಕ್ಕೆ, ಮೇಲಕ್ಕೆ, ಕೆಳಗೆ-...ಗೆ ಎಲ್ಲ ದಿಕ್ಕುಗಳಲ್ಲೂ ಹಾರಬಲ್ಲವಾಗಿದ್ದವು. ಅವುಗಳಲ್ಲಿ ...ೋಬ್ಬರಿ 40 ಎಂಜಿನ್‌ಗಳಿರುತ್ತಿದ್ದರಿಂದ ಅವುಗಳ ...ಸಾಸ್ಟ್ ಪೈಪ್ ಆನೆಯ ಸೊಂಡಿಲಿನಂತೆ ಇರುತ್ತಿತ್ತು. ...ವು ವಿಮಾನಗಳು 200 ಅಡಿ ಎತ್ತರ ಇರುತ್ತಿದ್ದವು" ...ದೂ ಬೊಡಾಸ್ ಹೇಳಿದ್ದಾನೆ.

...ಬೊಡಾಸ್‌ನ ಸಂಶೋಧನೆಯ ಪ್ರಕಾರ ಆಗಿನ ಕಾಲದ ...ಡಾರ್‌ಗಳು ಈಗಿನಷ್ಟು ಕಳಪೆ ಆಗಿರಲಿಲ್ಲ. ಈಗಿನ





ಪ್ರಾಚೀನ ಭಾರತೀಯರು ನಿರ್ಮಿಸಿದ ಹಾರುವ ಯಂತ್ರಗಳು...



...ಡಾರ್‌ಗಳಲ್ಲಿ ಆಕಾಶದಲ್ಲಿ ಹಾರುತ್ತಿರುವ ವಿಮಾನ ಒಂದು ...ಕ್ಕಿಯಾಗಿ ಮಾತ್ರ ಕಾಣಿಸುತ್ತದೆ ಆದರೆ ಪ್ರಾಚೀನ ಕಾಲದ ...ಡಾರ್‌ನಲ್ಲಿ ಹಾರುತ್ತಿರುವ ಯಂತ್ರದ ಆಕಾರ, ಗಾತ್ರ ...ಲ್ಲವೂ ಸ್ಪಷ್ಟವಾಗಿ ಕಾಣಿಸುತ್ತಿತ್ತು, ಆ 'ರೇಡಾರ್' ಅನ್ನು ...ಪರ್ಶಕ್ ರಹಸ್ಯ' ಎಂದು ಕರೆಯಲಾಗುತ್ತಿತ್ತು, ...ಚೀನಕಾಲದ ವಿಮಾನಗಳನ್ನು ಓಡಿಸುತ್ತಿದ್ದ ಪೈಲಟ್‌ಗಳ ...ಸೂಟ್‌ಗಳನ್ನು ನೀರಿನಲ್ಲಿ ಬೆಳೆವ ಗಿಡಗಳಿಂದ ...ಯಾರಿಸಲಾಗುತ್ತಿತ್ತು ಮತ್ತು ಅವುಗಳಿಗೆ ವೈರಸ್‌ಗಳನ್ನು ...ಯುವ ಶಕ್ತಿತ್ತು, ಕೊನೆಯದಾಗಿ, ಆ ವಿಮಾನಗಳು ...ಪಯೋಗಿಸುತ್ತಿದ್ದ ಇಂಧನ ಯಾವುದರದ್ದು ಗೊತ್ತಾ? ಕತ್ತೆ ಮತ್ತು ಆನೆಯ ಮೂತ್ರ!

ಇದೆಲ್ಲ ಬೊಡಾಸ್‌ಗೆ ಹೇಗೆ ಗೊತ್ತಾಯಿತು? ಅವನ ಪ್ರಕಾರ 7,000 ವರ್ಷಗಳ ಹಿಂದೆ ಭಾರದ್ವಾಜ್ ಎಂಬ ಮಹಾ ಋಷಿಯೊಬ್ಬ ಇದ್ದು ಅವನು ಸಂಸ್ಕೃತದಲ್ಲಿ ಬರೆದಿರುವ 'ವಿಮಾನ ಸಂಹಿತಾ' ಎಂಬ ಕೃತಿಯಲ್ಲಿ ಇದನ್ನೆಲ್ಲ ದಾಖಲಿಸಿದ್ದಾನಂತೆ. ಋಗ್ವೇದದಲ್ಲೂ ಇಂತಹ ಅದ್ಭುತ ಹಾರುವ ಯಂತ್ರಗಳ ಬಗ್ಗೆ ಹಲವಾರು ಉಲ್ಲೇಖಗಳಿವೆಯಂತೆ. ಸಂಸ್ಕೃತ ಗೊತ್ತಿದ್ದರಿಂದ ಅದನ್ನೆಲ್ಲ ಓದಿ ಬೊಡಾಸ್ ಅರ್ಥಮಾಡಿಕೊಂಡನಂತೆ. ಎಲ್ಲರೂ ಹಾಗೆ ಮಾಡಿದರೆ ದೇಶ ವಿಜ್ಞಾನ ವಲಯದಲ್ಲಿ ದೊಡ್ಡ ಸಾಧನೆ ಮಾಡುತ್ತದಂತೆ.

ಕಿರಣ್ ನಾಯಕ್ ಎಂಬ ಮತ್ತೊಬ್ಬ ಸಂಸ್ಕೃತ ಪಂಡಿತನೂ ಅದೇ ವಿಜ್ಞಾನಿಗಳ ಸಭೆಯಲ್ಲಿ ಭಾಗವಹಿಸಿ ನಮ್ಮ ಪೂರ್ವಜರು ಇನ್ನೂ ಎಂತೆಂತಹ ಅತ್ಯದ್ಭುತ ಸಂಶೋಧನೆಗಳನ್ನು ಮಾಡಿದ್ದರು ಎಂಬುದರ ಬಗ್ಗೆಯೂ ಬೆಳಕು ಚೆಲ್ಲಿದ್ದಾನೆ. ಈ ನಾಯಕ್ ಪ್ರಕಾರ ಹೋದ ವರ್ಷ ಇಸ್ರೋದ ವಿಜ್ಞಾನಿಗಳು ಮಂಗಳಕ್ಕೆ ಆರ್ಬಿಟರ್ ಒಂದನ್ನು ಕಳುಹಿಸಿದ್ದು ಯಾವ ಸಾಧನೆಯೂ ಅಲ್ಲವಂತೆ. ಯಾಕೆಂದರೆ ಮಹಾಭಾರತದ ಕಾಲದಲ್ಲೇ ನಮ್ಮ ಪೂರ್ವಜರು ಯಂತ್ರವನ್ನು ಮಂಗಳಕ್ಕೆ ಕಳುಹಿಸುವ ಬದಲಾಗಿ ತಾವೇ ಅಲ್ಲಿಯವರೆಗೂ ಹೋಗಿಬರುವುದನ್ನು ಮಾಡುತ್ತಿದ್ದರಂತೆ.



ಮಹಾಭಾರತ ಕಾಲದ ಹೆಲ್ಮೆಟ್ ಮಂಗಳನ ಮೇಲೆ...

ವಿಜ್ಞಾನಿಗಳ ಸಭೆಯಲ್ಲಿ ಈ ನಾಯಕ್ ಹೇಳಿದ್ದು ಹೀಗಿದೆ: "ಮಹಾಭಾರತದಲ್ಲಿ ಇಬ್ಬರು ರಾಜರು ಮಂಗಳ ಗ್ರಹದ ಮೇಲೆ ಯುದ್ಧ ಮಾಡುತ್ತಿದ್ದರು. ಆಗ ಒಬ್ಬನ ಹೆಲ್ಮೆಟ್ ಕೆಳಗೆ ಬಿದ್ದುಹೋಯಿತು. ಈಗ ನಾವು ಗೂಗಲ್‌ನಲ್ಲಿ 'ಹೆಲ್ಮೆಟ್ ಆನ್ ಮಾರ್ಸ್' ಎಂದು ಹುಡುಕಿದರೆ ಅದರ ಫೋಟೋ ಕಾಣಸಿಗುತ್ತೆ. ಆ ಚಿತ್ರವನ್ನು ನಾಸಾ ತನ್ನ ವೆಬ್‌ಸೈಟಿನಲ್ಲಿ ಹಾಕಿದೆ. ಇದರಿಂದ ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳ ಹಿಂದೆಯೇ ಸ್ಪೇಸ್ ಶಟಲ್‌ಗಳಿದ್ದವು ಎಂದೂ, ನಮ್ಮ ಪೂರ್ವಿಕರು ಬೇರೆ ಗ್ರಹಗಳಿಗೂ ಭೇಟಿ ನೀಡುತ್ತಿದ್ದರು ಎಂದೂ ಗೊತ್ತಾಗುತ್ತದೆ."

ಈ ನಾಯಕ್ ಪ್ರಕಾರ "ಹಸುವಿನ ಹೊಟ್ಟೆಯಲ್ಲಿ ಒಂದು ತರಹದ ಬ್ಯಾಕ್ಟೀರಿಯಾ ಇರುತ್ತದೆ. ಈ ಬ್ಯಾಕ್ಟೀರಿಯಾದಿಂದಾಗಿ ಹಸು ಏನನ್ನೇ ಮೇಯ್ದರೂ ಅದು ಚಿನ್ನವಾಗಿ ಮಾರ್ಪಾಡಾಗುತ್ತದೆ. ಈ ಬ್ಯಾಕ್ಟೀರಿಯಾ ಯಾವುದು ಎಂಬುದು ನಾಸಾಗೆ ಗೊತ್ತಿದೆ." ಅಷ್ಟೇ ಅಲ್ಲ ಪ್ರಾಚೀನ ಕಾಲದಲ್ಲಿ ಮಳೆ ಮತ್ತು ಮಂಜು ತಡೆಯುವ ರಾಕೆಟ್‌ಗಳೂ ನಮ್ಮಲ್ಲಿದ್ದು ಅವುಗಳಲ್ಲಿ ಸಕ್ಕರೆಯನ್ನು ಇಂಧನವಾಗಿ ಬಳಸಲಾಗುತ್ತಿತ್ತಂತೆ.

ಆಯುರ್ವೇದ ವೈದ್ಯನೂ ಸಂಸ್ಕೃತ ಪಂಡಿತನೂ ಆಗಿರುವ ಅಶ್ವಿನ್ ಸಾವಂತ್ ಎಂಬಾತ ವಿಜ್ಞಾನಿಗಳ ಸಭೆಯಲ್ಲಿ ಭಾಗವಹಿಸಿ "ಋಗ್ವೇದದ ಕಾಲದಲ್ಲೇ ನಮ್ಮ ಪ್ರಾಚೀನಕಾಲದ ವೈದ್ಯರಿಗೆ ಗರ್ಭಿಣಿಯ ಹೊಟ್ಟೆ ಮತ್ತು ಗರ್ಭವನ್ನು ಸೀಳಿ ಕೂಸನ್ನು ಹೊರಗೆ ತೆಗೆಯುವ ಸಿಸೇರಿಯನ್ ಶಸ್ತ್ರಚಿಕಿತ್ಸೆ ಗೊತ್ತಿತ್ತು, ಸತ್ತ ತಾಯಂದಿರ ಗರ್ಭದಿಂದ ಜೀವಂತ ಇರುವ ಕೂಸನ್ನೂ, ಜೀವಂತ ಇರುವ ತಾಯಿಯ ಗರ್ಭದಿಂದ ಸತ್ತ ಕೂಸನ್ನೂ ತೆಗೆಯುವ ಕಲೆಯೂ ನಮ್ಮವರಿಗೆ ಗೊತ್ತಿತ್ತು, ಶಸ್ತ್ರಚಿಕಿತ್ಸೆಯಲ್ಲಿ ಉಪಯೋಗಿಸಲು 20 ಚೂಪಾದ ಮತ್ತು 101 ಚೂಪಲ್ಲದ ಸಲಕರಣೆಗಳನ್ನು ಪ್ರಾಚೀನಕಾಲದಲ್ಲೇ ತಯಾರಿಸಲಾಗಿತ್ತು, ಆಗಿನ ಕಾಲದಲ್ಲೇ ಬ್ರೈನ್ ಸರ್ಜರಿ ಮತ್ತು ಪ್ಲಾಸ್ಟಿಕ್ ಸರ್ಜರಿಗಳನ್ನು ಮಾಡಲಾಗುತ್ತಿತ್ತು, ಕ್ರಿಸ್ತ ಪೂರ್ವ 1,500ರಲ್ಲಿ ರಚಿಸಲಾದ ಸುಸೂತ್ರ ಸಂಹಿತೆಯಲ್ಲಿ ಇದರ ಬಗ್ಗೆ ಎಲ್ಲಾ ವಿವರಣೆಗಳಿವೆ. ಋಗ್ವೇದದಲ್ಲೂ ಇದರ ಕುರಿತು ಉಲ್ಲೇಖಗಳಿವೆ" ಎಂದಿದ್ದಾನೆ.

ಅಬ್ಬಬ್ಬಾ, ನಮ್ಮ ಪೂರ್ವಿಕರು ಅದೆಷ್ಟು ಪ್ರತಿಭಾವಂತರಾಗಿದ್ದರು! ಎಂತೆಂತಹ ಸಂಶೋಧನೆಗಳನ್ನು ಮಾಡಿದ್ದರು! ಬೇರೆ ದೇಶದವರು ಭೂಮಿ ಚಪ್ಪಟೆಯಾಗಿದೆ ಎಂದು ನಂಬಿದ್ದ ಕಾಲಕ್ಕೂ ಮುಂಚೆಯೇ ಮಂಗಳ ಗ್ರಹದ ಮೇಲೆ ಯುದ್ಧವನ್ನೇ ಮಾಡಿದ್ದರು, ಪ್ಲಾಸ್ಟಿಕ್ ಸರ್ಜರಿ ಮಾಡುತ್ತಿದ್ದರೆಂದರೆ ಅದು ಸಾಮಾನ್ಯ ಸಂಗತಿಯಾ?

ಆದರೆ ಇವತ್ತು ಎಂತಹ ಸ್ಥಿತಿ ಇದೆ? ಇವತ್ತಿಗೂ ನಮ್ಮ ವೈಜ್ಞಾನಿಕ ಸಂಸ್ಥೆಗಳಿಗೆ ಸ್ವತಂತ್ರವಾಗಿ ಒಂದು ವಿಮಾನವನ್ನು ನಿರ್ಮಿಸಲು ಆಗುತ್ತಿಲ್ಲ. ನಮ್ಮ ಪ್ರಯೋಗಾಲಯಗಳಲ್ಲಿ ಸರಿಯಾದ ಸಂಶೋಧನೆಗಳು ಸಾಧ್ಯವಾಗುತ್ತಿಲ್ಲ. ನಮ್ಮ ವಿಶ್ವವಿದ್ಯಾಲಯಗಳಿಗೆ ಪ್ರತಿಭಾವಂತ ವಿದ್ಯಾರ್ಥಿಗಳನ್ನು ತಯಾರಿಸಲು ಆಗುತ್ತಿಲ್ಲ, ಯಾಕೆ? ಯಾಕೆ ಅಂದರೆ ನಮ್ಮ ವಿದ್ಯಾರ್ಥಿಗಳು ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ಯೂಸ್‌ಲೆಸ್ ಆದ ವಿಷಯಗಳನ್ನು ಅನಗತ್ಯವಾದ ಭಾಷೆಗಳಲ್ಲಿ ಕಲಿಯುತ್ತಿದ್ದಾರೆ. ಅಂಥವರಿಂದ ಏನನ್ನು ಸಂಶೋಧಿಸಲು ಸಾಧ್ಯ? ಆದ್ದರಿಂದ ಅದನ್ನೆಲ್ಲ ಬಿಟ್ಟು ಎಲ್ಲರೂ ಸಂಸ್ಕೃತ ಕಲಿತು ವೇದ, ಉಪನಿಷತ್ತು ಇತ್ಯಾದಿಗಳನ್ನು ಓದಿದರೆ ನಮ್ಮ ಪೂರ್ವಿಕರು ಸಾಧಿಸಿದ್ದಕ್ಕಿಂತ ಹೆಚ್ಚನ್ನು ಸಾಧಿಸಬಹುದು! ಆ ಕಾರಣಕ್ಕೇ ಕೇಂದ್ರ ಮಂತ್ರಿಗಳಾದ ಹರ್ಷವರ್ಧನ್ ಮತ್ತು ಪ್ರಕಾಶ್ ಜಾವೇಡ್ಕರ್ ಅವರು ಅದೇ ವಿಜ್ಞಾನಿಗಳ ಸಮಾವೇಶದಲ್ಲಿ "ಸಂಸ್ಕೃತದಲ್ಲಿ ರಚಿಸಲ್ಪಟ್ಟಿರುವ ಕೃತಿಗಳಲ್ಲಿ ಅಪಾರ ಜ್ಞಾನ ಹುದುಗಿದೆ. ಆದ್ದರಿಂದ ಎಲ್ಲರೂ ಸಂಸ್ಕೃತದಲ್ಲಿರುವುದನ್ನು ಅಭ್ಯಸಿಸಿ ಮನುಕುಲವನ್ನು ಅಭಿವೃದ್ಧಿಪಡಿಸಬೇಕು" ಎಂದು ವಿಜ್ಞಾನಿಗಳಿಗೆ ಕರೆ ಕೊಟ್ಟಿದ್ದಾರೆ.

ಆದರೆ ತಮಾಷೆ ಇರುವುದೇ ವಾಸ್ತವದಲ್ಲಿ. ನಿಜವಾಗಲೂ ಭಾರದ್ವಾಜ್ ಎಂಬ ಮಹಾಋಷಿಯು 'ವೈಮಾನಿಕ ಶಾಸ್ತ್ರ' ಎಂಬ ಕೃತಿಯನ್ನು ಸಂಸ್ಕೃತದಲ್ಲಿ ರಚಿಸಿದ್ದನಾ? ಅದರಲ್ಲಿ ನಿಜವಾಗಲೂ ಇಂತಹ ಅದ್ಭುತ ಸಂಶೋಧನೆಗಳ ಬಗ್ಗೆ ಮಾಹಿತಿ ಇದೆಯಾ?

ಸುಮಾರು ಐವತ್ತು ವರ್ಷಗಳ ಹಿಂದೆಯೇ 'ಪ್ರಾಚೀನ ಕಾಲದಲ್ಲಿ ಭಾರತೀಯರಿಗೆ ವಿಮಾನಗಳ ಬಗ್ಗೆ ಗೊತ್ತಿತ್ತು ರಾಮ ಮತ್ತು ಸೀತೆ ಶ್ರೀಲಂಕಾದಿಂದ ಭಾರತಕ್ಕೆ ಪುಷ್ಪಕವಿಮಾನದಲ್ಲಿ ಹಾರಿಬಂದಿದ್ದರು' ಎಂದೆಲ್ಲಾ ಪುರಾಣನ್ನು ಹಿಂದೂತ್ವವಾದಿಗಳು ಶುರುಹಚ್ಚಿಕೊಂಡಿದ್ದಾಗ ಬೆಂಗಳೂರಿನಲ್ಲಿರುವ ಪ್ರತಿಷ್ಠಿತ ಐಐಎಸ್‌ಸಿ ಸಂಸ್ಥೆಯ ಐವರು ವಿಜ್ಞಾನಿಗಳು ಸಂಶೋಧನೆ ನಡೆಸಿ ವರದಿಯನ್ನು ಪ್ರಕಟಿಸಿದ್ದರು.

ಆ ವರದಿಯ ಮುಖ್ಯಾಂಶಗಳು ಹೀಗಿವೆ:

19ನೇ ಶತಮಾನದ ಅಂತ್ಯದಲ್ಲಿ ತಮಿಳುನಾಡಿನ ಹೊಸೂರು ತಾಲೂಕಿನ ಹಳ್ಳಿಯೊಂದರಲ್ಲಿ ಸುಬ್ಬರಾಯ ಶಾಸ್ತ್ರಿ ಎಂಬಾತ ಜನಿಸಿದ. ಆತನಿಗೆ ಎಂಟು ವರ್ಷ ವಯಸ್ಸಾದಾಗ ಅವನ ತಂದೆ ತಾಯಿ ಅವನಿಗೆ ಮದುವೆ ಮಾಡಿಸಿದರು. ಶಾಸ್ತ್ರಿಗೆ ಹಲವಾರು ತಮ್ಮಂದಿರು ಮತ್ತು ತಂಗಿಯರು ಇದ್ದರು. ಶಾಸ್ತ್ರಿಗೆ ಮದುವೆಯಾದ ನಂತರದ ಸ್ವಲ್ಪ ಸಮಯದಲ್ಲೇ ಆತನ ತಂದೆತಾಯಂದಿರು ತೀರಿಕೊಂಡರು. ಇಡೀ ಕುಟುಂಬದ ಜವಾಬ್ದಾರಿ ಪುಟ್ಟ ಬಾಲಕ ಶಾಸ್ತ್ರಿಯ ಹೆಗಲ ಮೇಲೆ ಬಿತ್ತು. ಆತ ತನ್ನ ಒಡಹುಟ್ಟಿದವರನ್ನು ಕರೆದುಕೊಂಡು ತನ್ನ ಹೆಂಡತಿಯ ತಂದೆಯ ಮನೆಗೆ ಹೋದ. ಆದರೆ ಅಲ್ಲೂ ಬಹಳ ಕಾಲ ಉಳಿಯಲಾಗದೆ ಎಲ್ಲರೂ ರಸ್ತೆಯಲ್ಲಿ ಭಿಕ್ಷೆ ಬೇಡುವ ಸ್ಥಿತಿ ಉದ್ಭವವಾಯಿತು. ಇಂತಹ ದಾರುಣ ಪರಿಸ್ಥಿತಿಯಲ್ಲಿದ್ದಾಗ ಆತನ ಒಬ್ಬ ತಮ್ಮ ಮತ್ತು ಎಲ್ಲ ತಂಗಿಯರಿಗೆ ಸಿಡುಬು ಕಾಯಿಲೆ ತಗುಲಿ ಸತ್ತು ಹೋದರು. ಶಾಸ್ತ್ರಿಗೂ ಅದೆಂತಹದ್ದೋ ಕಾಯಿಲೆ ಬಂದು ನಿಶ್ಯಕ್ತನಾದ. ಆಗ ಅವನ ಉಳಿದ ಸಹೋದರರು ಅವನನ್ನು ತೊರೆದರು. ಭಿಕ್ಷೆ ಬೇಡುತ್ತಾ ಕೋಲಾರಕ್ಕೆ ಬಂದ ಶಾಸ್ತ್ರಿಗೆ ಗುರು ಮಹಾರಾಜ್ ಎಂಬಾತನ ಪರಿಚಯವಾಯಿತು. ಆ ಮಹಾರಾಜ್ ಶಾಸ್ತ್ರಿಗೆ ಚಿಕಿತ್ಸೆ ಕೊಡಿಸಿದನಲ್ಲದೆ ಒಂದು ಗುಹೆಯಲ್ಲಿ ತಂತ್ರ-ಮಂತ್ರಗಳನ್ನೆಲ್ಲ ಹೇಳಿಕೊಟ್ಟ. ಆಧ್ಯಾತ್ಮದ ಜೊತೆಗೆ ವಿಮಾನ ಶಾಸ್ತ್ರ, ಭೌತಿಕ ಕಲಾನಿಧಿ ಎಂಬುದನ್ನೆಲ್ಲ ಹೇಳಿಕೊಟ್ಟ.

ಮಹಾರಾಜನಿಂದ ಕಲಿತ ನಂತರ ಶಾಸ್ತ್ರಿ ತನ್ನ ಹೆಂಡತಿಯ ಜೊತೆ ಆನೇಕಲ್‌ನಲ್ಲಿ ವಾಸಿಸಲಾರಂಭಿಸಿದ. ಅಲ್ಲಿ ಶಾಸ್ತ್ರ ಆಧ್ಯಾತ್ಮ ಎಂದೆಲ್ಲ ಪ್ರವಚನಗಳನ್ನು ಕೊಡಲು ಪ್ರಾರಂಭಿಸಿದ. ಎಲ್ಲ 'ಆಧ್ಯಾತ್ಮಿಕ' ವ್ಯಕ್ತಿಗಳಿಗೆ ಆಗುವಂತೆ ಅವನಿಗೂ ಹಲವು ಹಿಂಬಾಲಕರು ಸಿಕ್ಕರು.


ಎಂದೂ ಶಿಕ್ಷಣವನ್ನು ಪಡೆಯದಿದ್ದ ಯಾವ ನಿಟ್ಟಿನಲ್ಲೂ ಪಂಡಿತನಲ್ಲದ ಶಾಸ್ತ್ರಿಯ ಮೈಮೇಲೆ ಆಗಾಗ್ಗೆ ಸ್ಫೂರ್ತಿ ಬಂದು ಆತ ಶ್ಲೋಕಗಳನ್ನು ಹೇಳುತ್ತಿದ್ದ. ಆಗ ಅವನ ಆಪ್ತ ಶಿಷ್ಯನಾಗಿದ್ದ ಜೆ.ವಿ.ಶರ್ಮಾ ಎಂಬಾತ ಅವುಗಳನ್ನೆಲ್ಲ ಬರೆದಿಟ್ಟುಕೊಳ್ಳುತ್ತಿದ್ದ. (ಶಾಸ್ತ್ರಿಯ ಕತೆಯನ್ನು ಐಐಎಸ್‌ಸಿ ವಿಜ್ಞಾನಿಗಳ ತಂಡಕ್ಕೆ ಹೇಳಿದ್ದು ಅದೇ ಶಿಷ್ಯ ಶರ್ಮಾ ಎಂಬುದು ಇಲ್ಲಿ ಮುಖ್ಯ)

1941ರಲ್ಲಿ ಶಾಸ್ತ್ರಿ ಮರಣ ಹೊಂದಿದ ನಂತರ ಶರ್ಮಾ ಬರೆದಿಟ್ಟುಕೊಂಡಿದ್ದ ಶ್ಲೋಕಗಳ ಹಸ್ತಪ್ರತಿಗಳನ್ನು ಮಾಡಿಸಿ ಹಂಚಿದ. ಆ ಶ್ಲೋಕಗಳು ಪ್ರಾಚೀನ ಕಾಲದ ಮಹಾಋಷಿ ಭಾರದ್ವಾಜ ಹೇಳಿದ್ದೆಂದೂ, ಅವೆಲ್ಲ ಆ ಕಾಲದಲ್ಲಿದ್ದ ವಿಮಾನಗಳಿಗೆ ಸಂಬಂಧಿಸಿದ್ದೆಂದೂ ಅದರಲ್ಲಿ ಬಿಂಬಿಸಲಾಗಿತ್ತು. ಈ ಶ್ಲೋಕಗಳನ್ನು ಅದ್ಯಾರೋ ಹಿಂದಿಗೆ ಅನುವಾದಿಸಿ 'ಬೃಹತ್ ವಿಮಾನ ಶಾಸ್ತ್ರ' ಎಂದು ಹೆಸರಿಟ್ಟ. ಆಮೇಲೆ ಅದನ್ನು ಜಾಯ್ಸರ್ ಎಂಬಾತ ಇಂಗ್ಲಿಷ್‌ಗೆ ಅನುವಾದಿಸಿ ಅದನ್ನು 'ವಿಮಾನ ಶಾಸ್ತ್ರ' ಎಂದು ಕರೆದ.

ಹೀಗೆ ಕನ್ನಡದಿಂದ ಹಿಂದಿ ಮತ್ತು ಇಂಗ್ಲಿಷ್‌ಗೆ 'ಹಾರಿ' ಹೋದ 'ಮಹಾಋಷಿ ಭಾರದ್ವಾಜನ' 'ಬೃಹತ್ ವಿಮಾನ ಶಾಸ್ತ್ರ' 7,000 ವರ್ಷಗಳ ಹಿಂದೆ ಭಾರತೀಯರು ಸಾಧಿಸಿದ್ದ ಅಮೋಘ ಸಂಶೋಧನೆಗಳಾಗಿ ಪರಿವರ್ತನೆಗೊಂಡಿತು!! ಅಂದರೆ 1930ರ ದಶಕದಲ್ಲಿ ಅಕ್ಷರ ಜ್ಞಾನವೇ ಇಲ್ಲದಿದ್ದ ವ್ಯಕ್ತಿಯೊಬ್ಬ ಕಲ್ಪಿಸಿಕೊಂಡದ್ದು ಭಾರತೀಯ ಇತಿಹಾಸವಾಯಿತು, ಅಂತರರಾಷ್ಟ್ರೀಯ ಮಟ್ಟದ ವಿಜ್ಞಾನ ಸಮಾವೇಶದಲ್ಲಿ 'ಭಾರತ ಮಾತಾ ಕಿ ಜೈ' ಎಂಬ ಘೋಷಣೆ ಮೊಳಗುವಂತೆ ಮಾಡಿತು.

ಹೋದ ವಾರ ಈ ದೇಶ 'ಹುಚ್ಚರ ಸಂತೆ' ಎಂತಾಗಿದೆ ಅಂದಿದ್ದೆ. ಅದಕ್ಕೆ ಈ ವಾರ ಮತ್ತಷ್ಟು ಪುರಾವೆ ಸಿಕ್ಕಿದೆಯಷ್ಟೇ!!

ಎಚ್ಚೆತ್ತ ಹವ್ಯಕರ ಬಂಡಾಯ V/s ಸಗಣಿ ಸ್ವಾಮಿಯ ರೋಡ್ ಶೋ!



ರಾಮಚಂದ್ರಾಪುರ ಮಠದ ಗೂಳಿ ಸ್ವಾಮಿಯ ಕಾಮಕಾಂಡ ದಿನಕ್ಕೊಂದು ಆಯಾಮ ಪಡೆಯುತ್ತಿದೆ. ಕಾವಿಯೊಬ್ಬನಿಗೆ ಕಡ್ಡಾಯವಾದ ಬ್ರಹ್ಮಚರ್ಯಕ್ಕೆ ಎಳ್ಳುನೀರು ಬಿಟ್ಟು ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದಿರುವ ರಾಘು ಈಗ ತನ್ನ ಬುರ್ನಾಸ್ ಬುದ್ಧಿಯನ್ನು ನಿರ್ಲಜ್ಜವಾಗಿ ಸಮರ್ಥಿಸಿಕೊಳ್ಳುವ ಅಧೋಗತಿ ತಲುಪಿಬಿಟ್ಟಿದ್ದಾನೆ. ಮೆತ್ತಿಕೊಂಡಿರುವ ಕಳಂಕ ತೊಳೆದುಕೊಳ್ಳಲು ಲಕ್ಷಾಂತರ ವ್ಯಯಿಸಿ ಬೆಂಬಲಿಗರ ಶೋಗಳ ಮೇಲೆ ಶೋ ನಡೆಸುತ್ತಿದ್ದಾನೆ. ನಿಧಾನಕ್ಕೆ ಸ್ವ-ಜಾತಿ ಬಂಧುಗಳಲ್ಲಿ ಜ್ಞಾನೋದಯ ಆಗುತ್ತಿರುವುದರಿಂದ ದಿಗಿಲುಬಿದ್ದಿರುವ ರಾಘು ಮತ್ತವನ ಮಠಾಂಧ ಪಟಾಲಮ್ ಥೇಟ್ ಮುಖಭಂಗಿತ ರಾಜಕಾರಣಿಯಂತೆ 'ಸಂಭಾವಿಕತೆ' ತೋರಿಸಲು ಬಯಲಾಟ ಮಾಡಬೇಕಾಗಿ ಬಂದಿದೆ, ಪಾಪ!!


ಸಾಗರದಲ್ಲಿ ಧಿಕ್ಕಾರ


ಯಾವಾಗ ಸಾಗರದಲ್ಲಿ ಹವ್ಯಕರು ಸಭೆ ಸೇರಿ ರಾಘುನ ಅತ್ಯಾಚಾರ-ಅನಾಚಾರ-ಅವ್ಯವಹಾರ ವಿರುದ್ಧ ಸೊಲ್ಲೆತ್ತಿ ಬಂಡಾಯ ಸಾರಿದರೋ, ಆಗ ಮಠ ಮಾಫಿಯಾಕ್ಕೆ ಸೂಲಿಬೆಲೆಯಂಥ ಹಿಂದೂತ್ವದ ಹರಾಕಿರಿ ಭಾಷಣಕಾರನ ಮೊರೆಹೋಗುವ ದುರ್ಗತಿ ಬಂತು! ಸಾಗರದಲ್ಲಿ ರಾಘುನ ಪೀಠೋಚ್ಚಾಟನೆಗೆ ಪರೋಕ್ಷ ಕರೆಕೊಟ್ಟವರು ಕಾಕ್-ಪೋಕ್ ಹವ್ಯಕ ಹಿರೇಮಣಿಗಳಲ್ಲ; ಬದಲಿಗೆ ಜಾತಿ ಸಮುದಾಯದಲ್ಲಿ ವಜನಿನ ನೆಲೆ-ಬೆಲೆಯಿರುವ ಮುಂದಾಳುಗಳು. ಬುದ್ಧಿಜೀವಿ ರಾಜಕಾರಣಿ ಎಂದು ಗುರುತಿಸಿಕೊಂಡಿರುವ ಮಾಜಿ ಸಚಿವ ಕೆ.ಎಚ್. ಶ್ರೀನಿವಾಸ್ ಮುಂದಾಳತ್ವದಲ್ಲಿ ನಡೆದ ಈ 'ರಾಘು ಹಟಾವೋ' ಸಭೆಯಲ್ಲಿ ಹವ್ಯಕರು ದೊಡ್ಡ ಸಂಖ್ಯೆಯಲ್ಲೇ ಸೇರಿದ್ದರು.

ರಾಘು ಪರ ಶೋಗಳಿಗೆ ದುಡ್ಡು-ಆಮಿಷ-ಬೆದರಿಕೆ ಪ್ರಯೋಗಿಸಿದರೂ ಜನ ಸೇರೋದು ಕಷ್ಟ. ಆದರೆ ಆತನ ಕೊಳಕುತನ ಖಂಡಿಸುವ ಸಭೆಗಳಿಗೆ ಸ್ವಯಂ ಸ್ಫೂರ್ತಿಯಿಂದ ಹವ್ಯಕರ ದಂಡು ಎದ್ದು ಬರುತ್ತಿದೆ. ಸಾಗರದ ಸಭೆಗೆ ರಾಜ್ಯದ ಮೂಲೆ-ಮೂಲೆಯಿಂದ ಬ್ರಾಹ್ಮಣ ನಾಯಕರು ಬಂದಿದ್ದರು. ಶಿರಸಿಯ ಸಚ್ಚಿದಾನಂದ ಹೆಗಡೆ ಎಂಬ ಕಟ್ಟಾ ಚೆಡ್ಡಿ, ಹುಬ್ಬಳ್ಳಿಯ ಸಿ.ಬಿ.ಎಲ್. ಹೆಗಡೆ, ಕುಮಟಾದ ಹಿರಿಯ ಹವ್ಯಕ ಪ್ರಮುಖ ಡಾ. ಟಿ.ಟಿ. ಹೆಗಡೆ, ಶಿವಮೊಗ್ಗ ಹವ್ಯಕ ಸಂಘದ ಅಧ್ಯಕ್ಷರಾದ ಬಾರ್ ಅಸೋಸಿಯೇಷನ್ ಅಧ್ಯಕ್ಷರೂ ಆಗಿರುವ ಅಶೋಕ್ ಭಟ್, ಸಾಗರದ ಹವ್ಯಕ ಹಿರೇಮಣಿ ಚಿಪ್ಳಿ ಗೋಪಾಲಕೃಷ್ಣ ರಾವ್, ಪುತ್ತೂರಿನ ಸುಶಾಂತ್, ಇಂದಿರಾ ಹೆಗಡೆ ಮುಂತಾದವರು ಸಾಗರ ಸಭೆಯಲ್ಲಿ ಹಾಜರಿದ್ದರು. ಪರಿಸರ ತಜ್ಞ ಫೋಟೋಗ್ರಾಫರ್ ಮಂಜುನಾಥ ಹೊಸಬಾಳೆ ಟೀಮು ಸಂಘಟಿಸಿದ್ದ ಈ ಸಭೆ ಮೂರುತಾಸಿನ ತನಕ ರಾಘು ಗುಣಾವಗುಣಗಳ ವಿಮರ್ಶೆ ನಡೆಸಿತು.

ರಾಘು ಕಳ್ಳಾಟದ ಚರ್ಚೆ

ರಾಮಚಂದ್ರಾಪುರ ಮಠದ ಆಗು-ಹೋಗು ನೋಡಿಕೊಳ್ಳುವ 28 ಹಿರಿಯ ಹಾರವರ ದಿಗ್ದರ್ಶಕ ಮಂಡಳಿಯ ಪ್ರಮುಖರಾದ ಕೆ.ಎಚ್. ಶ್ರೀನಿವಾಸ್ ನವಿರಾಗಿಯೇ ರಾಘುನ ಕಚ್ಚೆ ಹರುಕತನದ ಜಾತಕ ಜಾಲಾಡಿಬಿಟ್ಟರು. ಪ್ರೇಮಲತಾ ದಂಪತಿ ಬ್ಲ್ಯಾಕ್‌ಮೇಲ್ ಮಾಡಿದ್ದಾರೆಂದಾಗಲೇ ರಾಘು ಯಾಕೆ ದಿಗ್ದರ್ಶಕರ ಸಭೆ ಕರೆದು ವಿಷಯ ಮಂಡಿಸಲಿಲ್ಲ ಎಂಬ ಮೂಲಭೂತ ಪ್ರಶ್ನೆ ಮುಂದಿಟ್ಟ ಶ್ರೀನಿವಾಸ್, ಪ್ರೇಮಲತಾರೊಂದಿಗಿನ ಹೇಳಿಕೊಳ್ಳಲಾಗದ ಯಾವುದೋ ನಂಟಿನ ಗುಟ್ಟು ರಾಘುನಲ್ಲಿರುವುದರಿಂದಲೇ ನಡೆಯಬಾರದ್ದೆಲ್ಲ



ದತ್ತಾತ್ರೇಯ ಹೊಸಬಾಳೆ


ಟಿ.ಟಿ. ಹೆಗಡೆ

ನಡೆದುಹೋಗಿದೆ ಎಂದರು. ತಾನು ಹೇಳಿದ್ದಕ್ಕೆಲ್ಲ ಗೋಣು ಹಾಕುವ ಜನರು, ಉದ್ಯಮಿಗಳು ಮತ್ತು ಅಧಿಕಾರಸ್ಥ ರಾಜಕಾರಣಿಗಳ ಸಖ್ಯವೇ ರಾಘುಗೆ-ಮಠಕ್ಕೆ ಮುಳುವಾಗಿದೆ ಎಂದು ದೂರಿದರು. ವಿನಾಕಾರಣ ಪ್ರೇಮಲತಾ ದಂಪತಿಗಳನ್ನು 21 ದಿನ ಜೈಲಲ್ಲಿ ಕಳೆದಂತೆ ಮಾಡಿದ ರಾಘುನ ಪರಾಕ್ರಮ-ಬುದ್ಧಿವಂತಿಕೆಯೇ ಇವತ್ತು ಮಠದ ಮಾನವನ್ನು ಬೀದಿಗೆ ತಂದು ನಿಲ್ಲಿಸಿದೆ ಎಂದರು.

ಯತಿಗಳಿಗೆ ಪರಾಕ್ರಮ-ಬುದ್ಧಿವಂತಿಕೆಗಿಂತ ಪ್ರಾಮಾಣಿಕತೆ-ವಿವೇಕ ಇರಬೇಕಾದ್ದು ಅವಶ್ಯ ಎಂದ


ಪ್ರೇಮಲತಾ ದಿವಾಕರಶಾಸ್ತ್ರಿ


ಶ್ಯಾಂ. ಶಾಸ್ತ್ರಿ

ಶ್ರೀನಿವಾಸ್ 'ಏಕಾಂತ ದರ್ಶನ'ದ ಹೆಸರಲ್ಲಿ ರಾಘುನಿಂದ ಹೆಣ್ಣು ಮಕ್ಕಳಿಗೆ 'ಶಾಕ್' ಆಗುತ್ತಿರುವುದನ್ನು ತಾನು ಆತನ ಆಪ್ತರಿಂದ ಕೇಳಿ ತಿಳಿದಿದ್ದೇನೆಂದು ಹೇಳಿದರು. ಇದು ಸರಿಯಲ್ಲ ಎಂದು ಹೇಳಿದರೆ ಸ್ವಾಮಿ "ನಾನು ಶ್ರೀರಾಮನ ಇಚ್ಛೆಯಂತೆ 'ಏಕಾಂತ'ಕ್ಕೆ ಹೋಗುತ್ತೇನೆ.... ನಾನೇ ರಾಮ..." ಎಂದು ಅಸಂಬದ್ಧವಾಗಿ ಮಾತಾಡುವುದನ್ನು ಪ್ರಸ್ತಾಪಿಸಿದರು ಶ್ರೀನಿವಾಸ್! ಇದು ಸತ್ಯಮರೆಮಾಚುವ ರಾಘುನ ನಾಟಕ ಎಂದವರು ಅಭಿಪ್ರಾಯಪಟ್ಟರು. ಒಟ್ಟಿನಲ್ಲಿ ಅವರ ಮಾತಿನ ಒಟ್ಟೂ ತಿರುಳು ರಾಘು ಸಂನ್ಯಾಸ ಪಾಲಿಸುತ್ತಿಲ್ಲ ಎಂಬುದೇ ಆಗಿತ್ತು!

ಬುದ್ಧಿವಂತರು ಪ್ರಜ್ಞಾವಂತರಾಗಲಿ!!

ಸಭೆಯಲ್ಲಿದ್ದ ಹಿರಿಯ ವಕೀಲ ಅಶೋಕ್ ಭಟ್, ರಾಘುನ ಕಾಮಕಾಂಡ ಆಸ್ಫೋಟಿಸಿದಾಗ ಆತನ ಪರವೇ ಮಾತಾಡಿದಾತ. ಈಗಾತ ರಾಘುನ ವಿರುದ್ಧ ತಾನು ತಿರುಗಿ ಬೀಳಲು ಕಾರಣವೇನೆಂದು ವಿವರಿಸಿದರು. ದೂರುದಾರರ ಉಡುಪಿನಲ್ಲಿ ಡಿಎನ್‌ಎ ಪತ್ತೆಯಾಗಿದೆ ಎಂದರೆ ಸುಲಭಕ್ಕೆ ಕಡೆಗಣಿಸುವ ಸಂಗತಿಯಲ್ಲ. ಹಾಗೆಲ್ಲ ಡಿಎನ್‌ಎ ಕೃತಕವಾಗಿ ತಯಾರಿಸಿ ಯಾರ್‍ಯಾರದೋ ಬಟ್ಟೆಯಲ್ಲಿ ತಂದಿಡುವ 'ವಸ್ತು' ಅಲ್ಲ. ಡಿಎನ್‌ಎ ವರದಿ ಗಮನಿಸಿದರೆ ಮಠದಲ್ಲಿ ಅನಾಚಾರ ಆಗಿರುವುದು ಖಾತ್ರಿಪಡಿಸುವಂತಿದೆ. ಡಿಎನ್‌ಎ ಪರೀಕ್ಷೆಯೇ ಸುಳ್ಳು-ಕಟ್ಟುಕತೆಯೆನ್ನುವುದು ಮೌಢ್ಯದ ಪರಮಾವಧಿಯಾಗುತ್ತದೆ ಎಂದು ಅಶೋಕ್ ಹೇಳಿದರು.

ದ್ವೈತ ಪಂಥದ ವಿದ್ಯಾಭೂಷಣ ತೀರ್ಥರು ಇಂದ್ರಿಯನಿಗ್ರಹ ಸಾಧ್ಯವಿಲ್ಲವೆಂದು ಪ್ರಾಮಾಣಿಕವಾಗಿ ಒಪ್ಪಿಕೊಂಡು ಪೀಠ ತ್ಯಾಗ ಮಾಡಿ ಸಂಸಾರಿ ಆದರು. ಇದು ರಾಘುಗೆ ಪಾಠವಾಗಬೇಕಿತ್ತು. ಈಗ ಹವ್ಯಕ ಸಮುದಾಯವಾದರೂ ಈ ದಿಕ್ಕಿನಲ್ಲಿ ಯೋಚಿಸದಿದ್ದರೆ ಮುಂದಿನ ಪೀಳಿಗೆಗೆ ಉಪದೇಶ ಕೊಡುವ ಹಕ್ಕು ಕಳಕೊಳ್ಳುತ್ತಾರೆ. ಡಿಎನ್‌ಎ ವರದಿಯಲ್ಲಿ ಕೋಟಾ ಆಗಲು ಸಾಧ್ಯವಿಲ್ಲ ಎಂಬುದನ್ನು ಬುದ್ಧಿವಂತರು ಎಂದು ಹೇಳಿಕೊಳ್ಳುವ ಬ್ರಾಹ್ಮಣರು ಅರ್ಥಮಾಡಿಕೊಳ್ಳಬೇಕು. ಬುದ್ಧಿವಂತರು ಪ್ರಜ್ಞಾವಂತರೆನಿಸಿಕೊಳ್ಳಬೇಕಾದ ಜರೂರಿದೆ ಎಂದು ಅಶೋಕ್ ಮಾರ್ಮಿಕವಾಗಿ ನುಡಿದರು. ಎತ್ತಿಂದೆತ್ತ ನೋಡಿದರೂ ಸಾಗರದ ಸಭೆಯಲ್ಲಿ ಹೊರಬಂದ ಪ್ರಮುಖ ನಿರ್ಧಾರವೆಂದರೆ, ರಾಮಚಂದ್ರಾಪುರ ಮಠಕ್ಕೆ ಹವ್ಯಕರು ಬದಲಿ ಪೀಠಾಧಿಪತಿ ಕಂಡುಕೊಳ್ಳಬೇಕೆಂಬುದೇ ಆಗಿತ್ತು.

ಓಡೋಡಿ ಬಂದ ಕೆಕ್ಕಾರಿಗೆ

ಸಾಗರದಲ್ಲಿ ಬಂಡಾಯದ ಬಾವುಟ ಹಾರುತ್ತಿದ್ದಂತೆಯೇ ರಾಘು ಮತ್ತವರ ಮಠಾವಲಂಬಿ ಗ್ಯಾಂಗಿಗೆ ಒಂಥರಾ ನಡುಕ ಎದ್ದುಬಿಟ್ಟಿತು. ಹವ್ಯಕರ ಕಣ್ಣಿಗೆ ಅಂಟಿದ್ದ ಮಠಾಂಧತೆಯ ಪೊರೆ ಹರಿಯುತ್ತಿರುವಂತೆ ಭಾಸವಾಯ್ತು. ಸಾಗರದಲ್ಲಿದ್ದ ಕಿಚ್ಚು, ಶಿರಸಿ, ಕುಮಟಾ, ಪುತ್ತೂರು... ಮುಂತಾದ ಹವ್ಯಕರ ಏರಿಯಾಕ್ಕೆ ಹಬ್ಬಿದರೆ ಪೀಠತ್ಯಾಗದ ಗಂಡಾಂತರ ಖಾತ್ರಿ ಎಂಬುದು ನಿದ್ದೆಗೆಡಿಸತೊಡಗಿತು. ಆಕಸ್ಮಾತ್ ರಾಘು ಪೀಠತ್ಯಾಗ ಅನಿವಾರ್ಯವಾದರೆ ಯಾವುದಕ್ಕೂ ಒಂದು 'ಸಬ್‌ಸ್ಟಿಟ್ಯೂಟ್' ಇರಲಿ ಎಂದು ಆತನ ಸೋದರಿ ಗಂಡನೂ ಭಾವನನ್ನು ಕಿರುಬೆರಳ ಇಶಾರೆಯಲ್ಲಿ ಕುಣಿಸುತ್ತಿರುವವನೂ ಆದ ಜಗದೀಶ ಶರ್ಮ ಲಗುಬಗೆಯಲ್ಲಿ ತನ್ನ ಮಗ ಸಮುದ್ರರನ್‌ಗೆ ಉಪನಯನ (ಬ್ರಹ್ಮೋಪದೇಶ) ಮಾಡಿಸಿಬಿಟ್ಟಿದ್ದಾನೆ. ಈ ಬಾಲಕನೇ ಭಾಮೈದನ ಉತ್ತರಾಧಿಕಾರಿ ಆಗಬೇಕೆಂಬುದು ಕುತಂತ್ರಿ ಜಗದೀಶ್ ಶರ್ಮನ ಲಾಗಾಯ್ತಿನ ಸ್ಕೆಚ್ಚು! ಬ್ರಾಹ್ಮಣರು ದಕ್ಷಿಣಾಯಣದಲ್ಲಿ ಉಪನಯನದಂಥ ವೈದಿಕ ವಿಧಿ-ವಿಧಾನ


ಸೂಲಿಬೆಲೆ ಸೋಲ್ಡ್ ಔಟಾ!?

ಸುಳ್ಳನ್ನು ಕಲಾತ್ಮಕವಾಗಿ ಭಾಷಣೀಕರಿಸುವ ಸಂಘ ಪರಿವಾರದ "ಮಾತಾಡುವ ಬೊಂಬೆ" ಚಕ್ರವರ್ತಿ ಸೂಲಿಬೆಲೆ ರಾಘುನ "ಕೊಳಕು ಕಥಾ" ಶೋಗಳ ಸ್ಟಾರ್ ಪ್ರಚಾರಕ! ಮೊನ್ನೆ ಕೆಕ್ಕಾರ-ಮಾಣಿ ಮಠಗಳಲ್ಲಿ ಸಂಭಾವಿತಗಿರಿಯ ಪ್ರದರ್ಶನ ನೀಡಿದಾಗಲೇ ಈ ಸೂಲಿಬೆಲೆ ಅಲ್ಲಿರಬೇಕಿತ್ತು. ರಾಘುನ ತಾರೀಫು ಮಾಡಿ ಮಾಡುವ ಬೋಗಸ್ ಭಾಷಣದ ಡೀಲ್ ಮಠ ಮಾಫಿಯಾ ಮತ್ತು ಸೂಲಿಬೆಲೆ ನಡುವೆ ತುಂಬ ಹಿಂದೆಯೇ ಕುದುರಿತ್ತು. ಆದರೆ ಸೂಲಿಬೆಲೆಗೆ ರಾಮಚಂದ್ರಾಪುರ ಮಠದವರ ಇನಾಮಿನ ಆಸೆಯ ಜೊತೆ ಜೊತೆಗೇ ಸಂಘ ಪರಿವಾರದ ಹಿರಿಯಣ್ಣ ಆರೆಸ್ಸೆಸ್‌ನ ದೊಡ್ಡ ಭಯ ಕಾಡತೊಡಗಿತ್ತು. ಹೀಗಾಗಿ ಸೂಲಿಬೆಲೆ ಮೊದಲ ಹಂತದ ರಾಘು ರಗಳೆ ಪ್ರಹಸನದಲ್ಲಿ ಕಾಣಿಸಿಕೊಳ್ಳಲಿಲ್ಲ.

ಈಗಾತ ಎರಡನೇ ಹಂತದ ಶೋಗಳಲ್ಲಿ ಕಾಣಿಸಿಕೊಳ್ಳತೊಡಗಿದ್ದಾನೆ. ಒಂದು ಮಠ ಮೂಲದ ಸುದ್ದಿ ಪ್ರಕಾರ ಸೂಲಿಬೆಲೆಗೆ ಬರೋಬ್ಬರಿ ಹತ್ತು ಲಕ್ಷದ ಗುತ್ತಿಗೆ ನೀಡಲಾಗಿದೆ. ಶಿವಮೊಗ್ಗದಿಂದ ಶುರುಮಾಡಿ ಕುಮಟಾದ ಮೂಲಕ ದಕ್ಷಿಣ ಕನ್ನಡ ಮತ್ತಿತರೆಡೆ ರಾಘುನನ್ನು ಹೊಗಳಿ ಆತ ಮಾತಾಡಬೇಕು; ರಾಘುನ ಮೇಲೆ ಲೈಂಗಿಕ ದೌರ್ಜನ್ಯದ ಆರೋಪ ಹೊರಿಸಿ ರುವ ಹೆಂಗಸು-ಆಕೆಯ ಕುಟುಂಬದ ಮೇಲೆ ಮಾತಿನ ದಾಳಿ ಮಾಡಿ ಹೀಯಾಳಿಸಬೇಕು. ಮೊನ್ನೆ ಶಿವಮೊಗ್ಗದಲ್ಲಿ ಈ ಚೆಡ್ಡಿ ಚಮತ್ಕಾರಿ ರಾಘು ಶೋನಲ್ಲಿ ಅಸಂಬದ್ಧ ಭಾಷಾ ಬಗಿವಾಗ ದಲಿತ ಮುಖಂಡ ಒಬ್ಬ ಕಪ್ಪುಪಟ್ಟಿ ಕಟ್ಟಿಕೊಂಡು ಪ್ರತಿಭಟಿಸಿದ್ದಕ್ಕೆ ಆತನನ್ನು ಮಠದ ಕಾಲಿಬಾಸಿಗಳು ಹೊಡೆಬಡಿದು ಹಿಂಸಿಸಿದ್ದಾರೆ. ಆತ ಹೋದಲ್ಲೆಲ್ಲ ಇಂಥದೇ ಫುಂಡಾಟ ಆಗುವ ಸಾಧ್ಯತೆ ಇದೆ. ಕಳಪೆ ರಾಜಕಾರಣಿ ಶೈಲಿನ ಈ ರೋಡ್‌ಶೋಗೆ ರಾಘು ಶರಣಾಗಿರುವುದು ಆತನ ಅನೈತಿಕತೆಗೆ ಹಿಡಿದ ಕನ್ನಡಿಯಂತಿದೆ.

ಹಾಗೇ ಕುಮಟಾಕ್ಕೆ ಬಂದಾಗ ಸೂಲಿಬೆಲೆ ವರಸೆ ಬದಲಾಗಿದೆ. ಆತನಿಗೆ ಆರೆಸ್ಸೆಸ್‌ನಿಂದ ಒದೆ ಬಿದ್ದಿದೆ. ಹೀಗಾಗಿ ರಾಘುನ ಪರಿಶುದ್ಧತೆ ಬಿಂಬಿಸುವ ಗೋಜಿಗೆ ಹೋಗದೆ ಹಿಂದೂ ಧರ್ಮದ ಮೇಲಿನ ದಾಳಿ ಎಂಬಂತೆ "ಕಾಮಕಥಾ" ಪ್ರಸಂಗದ ಬಗ್ಗೆ ಮಾತಾಡಿದ್ದಾನೆ. ಒಂದಂತೂ ಖರೆ. ಸೂಲಿಬೆಲೆ ಆರೆಸ್ಸೆಸ್ ವಲಯದ ಕೆಂಗಣ್ಣಿಗೆ ತುತ್ತಾಗಿದ್ದಾನೆ. ಇಡೀ ಚೆಡ್ಡಿ ಬಳಗವೇ ಎರಡು ವರ್ಷದಿಂದ ರಾಘುನ ರಾಸಲೀಲಾ ವಿನೋದಗಳ ಮೇಲೆ ಹದ್ದಿನ ಕಣ್ಣಿಟ್ಟಿತ್ತು. ಪ್ರೇಮಲತಾ ಪ್ರಕರಣದ ನಂತರ ಅದನ್ನೇ ಅಸ್ತ್ರ ಮಾಡಿಕೊಂಡು ರಾಘುನ ಪೀಠೋಚ್ಚಾಟನೆ ಮಾಡಲು ನಿರ್ಧರಿಸಿರುವಾಗ ಸೂಲಿಬೆಲೆ ಸಂಘದ ನಿಲುವಿಗೆ ವಿರುದ್ಧ ಹೆಜ್ಜೆ ಹಾಕಿರುವುದು ಆತನ ದಗಲುಬಾಜಿ ದ್ವಂದ್ವವನ್ನು ಜಗಜ್ಜಾಹೀರು ಮಾಡಿಬಿಟ್ಟಿದೆ.

ಆರೆಸ್ಸೆಸ್‌ನ ಸೂಲಿಬೆಲೆಯೇ ಅಂಪಟ ರಾಘು ಪರ [illegible] ವಕಾಲತ್ತಿಗಿಳಿದಿರುವುದು ಸಂಘ ಪರಿವಾರದಲ್ಲಿ ಅಲ್ಲೋಲ ಕಲ್ಲೋಲ ಮೂಡಿಸಿದೆ. ಸೂಲಿಬೆಲೆಗೆ ತತ್ವಕ್ಕಿಂತ ದುಡ್ಡೇ ದೊಡ್ಡದೆಂದು ಆತನ ಭಾಷಣಕ್ಕೆ ಇಷ್ಟು ದಿನ ತಲೆದೂಗುತ್ತಿದ್ದವರೇ ಕ್ಯಾಕರಿಸಿ ಉಗಿಯುತ್ತಿದ್ದಾರೆ. ಸೂಲಿಬೆಲೆಗಿದು ಬೇಕಿತ್ತಾ?



ಸೂಲಿಬೆಲೆಯ ಅಣಿಮುತ್ತುಗಳು

'ಚಕ್ರವರ್ತಿ ಚೂಲಿಬೆಲೆ'ಯವರು ಡಿಸೆಂಬರ್ 29ರಂದು ಸಾಗರದಲ್ಲಿ ಮಾಡಿದ ಭಾಷಣ ಮತ್ತು ಕೆಲ ದಿನಗಳ ಹಿಂದೆ ಪುತ್ತೂರಿನಲ್ಲಿ ಖಾಸಗಿ ಸಭೆಯೊಂದರಲ್ಲಿ ಆಡಿದ ಅಣಿಮುತ್ತುಗಳು ಇಲ್ಲಿವೆ.

1. ಒಂದಕ್ಕಿಂತ ಹೆಚ್ಚು ಬಾರಿ ಅತ್ಯಾಚಾರವಾಗಲು ಸಾಧ್ಯವಿಲ್ಲ, ಅದನ್ನು **consent** ಅನ್ನುತ್ತಾರೆ. **consent** ಆದ್ದರಿಂದ ಪ್ರೇಮಲತಾ ವಿರೋಧ ಮಾಡದೆ ಆತ್ಮಹತ್ಯೆ ಮಾಡಿಕೊಳ್ಳಬೇಕಾಗಿತ್ತು.
2. ಏಳು ಬಾರಿ ಗಂಡಹೆಂಡಿರೇ ಕೂಡೊಲ್ಲ, ಇನ್ನು ಏಳು ಬಾರಿ ಅತ್ಯಾಚಾರ ಹೇಗೆ ಸಾಧ್ಯ?
3. ದಿವಾಕರ ಅವರು ಹೆಂಡತಿಗೆ ಬಾರಿಸಿ ನೀನು ಅವರ ಜತೆ ಹೋಗು 'ಎನ್ನಬೇಕಾಗಿತ್ತು.
4. **Divorce** ವರೆಗೂ ಹೋದವರು, ಜತೆಗೆ ಇರುವಂಥ ತೀರ್ಮಾನಕ್ಕೆ ಬರಲು ಹೇಗೆ ಸಾಧ್ಯವಾಯಿತು? **Motivation** ಏನಿತ್ತು?
5. ಇಬ್ಬರು ಗಂಡಸರ ಡಿಎನ್‌ಎಗಳು ಪತ್ತೆಯಾದವು. ಎರಡೂ ದಿನವೂ ಒಂದೇ ಉಡುಪು ತೊಟ್ಟಿದ್ದಳಾ?

ಹೀಗೆಲ್ಲ ಹೀನಾತಿಹೀನವಾಗಿ ಯೋಚಿಸಬಲ್ಲವನು ಸ್ಯಾಡಿಸ್ಟ್ ಮಾತ್ರವಲ್ಲ, ವಿಕೃತ ಕಾಮಿಯೇ ಆಗಿರಬೇಕು. ಚೂಲಿಬೆಲೆಯ ಫ್ಯಾನುಗಳು ಇದನ್ನೆಲ್ಲ ನೋಡಿ ನೇಣು ಹಾಕಿಕೊಳ್ಳದಿದ್ದರೆ ಸಾಕಪ್ಪ. ಅದರಲ್ಲೂ ಚೂಲಿಬೆಲೆಯೇ ಆಧುನಿಕ ವಿವೇಕಾನಂದ ಎಂದು ಮೆರೆವ ರಣಧೀರರೆಲ್ಲ ಈಗಲಾದರೂ ಆತ್ಮಾವಲೋಕನ ಮಾಡಿಕೊಳ್ಳಲಿ.

- ಪ್ರವೀಣ್

ಾಡಲಾರರು. ಆದರೂ ಈ ಜಗದೀಶ ಶರ್ಮ ಶರಾತುರಿಯಲ್ಲಿ ಮಗನಿಗೆ ಮುಂಜಿ ಮಾಡಿದ್ದಾನೆಂಬುದು, ಮಠ ಮಾಫಿಯಾದ ಅಡಿಗಲ್ಲುಗಳು ಲುಗಾಡುತ್ತಿರುವುದಕ್ಕೆ ಸೂಚನೆಯಂತಿದೆ!

ಹವ್ಯಕ ಸಮುದಾಯದಲ್ಲಿ 'ಸಾಗರ ಕ್ರಾಂತಿ' ನಂತರ ಅಲ್ಲೋಲ ಕಲ್ಲೋಲವಾಗಿರುವುದನ್ನು ತಹಬಂದಿಗೆ ತರಲು ರಾಘನ 'ಚಿಂತಕ ಚಾವಡಿ' ಾವಣೆಗಾರರು ಪ್ಲಾನೊಂದನ್ನು ಹಾಕಿದರು. ರಾಮಚಂದ್ರಾಪುರಮಠದ ಶಿಷ್ಯ ರ್ಗದ ಹೋಬಳಿ ಮಟ್ಟದ 'ಹವ್ಯಕ ಮಂಡಲ'ದ ಸಭೆ ಕರೆದು ಅಲ್ಲಿ ಾಘನ 'ಪರಿಶುದ್ಧತೆ' ಬಗ್ಗೆ ಪ್ರವಚನ ಶೋ ನಡೆಸುವ ನಿರ್ಧಾರವದು. ಂದೊಂದು ದಿಕ್ಕಿಗೆ ಒಬ್ಬೊಬ್ಬರಂತೆ ರಾಘು, ಜಗದೀಶ ಶರ್ಮ, ಸೂಲಿಬೆಲೆ ಕ್ರವರ್ತಿ, ಚೆಂಬು ಶರ್ಮ.... ವಗ್ಯೆರೆಗಳು ಹೋಗುವುದಕ್ಕೆ ಸಿದ್ಧರಾದರು. ೊದಲು ಹೊರಟವನು ಚೆಂಬು ಶರ್ಮ ಎಂಬ ವಕೀಲ. ಈತ ರಾಘನ ಿಯರನೋ, ಮಠದ ವಕ್ತಾರನೋ ಏನೆಂಬುದು ಸ್ವತಃ ಆ ಮಹಾಶಯನಿಗೇ ಗೊತ್ತಿಲ್ಲ. ಈತ ನಾಲ್ಕು ಹವ್ಯಕರು ಸಿಕ್ಕಲೆಲ್ಲ 'ಏಕಾಂತ ದರ್ಶನ' ಎಂಬುದೇ ಠದಲ್ಲಿಲ್ಲ, 'ಕನ್ಯಾ ಸಂಸ್ಕಾರ' ಎಂಬುದೇ ಸುಳ್ಳು ಎಂದು ಬಡಬಡಿಸುವಾಗ ಏಕಾಂತ-ಸಂಸ್ಕಾರ ಕಂಡವರು-ಕೇಳಿದವರೆಲ್ಲ ಬಿದ್ದು ಬಿದ್ದು ನಕ್ಕಿದ್ದೇ ನಕ್ಕಿದ್ದು. ಂಬು ತುಂಬ ಫೀ ತುಂಬಿದಾಗಷ್ಟೇ ಈ ಶರ್ಮ ಉಸಿರುಕಟ್ಟಿ ಬುತ್ತಾನೆಂಬುದು ಮಠದ ಮಾಣಿಗಳೇ ಹೇಳುತ್ತಾರೆ.

ಸಾಗರದ ಪ್ರಕ್ಷೋಭೆ ನಂತರ ಖುದ್ದು ರಾಘುನೇ ಸ್ವ-ಪ್ರಚಾರ ಸಭೆಗೆ ೊರಟು ನಿಂತ. ಮೊದಲಾತ ಹೋಗಿದ್ದು ಹೊನ್ನಾವರದ ಕೆಕ್ಕಾರ ಎಂಬಲ್ಲಿರುವ ಶಾ ಮಠಕ್ಕೆ ಇಲ್ಲಿಗೇ ಏಕೆ ರಾಘು ಮೊದಲು ಬಂದ? ಇಲ್ಲಿರುವಷ್ಟು ಧಾನುಯಾಯಿಗಳು ರಾಘುಗೆ ಇಡೀ ಜಗತ್ತಿನಲ್ಲಿ ಮತ್ತೆಲ್ಲಿಯೂ ಇಲ್ಲ. ್ಲಿಯ ಬ್ರಾಹ್ಮಣರಷ್ಟೇ ಅಲ್ಲ ಪಾಪದ ಬುದ್ಧಿಗೇಡಿ ಒಂದಿಷ್ಟು ಶೂದ್ರ, ಿತರೂ ರಾಘುಗೆ ರಕ್ಷಾ ಕವಚವಾಗಿದ್ದಾರೆ. ಚಾತುರ್ಮಾಸ್ಯದಲ್ಲಿ ಪೊಲೀಸರ ಲಾಗದಂತೆ ಈ ಶೂದ್ರ-ದಲಿತರೇ ರಾಘುನ ಸುತ್ತ ಏಳು ಸುತ್ತಿನ ಕೋಟೆಯಾಗಿ ತಿದ್ದರು. ಕರ್ಮಠ ಹವ್ಯಕರ ಮಠಕ್ಕೆ ಈ ಶೂದ್ರ-ದಲಿತರಿಗೆ ಎಂಟ್ರಿ ಕೊಟ್ಟಿದ್ದಕ್ಕೆ ವ್ಯಕರೇ ಈಗ ಒಳಗೊಳಗೇ ರಾಘುನನ್ನು ಟೀಕಿಸುತ್ತಿದ್ದಾರೆ. ತನಗೆ ರಕ್ಷಿಸುತ್ತಿರುವ ಜನರನ್ನು ಗುರುಜನ ಎಂದು ಪುಸಲಾಯಿಸಿದ್ದ ರಾಘು ವ್ಯಕ್ತಿಯೊಬ್ಬ ಹಾರ ಕಿದಾಗ ಮುಜುಗರಪಟ್ಟುಕೊಂಡು ಸ್ನಾನಮಾಡಿ ಜನಿವಾರ ಬದಲಿಸಿ ಬಂದು ಜಾತಿ ಶಿಷ್ಯರ ಈಗೋ ತಣಿಸಿದ್ದು ಈಗಲೂ ಕೆಕ್ಕಾರ ಮಠದ ಕಂಬ-ಬುಗಳೂ ಉಸುರುತ್ತಿವೆ....

ಶೂರ್ಪನಖಿ ಎಂದ ಕೀಚಕ!!

ಮೊನ್ನೆ ಕೆಕ್ಕಾರದಲ್ಲಿ ಬೆಂಬಲಿಗರ ಸೇರಿಸಿಕೊಂಡು ನಡೆದ ಅಧರ್ಮ ಸಭೆಯಲ್ಲಿ ಮಕಥಾದ ಒಂದಿಷ್ಟು ಉಪ-ಕಥೆ ಹೇಳಿದ್ದಾನೆ! ತಾನು ಅಪ್ಪಟ ಚಿನ್ನ ಎಂದಿದ್ದಾನೆ. ೀಗ ನಡೆಯುತ್ತಿರುವ ಅಗ್ನಿ ಪರೀಕ್ಷೆಯಲ್ಲಿ ರಾಘು ಪಾಸಾಗಿ ಇನ್ನಷ್ಟು ಾಳಪಿಂದ ಬರುತ್ತಾನಂತೆ. ಇಷ್ಟಕ್ಕೇ ಆತನ ಪ್ರವಚನ ಮುಗಿದಿಲ್ಲ, ಮೊದಲು ್ಕಾರಿನ ಸುತ್ತಲಿನ ಜನಗಳಿಗೆ ಪೂಸಿ ಹೊಡೆದ ರಾಘು ನಂತರ ವಿರೋಧಿಗಳಾದ ಮಲತಾ ದಂಪತಿ, ರಾಷ್ಟ್ರ-ರಾಜ್ಯ ಮಟ್ಟದ ಆರೆಸ್ಸೆಸ್ ಮೇಲೆಲ್ಲ ಹರಿಹಾಯ್ದಿದ್ದಾನೆ. ಷ್ಟ್ರ ಮಟ್ಟದಲ್ಲಿ ಷಡ್ಯಂತ್ರ ಆಗುತ್ತಿದೆ ಎಂದು ತನ್ನನ್ನು ಜೈಲಲ್ಲಿ ನೋಡುವ ಢ ನಿರ್ಧಾರ ಮಾಡಿರುವ ಕೃಷ್ಣಶಾಸ್ತ್ರಿ (ದಿವಾಕರ ಶಾಸ್ತ್ರಿ ಅಣ್ಣ), ದತ್ತಾತ್ರೇಯ ಾಸಬಾಳೆ ಮತ್ತು ಪ್ರೇಮಲತಾರನ್ನು ಮನಸೋ ಇಚ್ಛೆ ಮೂದಲಿಸಿ ಮೂರನೇ ರ್ಜೆ ರಾಜಕೀಯ ಪುಢಾರಿ ವರಸೆಯಲ್ಲಿ ಮಾತಾಡಿದ್ದಾನೆ. ಮುಗ್ಧ ಬೆಂಬಲಿಗರ ಿ-ಕರತಾಡನಕ್ಕೆ ಪುಳಕಿತನಾದ ಈ ಸರ್ವಸಂಗ ವ್ಯಾಮೋಹಿ ಪ್ರೇಮಲತಾರನ್ನು ೋಕ್ಷವಾಗಿ ಶೂರ್ಪನಖಿ ಎಂದು ಕಿಚಾಯಿಸಿ ಖುಷಿಗೊಂಡಿದ್ದಾನೆ.

ಒಂದು ಹಂತದಲ್ಲಿ ರಾಘುನ ಹತಾಶೆಯ ಭಾಷಣ ಪ್ರಚೋದನಾತ್ಮಕವಾಗಿ ದಲಾಯ್ತು! ಆತನ ಮೇಲೆ ಅತ್ಯಾಚಾರ ಕೇಸ್ ಬಿದ್ದಾಗ ಅನೇಕರು ನೊಂದು ್ಮಹತ್ಯೆ ಮಾಡಿಕೊಂಡರಂತೆ. ಒಬ್ಬರಿಗೆ ಬ್ರೈನ್‌ಟ್ಯೂಮರ್ ಆಗಿ ಸತ್ತನಂತೆ. ್ಬ ಶಿಷ್ಯ ಬಾವಿಗೆ ಹಾರಿದಾಗ ನೀರಿಲ್ಲದೆ ಬಚಾವಾದನಂತೆ. ತನ್ನನ್ನು ಪೊಲೀಸರು ಚಾರಣೆ ನಡೆಸಿ ದಾಗಂತೂ ಶಿಷ್ಯ ಗಣವೇ ದೇಹತ್ಯಾಗಕ್ಕೆ ಮುಂದಾಗಿತೆಂದು ಲು ಬಿಟ್ಟಿದ್ದಾನೆ! ಭಾಷಣ ಕೇಳುತ್ತಿರುವವರು ಮತಾಂಧಸನ್ನಿ ಹಿಡಿಸಿಕೊಂಡು ್ಮಹತ್ಯೆಗೆ ಮುಂದಾಗುವಂತೆ ಮಾಡುವ ಅನಾಹುತಕಾರಿ ಶೈಲಿಯ ಭಾಷಣವಿದು.

ಇದೊಂದೇ ಸಾಕು ರಾಘುನ ಮೇಲೆ ಆತ್ಮಹತ್ಯೆಗೆ ಪ್ರಚೋದಿಸಿದ ಕ್ರಿಮಿನಲ್ ್ಸ್ ಹಾಕಲು. ಆದರೆ ಆತನ ಕಾವಿ ಮಹಿಮೆಗೆ ಪೊಲೀಸರು ಹೆದರಿ ುಮ್ಮನಿದ್ದಾರೆ. ತಾಲಿಬಾನಿ ಕಾರ್ಯಾಚರಣೆಯಿಂದ ಅಮಾಯಕ ಶಾಮಶಾಸ್ತ್ರಿ ವಾಕರ ಶಾಸ್ತ್ರಿ ಸಹೋದರ)ಯನ್ನು ಪರೋಕ್ಷವಾಗಿ ಕೊಂದು ದಕ್ಕಿಸಿಕೊಂಡಿರುವ ಘುಗೆ ಈ ಸಾಲು-ಸಾಲು ಸಾವುಗಳೆಲ್ಲ ಯಾವ ಲೆಕ್ಕ, ಆತನ ಪೀಠಾಧಿಕಾರಕ್ಕೆ ಬಲಿಗಳೆಲ್ಲ ಅನಿವಾರ್ಯ ತಾನೆ? ಯಾರು ಸಾಯಲಿ-ಬದುಕಲಿ ತಾನು ಾತ್ರ ಪುಕ್ಕಟೆ ಸುಖ ಕೊಡುವ ಮಠದ ದೊರೆಯಾಗಿರ ಬೇಕೆಂಬ ಒಂದೇ ರಿ ರಾಘುನದು.

ಪತನ ಪ್ರಾರಂಭ

ಇಂಥ ಸರಳ ಸತ್ಯ ಬುದ್ಧಿವಂತ ಬ್ರಾಹ್ಮಣ ಸಮುದಾಯಕ್ಕೆ ಅರ್ಥವಾಗಿಲ್ಲ ತಲ್ಲ, ಆದರೆ ಸ್ವಾಮಿ ತಾಲಿಬಾನಿಗಳ ಭಯದಿಂದ ಸುಮ್ಮನಾಗಿದ್ದಾರೆ. ಸ್ವಾಮಿ ುದ್ಧ ಮಾತಾಡಿದರೆ ಬದುಕು ಬರ್ಬರ ಎಂಬ ಭಯಾನಕ ಸಂದೇಶಗಳು ಠದ ತಾಲಿಬಾನಿಗಳು ವ್ಯವಸ್ಥಿತವಾಗಿ ಹಬ್ಬಿಸುತ್ತಿದ್ದಾರೆ. ಐದಾರು ವರ್ಷದ ಿದೆಯೇ ರಾಘುನ ಸ್ತ್ರೀ ಒಡನಾಟ-ಸ್ತ್ರೀಯರಿಗೆ ಕುಂಕುಮ ಧರಣೆ ಮಾಡೋದರ ್ಗೆ ಕುಮಟಾದ ಸಿಷೂರ್‌ವಾದಿ ಹವ್ಯಕ ಮುಖಂಡ ಎತ್ತಿಯಾಡಿದಕ್ಕೆ ಈ ಿಬಾನಿಗಳು ಆ ಹಿರಿಯರನ್ನು ಚಚ್ಚಿದ್ದರು. ರಾಘು ಮತ್ತವನ ಪರಿವಾರದಿಂದ ಗಿಕ ಕುಚೇಷ್ಟೆಗೆ ಒಳಗಾದ ಹಲವು ಬಡ ಹುಡುಗಿಯರಿಗೆ-ಗೃಹಿಣಿಯರಿಗೆ ದತ್ತಿಗೂ ಸದ್ದು ತಾಲಿಬಾನಿಗಳು ಹದ್ದುಬಸ್ತಿನಲ್ಲಿಟ್ಟುಕೊಂಡಿದ್ದಾರೆ. ಇವರೆಲ್ಲ -ದಿನವೂ ಹಿಂಸೆಯಿಂದ ಇಂಚಿಂಚಾಗಿ ಸಾಯುತ್ತಿರುವುದು ಘೋರವಾಗಿದೆ!!! ಎಷ್ಟು ದಿನ ಇಂಥ ದಬ್ಬಾಳಿಕೆ ಸಹಿಸಲು ಸಾಧ್ಯ?! ಸಾಗರದಲ್ಲಾಗಿರುವುದು ಘುನ ತಾಲಿಬಾನಿಗಳ ವಿರುದ್ಧದ ಪ್ರಚ್ಛನ್ನ ಬಂಡಾಯದ ಪ್ರಾರಂಭ! ರಾಘುನ ಠದಿಂದ ಒದ್ದೋಡಿಸುವ ಧರ್ಮಕಾರ್ಯದ ಶುಭಾರಂಭ!! ಬುದ್ಧಿವಂತ ್ರಾಹ್ಮಣರು ಪ್ರಜ್ಞಾವಂತರಾಗುತ್ತಿರುವ ಸೂಚನೆ ಸಾಧ್ಯವೇ? ಶಿರಸಿ-ುಟಾ-ಪುತ್ತೂರು ಭಾಗದಲ್ಲಿ "ಜಾಗೃತ ಹವ್ಯಕರ" ಸಭೆ ನಡೆವ ಲಕ್ಷಣಗಳು ಗೋಚರಿಸುತ್ತಿವೆ...

● ಶುದ್ಧೋಧನ

ತಿಮ್ಮಪ್ಪನವರು ವಿರೋಧ ಪಕ್ಷದ ಲೀಡರಾಗುವುದು ಒಳ್ಳೆಯದು



ಕರ್ನಾಟಕದಲ್ಲಿ ಎರಡು ಕೌತುಕದ ಹೇಳಿಕೆಗಳು ಬಿತ್ತರಗೊಂಡಿವೆಯಲ್ಲಾ, ಒಂದನೆಯದಾಗಿ ಉಡುಪಿ ಕಡೆಯ ಡೋಂಗಿ ಸ್ವಾಮಿಯೊಬ್ಬರಿಗೆ ಜಾತೀಯತೆ ಮುಖ್ಯವಾಗಿ "ಅಸ್ಪೃಶ್ಯತೆಗೂ ಬ್ರಾಹ್ಮಣರಿಗೂ ಸಂಬಂಧವೇ ಇಲ್ಲ. ಮುಖ್ಯವಾಗಿ ಬ್ರಾಹ್ಮಣರು ಅಸ್ಪೃಶ್ಯತೆಯನ್ನು ಆಚರಿಸುವುದಿಲ್ಲ" ಅನ್ನುವಂತೆ ಮಾತನಾಡಿದ್ದಾರಲ್ಲ, ಪೂಜ್ಯರ ಮಾತನ್ನು ಗೌರವಿಸಿ ತಲೆದೂಗಿ ಕೇಳುವುದಾದರೆ "ಸರಿ ಸ್ವಾಮಿ, ತಮ್ಮ ಮಠಗಳಲ್ಲಿ ಅನ್ಯಜಾತಿಯವರನ್ನ ಪಂಕ್ತಿಯಿಂದ ಎಳಿಸಿ ಕಳುಹಿಸುತ್ತಾರಲ್ಲ, ಇದು ಅಸ್ಪಶ್ಯ ವ್ಯಾಪ್ತಿಗೆ ಬರುವುದಿಲ್ಲವೆ? ತಮ್ಮ ಮಠಗಳು ಇರುವುದೇ ಜಾತಿ ತಾರತಮ್ಯ, ಅಸ್ಪೃಶ್ಯ ಆಚರಣೆ, ಮೂಢಾಚರಣೆಗಳ ನಡವಳಿಕೆಗಳನ್ನು ಪೋಷಿಸಲೆಂದು ಎಂಬುದು ಸುಳ್ಳೆ?" ಎಂಬ ಪ್ರಶ್ನೆಗಳಿವೆಯಲ್ಲಾ.

ಆದರೆ ಅಸ್ಪೃಶ್ಯತೆಯ ಆಚರಣೆ ಎಲ್ಲಾ ಜಾತಿಗಳಿಂದಲೂ ನಡೆಯುತ್ತಿದೆ. ವಾಸ್ತವವಾಗಿ, ದಲಿತರನ್ನು ದೈಹಿಕವಾಗಿ ಶೋಷಿಸಿ ಹಲ್ಲೆ ಮಾಡಿದವರು ಒಕ್ಕಲಿಗರು, ಲಿಂಗಾಯತರು ಮತ್ತು ಇತರೆ ಜಾತಿಗಳು. ದಲಿತರನ್ನು ಮುಟ್ಟದೆಯಿರುವ ಬ್ರಾಹ್ಮಣರು ಅವರ ಹತ್ತಿರವೇ ಬಾರದಿರುವುದನ್ನು ಪೂಜ್ಯರು ಈ ರೀತಿ ವ್ಯಾಖ್ಯಾನಿಸಿರಬಹುದೆ ಎಂಬ ಗೊಂದಲಗಳು ಹುಟ್ಟಿಕೊಂಡಿವೆಯಲ್ಲಾ!

ಇನ್ನು ಎರಡನೇ ಕೌತುಕವೆಂದರೆ, ನಮ್ಮ ಡಿಂಗಾಲೇಶ್ವರರು "ಅಕ್ಕನ ಮೇಲೆ ರೇಪು ನಡೆದಿತ್ತು, ಅದಕ್ಕೇ ಅವರು ಸೀರೆ ಬಿಚ್ಚಿ ಎಸೆದು ದೂರು ಹೇಳುತ್ತ ಕಲ್ಯಾಣದವರೆಗೂ ಹೋದರು" ಎಂದು ಎಂಟುನೂರು ವರ್ಷಗಳ ನಂತರ ಕರಾರುವಾಕ್ಕಾದ ಎಫ್‌ಐಆರ್ ರೆಡಿಮಾಡಿದ್ದಾರಂತಲ್ಲಾ, ಈ ರೇಪು ಎಂಬ ಪದ ಸ್ವಾಮಿಗಳ ಸಾಮ್ರಾಜ್ಯದಲ್ಲಿ ಹುಟ್ಟಿಕೊಂಡು, ಆ ಸಂಬಂಧವಾಗಿ ತನಿಖೆಗಳೆಲ್ಲಾ ನಡೆಯುತ್ತಿದೆ.

ಥೂತ್ತೇರಿ ▸ ಯಾಹೂ

ನ್ಯಾಯಾಲಯವೂ ಮುಜುಗರದಿಂದ ರೇಪಿನ ವಿಷಯ ನಡೆಸುತ್ತಿರುವಾಗಲೇ, ಡಿಂಗಾಲೇಶ್ವರ ರೇಪು ಪದವನ್ನು ಬಳಸಿದ್ದು ಅಕ್ಷಮ್ಯವಾಗಿ ಕಂಡ ಫಲವಾಗಿ, ಮ್ಯಾತೆ ಒಬ್ಬರು ಶಾನೆ ಸಿಟ್ಟಾಗಿ "ಡಿಂಗಾಲೇಶು ಮೊದಲು ರೇಪು ಪದವನ್ನು ಹಿಂತೆಗೆದುಕೊಂಡು, ಅಲ್ಲಿಗೆ ಬಲಾತ್ಕಾರ ಸೇರಿಸಬೇಕು" ಎಂದು ಹೇಳಿದರಂತಲ್ಲಾ ಥೂತ್ತೇರಿ!

******

ಕಾಗೋಡು ತಿಮ್ಮಪ್ಪನವರದು ಹೋರಾಟದಲ್ಲಿ ಮಾಗಿದ ಜೀವ. ಮೈಕೇ ಇಲ್ಲದೆ ಮಾತನಾಡಬಲ್ಲ ಗಟ್ಟಿದನಿಯುಳ್ಳವರು. ಅಹಿಂದ ಹೆಸರೇಳಿಕೊಂಡು ಅಧಿಕಾರಕ್ಕೆ ಬಂದವರು. ಯಥಾಸ್ಥಿತಿವಾದಿಗಳಂತೆ ಆರಾಮವಾಗಿರುವುದನ್ನು ಸಹಿಸದೆ ತಮ್ಮದು ಸ್ಪೀಕರ್ ಸ್ಥಾನವೆಂದೂ ಪರಿಗಣಿಸದೆ, ಸಿದ್ದು ಸರ್ಕಾರವನ್ನು ಟೀಕಿಸಿದರಂತಲ್ಲಾ, ಇದನ್ನು ಕಂಡು ನಮ್ಮ ಜನಾರ್ದನ ಪೂಜಾರಿಯವರು ಕೆರಳಿದ್ದಾರಂತಲ್ಲಾ, ಈ ಬಗ್ಗೆ ಅವರನ್ನೆ ಮಾತನಾಡಿಸಿದರೆ ಹೇಗೆ ಎಂದು ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: ಗಂಟೆ ಸದ್ದು.....

"ಹಲೋ ಯಾರು?"

"ನಾನು ಸಾರ್. ಈ ಹಿಂದೆ ತಾವು ಮಹಿಳಾ ಪೂಜಾರಿಗಳನ್ನ ನೇಮಕ ಮಾಡಿದಾಗ ಮೆಚ್ಚಿ ಫೋನ್ ಮಾಡನಾ ಅಂತ ಇದ್ದೆ, ಆಗಲಿಲ್ಲ."

"ಅದೊಂದು ಸಾಮಾಜಿಕ ಕ್ರಾಂತಿ. ಆದರೆ ಪುರುಷರು ಹೋಗಲಿ, ಮಹಿಳೆಯರೇ ಸಹಿಸಲಿಲ್ಲ, ಆದರೂ ಈ ಪೂಜಾರಿ ಯಾವುದಕ್ಕೂ ಕೇರ್ ಮಾಡುವುದಿಲ್ಲ, ನಮ್ಮ ಕೆಲಸವನ್ನು ನಾವು ಮಾಡ್ತಾ ಹೋಗ್ತೇವೆ."

"ಅದು ನನಿಗೂ ಗೊತ್ತು ಸಾರ್. ನೀವು ಯಾವತ್ತು ಯಾರಿಗೂ ಕೇರ್ ಮಾಡಲಿಲ್ಲ, ನಿಮ್ಮ ಪಾರ್ಟಿ ನಿಮ್ಮನ ಯಾರೂ ಪ್ರಶ್ನೆ ಮಾಡಂಗಿಲ್ಲ."

"ಒಂದು ಕಾಲದಲ್ಲಿ ನಮ್ಮನ್ನ ಸೋಲಿಸುವವರು ಯಾರಿದ್ದರು? ಈ ಬಿಜೆಪಿಯವರಿಗೆ ಎಷ್ಟು ಬಡತನ ಇತ್ತು ಗೊತ್ತುಂಟ? ಗೋಡೆಯ ಮೇಲೆ ಜೆ.ಪಿ.ಗೆ ಓಟು ಮಾಡಿ ಅಂತ ನಮ್ಮವರು ಬರೆದಿದ್ದರೆ, ಅದರ ಮುಂದೆ ಬಿ ಸೇರಿಸಿ ಹೋಗುತ್ತಿದ್ದರು. ಅಷ್ಟು ಬಡತನ ಅವರಿಗೆ. ಆದರೆ ಈವತ್ತು ನಮ್ಮ ಬಗ್ಗೆ ಹೇಯವಾಗಿ ಮಾತನಾಡ್ತವುಂಟು. ನಾನು ಬಗ್ಗುವುದಿಲ್ಲ ಗೊತ್ತುಂಟಾ?"

"ನೀವು ಯಾರಿಗೂ ಬಗ್ಗಲ್ಲ ಸಾರ್. ಅಂತ ಸಿದ್ದರಾಮಯ್ಯನಿಗೇ ಕೇರ್ ಮಾಡ್ತಯಿಲ್ಲ, ಅದಕ್ಕಿಂತ ಮೊದಲು ಬಂಗಾರಪ್ಪನವರಿಗೂ ಕೇರ್ ಮಾಡಲಿಲ್ಲ."

"ಹಾಗಿದ್ದ ಮೇಲೆ, ನಾನು ಈ ಕಾಗೋಡು ತಿಮ್ಮಪ್ಪನಿಗೆ ಬೆಲೆ ಕೊಡುವುದುಂಟ."

"ಏನೇ ಆಗ್ಲಿ, ತಿಮ್ಮಪ್ಪನ ಸಿಟ್ಟನ್ನ ನೀವು ಗ್ರಹಿಸಬೇಕಾಗಿತ್ತು ಸಾರ್."

"ಸಿಟ್ಟು ಮಾಡಲಿಕ್ಕೆ ಇವರೇನು ವಿರೋಧ ಪಕ್ಷವ?"

"ಅಲ್ಲ ಮನೆ ಯಜಮಾನಾ."

"ಅವರು ಮೊದಲು ಯಜಮಾನನ ಕರ್ತವ್ಯ ತಿಳಿದುಕೊಳ್ಳಬೇಕು."

"ತಿಳಕೊಂಡಿರದ್ಕೆ ಅಲ್ಲವ ಸಾರ್ ಹಾಗೆ ಮಾತಾಡದು?"

"ಯಂತ ಮಾತು? ಅದನ್ನ ಸಿದ್ದರಾಮಯ್ಯನವರನ್ನ ತನ್ನ ಛೇಂಬರಿಗೆ ಕರೆಸಿಕೊಂಡು ಹೇಳಬೇಕು."

"ಆ ತರ ಹೇಳದರಿಂದ ಪ್ರಯೋಜನ ಇಲ್ಲ ಅನ್ನಿಸಿರಬಹುದು."

"ಪ್ರಯೋಜನ ಇಲ್ಲ ಅಂತ ಹೇಳಿ ಬೀದಿಬದಿಯಲ್ಲಿ ಮಾತನಾಡುವುದಲ್ಲ, ಹಾಗಾದರೆ ಬಿಜೆಪಿಯವರಿಗೂ ಇವರಿಗೂ ಏನು ವ್ಯತ್ಯಾಸವುಂಟು?"

"ಬಿಜೆಪಿಯವರ ಮಾತಿಗೆ ಕಾಂಗ್ರೆಸ್‌ನವರು ಕೇರ್ ಮಾಡಲ್ಲ ಸಾರ್. ಅದ್ಕೆ ತಿಮ್ಮಪ್ಪ ವಿರೋಧ ಪಕ್ಷದ ಕೆಲಸ ಮಾಡ್ತಾಯಿರಬೇಕು."

"ಹಾಗಾದರೆ ಅವರು ಸ್ಪೀಕರ್ ಆಗುವುದು ಬೇಡ, ರಾಜೀನಾಮೆ ಕೊಟ್ಟು, ಬಿಜೆಪಿ ಅಥವಾ ಜೆಡಿಎಸ್ ಪಕ್ಷದಿಂದ ಗೆದ್ದು ಬಂದು ಮಾತನಾಡಲಿ."

"ಅವ್ರುರು ನಿಮಗಿಂತಲೂ ಕಾಂಗ್ರೆಸ್ ನಿಷ್ಠರು ಸಾರ್. ಅದ್ಯಂಗೆ ಬೇರೆ ಪಾರ್ಟಿಗೋಗಿ ನಿಂತು ಗೆದ್ದು ಬರ್ಲಿ ಅಂತಿರಿ?"

"ನಾನು ಹೇಳುವುದನ್ನ ನೀವು ಅರ್ಥಮಾಡಿಕೊಳ್ಳಿ. ತಿಮ್ಮಪ್ಪ ಸರ್ಕಾರಕ್ಕೆ ಬೀಸುವ ಚಾಟಿಯನ್ನ ವಿರೋಧ ಪಕ್ಷದವರಿಗೆ ಕೊಡಲಿ. ಸಭಾಧ್ಯಕ್ಷರ ಸ್ಥಾನದಲ್ಲಿ ಕುಳಿತು ವಿರೋಧ ಪಕ್ಷದ ಕೆಲಸ ಮಾಡುವುದಲ್ಲ."

"ಸರಿಯಾಗಿ ಕೆಲಸ ಮಾಡಿ ಅಂತ ಹೇಳದು ತಪ್ಪ?"

"ತಪ್ಪು, ಅದನ್ನು ಹೇಳಲಿಕ್ಕೆ ಜಗದೀಶ್ ಶೆಟ್ಟರ್ ಉಂಟು."

"ಆ ಜಗದೀಶ್ ಶೆಟ್ಟರ್ ವಿರೋಧ ಪಕ್ಷದ ನಾಯಕನಂಗೆ ಕಂಡಿದ್ರೆ, ಕಾಗೋಡು ತಿಮ್ಮಪ್ಪ ವಿರೋಧ ಪಕ್ಷದ ನಾಯಕನಂಗೆ ಮಾತಾಡತಿರಲಿಲ್ಲ ಸಾರ್."

"ಮತ್ತೆ ನೀವು ಅದನ್ನೆ ಹೇಳ್ತಾವುಂಟು. ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷ ಅಂತ ಉಂಟು. ಅದು ಸರಿಯಾಗಿ ಕೆಲಸ ಮಾಡುವಂತೆ ಒತ್ತಾಯಿಸಲು ವಿರೋಧ ಪಕ್ಷವುಂಟು. ನಡುವೆ ಸದನದಲ್ಲಿ ಹೆಡ್‌ಮಾಸ್ಟರ್ ರೀತಿಯಲ್ಲಿ ಸ್ಪೀಕರ್‌ವುಂಟು. ಅದೊಂದು ರೀತಿ ಅಂಪೈರ್ ಕೆಲಸ. ಅಷ್ಟು ಮಾಡುವುದು ಬಿಟ್ಟು ಈ ತಿಮ್ಮಪ್ಪ ಅತಿ ಮಾಡ್ತವುಂಟು. ಅದರಿಂದ ಆಗಿರುವ ಅನಾಹುತ ಗೊತ್ತುಂಟ? ವಿರೋಧ ಪಕ್ಷದವರು ತಮ್ಮ ಕೆಲಸವನ್ನ ತಿಮ್ಮಪ್ಪನಿಗೆ ವಹಿಸಿ ಪ್ರಸಾದ ತಿಂದುಕೊಂಡು ಆರಾಮವಾಗಿದ್ದಾರೆ, ಗೊತ್ತುಂಟ?"

"ನನಿಗೇನೂ ಅಂಗನ್ನಿಸಿಲ್ಲ ಸಾರ್. ತಿಮ್ಮಪ್ಪನವರ ಸಿಟ್ಟು ಕೆಲಸ ಮಾಡುಸ್ತಾಯಿದೆ. ಸುಮಾರು ಜನ ಮಂತ್ರಿಗಳು ತಿಮ್ಮಪ್ಪ ಸಿಟ್ಟಾಗ್ತರೆ ಅಂತ ಅಂಜಿಕೊಂಡು ಕೆಲಸ ಮಾಡ್ತ ಅವ್ರುರೆ."


"ಅದು ಸರಿಯಾ? ಮಂತ್ರಿಗಳು ಮುಖ್ಯಮಂತ್ರಿಗೆ, ಜನತೆಗೆ ಅಂಜಿ ಕೆಲಸ ಮಾಡಬೇಕು, ತಿಮ್ಮಪ್ಪನಿಗಲ್ಲ."

"ನೋಡಿ ಸಾರ್, ಈ ಸರ್ಕಾರದಲ್ಲಿ ಸರ್ಕಾರದ ಕಾರ್ಯಕ್ರಮಗಳನ್ನ ಅನುಷ್ಠಾನ ಮಾಡೋ ಅಧಿಕಾರಿಗಳವ್ರುರೆ. ಅವ್ರುರ ದೆಸೆಯಿಂದ ಸರ್ಕಾರವೇ ಟೇಕಾಫಾಗಿಲ್ಲ. ಈ ಕಾಂಗ್ರೆಸ್‌ನವರು ಯಂಗವ್ರುರೆ ಅಂದ್ರೆ ಅಂಬರೀಶ್, ಡಿ.ಕೆ. ಶಿವಕುಮಾರ, ಚಿಂಚನಸೂರು ಇವ್ರುರನ್ನೆಲ್ಲ ನೋಡಿದ್ರೆ, ಇದೇ ತರ ಸರ್ಕಾರ ಮುಂದುವರಿಯೋ ಅಗತ್ಯವಿಲ್ಲ ಅನ್ನುಸ್ತದೆ. ಸದ್ಯ ತಿಮ್ಮಪ್ಪನಂತವರು ಜನಗಳ ಮೇಲಿರೊ ಕಾಳಜಿಯಿಂದ ತಮ್ಮ ವ್ಯಾಪ್ತಿ ಮೀರಿ ಮಾತಾಡದು ಈ ಸಮಯಕ್ಕೆ ಸರಿ. ನಿಮ್ಮ ರಾಜಕಾರಣ ಮುಗಿದಿದೆ. ಇನ್ನು ನೀವೇನಿದ್ದು ದೇವಸ್ಥಾನಗಳ ವಿಷಯದಲ್ಲಿ ತಲೆ ಕೆಡಿಸಿಕೊಂಡು, ಬಿಲ್ಲವರ ವಿರುದ್ಧ ಕಾರ್ಯಕ್ರಮಗಳನ್ನ ರೂಪಿಸಿ ಹೋರಾಡುವುದು ಒಳ್ಳೆದು."

"ನೀನು ಪತ್ರಕರ್ತ ಅಲ್ಲ! ತಿಮ್ಮಪ್ಪನ ಭಕ್ತ!"

"ಥೂತ್ತೇರಿ!!!"

ಮಂಡ್ಯ: ರೌಡಿ ದೀಪು ಮಟಾಶ್


ಡಿವೈಎಸ್ಪಿ ಗೀತಾ ಪ್ರಸನ್ನ

ಮಂಡ್ಯ ಭೂಗತಲೋಕದಲ್ಲಿ ಮತ್ತೊಮ್ಮೆ ನೆತ್ತರು ಹರಿದಿದೆ. ಜನವರಿ ಮೂರರ ಮಟಮಟ ಮಧ್ಯಾಹ್ನ ಶ್ರೀರಂಗಪಟ್ಟಣದ ಹುಲಿಕೆರೆ ಗ್ರಾಮಕ್ಕೆ ನುಗ್ಗಿದ ಕುಖ್ಯಾತ ರೌಡಿ ಹೊಂಗಹಳ್ಳಿ ಗಿರಿ ಅಲಿಯಾಸ್ ಎನ್‌ಕೌಂಟರ್ ಗಿರಿಯ ಹಂತಕ ಪಡೆ ಮನೆಯಲ್ಲಿ ಟಿವಿ ನೋಡುತ್ತಿದ್ದ ರೌಡಿ ದೀಪುವನ್ನು ಮಚ್ಚು-ಲಾಂಗ್‌ಗಳಿಂದ ಬರ್ಬರವಾಗಿ ಕತ್ತರಿಸಿ ಪರಾರಿಯಾಗಿದೆ.

ಹಂತಕ ಪಡೆ ಬೀಸಿದ ಮಚ್ಚಿನೇಟಿಗೆ ದೀಪುವಿನ ಬೆರಳುಗಳೆಲ್ಲ ತುಂಡಾಗಿ ಕೈನಿಂದ ಪ್ರತ್ಯೇಕವಾಗಿವೆ. ತಲೆ-ಎದೆಗೆ ಬಿದ್ದ ಮಚ್ಚಿನೇಟಿನಿಂದ ತೀವ್ರವಾಗಿ ಗಾಯಗೊಂಡು ಕುಟುಕುಜೀವ ಕೈಯಲ್ಲಿಡಿದುಕೊಂಡು ಬಿದ್ದಿದ್ದ ದೀಪುವನ್ನು ಆತನ ತಂದೆ ರಾಜಣ್ಣ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ತೆಗೆದುಕೊಂಡು ಹೋಗುವಷ್ಟರಲ್ಲಿ ಮಾರ್ಗಮಧ್ಯೆಯೇ ದೀಪು ಗೋಣು ಚೆಲ್ಲಿದ್ದಾನೆ. ದೀಪು ಕೊಲೆಯೊಂದಿಗೆ ಆತನ ಅಣ್ಣ ಅಕ್ಕಿಕಾಳು ಚಂದ್ರ ಮತ್ತು ಚಿಕ್ಕಪ್ಪ ಧನರಾಜ್ ಸೇರಿದಂತೆ ಒಂದೇ ಕುಟುಂಬದ ಮೂವರನ್ನು ಹೊಂಗಳ್ಳಿ ಜಗ್ಗ ಹಾಗೂ ಗಿರಿಯ ಹಂತಕ ಪಡೆ ಬಲಿ ತೆಗೆದುಕೊಂಡಿದೆ.

2007ರಲ್ಲಿ ಕುಖ್ಯಾತ ರೌಡಿ ಜಡೇಜಾ ರವಿ ಹತ್ಯೆಗೆ ಪ್ರತೀಕಾರವಾಗಿ ನಡೆದ ಅಬಕಾರಿ ಕುಳ ಹನಕೆರೆ ನಾಗಣ್ಣ ಹತ್ಯೆ, ಲಿಕ್ಕರ್ ಕಿಂಗ್ ರಂಗಸ್ವಾಮಿ ಪುತ್ರ ಮಹೇಶ ಹಾಗೂ ರೌಡಿ ಆನೆಕೆರೆ ಬೀದಿ ಕಿಟ್ಟಿ ಮರ್ಡರ್ ನಂತರ ಮಂಡ್ಯ ಭೂಗತಲೋಕದಲ್ಲಿ ಶಾಂತಿ ನೆಲೆಸಿತ್ತು. ಮಂಡ್ಯ ರೌಡಿಸಂನದ್ದೇ ಒಂದು ತೂಕವಾದರೆ ಮೈಸೂರಿಗೆ ಹತ್ತಾರು ಕಿಲೋಮೀಟರ್ ದೂರ ಇರುವ ಶ್ರೀರಂಗಪಟ್ಟಣದ ಪಾಲಹಳ್ಳಿ, ಹುಲಿಕೆರೆ, ಕೆಆರ್‌ಎಸ್, ಹೊಂಗಳ್ಳಿ ಭಾಗದ ರೌಡಿಸಂನದ್ದೇ ಬೇರೆ ತೂಕ. ರೌಡಿ ಜಗ್ಗ ಅಂಡ್ ಗಿರಿ ಟೀಂ ಸಾಲುಸಾಲಾಗಿ ನಾಲ್ಕು ಹತ್ಯೆಗಳನ್ನು ಮಾಡಿ ದಕ್ಕಿಸಿಕೊಂಡಿದೆ ಎಂದರೆ ಇಲ್ಲಿನ ರೌಡಿಸಂ ಯಾವ ಮಟ್ಟದಲ್ಲಿದೆ ಎಂಬುದು ಅರ್ಥವಾಗುತ್ತದೆ.

ರೌಡಿ ದೀಪು ಹತ್ಯೆಗೆ ಸ್ಕೆಚ್

ಶ್ರೀರಂಗಪಟ್ಟಣದ ಹುಲಿಕೆರೆ ಗ್ರಾಮದ ರಾಜಣ್ಣನಿಗೆ ಇಬ್ಬರು ಗಂಡು ಮಕ್ಕಳು. ಅವರಲ್ಲಿ ಅಕ್ಕಿಕಾಳು ಚಂದ್ರ ರೌಡಿಶೀಟರ್ ಆಗಿದ್ದ. ಅವನನ್ನು 2007ರಲ್ಲಿ ಹೊಂಗಳ್ಳಿ ಜಗ್ಗನ ಹಂತಕ ಪಡೆ ಬರ್ಬರವಾಗಿ ಕೊಚ್ಚಿ ಹಾಕಿತ್ತು. ತನ್ನ ಅಣ್ಣನ ಮಗ ಅಕ್ಕಿಕಾಳು ಚಂದ್ರನ ಹತ್ಯೆಯ ಆರೋಪಿಗಳಿಗೆ ಶಿಕ್ಷೆ ಕೊಡಿಸಲು ಸಾಕ್ಷಿಗಳ ಬೆನ್ನು ಹತ್ತಿದ್ದ ಕಾರಣಕ್ಕೆ ಆತನ ಚಿಕ್ಕಪ್ಪ ಧನರಾಜ್‌ನನ್ನು ಹಾಡುಹಗಲೇ ಹೊಂಗಳ್ಳಿ ಜಗ್ಗ ಹಾಗೂ ಗಿರಿಯ ಸಹಚರರು ಹತ್ಯೆ ಮಾಡಿದ್ದರು. ಈಗ 2015ರ ಹೊಸವರ್ಷ ಆರಂಭವಾಗಿ ಮೂರೇ ದಿನಕ್ಕೆ ಅಕ್ಕಿಕಾಳು ಚಂದ್ರನ ಒಡಹುಟ್ಟಿದ ತಮ್ಮ ರೌಡಿಶೀಟರ್ ದೀಪುವನ್ನು ಹೊಂಗಳ್ಳಿ ಗಿರಿಯೇ ತನ್ನ ಸಹಚರರ ಜೊತೆ ಬಂದು ಭೀಕರವಾಗಿ ಹತ್ಯೆ ಮಾಡಿದ್ದಾನೆ.

ಹಾಡುಹಗಲೇ ಜನರ ಮುಂದೆ ಒಂದು ಕಾರು ಹಾಗೂ ಎರಡು ಬೈಕ್‌ಗಳಲ್ಲಿ ಬಂದ ಗಿರಿಯ ಹಂತಕ ಪಡೆಯ ಅರ್ಭಟ ಕಂಡು ಹುಲಿಕೆರೆ ಗ್ರಾಮಸ್ಥರು ಭಯಭೀತರಾಗಿ, ಏನಾಗುತ್ತಿದೆ ಎಂದು ನೋಡುವಷ್ಟರಲ್ಲೇ ಮಚ್ಚು-ಲಾಂಗುಗಳನ್ನು ಝಳಪಿಸಿದ ಹಂತಕಪಡೆ ಕ್ಷಣಾರ್ಧದಲ್ಲೇ ದೀಪುವನ್ನು ಕೊಚ್ಚಿ 'ಪರಾರಿಯಾಗಿದೆ.'

ಒಂದೇ ಕುಟುಂಬದ ಮೂವರನ್ನು ಕೊಲೆ ಮಾಡಿದ್ದರಿಂದ ಸಿಟ್ಟಿಗೆದ್ದ ಗ್ರಾಮಸ್ಥರು ಇದೇ ದಿನ ಕೆಆರ್‌ಎಸ್ ರಸ್ತೆಯನ್ನು ಬಂದ್ ಮಾಡಿ ಹಂತಕ ಗಿರಿಯ ತಂಡವನ್ನು ಬಂಧಿಸುವಂತೆ ಪ್ರತಿಭಟನೆ ನಡೆಸಿದೆ. ರೌಡಿ ಹೊಂಗಳ್ಳಿ ಜಗ್ಗ ಹಾಗೂ ಗಿರಿಯ ಅರ್ಭಟಕ್ಕೆ ಈ ಬಾರಿ ಬ್ರೇಕ್ ಹಾಕಲೇಬೇಕೆಂದು ಡಿವೈಎಸ್ಪಿ ಗೀತಾ ಪ್ರಸನ್ನ ನಿರ್ಧರಿಸಿದ್ದು, ಉತ್ಸಾಹಿ ಸರ್ಕಲ್ ಇನ್ಸ್‌ಪೆಕ್ಟರ್ ದೀಪಕ್ ಹಾಗೂ ಎಸ್‌ಐ ಮಂಜುರನ್ನು ಹಂತಕರ ಬೆನ್ನು ಬೀಳುವಂತೆ ಮಾಡಿದ್ದಾರೆ.

ತನ್ನ ಅಣ್ಣ ಅಕ್ಕಿಕಾಳು ಚಂದ್ರನ ಹತ್ಯೆಯ ನಂತರ 2010ರಲ್ಲಿ ಚಿಕ್ಕಪ್ಪ ಧನರಾಜ್ ಹತ್ಯೆಯಾದ ಸಂದರ್ಭದಲ್ಲಿ ಪೊಲೀಸರ ಉದಾಸೀನತೆಯಿಂದ ಹತ್ಯೆ ನಡೆಯಿತು ಎಂದು ಸಿಟ್ಟಿಗೆದ್ದಿದ್ದ ದೀಪು ಪೊಲೀಸರ ಮೇಲೆಯೇ ಗಲಾಟೆ ಮಾಡಿದ್ದ. ಅಲ್ಲದೆ ರೌಡಿ ಹೊಂಗಳ್ಳಿ ಜಗ್ಗನ ಊರಿಗೆ ನುಗ್ಗಿ ಆತನ ಮನೆಗೆ ಬೆಂಕಿಯಿಟ್ಟಿದ್ದ. ಈ ಹಿನ್ನೆಲೆಯಲ್ಲಿ ಆತನ ಮೇಲೆ ಕೆಆರ್‌ಎಸ್ ಠಾಣೆಯಲ್ಲಿ ರೌಡಿಶೀಟ್ ಓಪನ್ ಮಾಡಲಾಗಿತ್ತು. ತನ್ನ ತಂದೆ ರಾಜಣ್ಣನ ಮೇಲೆ ಹತ್ಯಾ ಯತ್ನ ನಡೆದನಂತರ ತಣ್ಣಗಾದ ದೀಪು ರೌಡಿಸಂನ ಸಹವಾಸವೇ ಬೇಡ ಎಂದು ತನ್ನ ಪಾಡಿಗೆ ಇದ್ದುಬಿಟ್ಟಿದ್ದ. ಆದಕ್ಕಾಗೇ ದೀಪು ತನ್ನ ಚಿಕ್ಕಪ್ಪ ಧನರಾಜ್ ಕೊಲೆ ಕೇಸಿನಲ್ಲಿ ಸಾಕ್ಷಿ ಹೇಳಿಸದೆ ಆರೋಪಿಗಳು ಕೇಸಿನಿಂದ ಹೊರಬರಲು ಸಹಕಾರ ನೀಡಿದ್ದ. ದೀಪು ಹುಲಿಕೆರೆ ಗ್ರಾಮದಲ್ಲೇ ಇರುವ ಜುವಾರಿ ರಿಯಲ್ ಎಸ್ಟೇಟ್ ಕಂಪನಿಯಲ್ಲಿ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಂಡು ಯಾರ ತಂಟೆಗೂ ಹೋಗದೆ ಸುಮ್ಮನಿದ್ದ. ಚಂದ್ರ ಹಾಗೂ ಧನರಾಜ್ ಕೊಲೆ ಕೇಸಿನಿಂದ ಖುಲಾಸೆ ಆಗಿ ವರ್ಷದ ಹಿಂದಷ್ಟೇ ಜೈಲಿನಿಂದ ಹೊರಗೆ ಬಂದ ಹೊಂಗಳ್ಳಿ ಜಗ್ಗ ಮತ್ತು ಗಿರಿಗೆ ರೌಡಿ ದೀಪುವಿನ ಬಗ್ಗೆ ಆತಂಕವಿದ್ದೇ ಇತ್ತು. ಈ ಹಿನ್ನೆಲೆಯಲ್ಲಿ ಆತನನ್ನು ಮುಗಿಸಲು ಇಬ್ಬರು ಹೊಂಚು ಹಾಕಿದ್ದರು. ಇದು ಗೊತ್ತಾಗಿಯೇ ದೀಪು ಹೆಚ್ಚಾಗಿ ಹುಲಿಕೆರೆ ಗ್ರಾಮದಲ್ಲೇ ಕಾಲಕಳೆಯುತ್ತಿದ್ದ.


ಆದರೆ ದೀಪು ಹತ್ಯೆಗೆ ಹೊಂಗಳ್ಳಿ ಜಗ್ಗ ಹಾಗೂ ಗಿರಿ ಪಕ್ಕಾ ಸ್ಕೆಚ್ ಹಾಕಿದರು. ಸ್ಕೆಚ್ ಸಿದ್ದಪಡಿಸಿದ ಜಗ್ಗ ತಾನು ಹೋಗದೆ ತೆರೆಮರೆಯಲ್ಲಿ ನಿಂತು ತನ್ನ ಚಿಕ್ಕಪ್ಪನ ಮಗ ಹೊಂಗಳ್ಳಿ ಗಿರಿಯ ನೇತೃತ್ವದಲ್ಲಿ ಹತ್ತು ಮಂದಿಯ ಟೀಂ ಸಿದ್ದಪಡಿಸಿ ಕಳುಹಿಸಿಕೊಟ್ಟಿದ್ದ.

ಅದರಂತೆ ಜ.3ರಂದು ಎನ್‌ಕೌಂಟರ್ ಗಿರಿ ಒಂದು ಸ್ವಿಫ್ಟ್ ಕಾರು ಹಾಗೂ ಎರಡು ಪಲ್ಸರ್ ಬೈಕ್‌ಗಳಲ್ಲಿ ಹಂತಕರನ್ನು ತುಂಬಿಕೊಂಡು ಹುಲಿಕೆರೆ ಗ್ರಾಮಕ್ಕೆ ದಾಳಿಯಿಟ್ಟ. ತನ್ನ ಶಿಷ್ಯ ವಿನೋದ್ ಜೊತೆ ಮನೆಯಲ್ಲಿ ಟಿ.ವಿ. ನೋಡುತ್ತಿದ್ದ ದೀಪುವನ್ನು ಸುತ್ತುವರಿದ ಗಿರಿಯ ಹಂತಕ ಪಡೆ ದೀಪು ಕಣ್ಣಿಗೆ ಖಾರದಪುಡಿ ಎರಚಿ ಮನಬಂದಂತೆ ಮಚ್ಚು-ಲಾಂಗುಗಳಿಂದ ಕೊಚ್ಚಿ ಹಾಕಿ ಕ್ಷಣಾರ್ಧದಲ್ಲೇ ಪರಾರಿಯಾಗಿದೆ.

ದೀಪು ಶಿಷ್ಯ ವಿನೋದ್ ಪೊಲೀಸರಿಗೆ ಎನ್‌ಕೌಂಟರ್ ಗಿರಿಯ ಜೊತೆ ಸಂಜಯ್ ಗೌಡ, ಜಗದೀಶ್ ಗೌಡ, ಹಿರಿಕೆರೆ ಗ್ರಾಮದ ಮಂಜು ಅಲಿಯಾಸ್ ಬೂತ, ದೇವರಾಜು ಇದ್ದರೆಂದು ಹೇಳಿಕೆ ನೀಡಿದ್ದಾನೆ. ಆದರೆ ಹುಲಿಕೆರೆ ಗ್ರಾಮದವನೇ ಆದ ಮಂಜು ಅಲಿಯಾಸ್ ಬೂತ ದೀಪು ಸ್ನೇಹಿತನಾಗಿದ್ದ. ಕೆಲದಿನಗಳ ಹಿಂದಷ್ಟೇ ಆತನಿಂದ ದೂರವಾಗಿದ್ದ. ದೀಪು ಹತ್ಯೆಯಲ್ಲಿ ತಾನು ಭಾಗಿಯಾಗಿಲ್ಲದಿದ್ದರೂ ಪೊಲೀಸರು ತನ್ನನ್ನು ಆರೋಪಿಯನ್ನಾಗಿ ಮಾಡಿದ್ದಾರೆಂದು ಹೇಳಿ ವಿಷ ಕುಡಿದು ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾನೆ. ಕೆಆರ್‌ಎಸ್ ಪೊಲೀಸರು ದೀಪು ಕೊಲೆಯ ಹಿಂದಿನ ಅಸಲಿ ಸೂತ್ರಧಾರ ಹೊಂಗಳ್ಳಿ ಜಗ್ಗನನ್ನು ಕೇಸಿನಲ್ಲಿ ಫಿಟ್ ಮಾಡಿ ಎಫ್‌ಐಆರ್ ಹರಿದಿದ್ದಾರೆ.

ಅವನು ಹೊಂಗಳ್ಳಿ ಜಗ್ಗ

ಕೆಆರ್‌ಎಸ್ ಅಣೆಕಟ್ಟೆಗೆ ತಾಗಿಕೊಂಡೇ ಇರುವ ಹೊಂಗಳ್ಳಿ ಗ್ರಾಮದವನಾದ ಸಂತೋಷ್‌ಕುಮಾರ್ ಅಲಿಯಾಸ್ ಜಗ್ಗ ಮಜ್ಜಿಗೆಪುರದ ಪ್ರದೀಪ ಹತ್ಯೆಯೊಂದಿಗೆ ಚಿಕ್ಕವಯಸ್ಸಿನಲ್ಲೇ ಕ್ರೈಂಲೋಕದಲ್ಲಿ ಕಾಣಿಸಿಕೊಂಡ. ಮಜ್ಜಿಗೆಪುರ ಗ್ರಾಮದ ಪ್ರದೀಪನೊಂದಿಗೆ ಉಂಟಾದ ಚಿಕ್ಕಜಗಳ ದೊಡ್ಡದಾಗಿ ಕೊನೆಗೆ ಆತನ ಕೊಲೆಗೆ ಮುನ್ನುಡಿ ಬರೆಯಿತು. 2002ರಲ್ಲಿ ತನ್ನ ಆರು ಮಂದಿ ಸಹಚರರೊಂದಿಗೆ ಮಜ್ಜಿಗೆಪುರದ ಪ್ರದೀಪನನ್ನು ಕೊಂದ ಹೊಂಗಳ್ಳಿ ಜಗ್ಗ ಮಂಡ್ಯ ಜೈಲು ಸೇರಿದ. ಸೆಷನ್ಸ್ ಕೋರ್ಟ್‌ನಲ್ಲಿ ಕೇಸು ಬಿದ್ದು ಹೋಗಿ ಜಗ್ಗ ಬಿಡುಗಡೆಯಾದ. ನಂತರ ಪ್ರದೀಪನ ಕೊಲೆ ಕೇಸು ಹೈಕೋರ್ಟ್ ಮೆಟ್ಟಿಲೇರಿ ಅಲ್ಲಿ ಹೊಂಗಳ್ಳಿ ಜಗ್ಗ ಹಾಗೂ ಆತನ ಆರು ಮಂದಿ ಸಹಚರರಿಗೆ ಜೀವಾವಧಿ ಶಿಕ್ಷೆಯಾಯಿತು. ನಂತರ ಈ ಪ್ರಕರಣ ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿದ್ದಾಗ ಜಾಮೀನಿನ ಮೇಲೆ ಹೊರಗಿದ್ದ ಹೊಂಗಳ್ಳಿ ಜಗ್ಗ 2007ರಲ್ಲಿ ಹುಲಿಕೆರೆಯ ರೌಡಿಶೀಟರ್ ಅಕ್ಕಿಕಾಳು ಚಂದ್ರನ ಹತ್ಯೆಯಲ್ಲಿ ಭಾಗಿಯಾದ.


ದೀಪು

ಜಗ್ಗನ ಸಹಚರ ಮುನ್ನ ಎಂಬಾತನ ತಂಗಿಯನ್ನು ರೌಡಿ ಅಕ್ಕಿಕಾಳು ಚಂದ್ರ ರೇಗಿಸಿದ ಕಾರಣಕ್ಕೆ ಆತನ ಕೊಲೆ ಬರ್ಬರವಾಗಿ ನಡೆದುಹೋಯಿತು. ಹುಲಿಕೆರೆ ರಾಜಣ್ಣನ ಮಗನಾದ ಅಕ್ಕಿಕಾಳು ಚಂದ್ರ ಹುಂಬ. ಕುಡಿದು ದಾಂಧಲೆ ಮಾಡುವ ಮೂಲಕ ಹಲವು ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ.


ಬಸ್ ಕ್ಲೀನರ್ ಕೆಲಸ ಮಾಡುತ್ತಿದ್ದ ಅಕ್ಕಿಕಾಳು ಚಂದ್ರ ಕೆಆರ್‌ಎಸ್ ಒಂದು ಸಂತೆಮಾಳದ ಬಳಿ ಬಸ್ ನಿಲ್ಲಿಸಿಕೊಂಡು ಅದರಲ್ಲಿಯೇ ಮಲಗಿದ್ದ. ಇದನ್ನು ಪಕ್ಕಾ ಮಾಡಿಕೊಂಡ ಹೊಂಗಳ್ಳಿ ಜಗ್ಗ ತನ್ನ ಸಹಚರರಾದ ಮಂಜು, ಚಂದ್ರ, ಜಗ್ಗನ ತಮ್ಮ ದೇವರಾಜ, ಆತನ ಚಿಕ್ಕಪ್ಪನ ಮಗ ಎನ್‌ಕೌಂಟರ್ ಗಿರಿ, ಗಿರಿಯ ತಮ್ಮ ಬಂಗಾರಿ, ಜೋಗಿ ನವೀನ, ವಿಶ್ವ, ನಂಜುಂಡ ಮತ್ತು ಬಾಬು ಬಸ್‌ನಲ್ಲಿ ಮಲಗಿದ್ದ ಅಕ್ಕಿಕಾಳು ಚಂದ್ರನ ಮೇಲೆ ಸೈಜುಗಲ್ಲು ಎತ್ತಿಹಾಕಿ ಬರ್ಬರವಾಗಿ ಹತ್ಯೆ ಮಾಡಿದ್ದರು.

ಧನರಾಜ್ ಕೊಲೆ

ಅಕ್ಕಿಕಾಳು ಚಂದ್ರನನ್ನು ಹತ್ಯೆ ಮಾಡಿ ಜೈಲಿನಲ್ಲಿದ್ದ ಹೊಂಗಳ್ಳಿ ಜಗ್ಗ ಹಾಗೂ ಆತನ ಹತ್ತು ಮಂದಿ ಸಹಚರರಿಗೆ ಶಿಕ್ಷೆ ಕೊಡಿಸಲು ಚಂದ್ರನ ಚಿಕ್ಕಪ್ಪ ಧನರಾಜ್ ಎದ್ದು ನಿಂತರು. ಚಂದ್ರನ ಕೊಲೆ ಕೇಸಿನಲ್ಲಿ ಸಾಕ್ಷಿಗಳಾಗಿದ್ದವರನ್ನು ಖುದ್ದಾಗಿ ಕಂಡು ಸಾಕ್ಷಿ ಹೇಳುವಂತೆ ಕೇಳಿಕೊಳ್ಳುತ್ತಿದ್ದರು. ಈ ವಿಚಾರ ಜಗ್ಗನಿಗೆ ಗೊತ್ತಾಯಿತು. ಸಾಕ್ಷಿಗಳನ್ನು ಭೇಟಿ ಮಾಡದಂತೆ ಜಗ್ಗನ ಕಡೆಯ ಹುಡುಗರು ಹೇಳಿದರೂ ಧನರಾಜ್ ಕೇಳಲಿಲ್ಲ. ಒಂದು ಬಸ್ಸಿನ ಮಾಲೀಕನಾಗಿದ್ದ ಧನರಾಜ್ ಹಣಕಾಸಿನಲ್ಲಿ ತಕ್ಕಮಟ್ಟಿಗೆ ಪ್ರಬಲವಾಗಿದ್ದು ರೌಡಿ ಜಗ್ಗನ ಬೆದರಿಕೆಗಳಿಗೆ ಕ್ಯಾರೇ ಎನ್ನದೆ ಸಾಕ್ಷಿ ಹೇಳಿಸಲು ಓಡಾಡಿಕೊಂಡಿದ್ದ.

ಧನರಾಜ್‌ನನ್ನು ಹೀಗೆ ಬಿಟ್ಟರೆ ತನಗೆ ಶಿಕ್ಷೆಯಾಗುವುದು ಗ್ಯಾರಂಟಿ ಎಂದು ಲೆಕ್ಕಾ ಹಾಕಿ ರೌಡಿ ಜಗ್ಗ ಧನರಾಜ್ ಹತ್ಯೆಗೆ ನಿರ್ಧರಿಸಿದ. ತನ್ನ ಸಹಚರರಾದ ಪಾಲಹಳ್ಳಿಯ ಸೋಮಶೇಖರ್ ಅಲಿಯಾಸ್ ಕೋತಿ ಸೋಮ, ರಘು, ಹುಲಿಕೆರೆ ಗ್ರಾಮದವರೇ ಆದ ಪ್ರಕಾಶ್, ಮುಕುಂದ, ನರಸಿಂಹ, ಹೊಂಗಳ್ಳಿಯ ಸಿದ್ದೇಗೌಡನ ಜೊತೆಗೂಡಿ 26.7.2010ರಂದು ತನ್ನ ಮಕ್ಕಳನ್ನು ಶಾಲೆಗೆ ಬಿಟ್ಟು ವಾಪಸ್ ಬರುತ್ತಿದ್ದ ಧನರಾಜ್‌ನನ್ನು ಹುಲಿಕೆರೆ ಹೆಲಿಪ್ಯಾಡ್‌ನ ಸೇತುವೆ ಬಳಿ ಕೊಂದುಹಾಕಿದ.

ಇಷ್ಟಾದರೂ ಹೊಂಗಳ್ಳಿ ಜಗ್ಗನಿಗೆ ಸಮಾಧಾನವಾಗಲಿಲ್ಲ. ತಮ್ಮ ಧನರಾಜ್ ಹತ್ಯೆಯಾದ 3-4 ತಿಂಗಳಲ್ಲೇ ಅಕ್ಕಿಕಾಳು ಚಂದ್ರನ ತಂದೆ ರಾಜಣ್ಣನನ್ನು ಜೈಲಿನಲ್ಲಿದ್ದುಕೊಂಡೇ ಜಗ್ಗ ಹಾಗೂ ಗಿರಿ ಕೊಲೆ ಮಾಡಲು ಬೆಂಗಳೂರಿನ ಪಾತಕಿಗಳಿಗೆ ಸುಪಾರಿ ಕೊಟ್ಟರು. ಬೆಂಗಳೂರಿನ ಮಂಡ, ಚರಣ, ಕುಮಾರ, ಬಸವರಾಜ, ನಂದೀಶ, ಪ್ರದೀಪ ಉರುಫ್ ಮೇಕೆ, ಕೆಆರ್‌ಎಸ್ ಸಂತೋಷ, ಪಾಲಹಳ್ಳಿ ಸೋಮಶೇಖರ್ ಮತ್ತು ಮಂಜುನಾಥ್ ಜೊತೆಗೂಡಿ ರಾಜಣ್ಣನ ಮೇಲೆ ಅಟ್ಯಾಕ್ ಮಾಡಿದರು.


ಎನ್‌ಕೌಂಟರ್ ಗಿರಿ
ಸಂತೋಷ್‌ಕುಮಾರ್

ಪೆಟ್ಟಿ ಅಂಗಡಿ ಕೆಳಗೆ ತೂರಿಕೊಳ್ಳುವ ರಾಜಣ್ಣನಿಗೆ ಆ ದಾಳಿಯಲ್ಲಿ ಸಣ್ಣ ಪುಟ್ಟ ಗಾಯಗಳಾಗಿ ಬಚಾವ್ ಆದ. ಯಾವಾಗ ತನ್ನ ತಂದೆ ರಾಜಣ್ಣನ ಹತ್ಯೆಗೆ ಯತ್ನಿಸಲಾಯಿತೋ ಆನಂತರ ಸಂಪೂರ್ಣ ತಣ್ಣಗಾದ ದೀಪು ಸದಾ ಆತಂಕದಲ್ಲೇ ಕಾಲಕಳೆಯುತ್ತಿದ್ದ. ತನ್ನ ಚಿಕ್ಕಪ್ಪ ಧನರಾಜ್‌ನ ಹತ್ಯೆಯಲ್ಲಿ ಭಾಗಿಯಾದ ಆರೋಪಿಗಳು ರಾಜಿ ಮಾಡಿಕೊಳ್ಳೋಣ ಎಂದಕೂಡಲೇ ತಾನೇ ಮುಂದೆ ನಿಂತು ರಾಜಿ ಮಾಡಿಕೊಂಡ. ಹಾಗಾಗಿ ಚಿಕ್ಕಪ್ಪ ಧನರಾಜ್ ಕೇಸು ಬಿದ್ದುಹೋಗಿ ಆರೋಪಿಗಳೆಲ್ಲಾ ಹೊರಬಂದರು. ಆದರೂ ಜಗ್ಗ ಹಾಗೂ ಗಿರಿ ಈಗ ತನ್ನ ಪಾಡಿಗೆ ಸುಮ್ಮನಿದ್ದ ದೀಪುವನ್ನು ಕೊಂದು ರಾಜಣ್ಣನ ಇಬ್ಬರು ಮಕ್ಕಳನ್ನು ಹತ್ಯೆ ಮಾಡಿದ್ದಾರೆ. ಇದು ಇಲ್ಲಿಗೆ ಮುಗಿಯುತ್ತದೋ ಇಲ್ಲವೋ ಎಂಬುದನ್ನು ಕಾಲವೇ ನಿರ್ಧರಿಸಲಿದೆ.

ಅಕ್ಕಿಕಾಳು ಚಂದ್ರ ಹಾಗೂ ತನ್ನ ಚಿಕ್ಕಪ್ಪ ಧನರಾಜ್ ಕೊಲೆ ಕೇಸಿನಲ್ಲಿ ಖುಲಾಸೆ ಆಗಿ ವರ್ಷದ ಹಿಂದಷ್ಟೇ ಜೈಲಿನಿಂದ ಬಿಡುಗಡೆಯಾದ ಹೊಂಗಳ್ಳಿ ಜಗ್ಗ ಹಾಗೂ ಆತನ ಚಿಕ್ಕಪ್ಪನ ಮಗ ಹೊಂಗಳ್ಳಿ ಗಿರಿ ಕೆಆರ್‌ಎಸ್ ಸುತ್ತಮುತ್ತ ಒಂದಷ್ಟು ರೌಡಿಸಂ ಹವಾ ಕ್ರಿಯೇಟ್ ಮಾಡಿದ್ದರು. ಇದೇ ಹವಾವನ್ನು ಮುಂದಿಟ್ಟುಕೊಂಡು ಕೆಆರ್‌ಎಸ್‌ನ ಎಂಎಂಕೆ ಲಾಡ್ಜ್ ಮಾಲೀಕನನ್ನು ಹೊತ್ತೊಯ್ದು ಹಣ ನೀಡುವಂತೆ ಬೆದರಿಸಿ ಬಡಿದಿದ್ದ ಹಿನ್ನೆಲೆಯಲ್ಲಿ ಕೆಆರ್‌ಎಸ್ ಠಾಣೆಯಲ್ಲಿ ಹೊಂಗಳ್ಳಿ ಜಗ್ಗ ಹಾಗೂ ಗಿರಿ ಮೇಲೆ ದೂರು ದಾಖಲಾಗಿತ್ತು. ಹೀಗೆ ಕೆಆರ್‌ಎಸ್ ಸುತ್ತಮುತ್ತ ರೌಡಿ ಜಗ್ಗ ಹಾಗೂ ಎನ್‌ಕೌಂಟರ್ ಗಿರಿ ರೌಡಿಸಂ ಮುಂದುವರಿಸಿದ್ದರು. ಈಗ ತಮ್ಮ ಹವಾ ಮೇಂಟೈನ್ ಮಾಡುವ ಸಲುವಾಗಿ ಹುಲಿಕೆರೆ ರಾಜಣ್ಣನ ಆಸರೆಗಿದ್ದ ಮತ್ತೊಬ್ಬ ಮಗ ದೀಪುವನ್ನು ಕೊಂದು ಮನೆಗೆ ಗಂಡು ದಿಕ್ಕಿಲ್ಲದಂತೆ ಮಾಡಿದ್ದಾರೆ.

● ಮಂಡ್ಯ ನಾಗೇಶ್

ಗಡೀಪಾರಿಗೆ ಆಗ್ರಹ

ರೌಡಿ ಹೊಂಗಳ್ಳಿ ಜಗ್ಗ ಹಾಗೂ ಗಿರಿಯ ಹಾವಳಿಯಿಂದ ರೋಸಿಹೋದ ಕೆಆರ್‌ಎಸ್ ಠಾಣೆಯ ಪೊಲೀಸರು 2010ರಲ್ಲಿ ಇಬ್ಬರಿಬ್ಬರ ಗಡೀಪಾರಿಗೆ ಜಿಲ್ಲಾಧಿಕಾರಿಯನ್ನು ಒತ್ತಾಯಿಸಿದ್ದರು. ಆದರೆ ಅವರ ಗಡೀಪಾರಿನ ಅರ್ಜಿಗೆ ಜಿಲ್ಲಾಧಿಕಾರಿಗಳು ಮುಕ್ತಿ ಕಾಣಿಸಲೇ ಇಲ್ಲ. ಈಗ ತಿಂಗಳ ಹಿಂದಷ್ಟೇ ಎರಡು ಬಾರಿ ಮತ್ತೆ ಗಡಿಪಾರಿಗೆ ಕೆಆರ್‌ಎಸ್ ಪೊಲೀಸರು ಆಗ್ರಹಿಸಿದ್ದರು. ಇತ್ತೀಚೆಗಷ್ಟೇ ಪಿಎಸ್‌ಐ ದೀಪಕ್ ಕೆಆರ್‌ಎಸ್ ಸುತ್ತಮುತ್ತಲ ಅಷ್ಟೂ ರೌಡಿಗಳನ್ನು ಠಾಣೆಯಲ್ಲಿ ಪರೇಡ್ ನಡೆಸಿ ವಾರ್ನಿಂಗ್ ಮಾಡಿದ್ದರು.

ಹೊಂಗಳ್ಳಿ ಜಗ್ಗ ಹಾಗೂ ಎನ್‌ಕೌಂಟರ್ ಗಿರಿಗೆ ಪ್ರತ್ಯೇಕವಾಗಿ ಎಚ್ಚರಿಕೆ ನೀಡಿದ್ದರು. ಆದರೂ ರೌಡಿ ದೀಪು ಹತ್ಯೆ ನಡೆದುಹೋಗಿದೆ. ಕೆಆರ್‌ಎಸ್ ಠಾಣೆಯಲ್ಲಿ ಇನ್ಸ್‌ಪೆಕ್ಟರ್ ಆಗಿದ್ದ ದೀಪಕ್ ತಮ್ಮ ಖಡಕ್ ಪೊಲೀಸಿಂಗ್ ಮೂಲಕ ಒಳ್ಳೆ ಹೆಸರು ಮಾಡಿದ್ದಾರೆ. ಸಮಾಜಮುಖಿ ಚಿಂತನೆಯ ಅಧಿಕಾರಿಯಾಗಿರುವ ದೀಪಕ್ ಈಗಷ್ಟೇ ಬಡ್ತಿ ಪಡೆದು ಸರ್ಕಲ್ ಇನ್ಸ್‌ಪೆಕ್ಟರ್ ಆಗಿದ್ದಾರೆ.

ಕೆಆರ್‌ಎಸ್ ಠಾಣೆ ವ್ಯಾಪ್ತಿಯಲ್ಲಿರುವ ಬೆಳಗೊಳ ಪಾಲಹಳ್ಳಿ, ಹುಲಿಕೆರೆ, ಹೊಂಗಳ್ಳಿ ಗ್ರಾಮದ ಒಂದಷ್ಟು ಹಾದಿ ತಪ್ಪಿದ ಯುವಕರು ಭೂಗತಲೋಕದ ಆಕರ್ಷಣೆಗೆ ಒಳಗಾಗಿ ಕ್ರೈಂಗಳಲ್ಲಿ ಭಾಗಿಯಾಗುತ್ತಿದ್ದಾರೆ. ಕಾವೇರಿ ಹರಿಯುತ್ತಿರುವ ಈ ಭಾಗದಲ್ಲಿ ಇತ್ತೀಚಿನ ವರ್ಷಗಳಲ್ಲಿ ನೆತ್ತರ ಹೊಳೆಯೇ ಹರಿಯುತ್ತಿದೆ. 3-4 ಕೊಲೆ ಕೇಸಿನಲ್ಲಿ ಭಾಗಿಯಾಗಿರುವ ಹೊಂಗಳ್ಳಿ ಜಗ್ಗ ಹಾಗೂ ಗಿರಿಯ ಹಂತಕ ಪಡೆಯಲ್ಲಿರುವವರೆಲ್ಲಾ 30ರ ವಯೋಮಾನದವರು. ಇನ್ನಾದರೂ ಇವರೆಲ್ಲ ರೌಡಿಸಂ ಬಿಟ್ಟು ಒಳ್ಳೆಯ ಹಾದಿ ಹಿಡಿಯಲಿ.

ಎಸ್ಪಿ ಭೂಷಣ್ ಬೊರಸೆ, ಡಿವೈಎಸ್ಪಿ ಗೀತಾ ಪ್ರಸನ್ನ ಈ ಭಾಗದಲ್ಲಿ ನಡೆಯುತ್ತಿರುವ ಅಪರಾಧಗಳ ಬಗ್ಗೆ ಗಮನಹರಿಸಿ ರೌಡಿಗಳನ್ನು ಮಟ್ಟಹಾಕುವ ಕೆಲಸ ಮಾಡಲಿ. ಇಲ್ಲದಿದ್ದರೆ ಮತ್ತಷ್ಟು ಕೃತ್ಯಗಳು ನಡೆಯುವುದಂತೂ ದಿಟ.

ನಿತ್ಯಾ ಭಕ್ತೆಯ ನಿಗೂಢ ಸಾವು





ಸಂಗೀತಾ

ಮಾಡಿದ ಪಾಪ ಸುಲಭಕ್ಕೆ ಜೀರ್ಣವಾಗುವುದಿಲ್ಲ. ಆರತಿ ರಾವ್ ಅತ್ಯಾಚಾರ ಪ್ರಕರಣ, ವಿದೇಶಿ ಭಕ್ತನೊಬ್ಬನನ್ನು ಜೈಲಿಗಟ್ಟಿದ ದಾರುಣ, ನಟಿ ರಂಜಿತಾ ಜೊತೆ ನಿರ್ಲಜ್ಜ ಚಕ್ಕಂದ ಮತ್ತು ದುರಾಚಾರಕ್ಕೆ ಬಾವಿ ತೋಟ್ಟಂತೆ ಶೋಷಣೆಯಲ್ಲಿ ನಲುಗಿದ ಭಕ್ತಗಣ!

ಈಗ ಈ ಸಾಲಿಗೆ ಲೇಟೆಸ್ಟ್ ಸೇರ್ಪಡೆಯೆಂಬಂತೆ ಸಂಗೀತಾ ನಿಗೂಢ ಮರಣ!

ನಿತ್ಯಾನಂದನ ಟೈಮೇ ಕೆಟ್ಟು ನಿಂತಿದೆಯೋ ಅಥವಾ ಮಾಡಿದ ಪಾಪಗಳೆಲ್ಲ ಒಂದೊಂದಾಗಿ ಬೆನ್ನಟ್ಟಿ ಬರುತ್ತಿದೆಯೋ ಗೊತ್ತಿಲ್ಲ. ಮೊನ್ನೆ ಡಿಸೆಂಬರ್ 28 ರಂದು ಬಿಡದಿಯ ನಿತ್ಯಾನಂದನ ಆಶ್ರಮದಲ್ಲಿ ನಿಗೂಢವಾಗಿ ಸತ್ತವಳು ನತದೃಷ್ಟೆ ಸಂಗೀತಾ. ವಯಸ್ಸಿನ್ನೂ ಇಪ್ಪತ್ತೆಂಟು. ಸಾಯುವ ವಯಸ್ಸಂತೂ ಅಲ್ಲವೇ ಅಲ್ಲ. ಅದು ಆತ್ಮಹತ್ಯೆಯೋ ಕೊಲೆಯೋ ಅಥವಾ ನಿತ್ಯಾನಂದನ ಆಶ್ರಮದ ಚೇಲಾಗಳೇ ಹೇಳುವಂತೆ ಹಾರ್ಟ್ ಅಟ್ಯಾಕ್ಕಾಗಿ ಸಂಗೀತಾ ಪ್ರಾಣ ಬಿಟ್ಟಳೋ ಎಂಬ ಬಗ್ಗೆ ಖುದ್ದು ಪೊಲೀಸರಲ್ಲೂ ಉತ್ತರವಿಲ್ಲ.

ಸಂಗೀತಾ ಮೂಲತಃ ತಮಿಳುನಾಡಿನ ತಿರುಚ್ಚಿಯ ಹುಡುಗಿ. ವಿದ್ಯಾವಂತೆ. ಅದು ಹೇಗೆ ನಿತ್ಯಾನಂದನ ಬಲೆಗೆ ಬಿದ್ದಳೋ ಗೊತ್ತಿಲ್ಲ. ತನ್ನ 20ನೇ ವಯಸ್ಸಿಗೆ ಬಿಡದಿಯ ನಿತ್ಯಾನಂದನ ಆಶ್ರಮ ಸೇರಿಕೊಂಡವಳು ಮತ್ತೆ ಮನೆಗೆ ಬಂದದ್ದು ಹೆಣವಾಗಿಯೇ. ಸಂಗೀತಾಳ ತಾಯಿ ಝಾನ್ಸಿ ರಾಣಿಯ ಪ್ರಕಾರ ಡಿಸೆಂಬರ್ 28 ರ ರಾತ್ರಿ ಬಿಡದಿಯ ನಿತ್ಯಾನಂದ ಆಶ್ರಮದಿಂದ ಆಕೆಗೆ ಫೋನ್ ಬಂದಿದೆ. ನಿಮ್ಮ ಮಗಳಿಗೆ ಆರೋಗ್ಯ ಸರಿಯಿಲ್ಲ. ಆಸ್ಪತ್ರೆಗೆ ಸೇರಿಸಿದ್ದೇವೆ. ಯಾವುದಕ್ಕೂ ಹೊರಟು ಬನ್ನಿ. ಸ್ವಲ್ಪ ಸೀರಿಯಸ್ಸಾಗಿರುವಂತಿದೆ. ಆದರೂ ಯೋಚನೆ ಮಾಡಬೇಡಿ... ಯಾವುದಕ್ಕೂ ಬೇಗ ಬನ್ನಿ ಎಂದು ಫೋನ್ ಮಾಡಿ ಹೇಳಿದವನು ನಿತ್ಯಾನಂದನ ಪರಮಾಪ್ತ ಚೇಲಾ ಪ್ರಾಣವಾನಂದ.

ಬೆಳಗ್ಗೆ 9 ರ ಹೊತ್ತಿಗೆ ಬೆಂಗಳೂರಿಗೆ ಬಂದು ಬಿಡದಿ ತಲುಪುವ ಹೊತ್ತಿಗೆ ಸಂಗೀತಾ ಹೆಣವಾಗಿದ್ದಳು. ನಿತ್ಯಾನಂದನ ಆಶ್ರಮದವರೇ ಕಾರೊಂದರಲ್ಲಿ ಸಂಗೀತಾ ಶವವನ್ನು ತುರುಕಿ ತಮಿಳಿನಲ್ಲಿ 'ಕವಲ ಪಡಾದೆ' ಅಂದರೆ ಯೋಚನೆ ಮಾಡಬೇಡಿ, ಎಲ್ಲವನ್ನೂ ಸ್ವಾಮಿ ನೋಡಿಕೊಳ್ಳುತ್ತಾರೆ, ಮೊದಲು ಹೆಣ ಹೊತ್ತೊಯ್ದು ಅಂತ್ಯಕ್ರಿಯೆ ನಡೆಸಿಬಿಡಿ ಎಂದು ಗಾಬರಿ ಗಾಬರಿಯಾಗಿ ಹೆಣ ಸಾಗಹಾಕಿದ್ದಾರೆ. ಮುದ್ದಿನ ಮಗಳ ದುರ್ಮರಣ, ಏನಾಗಿರಬಹುದೆಂಬ ಆತಂಕ, ನಿತ್ಯಾನಂದನ ಚೇಲಾಗಳ ಬಲವಂತ ಮತ್ತು ಆಶ್ರಮದ ಭಕ್ತಾದಿಗಳ ಮುಖದಲ್ಲಿ ಭಯ ಎಲ್ಲವೂ ತಾಯಿ ಝಾನ್ಸಿ ರಾಣಿಯ ಜಂಘಾಬಲವನ್ನೇ ಉಡುಗಿಸಿದೆ. ರಾತ್ರೋರಾತ್ರಿ ತಿರುಚ್ಚಿಗೆ ಒಯ್ದು ಸುಡಬೇಕಿದ್ದ ಹೆಣವನ್ನು ಸುಡದೆಯೇ ಹೂತುಹಾಕಿದ್ದು ಕೂಡ ನಿಗೂಢ ಕಾರಣದ ಮುನ್ಸೂಚನೆಯೇ ಆಗಿತ್ತು. ತಾಯಿ ಕರುಳಿಗೆ ಸತ್ಯದ ವಾಸನೆ ಹತ್ತಿರಬೇಕು. ಏನೋ ಅನುಮಾನ, ಎಂಥದೋ ತಳಮಳ. ತಾಳಲಾರದೆ ಮರುದಿನವೇ ತಿರುಚ್ಚಿಯ ಪೊಲೀಸರಿಗೆ ಸಾವಿನ ಸಂಶಯದ ಮೇಲೆ ದೂರಿತ್ತಿದ್ದಾರೆ. ಆದರೆ ಸಾವು ಸಂಭವಿಸಿದ್ದು ಬಿಡದಿಯ ಆಶ್ರಮದಲ್ಲಿ. ತಮಿಳುನಾಡು ಪೊಲೀಸರು ತಾನೇ ಏನು ಮಾಡಲು ಸಾಧ್ಯ. ದೂರು ನೀಡುವುದೇ ಆದಲ್ಲಿ ಬೆಂಗಳೂರಿನ ಪೊಲೀಸರಿಗೇ ನೀಡಿ ಎಂದು ತಿರುಚ್ಚಿಯ ಪೊಲೀಸರು ಕೈಚೆಲ್ಲಿದ್ದಾರೆ.

ಈ ಹೊತ್ತಿಗಾಗಲೇ ಬಿಡದಿಯ ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ಸಂಗೀತಾಳ ಪೋಸ್ಟ್‌ಮಾರ್ಟಮ್ ಶಾಸ್ತ್ರವನ್ನು ಮುಗಿಸಿಯಾಗಿತ್ತು. ಜನವರಿ ಮೂರಕ್ಕೆ ಬಿಡದಿಗೆ ಬಂದ ತಾಯಿ ಝಾನ್ಸಿರಾಣಿ ರಾಮನಗರದ ಎಸ್‌ಪಿ ಚಂದ್ರಗುಪ್ತರನ್ನು ಕಂಡು ಮಗಳನ್ನು ನಿತ್ಯಾ ಗ್ಯಾಂಗ್ ಕೊಂದಿರುವ ಸಾಧ್ಯತೆಯಿದೆ ಎಂದೇ ದೂರು ದಾಖಲಿಸಿದ್ದಳು. ಈ ಬಗ್ಗೆ ಮೊದಲೇ ಮಾಹಿತಿಯಿದ್ದ ಎಸ್‌ಪಿ ಚಂದ್ರಗುಪ್ತ ತಾಯಿಯ ದೂರು ಹಿಡಿದೇ ಡಿವೈಎಸ್‌ಪಿ ಲಕ್ಷ್ಮಿ ಗಣೇಶ್‌ಗೆ ಸಾವಿನ ತನಿಖೆಯ ಹೊಣೆ ಹೊರಿಸಿದ್ದಾರೆ. ತಾಯಿ ಝಾನ್ಸಿರಾಣಿ ಮರುದಿನವೇ ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿದ್ದಾಳೆ.

ಪತ್ರಿಕಾಗೋಷ್ಠಿಯಲ್ಲಿ ಆಕೆ ಬಿಚ್ಚಿಟ್ಟ ಸಂಗತಿಗಳೇನು ಕಮ್ಮಿಯವೆ?

ನನ್ನ ಮಗಳು ಸಂಗೀತಾ ಆತ್ಮಹತ್ಯೆ ಮಾಡಿಕೊಳ್ಳುವಂತಹ ಹುಡುಗಿಯಾಗಿರಲಿಲ್ಲ, ಹಾರ್ಟ್‌ಅಟ್ಯಾಕ್ ಆಗುವುದಕ್ಕೆ ಆಕೆಗೆ ಹೃದಯ ಸಂಬಂಧಿ ಯಾವ ವ್ಯಾಧಿಯೂ ಇರಲಿಲ್ಲ, ನಿತ್ಯಾನಂದನೇ ಯೋಗ ಹೇಳಿಕೊಡುತ್ತಾನೆ ಎಂದಮೇಲೆ ಬಿಡದಿಯ ಆಶ್ರಮದ ಪ್ರತಿಯೊಬ್ಬರಿಗೂ ಯೋಗ ಕಡ್ಡಾಯ ಎಂದಮೇಲೆ ಕಳೆದ ನಾಲ್ಕೈದು ವರ್ಷಗಳಿಂದ ಯೋಗ, ಪ್ರಾಣಾಯಾಮ ಮಾಡುತ್ತಿದ್ದ ನನ್ನ ಮಗಳಿಗೆ ಹೇಗೆ ತಾನೆ ಹೃದಯಾಘಾತ ಸಂಭವಿಸಲು ಸಾಧ್ಯ?

ಇದು ತಾಯಿ ಝಾನ್ಸಿರಾಣಿ ಪತ್ರಕರ್ತರನ್ನುದ್ದೇಶಿಸಿ ಕೇಳಿದ ಮೊದಲ ಪ್ರಶ್ನೆ. ಮುಂದುವರಿದು: ನನ್ನ ಮಗಳಿಗೆ ನಿತ್ಯಾನಂದನ ಕಡೆಯವರೇ ಹಿಂಸೆ ನೀಡಿದ್ದಾರೆ. ನಿತ್ಯಾನ ಚೇಲಾಗಳ ಪೈಕಿ ಹಂಸಾನಂದ ತನ್ನನ್ನು ಪದೇ ಪದೇ ಹಿಂಸಿಸುತ್ತಿದ್ದ ಎಂದು ನನ್ನ ಮಗಳೇ ಹೇಳಿಕೊಂಡಿದ್ದಳು. 2013ರಲ್ಲಿ ಮಗಳನ್ನು ಕಾಣಲೆಂದು ನಾನು ಬಿಡದಿ ಆಶ್ರಮಕ್ಕೆ ಬಂದಿದ್ದೆ. ಆಗ ಸಂಗೀತಾ ತನ್ನ ದುಃಖ ತೋಡಿಕೊಂಡಿದ್ದಳು. ನಿತ್ಯಾನ ಆಪ್ತಸಖಿ ನಟಿ ರಂಜಿತಾ ತನ್ನ ಕೆನ್ನೆಗೆ ಹೊಡೆದಳೆಂದೇ ಆವತ್ತು ಸಂಗೀತಾ ಕಣ್ಣೀರಿಟ್ಟಿದ್ದಳು. ಇನ್ನು ಮಗಳು ಇಲ್ಲಿರುವುದು ಬೇಡ ಅನ್ನಿಸಿಯೇ ಆಕೆಯನ್ನು ತಿರುಚ್ಚಿಯ ಮನೆಗೆ ಕರೆದೊಯ್ದಿದ್ದೆ. ಹಾಗೆ ಮನೆಗೆ ಬಂದ ಸಂಗೀತಾ ನಿತ್ಯಾ ಆಶ್ರಮದ ತನ್ನ ಕರಾಳ ಅನುಭವಗಳನ್ನೆಲ್ಲ ಒಂದೊಂದಾಗಿ ಬಿಚ್ಚಿಡುತ್ತಿದ್ದಳು. ನಾನು ಆಶ್ರಮದಲ್ಲಿದ್ದಷ್ಟೂ ದಿನ ಸ್ವಾಮಿ ನಿತ್ಯಾನಂದನ ರಾಸಲೀಲೆಯ ಅನೇಕ ವೀಡಿಯೋ ಮತ್ತು ಫೋಟೋಗಳನ್ನು ನೋಡುತ್ತಿದ್ದೆ. ಇದಿಷ್ಟಲ್ಲದೆ ನಿತ್ಯಾನ ಆಪ್ತ ಚೇಲಾ ಹಂಸಾನಂದ ಕೂಡ ಆಶ್ರಮದ ಭಕ್ತೆಯೊಬ್ಬಳ ಜೊತೆ ಚಕ್ಕಂದವಾಡುವುದನ್ನು ಕಣ್ಣಾರೆ ಕಂಡಿದ್ದೆ. ಹಂಸಾನಂದ ಭಕ್ತೆಯೊಬ್ಬಳ ಜೊತೆ ನಡೆಸಿದ ರಾಸಲೀಲೆಯ ವೀಡಿಯೋ ನೋಡಿದ್ದೆ ಎಂಬ ಒಂದೇ ಕಾರಣಕ್ಕೆ ನಟಿ ರಂಜಿತಾ ನನ್ನ ಕೆನ್ನೆಗೆ ಹೊಡೆದಳು. ಇಂಥಾ ಪಜೀತಿಗೆ ಬಿದ್ದು ಇಲ್ಲಿರುವುದೇ ನನಗೆ ಆಪತ್ತು ಎಂದು ಮಗಳು ಹೇಳಿದ್ದರಿಂದಲೇ ನಾನು ಮಗಳನ್ನು ಮನೆಗೆ ಕರೆತಂದೆ-

ಸಂಗೀತಾಳನ್ನು ಮನೆಗೆ ಕರೆತಂದ ಮರುದಿನವೇ ಬಿಡದಿ ಆಶ್ರಮದಿಂದ ನಿತ್ಯಾನ ಚೇಲಾ ಹಂಸಾನಂದ ನಮ್ಮ ತಿರುಚ್ಚಿಯ ಮನೆಗೇ ಹುಡುಕಿಕೊಂಡು ಬಂದ. ಸಂಗೀತಾಳನ್ನು ಪ್ರತ್ಯೇಕವಾಗಿ ಕರೆದೊಯ್ದು ಏನೇನೋ ಬೆದರಿಕೆಯನ್ನೂ ಹಾಕಿದ್ದ. ನೀನು ವಾಪಸ್ಸು ಆಶ್ರಮಕ್ಕೆ ಬರಲೇಬೇಕು ಇಲ್ಲದಿದ್ದರೆ ಆಶ್ರಮದ ಲ್ಯಾಪ್‌ಟ್ಯಾಪ್ ಮತ್ತು ಪೆನ್‌ಡ್ರೈವ್ ಅನ್ನು ಕದ್ದು ಅದರಲ್ಲಿರುವ ಮಾಹಿತಿಯನ್ನು ಕದ್ದಿದ್ದೀಯ ಎಂದು ಪೊಲೀಸರಿಗೆ ದೂರು ಕೊಡುತ್ತೇನೆ, ಸ್ವಾಮೀಜಿ ನಿನ್ನನ್ನು ಜೈಲಿಗೆ ಹಾಕಿಸಬಾರದು ಎಂದರೆ ನೀನು ಬಿಡದಿಗೆ ವಾಪಸ್ಸಾಗಬೇಕು ಎಂದು ಹೆದರಿಸಿ ಮಗಳನ್ನು ಬೆಂಗಳೂರಿಗೆ ಕರೆದೊಯ್ದ.

ಹಾಗೆ ಮಗಳನ್ನು ತನ್ನ ಜೊತೆ ಕರೆದೊಯ್ಯುವುದಕ್ಕೂ ಮುನ್ನ ಹಂಸಾನಂದ 'ನಾನು ನಟಿ ರಂಜಿತಾಳನ್ನು ಅಪ್ಪಿ ಮುದ್ದಾಡಿರಬಹುದು. ಆಶ್ರಮದ ಬೇರೆ ಭಕ್ತೆಯರಿಗೂ ಮುತ್ತು ಕೊಟ್ಟಿರಬಹುದು. ಅದರಲ್ಲಿ ತಪ್ಪೇನಿದೆ. ನಿತ್ಯಾನಂದನ ಆಶ್ರಮದಲ್ಲಿ ಅವೆಲ್ಲಾ ಇದ್ದಿದ್ದೇ. ಅದು ಪ್ರಪಂಚಕ್ಕೇ ಗೊತ್ತಿರುವ ವಿಷಯ ತಾನೆ? ಈ ಬಗ್ಗೆ ನನಗಾಗಲಿ ಸ್ವಾಮಿ ನಿತ್ಯಾನಂದರಿಗಾಗಲಿ ಯಾರ ಭಯವೂ ಇಲ್ಲ. ನಿಮ್ಮ ಮಗಳ ಬಗ್ಗೆ ನನಗಾಗಲಿ ಸ್ವಾಮೀಜಿಗಾಗಲಿ ಯಾವುದೇ ಕೆಟ್ಟ ಅಭಿಪ್ರಾಯವಿಲ್ಲವಾದ್ದರಿಂದ ನೀವು ಭಯಕ್ಕೆ ಬೀಳುವ ಅಗತ್ಯವೇ ಇಲ್ಲ. ಧೈರ್ಯವಾಗಿ ನಿಮ್ಮ ಮಗಳನ್ನು ನನ್ನ ಜೊತೆ ಕಳಿಸಿ, ಎಂದು ಹಂಸಾನಂದ ನನ್ನ ಮಗಳನ್ನು ಬಿಡದಿಗೆ ಕರೆದೊಯ್ದ.

ನಾನು ಇದೇನೋ ಕ್ಷುಲ್ಲಕ ಸಂಗತಿಯಿರಬೇಕೆಂದು ಇವತ್ತಲ್ಲ ನಾಳೆ ಎಲ್ಲವೂ ಸರಿಹೋಗಬಹುದೆಂದು ನಂಬಿ ಮಗಳನ್ನು ಕಳಿಸಿಕೊಟ್ಟೆ. ಇದಾಗಿ ವರ್ಷ ಕಳೆದಿರಬೇಕು. ಮಗಳು ಆಗಾಗ ಫೋನ್ ಮಾಡುತ್ತಿದ್ದಳು. ನೀನೇನೂ ಯೋಚಿಸಬೇಡ. ಇನ್ನು ಕೆಲವೇ ದಿನ ನಾನು ಊರಿಗೆ ಬರುತ್ತೇನೆ ಎಂದೇ ಹೇಳುತ್ತಿದ್ದಳು. ಆದರೆ ಡಿಸೆಂಬರ್ 28ರಂದು ಸಂಜೆ ಬಿಡದಿ ಆಶ್ರಮದ ಪ್ರಾಣವಾನಂದರಿಂದ ನನಗೆ ಫೋನ್ ಬಂತು. ನಿಮ್ಮ ಮಗಳಿಗೆ ಆರೋಗ್ಯ ಸರಿ ಇಲ್ಲ, ಆಸ್ಪತ್ರೆಗೆ ಸೇರಿಸಿದ್ದೇವೆ ಬನ್ನಿ ಎಂದ. ನಾನು ಮರುದಿನವೇ ಬಿಡದಿಗೆ ಬಂದರೆ ಮಗಳ ಹೆಣವಿತ್ತು, ತಲೆಸುತ್ತು ಬಂದಂತಾಯ್ತು. ಸಂಗೀತಾ ಹಾರ್ಟ್‌ಅಟ್ಯಾಕ್ಕಾಗಿ ಸತ್ತಿದ್ದಾಳೆಂದು ಪ್ರಾಣವಾನಂದ ಹೇಳಿದ. ಹೆಣವನ್ನು ಸುಡುತ್ತೀರೋ ಹೂಳುತ್ತೀರೋ ಎಂದು ಪದೇಪದೇ ಪ್ರಾಣವಾನಂದ ಪೀಡಿಸುತ್ತಲೇ ಇದ್ದ. ಯಾಕೆ ಎಂದು ನಾನು ಪ್ರಶ್ನಿಸಿದರೆ ನಿಮ್ಮ ಮಗಳು ಆಶ್ರಮದ ಭಕ್ತೆಯಾದ್ದರಿಂದ ಅವಳ ಆತ್ಮಕ್ಕೆ ಶಾಂತಿ ಸಿಗಬೇಕೆಂದರೆ ನೀವು ಆಕೆಯನ್ನು ನಮ್ಮ ಆಶ್ರಮದಲ್ಲೇ ಹೂಳಬೇಕು ಎಂದು ಬಲವಂತ ಮಾಡುತ್ತಿದ್ದ. ಆಗ ನನಗೆ ಹಿಂದಿನ ಎಲ್ಲಾ ಘಟನೆಗಳು ನೆನಪಾಗಿ ಮಗಳ ಶವವನ್ನು ನೋಡಿದೆ. ಮೂಗಿನಿಂದ ಮತ್ತು ಬಾಯಿಯಿಂದ ಎಂಥದ್ದೋ ದ್ರವ ಸೋರುತ್ತಿತ್ತು. ಇದೆಲ್ಲವನ್ನೂ ಗಮನಿಸಿದರೆ ನನ್ನ ಮಗಳಿಗೆ ಖಂಡಿತಾ ಹೃದಯಾಘಾತವಾಗಿಲ್ಲ, ಆಕೆಯನ್ನು ಸ್ವಾಮೀಜಿ ಮತ್ತು ಆತನ ಚೇಲಾಗಳೇ ಸೇರಿ ಕೊಂದಿರಬೇಕೆಂಬ ಅನುಮಾನ ಕಾಡುತ್ತಿದೆ.

ನನಗೆ ನ್ಯಾಯಬೇಕು. ನನ್ನ ಮಗಳನ್ನು ಕೊಂದವರಿಗೆ ಶಿಕ್ಷೆಯಾಗಲೇಬೇಕು!"



ಸಂಗೀತಾ ತಾಯಿ ಝಾನ್ಸಿರಾಣಿ

ಇದು ಸಂಗೀತಾಳ ತಾಯಿ ಝಾನ್ಸಿರಾಣಿಯ ಮಾತುಗಳು. ಮಗಳ ಸಾವಿನ ಆಘಾತಕ್ಕೋ ನಿತ್ಯಾನ ಚೇಲಾ ಹಂಸಾನಂದನ ಮೇಲಿನ ಸಿಟ್ಟಿಗೋ ತಾಯಿ ಝಾನ್ಸಿ ಉಪ್ಪು, ಖಾರ, ಮಸಾಲೆ ಬೆರೆಸಿ ನಿತ್ಯಾ ಮತ್ತಾತನ ಶಿಷ್ಯರ ಮೇಲೆ ಸುಳ್ಳು ಆರೋಪವನ್ನೇ ಮಾಡುತ್ತಿದ್ದಾಳೆಂದು ಲೆಕ್ಕ ಹಾಕಿದರೂ ಆಕೆಯ ಮಾತುಗಳಲ್ಲೇ ಸತ್ಯವೆಲ್ಲೋ ಇಣುಕಿ ನೋಡುವಂತಿದೆ.

ಸಂಗೀತಾ ಮುದುಕಿಯಾಗಲಿ, ರೋಗಿಯಾಗಲಿ ಅಲ್ಲದ ವಿದ್ಯಾವಂತ ಯುವತಿ. ಹಾಗೊಮ್ಮೆ ಬಿಡದಿ ಆಶ್ರಮದಲ್ಲಿದ್ದಾಗ ರಂಜಿತಾ ಕೆನ್ನೆಗೆ ಹೊಡೆದಿದ್ದರ ವಿರುದ್ಧವಾಗಲಿ ಹಂಸಾನಂದನ ಧಮಕಿಯ ವಿರುದ್ಧವಾಗಲಿ ಪೊಲೀಸರಿಗೆ ದೂರು ಕೊಡಲಾಗದಷ್ಟು ಅನಕ್ಷರಸ್ಥಳಾಗಲಿ, ಅಂಜುಬುರುಕಿಯಾಗಲಿ ಅಲ್ಲ. ತನ್ನ ತಾಯಿ ಬಿಡದಿಗೆ ಬಂದಾಗ ಆಶ್ರಮದಲ್ಲಿ ತನಗೆ ಚಿತ್ರಹಿಂಸೆ ನೀಡುತ್ತಿದ್ದಾರೆ ಎಂದೇ ಹೇಳಿಕೊಂಡರೂ ಆ ಕಾರಣಕ್ಕೇ ತಾಯಿ ಆಕೆಯನ್ನು ತಿರುಚ್ಚಿಗೆ ಕರೆದೊಯ್ದರೂ ಮತ್ತೆ ಹಂಸಾನಂದನ ಜೊತೆ ಬಿಡದಿಗೆ ವಾಪಸ್ಸಾಗುತ್ತಿರಲಿಲ್ಲ. ತಾಯಿಯ ಮಾತನ್ನೇ ಅನುಮಾನಿಸುವುದಾದರೂ ಸತ್ಯ ಇವೆರಡರ ನಡುವೆ ಇರಲೇಬೇಕು.

ಸಂಗೀತಾ ಹೆಣ್ಣುಮಗಳು. ಆಕೆಯನ್ನು ವಾಪಸ್ಸು ಕರೆತರಲು ನಿತ್ಯಾನ ಆಶ್ರಮದಲ್ಲಿ ಹೆಂಗಸರಾಗಲಿ, ಭಕ್ತೆಯರಾಗಲಿ, ಸನ್ಯಾಸಿನಿಯರಾಗಲಿ ಇರಲಿಲ್ಲವೆಂದಲ್ಲ. ಬೇಕಾಬಿಟ್ಟಿ ಹೆಂಗಸರಿದ್ದಾಗಲೂ ಓರ್ವ ಭಕ್ತೆ ಅರ್ಥಾತ್ ಸನ್ಯಾಸಿನಿ ಯಾನೇ ಮಾ ನಿತ್ಯಾ ತುರಿಮಾತೀತನಂದ ಸ್ವಾಮಿಣಿಯನ್ನು ಕರೆದೊಯ್ಯಲು ಹಂಸಾನಂದನೆಂಬ ಗಂಡುಗೂಳಿ ತಿರುಚ್ಚಿಗೆ ಬರುತ್ತಾನೆ. ಬಿಡದಿ ಆಶ್ರಮದಲ್ಲಿ ಸ್ವಾಮಿಣಿ ಮಾ ತಿರುಮಾತೀತಾನಂದಳದ್ದು ಕಂಪ್ಯೂಟರ್ ವಿಭಾಗದ ಮುಖ್ಯಸ್ಥಳ ಜವಾಬ್ದಾರಿಯೇ ಆಗಿದ್ದರೂ ಅದಕ್ಕೇ ಹಂಸಾನಂದನೇ ಬರಬೇಕಿರಲಿಲ್ಲ.

ಹಾಗೇ ತಿರುಚ್ಚಿಗೆ ಬಂದ ಹಂಸಾನಂದ ಸಂಗೀತಾಳ ಜೊತೆ ರಹಸ್ಯವಾಗಿ ಏನೇನೋ ಮಾತಾಡಬೇಕಿರಲಿಲ್ಲ. ಹಾಗೊಮ್ಮೆ ಆಶ್ರಮದ ಲ್ಯಾಪ್‌ಟಾಪ್ ಮತ್ತು ಪೆನ್‌ಡ್ರೈವ್‌ಗಳಿಂದ ಆಕೆ ಮಾಹಿತಿಯನ್ನು ಕದ್ದಿದ್ದರೂ ಅದಕ್ಕೆ ಹಂಸಾನಂದನಾಗಲಿ ನಿತ್ಯಾನಂದನಾಗಲಿ ಆ ಪಾಟಿ ತಲೆಕೆಡಿಸಿಕೊಳ್ಳಬೇಕಿರಲಿಲ್ಲ. ಏಕೆಂದರೆ ಅಂತಹ ಅನಾಚಾರವಾಗಲಿ ದುರಾಚಾರವಾಗಲಿ ನಡೆಯದೇ ಕೇವಲ ದೇವತಾಕಾರ್ಯವಷ್ಟೇ ನಡೆಯುತ್ತಿದ್ದರೆ ಸಂಗೀತಾ ಕದ್ದೊಯ್ದ ಮಾಹಿತಿ ಬಗ್ಗೆ ಆ ಪಾಟಿ ತಲೆ ಕೆಡಿಸಿಕೊಳ್ಳಬೇಕಿರಲಿಲ್ಲ. ಸಂಗೀತಾ ಆಶ್ರಮದ ಲ್ಯಾಪ್‌ಟಾಪ್‌ನಿಂದ ಯಾವ ವೀಡಿಯೋ ಫೋಟೋ ಮಾಹಿತಿಯನ್ನು ಒಯ್ದಿದ್ದಳು? ಆಶ್ರಮದ ಲ್ಯಾಪ್‌ಟಾಪ್‌ನಲ್ಲಿ ಅಂಥಾದ್ದೇನೂ ದಾಖಲಾಗಿರುವುದಿಲ್ಲ ಎಂದಿಟ್ಟುಕೊಂಡರೂ ಹಂಸಾನಂದ ವಿವಿಧ ಭಕ್ತೆಯರ ಜೊತೆ ಚಕ್ಕಂದವಾಡಿದ್ದನ್ನು ಸಂಗೀತಾ ತನ್ನ ಮೊಬೈಲ್ ಕ್ಯಾಮೆರಾದಿಂದ ಸೆರೆಹಿಡಿದಿದ್ದಳೆ?

ಹಾಗೊಮ್ಮೆ ರಂಜಿತಾ ಮತ್ತು ಹಂಸಾನಂದ ಅಥವಾ ನಿತ್ಯಾನಂದರ ರಾಸಲೀಲೆಯ ವೀಡಿಯೋಗಳು ಆಕೆಯ ಬಳಿಯಿದ್ದಿದ್ದೇ ಆಗಿದ್ದರೆ ಸಂಗೀತಾ ಧೈರ್ಯವಾಗಿ ಅದನ್ನು ಪೊಲೀಸರಿಗೊಪ್ಪಿಸುತ್ತಿದ್ದಳು. ಆದರೆ ಸಂಗೀತಾ ದಿಕ್ಕುತೋಚದೆ ಕುರಿಮರಿಯಂತೆ ಹಂಸಾನಂದನ ಜೊತೆ ಬಿಡದಿಗೆ ವಾಪಸ್ಸಾಗುತ್ತಾಳೆ. ತಾನು ರಂಜಿತಾ ಜೊತೆ ಚಕ್ಕಂದವಾಡಿದ್ದೇನೆ, ಬೇರೆ ಭಕ್ತೆಯರನ್ನು ಅಪ್ಪಿ ಮುದ್ದಾಡಿದ್ದೇನೆಂದು ಹಂಸಾನಂದ ಸಂಗೀತಾಳ ತಾಯಿಗೇ ಹೇಳಿದ್ದು ನಿಜವಾಗಿದ್ದರೆ ಓರ್ವ ತಾಯಿಯಾಗಿ ತನ್ನ ಮಗಳನ್ನು ಅಂತಹ ಪಾಪಕೂಪಕ್ಕೆ ಯಾಕೆ ಕಳಿಸಬೇಕಿತ್ತು? ಓರ್ವ ವಿದ್ಯಾವಂತ ಯುವತಿಯಾಗಿ ಭಕ್ತೆಯರ ಮಾನದ ಜೊತೆ ಸಲ್ಲಾಪವಾಡುವ ಜಾಗಕ್ಕೆ ಸಂಗೀತಾ ಏಕೆ ವಾಪಸ್ಸಾಗುತ್ತಿದ್ದಳು?

ತಾಯಿ ಝಾನ್ಸಿ ರಾಣಿಯ ಮಾತುಗಳಲ್ಲೇ ಅಡಗಿರುವ ಪ್ರಶ್ನೆಗಳಿವು. ಬಹುಶಃ ನಿತ್ಯಾನ ಚೇಲಾ ಹಂಸಾನಂದ ಮತ್ತು ಸಂಗೀತಾಳ ನಡುವೆ ವಿವಾಹಬಾಹಿರ ನೆಂಟಸ್ತಿಕೆಯಿತ್ತೆ? ಅದು ಆಶ್ರಮದಲ್ಲಿ ಅವ್ಯಾಹತವಾಗಿದ್ದ ತಾಂತ್ರಿಕ್ ಸೆಕ್ಸ್‌ನ ಫಲಶೃತಿಯಾಗಿತ್ತೆ? ಪ್ರೀತಿಸುತ್ತೇನೆಂದು ಸಂಗೀತಾಳನ್ನು ಬಳಸಿಕೊಂಡ ಹಂಸಾನಂದ ಆಕೆಯನ್ನು ಮದುವೆಯಾಗದೇ ವಂಚಿಸುತ್ತಿದ್ದನೆ? ಅಥವಾ ಸಂಗೀತಾಳನ್ನು ದೂರವಿರಿಸಲೆಂದೇ ಬೇರೆಬೇರೆ ಭಕ್ತೆಯರನ್ನು ತನ್ನ ತೃಷೆಗೆ ಬಳಸುತ್ತಿದ್ದನೆ? ತನ್ನನ್ನು ನಂಬಿಸಿ ಬೇರೆಬೇರೆ ಯುವತಿಯರನ್ನೂ ಹಾಸಿಗೆಗೆಳೆಯುತ್ತಿದ್ದ ಹಂಸಾನಂದನ ವಿಕೃತಿಯನ್ನು ಸಂಗೀತಾ ವಿರೋಧಿಸುತ್ತಿದ್ದಳೆ? ವೀಡಿಯೋ ಮಾಡಿಟ್ಟುಕೊಂಡಿದ್ದಳೆ?

ಇದು ತಾಯಿಗೆ ಗೊತ್ತಾಗಿ ಬಿಡದಿಗೆ ಬಂದು ಮಗಳಿಗೆ ಬಾಳು ಕೊಡುವಂತೆ ಹಂಸಾನಂದನನ್ನು ಬೇಡಿಕೊಂಡಿದ್ದಳೆ? ಕಣ್ಣೀರಿಡುತ್ತಿದ್ದ ಮಗಳಿಗೆ ವಾತಾವರಣ ಬದಲಾಗಲೆಂದೇ ತಿರುಚ್ಚಿಗೆ ಕರೆದೊಯ್ದಳೆ? ಕರೆದೊಯ್ದ ಮರುದಿನವೇ ಹಂಸಾನಂದ ತಿರುಚ್ಚಿಗೆ ಬಂದು ತಾಯಿ ಮಗಳಿಬ್ಬರನ್ನೂ ಸಮಾಧಾನ ಮಾಡಿದ್ದನೆ? ಗಂಡನ ಜೊತೆ ಕೈಹಿಡಿದ ಮಡದಿಯನ್ನು ಕಳಿಸಿಕೊಟ್ಟಂತೆ ತಾಯಿ ನಂಬಿಕೆಯಿಂದ ಮಗಳನ್ನು ಕಳಿಸಿಕೊಟ್ಟಿರಬಹುದೆ? ಹಾಗೆ ಬಿಡದಿಗೆ ವಾಪಸ್ಸಾದ ಸಂಗೀತಾ ಅಲಿಯಾಸ್ ಮಾ ನಿತ್ಯಾ ತಿರುಮಾತೀತಾನಂದ ಸ್ವಾಮಿಣಿಗೆ ಮತ್ತೆ ಹಂಸಾನಂದನ ಹೆಣ್ಣುಬಾಕ ಬುದ್ಧಿ ಗೊತ್ತಾಗಿ ಆಘಾತವಾಗಿರಬಹುದೆ? ಹೋದ ಮಾನ ಕಳೆದ ಬದುಕಿನ ಆಘಾತಕ್ಕೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಳೆ ಅಥವಾ ಆಶ್ರಮದ ಲ್ಯಾಪ್‌ಟಾಪ್‌ನ ಮಾಹಿತಿ ಅಂದರೆ ಹೇಳಿಕೊಳ್ಳಲಾಗದ ಹೊರಜಗತ್ತಿಗೆ ಗೊತ್ತಾಗಬಾರದ ಯಾವುದೋ ವೀಡಿಯೋ ದಾಖಲೆಗಾಗಿ ಆಕೆಯನ್ನು ನಿತ್ಯಾನ ಗ್ಯಾಂಗ್ ಕೊಂದು ಹಾಕಿರಲೂ ಬಹುದೆ?

ಅಂತೂ ನಿತ್ಯಾನಂದನ ಪಾಪದ ಕೊಡ ತುಂಬಿಬಂದಿದೆ. ಸಂಗೀತಾಳ ಸಾವು ಅದರ ಅವಸಾನದ ಲಕ್ಷಣವಷ್ಟೆ.

● ರಾ.ಸೋಮನಾಥ್

ಬಾಸ್ ಮಗಳ ಮದುವೆ!

ನನ್ನ ಎಲ್ಲಾ ಚಟುವಟಿಕೆಗಳಿಗೂ ಪ್ರೋತ್ಸಾಹ ಕೊಡುವ ಒಬ್ಬ ಬಾಸ್ ಇದ್ದರು. ಬಾಸ್ ಎಂದರೆ ನನ್ನ ಮೇಲಧಿಕಾರಿ. ಇವರೆಷ್ಟು ಶರಣಾಗಿದ್ದರೆಂದರೆ ಎಂಟು ವರ್ಷ ಮಂಗಳೂರು ಕಡೆ ಕೆಲಸ ಮಾಡಿ ಬಂದಿದ್ದರೂ ಅಲ್ಲಿಂದ ಒಂದೇ ಒಂದು ಪದವನ್ನು ತಂದಿರಲಿಲ್ಲ. ಅಷ್ಟರಮಟ್ಟಿಗೆ ಧಾರವಾಡದ ಎರೇಸೀಮೆ ಭಾಷೆ ಅವರ ಮೈಗಂಟಿತ್ತು. ನಾನು ಅವರ ಜೊತೆ ಅವರ ಭಾಷೆಯಲ್ಲೇ ಮಾತನಾಡುವುದು ಅವರಿಗೆ ಮೋಜೆನಿಸಿತ್ತು. ನನ್ನೆರಡು ಕೃತಿಗಳಲ್ಲಿ ಬರುವ ಧಾರವಾಡದ ಭಾಷೆ ಅವರಿಂದ ಪಡೆದದ್ದು. ನನ್ನ ಚಟುವಟಿಕೆಗಳನ್ನು ಗಮನಿಸಿ ಕಾಲಕಾಲಕ್ಕೆ ಮೆಮೊ ಕೊಟ್ಟು ಸಸ್ಪೆಂಡ್ ಮಾಡಿ ಬಿಸಾಕಬಹುದಾದ ಅಧಿಕಾರಿಯಾಗಿದ್ದರೂ ನನ್ನನ್ನು ಸದಾ ಜೊತೆಯಲ್ಲಿಟ್ಟುಕೊಂಡಿದ್ದರು.

ಅಂತಹ ವ್ಯಕ್ತಿ ಹಠಾತ್ತನೆ ತೀರಿಕೊಂಡರು. ಒಮ್ಮೆ ಲಘು ಹೃದಯಾಘಾತಕ್ಕೆ ತುತ್ತಾಗಿದ್ದ ಅವರು ವೈದ್ಯರ ಸಲಹೆಗಳನ್ನ ಬದಿಗೊತ್ತಿ ಸಿಗರೇಟು ಮತ್ತು ಮದ್ಯವನ್ನು ಎಂದಿನಂತೆ ಮುಂದುವರಿಸಿದ ಫಲವಾಗಿ ತೀವ್ರ ಹೃದಯಾಘಾತಕ್ಕೆ ತುತ್ತಾಗಿಹೋದರು. ಎಲ್ಲೇ ಹೋದರೂ ಯಾರನ್ನಾದರೂ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದ ಅವರು ಆ ದಿನ ಕಾಲನ ಕರೆಗೆ ಓಗೊಟ್ಟವರಂತೆ ಮನೆಯವರ ತಡೆಯನ್ನೂ ಬದಿಗೊತ್ತಿ ಮೈಲಾರ ಗುಡ್ಡಕ್ಕೆ ಹೋಗಿ ಕುಸಿದು ಬಿದ್ದು ನಿಧನರಾದರು.

ನಾಡಿನ ಮೂಲೆ ಮೂಲೆಯಿಂದ ಅವರ ಅಭಿಮಾನಿಗಳು ಬಂದರು. ಗದುಗಿನ ಸಮೀಪದ ಹಳ್ಳಿಗೆ ಅವರ ಪಾರ್ಥಿವ ಶರೀರವನ್ನು ತೆಗೆದುಕೊಂಡು ಹೋಗಿ ಸಂಸ್ಕಾರ ಮಾಡಿ ಬರುತ್ತಿರಬೇಕಾದರೆ ಗ್ರಂಥಾಲಯ ಇಲಾಖೆಯ ನಿರ್ದೇಶಕರು ಫೋನ್ ಮಾಡಿ "ಕೂಡಲೇ ಹೋಗಿ ಅವರ ಜವಾಬ್ದಾರಿಯನ್ನು ನೀವೇ ವಹಿಸಿಕೊಳ್ಳಿ" ಎಂದು ಆಜ್ಞಾಪಿಸಿದರು.

ನನಗೆ ಆ ಸ್ಥಾನ ವಹಿಸಿಕೊಳ್ಳುವಾಗ ಯಾವ ಉತ್ಸಾಹವೂ ಇರಲಿಲ್ಲ. ಕಡಿದುಃಖದಲ್ಲೇ ಜವಾಬ್ದಾರಿ ವಹಿಸಿಕೊಂಡರೂ ಎಷ್ಟೋ ದಿನ ಅವರ ಕುರ್ಚಿಯ ಮೇಲೆ ಕೂರಲಿಲ್ಲ. ಸರಕಾರದ ಮಟ್ಟದಲ್ಲಿ ಓಡಾಡಿ ನನಗೊಂದು ಪ್ರಮೋಷನ್ ಕೊಡಿಸಿದ್ದ ಅವರು ಕಡೆಗೆ ತಮ್ಮ ಸ್ಥಾನದಲ್ಲಿ ನಾನು ಕೂರುವಂತೆ ಮಾಡಿ ಹೋಗಿದ್ದರು.

ಯಾರೇ ಅವರ ಹೆಸರನ್ನು ಒಮ್ಮೆ ಕೇಳಿದರೂ ಸಾಕು ಮತ್ತೆ ಮರೆಯುತ್ತಿರಲಿಲ್ಲ. ಏಕೆಂದರೆ, ಅವರ ಹೆಸರು 'ಹಾವಣ್ಣ!'

ಸರಕಾರಿ ನೌಕರರ ಸಂಘದಲ್ಲೂ ಅವರು ಒಳ್ಳೆಯ ಹೆಸರು ಮಾಡಿದ್ದರು. ನಾಲ್ಕು ಹೊಸ ಗ್ರಂಥಾಲಯಗಳ ಕಟ್ಟಡ ಕಟ್ಟಿಸಿ, ಉದ್ಘಾಟನೆ ಮಾಡಿಸಿ, ಜಿಲ್ಲಾ ಗ್ರಂಥಾಲಯದ ಕಟ್ಟಡವನ್ನು ಕಟ್ಟಿಸಿದ್ದರು. ಆಡಳಿತದ ಅನುಭವದಲ್ಲಿ ರಾಜ್ಯಮಟ್ಟದ ಅಧಿಕಾರಿಗಳಿಗೆ ಸಮನಾಗಿದ್ದರು. ಅಂಥವರು ಆಡಳಿತ ಮಾಡಿದ ಆಫೀಸಿನಲ್ಲಿ ಕೂತು ನಾನು ಅವರ ಕೆಲಸಗಳನ್ನು ಮುಂದುವರಿಸಬೇಕಾಗಿತ್ತು.

ಆ ಪೈಕಿ ಅವರ ಮಗಳ ಮದುವೆಯೂ ಒಂದು.

ದಿನ ಮೂರು ಕಳೆಯುವುದರಲ್ಲಿ ಮದುವೆ ಬಂದೇಬಿಟ್ಟಿತು. ಸದ್ಯ ಹಾವಣ್ಣನವರೇ ಗಂಡು ನೋಡಿ ವರದಕ್ಷಿಣೆ, ಕಲ್ಯಾಣ ಮಂಟಪದ ಸಮಸ್ಯೆಗಳನ್ನೆಲ್ಲಾ ಬಗೆಹರಿಸಿ ಹೋಗಿದ್ದರಿಂದ ಮೇಲುಸ್ತುವಾರಿಯಂತಹ ಜವಾಬ್ದಾರಿಯಷ್ಟೇ ನನ್ನ ಮೇಲಿತ್ತು. ಹುಡುಗಿಗೆ ಏನಾದರೂ ಉಡುಗೊರೆ ಕೊಡಬೇಕೆಂದು ತೀರ್ಮಾನಿಸಿ ಅವಳನ್ನೇ ಕೇಳಿಬಿಡಬೇಕೆಂದು ಮನೆಗೆ ಹೋದೆ. ಹಾವಣ್ಣನವರ ಪತ್ನಿ, "ನಮ್ಮ ಮಗಳ ಮದಿವ್ಯಾಗೆ ಬಂದು ನಿಂದ್ರಿ ಸಾಕು. ನಿಮ್ಮ ಉಡಗೊರಿ ಏನೂ ಬ್ಯಾಡ" ಅಂದರು. ನಾನು "ನೋಡವ್ವಾ ತಂಗಿ, ನಿಮ್ಮ ತಾಯಿ ಹೇಳೂದು ಖರೆ ಐತಿ. ಆದ್ರ ನಾವು ಒಂದು ಒಳ್ಳೆ ಅರಿವಿ ಕೊಡಬೇಕು ಅಂತ ನನ್ನ ಹೆಂಡ್ತಿ ಹೇಳ್ಯಾಳ. ಅದಕ ನೀನೂ ಆಕಿ ಕೂಡೇ ಹೋಗಿ ತೊಗಂಬರಿ. ಸೀರಿ ಆತು ಇಲ್ಲಂದ್ರ ಚೂಡಿದಾರಾತು, ಐದಿಲೊ?" ಎಂದೆ. ನನ್ನ ಮಾತಿಗೆ ಅವಳು ಚಿಕ್ಕ ಹುಡುಗಿಯಂತೆ ನಕ್ಕಳು. ಏಕೆಂದರೆ ನಾನು ಬೇಕೆಂದೇ ಆಡುವ ಭಾಷೆ ಅವಳಿಗೆ ತಮಾಷೆ ಅನಿಸುತ್ತಿತ್ತು.


"ಆಯ್ತು ಅಂಕಲ್ ಮನೆಗೆ ಬರ್ತೀನಿ ಹೋಗಿ" ಎಂದವಳು ಹೇಳಿದಂತೆ ಬಂದೇಬಿಟ್ಟಳು. ಪೇಟೆಗೆ ಇನ್ನೇನು ಹೊರಡುವುದರಲ್ಲಿದ್ದಾಗ "ಅಂಕಲ್, ನನ್ನ ಕ್ಲಾಸ್‌ಮೇಟ್‌ದೊಂದು ಸಮಸ್ಯೆಯಿದೆ. ಏನು ಮಾಡಕ್ಕೂ ಗೊತ್ತಾಗ್ತಾಯಿಲ್ಲ, ನೀವೇ ಏನಾದ್ರು ದಾರಿ ತೋರುಸ್ತಿರಾ?" ಎಂದಳು.

"ಅದೇನೇಳವ್ವ" ಎಂದೆ.

ಅವಳು "ನನ್ನ ಕ್ಲಾಸ್‌ಮೇಟ್ ಎಂಟೆಕ್ ಓದ್ತಾ ಅವಳೆ. ಎಕ್ಸಾಮೆಲ್ಲಾ ಆಯ್ತು, ಮದುವೆ ಫಿಕ್ಸಾಗಿದೆ. ಆದ್ರೆ ಹುಡುಗಿಗೆ ಹುಡುಗ ಇಷ್ಟ ಇಲ್ಲ, ಮದುವೆಯಾಗೊ ಹುಡುಗನಿಗೆ ಫೋನ್ ಮಾಡಿ ನೀನು ನನಗೆ ಇಷ್ಟ ಇಲ್ಲ ಅಂತ ಹೇಳಿದ್ರೂ ಹುಡುಗ ಕೇಳ್ತಾಯಿಲ್ಲವಂತೆ. ಹುಡುಗ ಅವರ ಮನೆಯವರಿಗೆಲ್ಲಾ ಇಷ್ಟ ಇರೋದರಿಂದ ಮದುವೆ ಮಾಡೇ ಮಾಡ್ತಾರೆ ಅಂತ ಹುಡುಗಿ ಸುಯ್‌ಸೈಡಿಗೆ ತಯಾರಾಗಿದಾಳೆ ಅಂಕಲ್. ಇನ್ನೊಂದು ವಿಷಯ ಏನಂದ್ರೆ ಅವಳು ಓದುವಾಗ್ಲೆ ಕ್ಲಾಸ್‌ಮೇಟನ್ನು ಇಷ್ಟಪಟ್ಟಿದಾಳಂತೆ. ಮದುವೆ ಆದ್ರೆ ಅವನ ಜೊತೆ ಆಗ್ತಿನಿ ಇಲ್ಲ ಅಂದ್ರೆ ಸತ್ತೋಗ್ತಿನಿ ಅಂತ ಕುಳಿತಿದಾಳೆ ಅಂಕಲ್. ನಾವು ಎಷ್ಟು ಸಮಾಧಾನ ಮಾಡಿದ್ರೂ ಕೇಳ್ತಾಯಿಲ್ಲ" ಎಂದು ನಿಟ್ಟುಸಿರುಬಿಟ್ಟಳು.

"ಹುಡುಗ ಏನ್ ಮಾಡ್ತಾಯಿದಾನೆ?" ಎಂದೆ.

"ಬೆಂಗಳೂರಲ್ಲಿ ಸಾಫ್ಟ್‌ವೇರ್ ಇಂಜಿನಿಯರ್."



"ಹುಡುಗಿ ಕರಕಂಡು ಬಂದ್ರೆ ಮದುವೆಯಾಗಕ್ಕೆ ರೆಡಿ ಇದಾನ?"

"ಊ ರೆಡಿಯಿದಾನೆ."

"ಹಾಗಾದ್ರೆ ಹುಡುಗಿಗೆ ಧೈರ್ಯ ಹೇಳು. ಹುಡುಗನ್ನ ನಾಳೆ ಮೈಸೂರಿಗೆ ಬರೇಳು. ಅಲ್ಲಿ ಮಾನವ ಮಂಟಪ ಇದೆ. ನಾಳೇನೆ ಮದುವೆ" ಎಂದೆ. ಕೂಡಲೇ ಮೈಸೂರಿನ ಮಿತ್ರ ಸ್ವಾಮಿ ಆನಂದನಿಗೆ ಫೋನ್ ಮಾಡಿ "ಸ್ವಾಮಿ, ಒಂದು ಹುಡುಗ ಹುಡುಗಿ ಕರಕೊಂಡು ನಾಳೆ ಬತ್ತಾಯಿದ್ದಿನಿ. ಮಂತ್ರಮಾಂಗಲ್ಯ ಮದುವೆ ಮಾಡಿಕೊಡು" ಎಂದೆ. ಸ್ವಾಮಿ, "ಕರಕಂಬಾ ಗುರು ಮಾಡನಾ" ಎಂದ.

"ಆಯ್ತೇನವ್ವ? ನೀನೀಗ ಆ ಹುಡುಗನಿಗೆ ಫೋನ್ ಮಾಡಿ ಮೈಸೂರಿಗೆ ಬರೇಳು. ಅಂಗೆ ಆ ಹುಡುಗಿ ಕರಕಂಡು ಬಾ. ನಾವ್ಯಲ್ಲ ಕಾರಲ್ಹೋಗಿ ಮದುವೆ ಮಾಡಿಕೊಂಡು ಬರನ" ಎಂದೆ.

ಸುಮಾರು ದಿನಗಳ ನಂತರ ನನ್ನ ವಿಶೇಷ ಜವಾಬ್ದಾರಿಯೊಂದು ಕಾರ್ಯಪ್ರವೃತವಾಯ್ತು. ಎಷ್ಟೋ ವರ್ಷಗಳ ಹಿಂದೆ ಕೆ. ರಾಮದಾಸರು ನನ್ನನ್ನು ಶಿವಮೊಗ್ಗ ಪ್ರಾಂತ್ಯದ ಅಂತರ್ಜಾತಿ ವಿವಾಹಗಳ ಸಂಚಾಲಕನನ್ನಾಗಿ ಮಾಡಿದ್ದರು. ಇದಕ್ಕೆ ಪ್ರತಿಭಟಿಸಿದ ವಕೀಲನೊಬ್ಬ "ಬಿ. ಚಂದ್ರೇಗೌಡ ಸ್ವಜಾತೀಲಿ ಮದುವೆಯಾಗಿರೋದ್ರಿಂದ ಅವನನ್ನ ಸಂಚಾಲಕನನ್ನಾಗಿ ಮಾಡಿರೋದು ತಪ್ಪು, ಆ ಯೋಗ್ಯತೆ ಯಿರೋದು ನನಗೆ" ಎಂದಿದ್ದ. ಬ್ರಾಹ್ಮಣನಾದ ಆತ ಒಕ್ಕಲಿಗರ ಹುಡುಗಿಯನ್ನ ಮದುವೆಯಾಗಿದ್ದೂ ಒಕ್ಕಲಿಗರ ಪ್ರೀತಿಪಾತ್ರ ವ್ಯಕ್ತಿಯಾಗಿದ್ದ. ಆತ ಕೇಳುವುದರಲ್ಲಿ ನ್ಯಾಯವಿದೆ ಎಂದು ನನಗನ್ನಿಸಿದರೂ ನನ್ನ ಕಾಳಜಿಗಳನ್ನೆ ಗುರುತಿಸದಿದ್ದ ಅವನ ಬಗ್ಗೆ ಸಿಟ್ಟು ಬಂದು, "ನಾನೂ ಕೂಡ ಅಂತರ್ಜಾತಿ ವಿವಾಹವಾಗಿದ್ದೇನೆ, ತಾಕತ್ತಿದ್ದರೆ ಬಂದು ಪರಿಶೀಲಿಸಲಿ" ಎಂಬ ಹೇಳಿಕೆ ಬಿಟ್ಟೆ. ಆತನ ಪುಂಗಿ ಬಂದಾಯ್ತು. ಅಕಸ್ಮಾತ್ ಆತನೇನಾದರೂ ಪರಿಶೀಲಿಸಲು ಬಂದಿದ್ದರೆ, "ನನ್ನದು ಹತ್ತಿ ಕಂಕಣ. ನನ್ನ ಹೆಂಡತಿಯದು ಉಣ್ಣೆ ಕಂಕಣ ಗೊತ್ತೆ!" ಎಂದು ಬಾಯಿ ಮುಚ್ಚಿಸುತ್ತಿದ್ದೆ. ಗೊಂದಲಗೊಂಡ ಆತ ಕಾಲ್ಕೀಳುವುದು ನನಗೆ ಗೊತ್ತಿತ್ತು.

ಅಂತಹ ಸಂಚಾಲಕನೆದುರು ಸವಾಲೊಂದು ಎದುರಾಗಿತ್ತು. ಎದುರಿಸುವ ಛಲದಿಂದ "ಏನವ್ವಾ? ನಿನ್ನ ಫ್ರೆಂಡ್ ಕರಕೊಂಡು ಬಾ. ಹೆದರಬೇಡ ಅಂತ ಹೇಳು. ಆತ್ಮಹತ್ಯೆ ಆಲೋಚನೆ ಬೇಡ ಅಂತ ಹೇಳು" ಎಂದೆ.

ಗೆಳತಿಯ ಸಮಸ್ಯೆ ಪರಿಹಾರ ಕಂಡಂತೆ ಮುಖ ಅರಳಿಸಿದ ಬಾಸ್ ಮಗಳು "ಆ ಹುಡುಗಿ ನಾನೆ ಅಂಕಲ್" ಎಂದಳು.

ನನಗೆ ಸಿನಿಮಾ ಚಿತ್ರಕತೆ ಎಣೆಯುವಾಗಿನ ಸಂದರ್ಭ ನೆನಪಾಗಿ ಬೆಚ್ಚಿಬಿದ್ದೆ. ಏಕೆಂದರೆ ಮುಂದಿನ ವಾರವೇ ಮದುವೆಯಾಗಿ ಗಂಡನ ಮನೆಗೆ ಹೋಗಲಿರುವ ಈ ಹೆಣ್ಣು ಎಂತಹ ಸಮಸ್ಯೆ ತಂದೊಡ್ಡಿದಳಲ್ಲಾ ಎನ್ನಿಸುತ್ತಿರುವಾಗ ನನ್ನ ಹೆಂಡತಿ ಬಾಯಿಬಿಟ್ಟು ಗರಬಡಿದಂತಾದಳು. "ಯಾಕಿಷ್ಟು ತಡ ಮಾಡಿದೆ? ಈಗಾಗಲೇ ನಿಮ್ಮಣ್ಣ ಇಪ್ಪತ್ತೆಂಟು ಜಿಲ್ಲೆಗೂ ಲಗ್ನಪತ್ರಿಕೆ ಕಳಿಸ್ಯವುನೆ. ಊಟದ ಸೈಡ್ಸ್ ಕೆಲಸಗಳಾಗ್ಲೆ ನಿಮ್ಮ ಮನೇಲಿ ಶುರುವಾಗ್ಯವೆ. ತುಂಬ ತಡಮಾಡಿದೆ ನೀನು" ಎಂದೆ.

"ಇಲ್ಲ ಅಂಕಲ್ ಹುಡುಗನಿಗೆ ಫೋನ್ ಮಾಡಿ ನೀನು ನನಗೆ ಇಷ್ಟ ಇಲ್ಲ, ನೀನು ಕಳಿಸಿರೊ ಲ್ಯಾಪ್‌ಟಾಪನ್ನೂ ಮುಟ್ಟಿಲ್ಲ, ಫೋನ್ ಮಾಡಬೇಡಿ, ಇಲ್ಲಿಗೆ ಬರಬೇಡಿ ಅಂದ್ರೂ ಕೇಳ್ತಾಯಿಲ್ಲ" ಎಂದಳು.

"ಓಹ್‌ಓ, ಹಾಗಾದರವನು ಹಟಕ್ಕೆ ಬಿದ್ದವನೆ. ಗಂಡಸರಲ್ಲಿ ಹಟ ಸಂಭೋಗದ ಕ್ರೌರ್ಯನೂ ಇದೆ. ಆ ಮಾರ್ಗದಲ್ಲಿ ಕ್ರಮೇಣ ಒಗ್ಗಿಸಿಕೊಂಡು ಆಳ್ತಾರೆ. ಅದ್ಯಲ್ಲಕ್ಕಿಂತ ಮದುವೆಯಾದ ಮೇಲೆ ಎಲ್ಲ ಸರಿಹೋಗುತ್ತೆ ಅನ್ನೋ ಸರಳ ಸಿದ್ಧಾಂತದವರು ಇರತರೆ. ಆ ಪೈಕಿ ಇವನು. ಇರ್ಲಿ ನಿನ್ನ ಹುಡುಗನ ವಿಷಯ ಹೇಳು" ಎಂದೆ.

"ಅವನು ಬಂದಿದಾನೆ. ನನ್ನ ಕರಕಂಡೋಗೊ ಧೈರ್ಯ ಇಲ್ಲ, ಯಾಕಂದ್ರೆ ಅವರ ಮನೆಯವರಿಗೆ ಈ ಮದುವೆ ಇಷ್ಟಯಿಲ್ಲ, ಅವರೇ ಬೇರೆ ಜಾರಿ, ನಾವೇ ಬೇರೆ ಜಾತಿ ಅನ್ನೋದು ಬಿಟ್ರೆ ಇನ್ನೇನೂ ಇಲ್ಲ. ಆದ್ರೆ ನಮ್ಮ ಕ್ಲಾಸ್‌ಮೇಟೆಲ್ಲಾ ಸೇರಿ ಎಲ್ಲಾದ್ರು ಹೋಗಿ ರಿಜಿಸ್ಟರ್ ಮ್ಯಾರೇಜ್ ಆಗಿ ಅಂತ ನಮ್ಮ ಜೊತೇಲಿ ಇದಾರೆ" ಎಂದಳು.

"ಎಲ್ಲಿಗೋಗಿ ರಿಜಿಸ್ಟರ್ ಮದುವೆ ಆಯ್ತಿರಿ?" ಎಂದೆ.

"ಭದ್ರಗಿರಿಲಿ ಶಾಸ್ತ್ರೋಕ್ತವಾಗಿ ಮದುವೆಯಾಗಿ ಭದ್ರಾವತಿಲಿ ರಿಜಿಸ್ಟರಾಗೋದು ಅಂತ ಮಾತಾಡಿದಿವಿ. ಮುಂದೆ ನಿಂತು ಮಾಡಕ್ಕೆ ಯಾರು ಹಿರಿಯೋರಿಲ್ಲ ಅಂತ ಹೆದರತಾಯಿದಾರೆ" ಎಂದಳು.

"ಹೆದರೊ ಅಗತ್ಯಯಿಲ್ಲ, ಎಲ್ಲಿ ಹುಡುಗನ ನಂಬರ್ ಕೊಡು" ಎಂದವನೆ ಅವನಿಗೆ ಫೋನ್ ಮಾಡಿದೆ.

"ಅಲ್ಲಿಗೇ ಬರ್ತೀನಿ ಅಂಕಲ್ ಮಾತಾಡಣ" ಅಂದ. "ನೀನು ಬರೋದೇನು ಬೇಡ. ನಾವು ಹುಡುಗಿ ಕರಕೊಂಡು ಭದ್ರಗಿರಿಗೆ ಬರ್ತೀವಿ. ನೀವು ಅಲ್ಲಿ ರೆಡಿಯಾಗಿರಿ. ಮದುವೆಯಾದ ಕೂಡ್ಲೆ ಭದ್ರಾವತಿಲಿ ರಿಜಿಸ್ಟರ್ ಮಾಡಸನ" ಎಂದೆ. ಆ ನಂತರದಲ್ಲಿ ಹುಡುಗನ ದನಿ ಸಾಹಸಕ್ಕೆ ತಯಾರಾದವನಂತೆ ಕಂಪಿಸುತ್ತಿತ್ತು.

"ಹೆದರಬೇಡ ನಿಮ್ಮ ಮದುವೆ ತಡಿಯೋ ಅಂತವರ್‍ಯಾರೂ ಇಲ್ಲ, ಆರಾಮವಾಗಿ ಮದುವೆಯಾಗಿ" ಎಂದೆ. ಈ ಮಾತನ್ನು ಕೇಳಿದ ಹುಡುಗಿಯ ಮುಖ ಬಿಡುಗಡೆಯ ನಿರಾಳದಲ್ಲಿ ಅರಳಿತು. ಅವಳ ಹುಬ್ಬುಗಂಟು ಖಿನ್ನತೆಯೆಲ್ಲಾ ಕ್ಷಣಾರ್ಧದಲ್ಲಿ ಮಾಯವಾಯ್ತು. ಎದ್ದು ಪೇಟೆಗೆ ಹೋದವಳು ತನ್ನ ಹುಡುಗ ಮೆಚ್ಚುವ ಬಣ್ಣದ ಸೀರೆಯ ಜೊತೆಯಲ್ಲಿ ಹುಡುಗನಿಗೊಂದು ಷರಟು ತಂದು ನಮ್ಮ ಮನೆಯಲ್ಲೇ ಮಡಗಿ ಬೆಳಗ್ಗೆ ಬರುವುದಾಗಿ ಹೇಳಿ ಹೊರಟಳು. "ಮನೇಲಿ ಕೇಳಿದ್ರೆ ಏನೇಳ್ತೀ?" ಎಂದೆ. "ಕಾಲೇಜಿಗೋಗಿ ಬರ್ತೀನಿ ಅಂತ ಹೇಳ್ತಿನಿ" ಎಂದಳು.

"ಆಹ ಅದ್ಭುತ ಕಣವ್ವ ನೀನು" ಎಂದೆ. ನಗುತ್ತ ಹೋದಳು.

ಮರುದಿನ ಏಳು ಗಂಟೆಗೆ ಕಾಲೇಜಿನ ನೋಟ್‌ಬುಕ್ ಹಿಡಿದು ಬಂದಳು. ಅದಾಗಲೇ ರೆಡಿಯಾಗಿದ್ದ ಕಾರಿಗತ್ತಿಸಿಕೊಂಡು ಭದ್ರಗಿರಿಗೆ ಹೊರಟೆವು. ಅಷ್ಟರಲ್ಲಾಗಲೇ ಹುಡುಗನ ಟೀಮು ಬಂದು ಕಾಯುತ್ತಿತ್ತು, ಅವರೆಲ್ಲ ಎಂತಹ ಸಾಹಸಕ್ಕೂ ರೆಡಿಯಿದ್ದವರಂತೆ ಕಂಡರು. ಮೂವರು ಹುಡುಗಿಯ ಗೆಳತಿಯರೂ ಇದ್ದರು. ಅವರೆಲ್ಲಾ ಎಂಟೆಕ್ ಮುಗಿಸಿ ಹೊಸ ಬದುಕಿನ ಉತ್ಸಾಹದಲ್ಲಿ ಪುಟಿಯುತ್ತಿದ್ದರು. ಕ್ಷಣಮಾತ್ರದಲ್ಲಿ ನಾನು ಅವರೆಲ್ಲರಿಗೂ ಯಜಮಾನನಾಗಿ ವರ್ತಿಸುತ್ತ, ಮದುವೆ ಕಾರ್ಯ ಮುಗಿಸಿದೆ. ಇನ್ನುಳಿದದ್ದು ರಿಜಿಸ್ಟ್ರೇಷನ್. ಈ ಕಾರ್ಯ ಸುಗಮವಾಗಿ ನಡೆಯುವಂತೆ ಸಹಾಯ ಮಾಡಲು ಪರಿಸರ ಶಿವರಾಂಗೆ ಫೋನ್ ಮಾಡಿ ಕರೆಸಿದ್ದೆ. ಅವರು ಸಾಕ್ಷಿಯಾಗಿ ಸಹಿ ಮಾಡಲು ಬೇಕಾದ ರೆವಿನ್ಯೂ ದಾಖಲೆಯೊಂದಿಗೆ ಬಂದರು. ಇನ್ನ ಕೋರ್ಟು, ಕಚೇರಿ, ಪೊಲೀಸ್ ಠಾಣೆ, ಎಲ್ಲದರಲ್ಲೂ ಸುರಿತ ವ್ಯಕ್ತಿಯಾಗಿರುವ ಭದ್ರಾವತಿ ಮಹೇಶ್ ಕುಮಾರ್ ಸಹಾಯ ಪಡೆದು ಓಡಾಡಲು ಅವರ ಕಾರನ್ನೇ ತೆಗೆದುಕೊಂಡೆವು. ತಾಲ್ಲೂಕಾಫೀಸಿನಲ್ಲಿ ನೋಂದಣಿಯಾಗಬೇಕಾದರೆ ಸಂಬಂಧಪಟ್ಟ ಫೈಲು ಸದ್ದಿಲ್ಲದೆ ಮುಂಬರಿಯುವಂತೆ ಹುಡುಗನ ಗೆಳೆಯರು ಏರ್ಪಾಟು ಮಾಡಿದ್ದರು. ಅದರಂತೆ ಎಲ್ಲವೂ ಮುಗಿದು ಇನ್ನೇನು ನೋಂದಣಾಧಿಕಾರಿ ಸಹಿ ಮಾಡಬೇಕು, ಅಷ್ಟರಲ್ಲಿ ಅಧಿಕಾರಿ "ರಿ, ಇದು ಶಿವಮೊಗ್ಗದಲ್ಲೇ ರಿಜಿಸ್ಟರಾಗಬೇಕು, ತಗೊಂಡೋಗಿ" ಎಂದು ಮಡಗಿ, ಊಟಕ್ಕೆ ಹೋದ. ಕೂಡಲೇ ಎಲ್ಲರೂ ಎಡವಟ್ಟಾಯ್ತೆಂದು ಒಂದೇ ಉಸುರಿಗೆ ಶಿವಮೊಗ್ಗಕ್ಕೆ ಓಡಿದೆವು.

ಶಿವಮೊಗ್ಗ ತನ್ನಷ್ಟಕ್ಕೆ ತಾನಿದ್ದು, ಹುಡುಗ ಹುಡುಗಿಯ ಮನೆಯವರೂ ದೈನಂದಿನ ನಿರಾಳದಲ್ಲಿದ್ದರೂ ಕದ್ದು ಮದುವೆ ಮಾಡುವ ನಮಗೆ ಇದರ ಪರಿವೇ ಇರಲಿಲ್ಲ. ಪಿಸುದನಿಯಲ್ಲಿ ಮಾತನಾಡುವುದು, ಕಾರಿನೊಳಗಿದ್ದಾಗ ತಲೆಮರೆಸಿ ಕೂರುವುದು ದೂರದಲ್ಲಿದ್ದರೆ ಕೈಬಾಯಿ ಸನ್ನೆಯಲ್ಲೇ ಮಾತನಾಡುವುದು ನಡೆದಿತ್ತು.

ಅಂತೂ ಎಂಟೆಕ್ ಓದಿದ ಹುಡುಗರೂ ಯಾವುದೇ ಕೆಲಸ ಹಣವಿಲ್ಲದೆ ನಡೆಯಲಾರದೆಂದು ಅರಿತುಕೊಂಡರು. ಎಲ್ಲವೂ ಸೈಲೆಂಟಾಗಿಯೇ ನಡೆಯುವ ವ್ಯವಸ್ಥೆ ಮಾಡಿದ್ದರು. ಎರಡು ವರ್ಷದಿಂದ ಗುಟ್ಟಾಗಿ ಪ್ರೇಮಿಸಿದ್ದ ಪ್ರೇಮಿಗಳ ಮದುವೆ ಗುಟ್ಟಾಗಿಯೇ ನಡೆದು ಮುಂದಿನ ಸಮಸ್ಯೆ ಮಹಾಗೋಡೆಯಂತೆ ಎದುರು ನಿಂತಿತು.

ಅದೇನೆಂದರೆ, ಈಗಿಂದೀಗಲೇ ಹುಡುಗ ಹುಡುಗಿಯನ್ನು ಕರೆದುಕೊಂಡು ಬೆಂಗಳೂರಿಗೆ ಹೋಗಬೇಕು. ಆಕೆಯನ್ನು ಎಲ್ಲೂ ಬಿಡಲಾಗುವುದಿಲ್ಲ, ರಾತ್ರಿ ಹನ್ನೊಂದು ಗಂಟೆಗೆ ಹೊರಡುವುದಾದರೆ ಹುಡುಗಿ ಪರಿಸರ ಶಿವರಾಂ ಮನೆಯಲ್ಲಿರಲಿ; ಹುಡುಗ ಮನೆಗೆ ಹೋಗಿ ತನ್ನ ಬ್ಯಾಗು ಇತರೆ ಹತಾರಗಳನ್ನ ತರಲಿ. ಆದರೆ ಬೆಂಗಳೂರಿನ ಬಸ್ಸನ್ನ ಇಲ್ಲಿ ಹತ್ತುವುದು ಬೇಡ, ಭದ್ರಾವತಿಯಲ್ಲಿ ಹತ್ತಲಿ ಎಂಬ ತೀರ್ಮಾನ ತೆಗೆದುಕೊಂಡು ಎಲ್ಲರೂ ಬರಖಾಸ್ತಾದೆವು. ಹುಡುಗಿ ಪರಿಸರ ಶಿವರಾಂ ಜೊತೆ ಅವರ ಮನೆಗೆ ಹೋದಳು. ಹುಡುಗ ಬ್ಯಾಗ್ ತರಲು ತನ್ನ ಮನೆಗೆ ಹೋದ. ಆದರೆ ರಾತ್ರಿ ಹನ್ನೊಂದಾದರೂ ಹುಡುಗ ಬರಲೇಯಿಲ್ಲ.

ಆತನ ಸಹಪಾಠಿಗಳು ಗಾಬರಿ ಬಿದ್ದು ಮನೆ ಬಳಿಗೆ ಹೋದರೆ ಬೀಗ ಹಾಕಿತ್ತು! ಇತ್ತ ಹುಡುಗಿ ಐದೈದು ನಿಮಿಷಕ್ಕೂ ಫೋನ್ ಮಾಡಿ "ಅಂಕಲ್ ಹುಡುಗ ಇನ್ನೂ ಬರಲಿಲ್ಲ" ಎಂದು ಅಳತೊಡಗಿದಳು. ಹುಡುಗನ ಗೆಳೆಯರ ಪ್ರಕಾರ ಈ ಮದುವೆ ಇಷ್ಟವಿಲ್ಲದ ಆತನ ತಂದೆ ಹುಡುಗನನ್ನು ಎತ್ತಾಕಿಕೊಂಡು ದಾವಣಗೆರೆ ಕಡೆ ಹೋಗಿಬಿಟ್ಟಿದ್ದ. "ಅಂಕಲ್, ಈಗ ಏನು ಮಾಡುವುದು?" ಎಂದು ಅವರು ಫೋನ್ ಮಾಡಿದರು. ದಿಕ್ಕು ತೋಚದಂತಾದ ನಾನು ನಿದ್ರೆಯನ್ನು ಕಳೆದುಕೊಂಡು ಜಾಗರಣೆ ಮಾಡುತ್ತ ಕುಳಿತೆ. ಪರಿಸರ ಶಿವರಾಂ ಫೋನು ಬಂತು. "ನೋಡಿ ಶಿವರಾಂ, ಹುಡುಗಿನ ಬೆಳಗ್ಗೆ ತಂದು ನಮ್ಮನೆಗೆ ಬಿಡಿ. ಅವಳಿಗೆ ಧೈರ್ಯ ಹೇಳಿ" ಎಂದೆ.

"ಆಯ್ತು ಸಾರ್" ಎಂದವರು ಬೆಳಗ್ಗೆ ಹುಡುಗಿಯನ್ನು ತಂದುಬಿಡಲು ತಯಾರಾದರು.

ನನ್ನ ಭಾಗಕ್ಕೆ ಅದು ಬಹು ಉದ್ವೇಗದ ರಾತ್ರಿಯಾಗತೊಡಗಿತು. ಮಗನನ್ನೆ ಹಾರಿಸಿಕೊಂಡು ಹೋಗಿರುವ ಅಪ್ಪನಿಗೆ ಸರಿಯಾಗಿ ಬುದ್ಧಿ ಕಲಿಸಲು ತಯಾರಾಗತೊಡಗಿದೆ. ಆತನ ಊರು, ಕೆಲಸ ಮಾಡುವ ಜಾಗ, ಅಲ್ಲಿನ ರಾಜಕಾರಣಿಗಳ್ಯಾರು ಎಂಬುದನ್ನೆಲ್ಲಾ ಜಾಲಾಡಿ ಸಮರಕ್ಕೆ ಸಜ್ಜಾಗತೊಡಗಿದೆ. ಅಷ್ಟರಲ್ಲಿ ಬೆಳಕು ಹರಿಯತೊಡಗಿತು.

ಬೇಗಾದದ್ದೇ ತಡ ಹುಡುಗಿಯ ಮನೆಗೆ ಹೋಗಿ "ನೋಡಿ ನಿಮ್ಮ ಮಗಳು ಆತ್ಮಹತ್ಯೆ ಮಾಡಿಕೊಳ್ಳಕ್ಕೆ ಹೋಗಿದ್ಲಂತೆ. ಆಕೆಗೆ ಸ್ನೇಹಿತರು ಸಮಾಧಾನ ಮಾಡಿ ಮನೇಲಿಟ್ಟುಕೊಂಡವ್ರುರೆ. ಇನ್ನೊಂದು ಗಂಟೆಲಿ ಇಲ್ಲಿಗೆ ಕರಕೊಂಡು ಬರ್ತಾರೆ. ಏನೂ ಆಗಲಿಲ್ಲ ಅನ್ನಂಗೆ ಸುಮ್ಮನಿದ್ದುಬಿಡಿ. ಅವ್ರುಳಿಗೂ ಜೋರು ಮಾಡಬೇಡಿ" ಎಂದೆ. ಹುಡುಗಿಯ ಅಣ್ಣ, ಅಕ್ಕ, ತಾಯಿ ಮತ್ತು ನೆಂಟರೆಲ್ಲಾ "ಅಕಿ ಬಂದ್ರು ಸಾಕರಿ. ನಾವೇನು ಅನ್ನಂಗಿಲ್ಲ" ಎಂದು ನಿನ್ನೆಯಿಂದ ಮನೆಗೆ ಬಾರದ ಮಗಳು ಪತ್ತೆಯಾದುದಕ್ಕೆ ನಿಟ್ಟುಸಿರುಬಿಟ್ಟರು.

ಹುಡುಗಿ ಬಂದಕೂಡಲೇ ಆಕೆಯನ್ನು ತವರು ಮನೆಗೆ ಮುಟ್ಟಿಸುವ ಜವಾಬ್ದಾರಿಯನ್ನು ನನ್ನ ಹೆಂಡತಿಗೆ ವಹಿಸಿ ಹುಡುಗನ ಪತ್ತೆಗೆ ಹೊರಟೆ. ಅಷ್ಟರಲ್ಲಿ ಹುಡುಗನ ಗೆಳೆಯರು ಫೋನ್ ಮಾಡಿ "ಅಂಕಲ್, ಹುಡುಗನ ತಂದೆ ಫೋನಿಗೆ ಸಿಕ್ಕಿದರು. ಸರಿಯಾಗಿ ಮಾತನಾಡುತ್ತಿಲ್ಲ, ಎಲ್ಲಿದ್ದಾರೆ ಎಂದೂ ಹೇಳುತ್ತಿಲ್ಲ" ಎಂದರು.

"ಹಾಗಾದರೆ, ಆತನ ಫೋನಿಗೆ 'ನಾವು ಎಸ್ಪಿ ಸಾಹೇಬರ ಹತ್ತಿರ ಹೋಗುತ್ತಿದ್ದೇವೆ' ಎಂಬ ಮೆಸ್ಸೇಜು ಬಿಡಿ" ಎಂದವನು ಕೂಡಲೆ ಬೆಂಗಳೂರಲ್ಲಿರುವ ಡಿಸಿಪಿ ಡಾ. ಡಿ.ಸಿ. ರಾಜಪ್ಪನವರಿಗೆ ಫೋನ್ ಮಾಡಿದೆ. "ಸಾರ್, ಒಂದು ಹುಡುಗ ಹುಡುಗಿಯನ್ನು ಕಾನೂನುಬದ್ಧವಾಗಿ ರಿಜಿಸ್ಟರ್ ಮದುವೆ ಮಾಡಿಸಿದ್ದೆ. ಈಗ ಹುಡುಗನ ತಂದೆ ಹುಡುಗನನ್ನ ಹಾರಿಸಿಕೊಂಡು ಹೋಗಿದ್ದಾನೆ. ಏನು ಮಾಡ್ಲಿ?" ಎಂದೆ. ಅದಕ್ಕೆ ರಾಜಪ್ಪನವರು "ತಲೆ ಕಡಿಸಿಕೋಬೇಡಿ. ಎಸ್ಪಿ ಹತ್ರಕ್ಹೋಗಿ ಹುಡುಗಿ ಕೈಲಿ ಕಂಪ್ಲೇಟು ಕೊಡಿಸಿ. ನಾನು ಬೇಕಾದ್ರೆ ಫೋನ್ ಮಾಡ್ತಿನಿ. ನಮ್ಮ ಪೊಲೀಸರು ಎಲ್ಲಿದ್ರು ಹುಡುಗನನ್ನು ತಂದು ಕೊಡ್ತರೆ. ಈಗ್ಲೆ ಹೋಗಿ" ಎಂದರು.

ಕೂಡಲೆ ಹುಡುಗಿಯನ್ನ ಎಸ್ಪಿ ಆಫೀಸಿಗೆ ಬರಲು ಹೇಳಿ ನಾನೂ ಹೋದೆ. ಅಷ್ಟರಲ್ಲಿ ಹುಡುಗನ ಫೋನು ಬಂತು. "ಅಂಕಲ್, ಪೊಲೀಸ್‌ಸ್ಟೇಷನ್‌ಗೆ ಹೋಗಬ್ಯಾಡಿ. ಇಲ್ಲೆ ನಂಜಪ್ಪ ಆಸ್ಪತ್ರೆ ಹತ್ರಕ್ಕೆ ಬನ್ನಿ" ಎಂದ.

ಹುಡುಗಿಯನ್ನು ಅಲ್ಲಿಗೆ ಬರಹೇಳಿ ನಾನು ಆಸ್ಪತ್ರೆಗೆ ಹೋಗಿ ನಡೆದ ಕತೆ ಕೇಳಿ ದಂಗುಬಡಿದು ಹೋದೆ. ಏನೆಂದರೆ, ಹುಡುಗ ಮನೆಗೆ ಬ್ಯಾಗು ತರಲು ಹೋದವನು ತಂದೆತಾಯಿಗೆ ತಾನು ಮದುವೆಯಾಗಿ ಬಂದದ್ದಾಗಿ ಹೇಳಿದ್ದಾನೆ. ಕೂಡಲೇ ಅವರು ಆತ್ಮಹತ್ಯೆ ನಾಟಕ ಆಡಿದ್ದಾರೆ. ಆಗ ಹುಡುಗನೇ ವಿಷ ತೆಗೆದುಕೊಂಡಿದ್ದಾನೆ. ಕೂಡಲೇ ಅವನನ್ನ ಆಸ್ಪತ್ರೆಗೆ ಸಾಗಿಸಿ ಉಳಿಸಿಕೊಂಡಿದ್ದಾರೆ. ಸಾವಿನ ದವಡೆಯಿಂದ ಪಾರಾಗಿದ್ದ ಹುಡುಗ ನಾನು ಹುಡುಗಿಯ ಜೊತೆ ಬಂದಿರುವ ಸುದ್ದಿ ಕೇಳಿ ಓಡಿ ಬಂದ.

"ಸಾರ್ ನಮ್ಮ ತಂದೆ ತಾಯಿ ಹುಡುಗಿನ ಒಪ್ಪಿಕೊಂಡವರೆ. ನಾನೇ ಸಮಾಧಾನ ಮಾಡಿದ್ದಿನಿ. ಎಲ್ಲಾ ಸರಿಯಾಗಿದೆ. ನೀವೇನು ತಲೆ ಕೆಡಿಸಿಕೊಬೇಡಿ" ಎಂದ.

ನಾನು ಹುಡುಗನ ತಂದೆಯ ಬಳಿಗೋಗಿ "ನಾನು ಚಂದ್ರೇಗೌಡ ಅಂತ ಸಾರ್" ಎಂದು ಕೈಚಾಚಿದೆ. ತಿರಸ್ಕಾರದಿಂದ ನೋಡಿದ ಆತ "ಬಹಳ ಒಳ್ಳೆ ಮನಿಯಾಳ ಕೆಲಸನೆ ಮಾಡಿದ್ದಿ. ನಿನ್ನ ಮಕ್ಕಳಿಗೂ ಹಿಂಗೆ ಮಾಡಿದ್ದಿಯಾ?" ಎಂದ.

"ಹೌದು ಸಾರ್. ನನ್ನ ಎರಡು ಮಕ್ಕಳಿಗೂ ಹಿಂಗೆ ಮಾಡಿದೆ. ಚೆನ್ನಾಗ್ಯವ್ರುರೆ" ಎಂದೆ.

"ಸರಿ, ಇಂತ ಕೆಲಸನೆ ಮಾಡ್ತ ಹೋಗು" ಎಂದ.

ಅಷ್ಟರಲ್ಲಿ ಹುಡುಗ ಓಡಿಬಂದು "ಸಾರ್, ಬೇಜಾರಾಗಬೇಡಿ. ಅವುರೇನೂ ಅಂಗಂತರೆ" ಎಂದ.

"ಬೈಲಿ ಬಿಡಪ್ಪ, ನನಿಗೂ ಯಾಕೋ ಬೈಸಿಕೊಬೇಕು ಅನ್ನುಸ್ತಾ ಅದೆ. ಪಾಪ ಅವುರಿಗಾಗಿರೊ ಅಘಾತ ನನಿಗೊತ್ತು" ಎಂದೆ.

ಅಷ್ಟರಲ್ಲಿ ಹುಡುಗನ ತಾಯಿ ಬಂದು "ಯಾರತ್ರನೂ ಹೇಳಿಸಿಕೊಳಂಗೆ ಬದುಕಿಲ್ಲ ನಾವು. ಜಾಸ್ತಿ ಮಾತಾಡಬ್ಯಾಡಿ. ನಮ್ಮ ಸೊಸೆಯ ಯಂಗೆ ನೋಡಿಕಬೇಕು, ಬಾಳುಸಬೇಕು ಅಂತ ನಮಿಗೆ ಗೊತ್ತದೆ" ಎಂದರು.

ಅಲ್ಲಿಗೆ ನಾವು ಈ ಕ್ಷಣ ಜಾಗ ಖಾಲಿ ಮಾಡುವುದು ಸೂಕ್ತ ಅನ್ನಿಸಿತು. ಹುಡುಗನ ಭಾವನೆಯೂ ಅದೇ ಆಗಿತ್ತು, ಹಾಗಾಗಿ, ಈ ಮದುವೆಗೆ ಕಾರಣಕರ್ತರಾದವರೆಲ್ಲಾ ಕ್ಷಣಾರ್ಧದಲ್ಲಿ ಜಾಗ ಖಾಲಿ ಮಾಡಿದೆವು. ಇತ್ತ ಹುಡುಗಿಯ ಮನೆ ಕಡೆಯವರು ಬಂದು ಧಾರಾವಾಡದ ಭಾಷೆಯಲ್ಲಿ ಬೈದು ಹೋದರು. ಅದಕ್ಕಿಂತ ಮುಂದುವರಿಯಲು ಅವರಿಗೂ ಭಯವಿತ್ತು, ಒಂದೂವರೆ ದಿನದಲ್ಲಿ ವೈರಿಗಳನ್ನ ಸೃಷ್ಟಿಸಿಕೊಂಡು, ಸುಖಾಂತ್ಯಗಿ ಬೈಸಿಕೊಂಡ ಪ್ರಕರಣವನ್ನು ನಿಮ್ಮೆದುರು ಹೇಳಿ ಹಗುರವಾಗಿದ್ದೇನೆ.

ಹುಡುಗ ಹುಡುಗಿ ಚೆನ್ನಾಗಿದ್ದಾರಂತೆ. ಆದರೆ ಅವರಿಗೆ ಜನ್ಮಕೊಟ್ಟವರು ಈ ಜನ್ಮದಲ್ಲಿ ನನ್ನನ್ನ ಕ್ಷಮಿಸುವುದಿಲ್ಲವಂತೆ.

ಇಂತಹ ಹೇಳಿಕೆಗಳೆ ನಮಗೆ ಖುಷಿ ಕೊಡುತ್ತವೆ ಎಂಬುದು ಪಾಪ ಅವರಿಗೆ ಗೊತ್ತಿಲ್ಲ!

● ಬಿ. ಚಂದ್ರೇಗೌಡ

ಅಪ್ರಬುದ್ಧ ಪ್ರತಾಪನ ಅಸಂಬದ್ಧ ಪ್ರಲಾಪ!

ಅಲ್ಪನಿಗೆ ಐಶ್ವರ್ಯ ಬಂದಾಗ ಮಧ್ಯರಾತ್ರಿಯಲ್ಲಿಯೂ ಕೊಡೆ ಹಿಡಿಯುತ್ತಾನೆ ಎನ್ನುವುದಕ್ಕೆ ಒಂದು ನಿದರ್ಶನ ಕೊಡಗು-ಮೈಸೂರು ಲೋಕಸಭಾ ಸದಸ್ಯ ಪ್ರತಾಪ ಸಿಂಹ. ಕಳೆದ ಲೋಕಸಭಾ ಚುನಾವಣೆಯಲ್ಲಿ ಈ ಕ್ಷೇತ್ರವನ್ನು ಗೆಲ್ಲಲು ಸಾಧ್ಯವಿಲ್ಲ ಎನ್ನುವ ಕಾರಣಕ್ಕಾಗಿ ಕನ್ನಡ ಪ್ರಭದ ಅಂಕಣಕಾರ ಪ್ರತಾಪ ಸಿಂಹರವರಿಗೆ ಬಿಜೆಪಿಯಿಂದ ಸ್ಪರ್ಧಿಸಲು ಅವಕಾಶ ಮಾಡಿಕೊಡಲಾಗಿತ್ತು, ವಿಷಕಾರುವ ಲೇಖನಗಳನ್ನು ಬರೆಯುವ ಮೂಲಕ ಸಂಘ ಪರಿವಾರದ ಮುಖವಾಣಿಯಾಗಿದ್ದ ಪ್ರತಾಪ ಸಿಂಹ ನರೇಂದ್ರ ಮೋದಿ ಕುರಿತು ಪುಸ್ತಕವೊಂದನ್ನು ಬರೆದಿದ್ದ ಕಾರಣ ಆತನಿಗೆ ಕೊಡುಗೆಯಾಗಿ ಈ ಕ್ಷೇತ್ರದ ಟಿಕೆಟ್‌ಅನ್ನು ನೀಡಲಾಗಿತ್ತು, ಗೆಲ್ಲದಿದ್ದರೂ ಮುಂದೆ ಆತನ ವಿಷಕಾರುವ ಪ್ರವೃತ್ತಿಯನ್ನು ಬಳಸಿಕೊಂಡು, ಮೈಸೂರು ಪ್ರದೇಶದಲ್ಲಿ ಸಂಘ ಪರಿವಾರಕ್ಕೆ ನೆಲೆ ಕಂಡುಕೊಳ್ಳುವುದು ಬಿಜೆಪಿಯ ಉದ್ದೇಶವಾಗಿತ್ತು.

ಪ್ರತಾಪ ಸಿಂಹನ ಗೆಲುವಿಗೆ ಕೊಡಗು ಜಿಲ್ಲೆಯ ಬಿಜೆಪಿ ಟೊಂಕಕಟ್ಟಿ ನಿಂತಿತು. ಅದರ ಸಾರಥ್ಯವನ್ನು ಕೆ.ಜಿ.ಬೋಪಯ್ಯ ವಹಿಸಿಕೊಂಡಿದ್ದರು. ಅದಕ್ಕೆ ಕಾರಣವೂ ಇತ್ತು, ಅಷ್ಟು ಹೊತ್ತಿಗೆ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ತಾನು ಶಾಸಕನಾಗಿದ್ದರೂ, ವಿಶ್ವನಾಥ್ ಅವರ ಪ್ರಭಾವ ಹೆಚ್ಚಾಗಿದ್ದರಿಂದ, ಕೊಡಗು ಜಿಲ್ಲೆಯಲ್ಲಿ ಇಬ್ಬರೂ ಬಿಜೆಪಿ ಶಾಸಕರಿಗೆ ಕೆಲಸ ಮಾಡುವುದು ಅಸಾಧ್ಯವಾಗಿತ್ತು. ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ, ಸಂಸದರಾಗಿದ್ದ ವಿಶ್ವನಾಥ್ ಅವರು ಕೊಡಗು ಜಿಲ್ಲೆಯಲ್ಲಿ ಮಿಸುಕಾಡಲೂ ಬಿಜೆಪಿ ಶಾಸಕರು ಬಿಟ್ಟಿರಲಿಲ್ಲ. ಈಗ ಅದೆಲ್ಲ ತಮಗೆ ತಿರುಗುಬಾಣವಾಗುತ್ತದೆ ಎಂದು ಹೆದರಿದ ಬೋಪಯ್ಯ ಪ್ರತಾಪ ಸಿಂಹನ ಬೆನ್ನಿಗೆ ನಿಂತರೇ ಹೊರತು ಆತನ ಮೇಲಿನ ಪ್ರೇಮದಿಂದ ಖಂಡಿತವಾಗಿಯೂ ಅಲ್ಲ, ಇದಕ್ಕೆ ಸರಿಯಾಗಿ ವಿಶ್ವನಾಥ್ ಅವರ ಮಾತಿನ ಟೀಕಾಸ್ತ್ರ ಮತ್ತು ಕೆಲವೊಂದು ತಪ್ಪು ನಿರ್ಧಾರಗಳಿಂದಾಗಿ ಅವರು ಗೆಲ್ಲಲೇಬೇಕಾಗಿದ್ದ ಅವಕಾಶವನ್ನು ಕಳೆದುಕೊಂಡರು.



ಕಳೆದ ಲೋಕಸಭಾ ಚುನಾವಣೆಯಲ್ಲಿ ನರೇಂದ್ರ ಮೋದಿಯವರ ಹವೆಯ ಪ್ರಭಾವದಲ್ಲಿ ಸಿಂಹ ಗೆದ್ದ, ಆದಾಗಿದ್ದೇ ತಡ ನರೇಂದ್ರ ಮೋದಿಯ ನಂತರ ತಾನೇ ಮುಖ್ಯ ಎಂಬ ಭ್ರಮೆಗೆ ಬಿದ್ದ ಸಿಂಹ ಈ ಕ್ಷೇತ್ರದ ಶಾಸಕರನ್ನು ತಾನು ಗೌರವಿಸಬೇಕಾದ ಅಗತ್ಯತೆ ಇಲ್ಲ ಎಂದು ಬೀಗಲು ಶುರುಮಾಡಿದ. ಇದರ ಫಲವಾಗಿ ಇವತ್ತು ಕೊಡಗಿನಲ್ಲಿ ಮಾತ್ರವಲ್ಲ, ಮೈಸೂರು ಜಿಲ್ಲೆಯಲ್ಲಿಯೂ ಪ್ರತಾಪ ಸಿಂಹನೊಂದಿಗೆ ಯಾವುದೇ ಬಿಜೆಪಿ ಶಾಸಕರು ಇಲ್ಲ. ಪ್ರತಾಪ ಸಿಂಹ ಈ ಕ್ಷೇತ್ರದಲ್ಲಿ ತನ್ನದೇ ಆದ ಒಂದು ಗುಂಪನ್ನು ತಯಾರಿಸಲು ಇನ್ನಿಲ್ಲದ ಪ್ರಯತ್ನವನ್ನು ಮಾಡುತ್ತಿದ್ದರೂ ಅದರಲ್ಲಿ ಸಫಲನಾಗಿಲ್ಲ. ಕೊಡಗಿನ ಮಟ್ಟಿಗೆ ಇಬ್ಬರೂ ಶಾಸಕರ ವಿರುದ್ಧ ಕತ್ತಿ ಮಸೆಯುತ್ತಿರುವ ಪ್ರತಾಪ ಸಿಂಹ, ಮುಂದಿನ ಚುನಾವಣೆಯ ವೇಳೆಗೆ ಈ ಇಬ್ಬರಿಗೂ ಕೊಕ್ ನೀಡುವ ಮೂಲಕ ಹೊಸಬರನ್ನು ತರುವ ಹುನ್ನಾರದಲ್ಲಿ ಇರುವುದು ಕಂಡುಬಂದಿದೆ. ಅದಕ್ಕಾಗಿ ಬೇಕಾದಂತಹ ಸಿದ್ಧತೆಯನ್ನು ಮೆಲ್ಲಗೆ ಆರಂಭಿಸಿದ್ದಾನೆ. ಬಿಜೆಪಿ ಶಾಸಕರ ವಿರೋಧಿಗಳ ಬೆನ್ನುತಟ್ಟುವ ಕೆಲಸವನ್ನು ಪ್ರತಾಪ ಸಿಂಹ ಮಾಡುತ್ತಿದ್ದಾನೆ.

ಪ್ರತಾಪ ಸಿಂಹ ವಿಷಕಾರುವ ಲೇಖನಗಳನ್ನು ಬರೆಯುವುದರಲ್ಲಿ ಸಿದ್ಧ ಹಸ್ತನೇ ವಿನಹ, ಸಾರ್ವಜನಿಕ ಜೀವನಕ್ಕೆ ಎಳಸು ಮತ್ತು ಎಡವಟ್ಟಿನ ಗಿರಾಕಿಯಾಗಿದ್ದಾನೆ. ತಾನೊಬ್ಬ ಸಂಸದ ಎನ್ನುವುದನ್ನು ಮರೆತು, ತಾನು ಕೋಮುವಾದಿ ಆರೆಸ್ಸೆಸ್ ಪ್ರತಿನಿಧಿ ಎನ್ನುವಂತೆ ವರ್ತಿಸುತ್ತಾನೆ.

ಆತನ ಎಳಸುತನ ಎಷ್ಟಿದೆ ಎಂದರೆ ಕೆಲ ಸಮಯದ ಹಿಂದೆ ಕೊಡಗು ಜಿಲ್ಲೆಗೆ ಕಸ್ತೂರಿರಂಗನ್ ವರದಿಗೆ ಸಂಬಂಧಪಟ್ಟಂತೆ ತಜ್ಞರ ಸಮಿತಿಯೊಂದು ಆಗಮಿಸಿತ್ತು, ಆ ಸಮಿತಿಯವರು ಜನಾಭಿಪ್ರಾಯವನ್ನು ಸಂಗ್ರಹಿಸುತ್ತಿದ್ದರು. ಈ ಕಾರ್ಯಕ್ರಮಕ್ಕೆ ಪ್ರತಾಪ ಸಿಂಹ ಕೂಡ ಆಗಮಿಸಿದ್ದ. ತಾನು ಬರುವ ಮೊದಲೇ ಸಂಸತ್ತಿನಲ್ಲಿ ಮಹತ್ತರವಾದ ಚರ್ಚೆಗಳು ಇದ್ದರೂ, ಕೊಡಗು ಜಿಲ್ಲೆಗೆ ಸಮಿತಿಯವರು ಬರುತ್ತಿರುವ ಕಾರಣ ತಾನು ಸಂಸತ್ ಅಧಿವೇಶನವನ್ನು ಬಿಟ್ಟು ಇಲ್ಲಿಗೆ ಆಗಮಿಸುತ್ತಿದ್ದೇನೆ ಎಂದು ಚಿಲ್ಲರೆ ಹೇಳಿಕೆಯನ್ನು ಕೊಟ್ಟು, ತನ್ನ ಚಿಲ್ಲರೆ ಬುದ್ಧಿಯನ್ನು ಪ್ರದರ್ಶಿಸಿದ್ದ.

ಆನಂತರ ಆತನ ಅಭಿಪ್ರಾಯವನ್ನು ಕೇಳಿದಾಗ ಆತ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸದೆ "ಹಿಂದಿನ ಸರಕಾರದಲ್ಲಿ ಈ ರೀತಿ ಆಗಿತ್ತು, ಇದಕ್ಕೂ ಮುನ್ನ ವೀರಪ್ಪ ಮೊಯ್ಲಿಯವರು ಏನು ಮಾಡಿದ್ದರು" ಎಂದೆಲ್ಲಾ ಬಡಬಡಿಸುವ ಮೂಲಕ ತನ್ನ ರಾಜಕೀಯ ಬೇಳೆಯನ್ನು ಬೇಯಿಸಿಕೊಳ್ಳಲು ಪ್ರಯತ್ನಿಸಿದ್ದ. ಈತನ ಈ ಪ್ರವೃತ್ತಿಯನ್ನು ವಿರೋಧಿಸಬೇಕಿದ್ದ ಕಾಂಗ್ರೆಸಿಗರು ವಿರೋಧಿಸದೆ ಇದ್ದಾಗ, ಪ್ರತಾಪ ಸಿಂಹನ ಮಾತನ್ನು ಖಂಡಿಸಿದ್ದು ಜಾತ್ಯತೀತ ಜನತಾದಳದ ಜಿಲ್ಲಾ ಅಧ್ಯಕ್ಷ ವಿ.ಪಿ. ಶಶಿಧರ್.

ಇಂತಹದ್ದೇ ಇನ್ನೊಂದು ಪ್ರಕರಣ ಕಳೆದ ವಾರ ನಡೆಯಿತು. ಕೊಡಗು ಜಿಲ್ಲೆಯಲ್ಲಿ ಕಸ್ತೂರಿರಂಗನ್ ಸಮಿತಿ ವರದಿಯನ್ನು ವಿರೋಧಿಸಿ ಸರ್ವಪಕ್ಷಗಳು ಸೇರಿ ಬೃಹತ್ ಪ್ರತಿಭಟನಾ ರ್‍ಯಾಲಿಯೊಂದನ್ನು ಆಯೋಜಿಸಿದ್ದರು. ತಮ್ಮ ಆರೋಗ್ಯದ ಕಾರಣಕ್ಕಾಗಿ ಕೆಲವು ಸಮಯದಿಂದ ಸಾರ್ವಜನಿಕವಾಗಿ ಕಾಣಿಸಿಕೊಳ್ಳದಿದ್ದ ಎ.ಕೆ.ಸುಬ್ಬಯ್ಯ ಕೂಡ ಈ ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

ಅವಕಾಶ ಸಿಕ್ಕಾಗಲೆಲ್ಲ ವಿವಿಧ ರಾಜಕೀಯ ಪಕ್ಷಗಳು ಪರಸ್ಪರ ಮೇಲೆ ಆರೋಪಗಳನ್ನು ಮಾಡುತ್ತಾ, ಹೇಳಿಕೆಗಳನ್ನು ನೀಡುತ್ತವಾದ್ದರಿಂದ ಎಲ್ಲಾ ರಾಜಕೀಯ ಪಕ್ಷಗಳು "ಕಸ್ತೂರಿರಂಗನ್ ಸಮಿತಿ ವರದಿ ವಿರೋಧಿ ಸಮಿತಿ" ಎಂದು ರಚಿಸಿಕೊಂಡು ಆ ಪ್ರತಿಭಟನೆಯನ್ನು ಆಯೋಜಿಸಿದ್ದರು. ಈ ಸಮಿತಿಯಲ್ಲಿ ಪರಸ್ಪರರ ವಿರುದ್ಧ ಆರೋಪಗಳನ್ನು ಮಾಡಬಾರದು, ಕಸ್ತೂರಿರಂಗನ್ ವರದಿಯನ್ನು ವಿರೋಧಿಸುವುದಷ್ಟೇ ಈ ಸಮಿತಿಯ ಗುರಿ ಎಂದು ತೀರ್ಮಾನಿಸಲಾಗಿತ್ತು.

ಈ ಸಭೆಯಲ್ಲಿ ಕಾಗೋಡು ತಿಮ್ಮಪ್ಪ ಭಾಗವಹಿಸಬೇಕಾಗಿತ್ತು, ಕೊನೆಗಳಿಗೆಯಲ್ಲಿ ಅವರು ಅನಿವಾರ್ಯ ಕಾರಣಗಳಿಂದ ಕಾರ್ಯಕ್ರಮದಲ್ಲಿ ಭಾಗವಹಿಸಲಿಲ್ಲ, ಆದರೆ ಕಡೂರು ಶಾಸಕರಾದ ವೈ.ಎಸ್.ವಿ.ದತ್ತರವರು ಭಾಗವಹಿಸಿದ್ದರು. ಅವರು ತಮ್ಮ ಭಾಷಣದಲ್ಲಿ ಕರ್ನಾಟಕ ರಾಜ್ಯ ಸರಕಾರವನ್ನು ದಡ್ಡ ಸರಕಾರ ಎಂದು ಜರಿದರೂ ಅವರು ಯಾವ ರಾಜಕೀಯ ಪಕ್ಷವನ್ನು ಬೊಟ್ಟು ಮಾಡದೆ, ಸರಕಾರವನ್ನು ಟೀಕಿಸಿದ್ದರು.



ಆ ಸಭೆಯಲ್ಲಿ ಪ್ರತಾಪ ಸಿಂಹನಿಗೆ ಕೊನೆಯಲ್ಲಿ - ಅಂದರೆ ಅಧ್ಯಕ್ಷೀಯ ಭಾಷಣಕ್ಕೆ ಮುನ್ನ - ಅವಕಾಶವನ್ನು ಮಾಡಿಕೊಡಲಾಗಿತ್ತು, ಅದಕ್ಕೆ ಕಾರಣ ಪ್ರತಿಯೊಬ್ಬರ ಮಾತನ್ನು ಆಲಿಸಿದ ನಂತರ ಸಂಸದನಾಗಿ ತಾನೇನು ಮಾಡುತ್ತೇನೆ ಎಂದು ಆತ ಹೇಳಲಿ ಎಂಬುತಾಗಿತ್ತು.

ಆದರೆ ಅದೆಲ್ಲ ಈ ಪೆದ್ದು ಪ್ರತಾಪ ಸಿಂಹನಿಗೆ ಎಲ್ಲಿ ಅರ್ಥವಾಗಬೇಕು?

"ಕೆಲವು ದಿನಗಳ ಹಿಂದೆ ಕೊಡಗು ಜಿಲ್ಲೆಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನನ್ನ ವಿರುದ್ಧ ಆರೋಪಗಳನ್ನು ಮಾಡಿದ್ದರು. ಮತ್ತು ಈ ವಿಚಾರದಲ್ಲಿ ಕೆಲವೊಂದು ತಪ್ಪು ಅಭಿಪ್ರಾಯಗಳು ಹಾಗೂ ಗೊಂದಲಗಳು ಇವೆ. ಹಾಗಾಗಿ ನಾನು ಈ ಬಗ್ಗೆ ಸ್ಪಷ್ಟನೆಯನ್ನು ನೀಡುವುದು ಅಗತ್ಯವಾಗಿದೆ. ಆ ದಿನ ಸಭಾ ಗೌರವವನ್ನು ಕಾಪಾಡಿಕೊಂಡು ಮುಖ್ಯಮಂತ್ರಿಗಳಿಗೆ ನಾನು ಉತ್ತರ ನೀಡಲು ಸಾಧ್ಯವಾಗಲಿಲ್ಲ" ಎಂದು ಸಿಂಹ ತನ್ನ ಭಾಷಣವನ್ನು ಆರಂಭಿಸಿದ.

ಆಗಲೇ ಒಂದು ರೀತಿಯ ಕಸಿಮಿಸಿ ಕೆಲವರಿಗೆ ಆಗಿತ್ತು. ಯಾವುದೇ ರಾಜಕೀಯವನ್ನು ಬೆರೆಸಬಾರದು ಎಂದು ಮುಂಚೆಯೇ ಎಲ್ಲರೂ ನಿರ್ಧರಿಸಿದ್ದರೂ ಪ್ರತಾಪ ಸಿಂಹ ರಾಜಕೀಯವನ್ನು ಮಾಡಲು ಹೊರಟಿದ್ದಾನಲ್ಲ ಎಂಬ ಬೇಸರ ವೇದಿಕೆಯಲ್ಲಿದ್ದ ಬಿಜೆಪಿಯ ಶಾಸಕರಿಗೂ ಮೂಡಿತು.

ಅಷ್ಟಕ್ಕೂ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಾಪ ಸಿಂಹನ ವಿರುದ್ಧ ಏನಂದಿದ್ದರು? ಆ ಸಭೆಯಲ್ಲಿ ಶಾಸಕರುಗಳು ಕಸ್ತೂರಿರಂಗನ್ ವರದಿಯನ್ನು ಪ್ರಸ್ತಾಪಿಸಿದ್ದ ಕಾರಣ ಮುಖ್ಯಮಂತ್ರಿ ಸಿದ್ದರಾಮಯ್ಯ "ರಾಜ್ಯ ಸರಕಾರವು ಈ ಬಗ್ಗೆ ಜನಾಭಿಪ್ರಾಯವನ್ನು ಸಂಗ್ರಹಿಸಲು ಸಂಪುಟ ಉಪಸಮಿತಿಯನ್ನು ರಚಿಸಿದೆ. ಆ ಉಪಸಮಿತಿಯು ಎಲ್ಲಾ ಜಿಲ್ಲೆಗಳಿಗೆ ಭೇಟಿ ನೀಡಿ ಜನಾಭಿಪ್ರಾಯವನ್ನು ಸಂಗ್ರಹಿಸಲಿದೆ. ಆ ಅಭಿಪ್ರಾಯವನ್ನು ಸಂಪುಟದ ಮುಂದೆ ಇಟ್ಟು ಚರ್ಚಿಸಿ, ಆ ನಂತರ ಆ ವಿಚಾರವನ್ನು ಕೇಂದ್ರ ಸರಕಾರಕ್ಕೆ ಕಳುಹಿಸಲಾಗುವುದು. ಹಾಗೆ ಕಳುಹಿಸಿದ ಜನಾಭಿಪ್ರಾಯದ ವರದಿಗೆ ಸೂಕ್ತ ಮನ್ನಣೆ ಸಿಗುವಂತೆ ನೋಡಿಕೊಳ್ಳುವುದು ನಿಮ್ಮ ಕೆಲಸ" ಎಂದು ಪ್ರತಾಪ ಸಿಂಹನಿಗೆ ಹೇಳಿದ್ದರಷ್ಟೇ.

ಸಂಸದನೊಬ್ಬನ, ಅದರಲ್ಲಿಯೂ ಆಡಳಿತ ಪಕ್ಷದ ಸಂಸದನೊಬ್ಬನ ಕರ್ತವ್ಯವನ್ನು ಮುಖ್ಯಮಂತ್ರಿಗಳು ನೆನಪಿಸುವ ಕಾರ್ಯವನ್ನು ಮಾಡಿದ್ದರು. ಇದನ್ನೇ ಪ್ರತಾಪ ಸಿಂಹ ತನ್ನ ಮೇಲೆ ಮುಖ್ಯಮಂತ್ರಿಗಳು ಮಾಡಿದ ಆರೋಪ ಎಂದು ಹಲುಬಲಾರಂಭಿಸಿದ್ದ.

ತನ್ನ ಮಾತನ್ನು ಮುಂದುವರಿಸಿದ ಪ್ರತಾಪ ಸಿಂಹ ತನ್ನ ಸಂಘ ಪರಿವಾರದ ಬುದ್ಧಿಯನ್ನು ಪ್ರದರ್ಶಿಸುತ್ತಾ "ಹಿಂದಿನ ಪರಿಸರ ಖಾತೆಯ ಸಚಿವ ವೀರಪ್ಪ ಮೊಯ್ಲಿ ಕಸ್ತೂರಿರಂಗನ್ ವರದಿಗೆ ಸಂಬಂಧಪಟ್ಟಂತೆ ನೀಡಿದ್ದ ಹೇಳಿಕೆಗಳು ಏನು? ಕೇರಳ ರಾಜ್ಯಕ್ಕೆ ವೀರಪ್ಪ ಮೊಯ್ಲಿಯವರು ವಿಶೇಷವಾಗಿ ರಿಯಾಯಿತಿಗಳನ್ನು ನೀಡಿದ್ದರು. ಇದಕ್ಕೆ ಕಾರಣ ಕೇರಳ ರಾಜ್ಯದಲ್ಲಿ ಕಸ್ತೂರಿರಂಗನ್ ವರದಿಯನ್ನು ವಿರೋಧಿಸಿದ್ದು ಕೇರಳದ ಚರ್ಚಿನ ಪಾದ್ರಿಗಳು. ಮತ್ತು ಕ್ರೈಸ್ತರು. ಹಾಗಾಗಿ ಅವರಿಗಾಗಿ ಈ ರಿಯಾಯಿತಿಯನ್ನು ಮೊಯ್ಲಿಯವರು ನೀಡಿದರು" ಎಂದು ವಿಷಕಾರಲಾರಂಭಿಸಿದ.

ಇದರಿಂದ ಇತರೆ ಪಕ್ಷಗಳ ನಾಯಕರು ವೇದಿಕೆಯಲ್ಲಿಯೇ ಆತನ ಮಾತನ್ನು ವಿರೋಧಿಸಿದರು. ಆದರೂ ತನ್ನ ವರ್ತನೆಯನ್ನು ತಿದ್ದಿಕೊಳ್ಳದ ಪ್ರತಾಪ ಸಿಂಹ ತನ್ನ ಪ್ರಲಾಪವನ್ನು ಮುಂದುವರೆಸಿದ. ಆಗ ಶಾಸಕ ವೈ.ಎಸ್.ವಿ.ದತ್ತ ಹಾಗೂ ಕಾಂಗ್ರೆಸಿಗರು ಮತ್ತು ದಳದವರು ಸಭೆಯಿಂದ ನಿರ್ಗಮಿಸಿದರು.

ಶಾಸಕ ಬೋಪಯ್ಯನವರಿಗೆ ಇದು ಸಹಿಸಲಸಾಧ್ಯವಾಯಿತು. ತಾವು ಮೂರು ತಿಂಗಳುಗಳ ಕಾಲ ಕಷ್ಟಪಟ್ಟು ಸುಮಾರು 15 ಸಾವಿರ ಜನರು ಸಭೆಯಲ್ಲಿ ಭಾಗವಹಿಸುವಂತೆ ಮಾಡಿದ ಕಾರ್ಯಕ್ರಮಕ್ಕೆ ತನ್ನ ಯಾವುದೇ ಕೊಡುಗೆಯನ್ನು ನೀಡದೆ, ಕಾರ್ಯಕ್ರಮವನ್ನು ಕೊನೆ ಘಟ್ಟದಲ್ಲಿ ಹಾಳು ಮಾಡಲು ಯತ್ನಿಸಿದ ಪ್ರತಾಪ ಸಿಂಹನ ವಿರುದ್ಧ ಅವರು ವೇದಿಕೆಯಲ್ಲಿಯೇ ಆಕ್ರೋಶವನ್ನು ವ್ಯಕ್ತಪಡಿಸಿದರು. ಆಗ ಪ್ರತಾಪ ಸಿಂಹನ ವರ್ತನೆಯಂತೂ ತೀರಾ ಅಸಹ್ಯವಾಗಿತ್ತು, ಇಬ್ಬರು ಶಾಸಕರ ಹಿರಿತನಕ್ಕೂ ಗೌರವ ನೀಡದೆ, ಪ್ರಧಾನಿ ಮೋದಿಯ ನಂತರ ತಾನೇ ಎನ್ನುವ ರೀತಿಯಲ್ಲಿ ಪ್ರತಾಪ ಸಿಂಹ ವರ್ತಿಸಿದ. ಹಾಗಾಗಿ ಬೋಪಯ್ಯ ಮತ್ತು ಪ್ರತಾಪ ಸಿಂಹನ ನಡುವೆ ವೇದಿಕೆ ಮೇಲೆಯೇ ಮಾತಿನ ಚಕಮಕಿ ನಡೆಯಿತು.

ತಮ್ಮ ಜಿಲ್ಲೆಗೆ ಆಗಮಿಸಿದ್ದ ಹೊರ ಜಿಲ್ಲೆಯ ಶಾಸಕ ವೈ.ಎಸ್.ವಿ. ದತ್ತರವರಿಗೆ ಅಪಮಾನವಾಗಿದ್ದು ಬೋಪಯ್ಯನವರಿಗೆ ಬೇಸರ ತರಿಸಿತು. ಕೂಡಲೇ ಅವರು ದತ್ತರವರ ಬಳಿ ತೆರಳಿ, ಅವರಲ್ಲಿ ಕ್ಷಮೆಯಾಚಿಸಿ, ಮನವೊಲಿಸಿ ಮತ್ತೆ ವೇದಿಕೆಗೆ ಕರೆದುಕೊಂಡು ಬಂದಿದ್ದರು. ಅಷ್ಟಾದರೂ ಪ್ರತಾಪ ಸಿಂಹ ಘಟನೆಯ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಲಿಲ್ಲ, ತನ್ನನ್ನು ತಾನು ಸಮರ್ಥಿಸಿಕೊಳ್ಳುವ ಯತ್ನವನ್ನು ಮುಂದುವರೆಸಿದ. ಮಾರನೆ ದಿನದ ಕನ್ನಡ ಪ್ರಭವಂತೂ ಸಂಸದನ ಈ ವರ್ತನೆಯನ್ನು ಖಂಡಿಸುವ ಬದಲು ದತ್ತರವರ ನಡಾವಳಿಕೆಯ ಬಗ್ಗೆ ವ್ಯಂಗ್ಯವಾಡಿತ್ತು.

ಪ್ರತಾಪ ಸಿಂಹ ಎಷ್ಟೊಂದು ಎಳಸು ಎಂದರೆ ಮುಖ್ಯಮಂತ್ರಿಗಳು ಭಾಗವಹಿಸಿದ್ದ ಕೊಡವ ಸಾಂಸ್ಕೃತಿಕ ಕೇಂದ್ರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡುತ್ತಾ "ಹಾಲಿ ನಿರ್ಮಿಸಲಾಗಿರುವ ಪ್ರದೇಶದಲ್ಲಿ ಕೊಡವ ಸಾಂಸ್ಕೃತಿಕ ಕೇಂದ್ರ ಸಾಲದು. ಮಡಿಕೇರಿಯಲ್ಲಿಯೂ ಇಂತಹ ಒಂದು ಕೇಂದ್ರವನ್ನು ಸ್ಥಾಪಿಸಬೇಕು. ಮಡಿಕೇರಿಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಈಗ ಸ್ವಂತ ಕಟ್ಟಡಕ್ಕೆ ಹೋಗಿದೆ. ಆ ಕಟ್ಟಡವು ಖಾಲಿ ಇದೆ. ಅಲ್ಲಿ ನೀವು ಈ ಕೇಂದ್ರವನ್ನು ಸ್ಥಾಪಿಸಬಹುದು" ಎಂಬ ಪುಕ್ಕಟೆ ಸಲಹೆಯನ್ನು ನೀಡಿದ್ದ.


ವಾಸ್ತವವಾಗಿ ಜಿಲ್ಲಾಧಿಕಾರಿಗಳ ಕಚೇರಿ ಇದ್ದ ಸ್ಥಳ ಹಿಂದಿನ ರಾಜರುಗಳ ಅರಮನೆ. ಇದು ಪ್ರಾಚ್ಯವಸ್ತು ಇಲಾಖೆಗೆ ಸೇರಿದ ಕಟ್ಟಡ. ಆ ಇಲಾಖೆ ಹಲವಾರು ವರ್ಷಗಳಿಂದ ಆ ಕಟ್ಟಡವನ್ನು ತೆರವುಗೊಳಿಸಲು ನೋಟಿಸು ನೀಡಿದ್ದ ಕಾರಣ, ಆ ಕಟ್ಟಡವನ್ನು ತೆರವುಗೊಳಿಸಲಾಗಿತ್ತು. "ಅಲ್ಲಿ ನೀವು ಕೊಡವ ಕೇಂದ್ರವನ್ನು ಸ್ಥಾಪಿಸಿ" ಎನ್ನುವ ಮೂಲಕ ಪ್ರತಾಪ ಸಿಂಹ ತಾನೆಷ್ಟು ಅಪ್ರಬುದ್ಧ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದ!

ಇಂತಹ ಸಂಸದನನ್ನು ಪಡೆದಿರುವ ಕೊಡಗು ಉದ್ಧಾರವಾಗುವುದೆಂದು?!

● ಬಿ.ಎನ್. ಮನು ಶೆಣೈ



ಪರಮೇಶ್ವರ್ ಕಿತ್ತು ಉಗ್ರಪ್ಪಗೆ ಒತ್ತು?



ಕಾಂಗ್ರೆಸ್ ಸರ್ಕಾರದ ದುರ್ಗತಿಯೋ ಅಥವಾ ಮುಖ್ಯಮಂತ್ರಿಯ ಪಜೀತಿಯೋ ಸರ್ಕಾರಕ್ಕೆ ಇಷ್ಟೆಲ್ಲಾ ಮುಖಭಂಗ, ಮುಜುಗರಗಳನ್ನು ತಂದಿಟ್ಟ ಪಕ್ಷಾಧ್ಯಕ್ಷರು ಮಾತ್ರ ನಾಲ್ಕು ವರ್ಷಗಳೇ ಕಳೆದರೂ ಕುರ್ಚಿ ಬಿಟ್ಟು ಕದಲುತ್ತಿಲ್ಲ. ಈ ಹಿಂದೆ ಎಸ್.ಎಂ. ಕೃಷ್ಣ ಕೆಪಿಸಿಸಿಗೆ ಅಧ್ಯಕ್ಷರಾಗಿದ್ದರು. ಕೆ.ಹೆಚ್. ರಂಗನಾಥ್, ಕೃಷ್ಣರಾವ್, ಜನಾರ್ದನ್ ಪೂಜಾರಿ, ಆಸ್ಕರ್ ಫರ್ನಾಂಡಿಸ್- ಹೀಗೆ ಯಾರೆಲ್ಲ ರಾಜ್ಯ ಕಾಂಗ್ರೆಸ್‌ನ ಸಾರಥ್ಯ ವಹಿಸಿದ್ದರೋ ಅವರ್‍ಯಾರೂ ಮೂರು ವರ್ಷಗಳಿಗೂ ಅಧಿಕ ಅವಧಿಗೆ ಅಧ್ಯಕ್ಷ ಸ್ಥಾನದಲ್ಲಿರಲಿಲ್ಲ. ಆದರೆ ಮನೆಗೆ ಮಗನಲ್ಲ ಸುಡುಗಾಡಿಗೆ ಹೆಣವಲ್ಲದ ಪರಮೇಶ್ವರ್ ಮಾತ್ರ ನಾಲ್ಕು ವರ್ಷಗಳಾದರೂ ತೊಲಗುತ್ತಿಲ್ಲ. ಇದು ಕಾಂಗ್ರೆಸ್ ಕಾರ್ಯಕರ್ತರಿಗಷ್ಟೇ ಅಲ್ಲ, ಖುದ್ದು ಮುಖ್ಯಮಂತ್ರಿಗೂ ಬಹುಶಃ ಅರ್ಥವಾಗದ ಒಗಟಿ. ಹೈಕಮಾಂಡ್ ಯಾವ ಕಾರಣಕ್ಕೆ ಪರಮೇಶ್ವರ್‌ರನ್ನು ಸಹಿಸಿಕೊಂಡಿದೆಯೋ ಗೊತ್ತಿಲ್ಲ.

ಪಕ್ಷದ ಅಧ್ಯಕ್ಷನಾಗಿ ಪರಮೇಶ್ವರ್ ತನ್ನದೇ ಸರ್ಕಾರದ ಸಾಧನೆಗಳನ್ನು ತಾನೇ ಜನತೆಗೆ ಮುಟ್ಟಿಸಬೇಕಲ್ಲವೇ? ಹಾಳಾಗಲಿ, ಕನಿಷ್ಠ ತನ್ನ ಪಕ್ಷದ ಸರ್ಕಾರಕ್ಕೆ ಉಪಕಾರ ಮಾಡಲಾಗದೆ ಹೋದರೂ ಕೆಡಕು ಬಗೆಯಬಾರದೆಂಬ ಕನಿಷ್ಠ ಪ್ರಜ್ಞೆಯಾದರೂ ಬೇಕಲ್ಲವೆ?

ಸಿದ್ದು ಮುಖ್ಯಮಂತ್ರಿ ಹುದ್ದೆಗೇರಿದಾಗಿನಿಂದಲೂ ಪರಮೇಶ್ವರ್ ವರ್ತನೆಯನ್ನು ಸೂಕ್ಷ್ಮವಾಗಿ ಗಮನಿಸಿದ ಯಾರಿಗಾದರೂ ಕಾಡಲೇಬೇಕಾದ ಪ್ರಶ್ನೆಯಿದು. ಸರ್ಕಾರ ದಲಿತರನ್ನು ಕಡೆಗಣಿಸುತ್ತಿದೆಯೆಂದು ಪಕ್ಷದ ವೇದಿಕೆಯಿಂದಲೇ ಕಿರುಚಾಡಿದ್ದು, ಪಕ್ಷದ ಕಾರ್ಯಕ್ರಮಗಳನ್ನು ಮಂತ್ರಿಗಳು ನಿರ್ಲಕ್ಷಿಸುತ್ತಿದ್ದಾರೆಂದು ಬೊಬ್ಬೆಯಿಟ್ಟಿದ್ದು, ಕೊನೆಕೊನೆಗೆ ಸಿದ್ದು ಸರ್ಕಾರವೇ ಭ್ರಷ್ಟಾಚಾರದಲ್ಲಿ ಮುಳುಗಿದೆಯೆಂಬಂತೆ ಅತಿರೇಕಕ್ಕೆ ಕೈಯಿಟ್ಟಿದ್ದು ಪರಮೇಶ್ವರ್ ಪಕ್ಷನಿಷ್ಠೆ, ತತ್ವನಿಷ್ಠೆ ಮತ್ತು ಕರ್ತವ್ಯನಿಷ್ಠೆಯ ಲೇಟೆಸ್ಟ್ ನಿದರ್ಶನಗಳಷ್ಟೆ.

ಸಿದ್ದು ಸಂಪುಟದ ಹಿರಿಯ ಮಂತ್ರಿ ಹೆಚ್.ಕೆ. ಪಾಟೀಲರೇ ಪಕ್ಷಾಧ್ಯಕ್ಷರ ಪಕ್ಷ ವಿರೋಧಿ ಕೃತ್ಯದ ವಿರುದ್ಧ ಕಿಡಿಕಾರುವ ತನಕ ಪರಮೇಶ್ವರ್ ಪಕ್ಷಘಾತುಕತನ ಮುಂದುವರಿಯಿತು. ತೀರ ಇತ್ತೀಚೆಗೆ ಪಕ್ಷದ ಸದಸ್ಯತ್ವದ ಅಭಿಯಾನದಲ್ಲಿ ಮಂತ್ರಿಗಳ ನಿರಾಸಕ್ತಿ, ಆಯಾ ಮಂತ್ರಿಗಳ ಮೌಲ್ಯಮಾಪನ ಸೇರಿದಂತೆ ಪರಮೇಶ್ವರ್ ಅಧಿಕ ಪ್ರಸಂಗಿತನವೆಂಬುದು ಸರ್ಕಾರಕ್ಕೆ ವಿರೋಧಿಗಳ ಅಗತ್ಯವನ್ನೇ ಪ್ರಶ್ನಿಸುವಷ್ಟು ರಾಜಾರೋಷಕ್ಕಿಳಿಯಿತು. ಪಕ್ಷದ ಅಧ್ಯಕ್ಷನೊಬ್ಬ ತನ್ನದೇ ಪಕ್ಷದ ಸರ್ಕಾರವನ್ನು ಪ್ರತಿನಿತ್ಯ ಹೀಯಾಳಿಸುತ್ತಿದ್ದರೆ ಅದು ವಿರೋಧ ಪಕ್ಷಗಳ ದಾರಿ ಸುಗಮಗೊಳಿಸಿದಂತೆಯೆ. ಹೀಗಾಗಿ ಪರಮೇಶ್ವರ್ ಸರ್ಕಾರದ ಪಾಲಿಗೆ 'ಸೆರಗಿನ ಕೆಂಡ' ಅಥವಾ ಬಗಲ್ ಮೆ ದುಷ್ಮನ್!

ಕಾಂಗ್ರೆಸ್ ಸರ್ಕಾರದ ದುರ್ಗತಿಯೋ ಅಥವಾ ಮುಖ್ಯಮಂತ್ರಿಯ ಪಜೀತಿಯೋ ಸರ್ಕಾರಕ್ಕೆ ಇಷ್ಟೆಲ್ಲಾ ಮುಖಭಂಗ, ಮುಜುಗರಗಳನ್ನು ತಂದಿಟ್ಟ ಪಕ್ಷಾಧ್ಯಕ್ಷರು ಮಾತ್ರ ನಾಲ್ಕು ವರ್ಷಗಳೇ ಕಳೆದರೂ ಕುರ್ಚಿ ಬಿಟ್ಟು ಕದಲುತ್ತಿಲ್ಲ. ಈ ಹಿಂದೆ ಎಸ್.ಎಂ. ಕೃಷ್ಣ ಕೆಪಿಸಿಸಿಗೆ ಅಧ್ಯಕ್ಷರಾಗಿದ್ದರು. ಕೆ.ಹೆಚ್. ರಂಗನಾಥ್, ಕೃಷ್ಣರಾವ್, ಜನಾರ್ದನ್ ಪೂಜಾರಿ, ಆಸ್ಕರ್ ಫರ್ನಾಂಡಿಸ್- ಹೀಗೆ ಯಾರೆಲ್ಲ ರಾಜ್ಯ ಕಾಂಗ್ರೆಸ್‌ನ ಸಾರಥ್ಯ ವಹಿಸಿದ್ದರೋ ಅವರ್‍ಯಾರೂ ಮೂರು ವರ್ಷಗಳಿಗೂ ಅಧಿಕ ಅವಧಿಗೆ ಅಧ್ಯಕ್ಷ ಸ್ಥಾನದಲ್ಲಿರಲಿಲ್ಲ, ಆದರೆ ಮನೆಗೆ ಮಗನಲ್ಲ ಸುಡುಗಾಡಿಗೆ ಹೆಣವಲ್ಲದ ಪರಮೇಶ್ವರ್ ಮಾತ್ರ ನಾಲ್ಕು ವರ್ಷಗಳಾದರೂ ತೊಲಗುತ್ತಿಲ್ಲ.

ಇದು ಕಾಂಗ್ರೆಸ್ ಕಾರ್ಯಕರ್ತರಿಗಷ್ಟೇ ಅಲ್ಲ, ಖುದ್ದು ಮುಖ್ಯಮಂತ್ರಿಗೂ ಬಹುಶಃ ಅರ್ಥವಾಗದ ಒಗಟಿ. ಹೈಕಮಾಂಡ್ ಯಾವ ಕಾರಣಕ್ಕೆ ಪರಮೇಶ್ವರ್‌ರನ್ನು ಸಹಿಸಿಕೊಂಡಿದೆಯೋ ಗೊತ್ತಿಲ್ಲ, ಪರಮೇಶ್ವರ್ ಚುನಾಯಿತ ಅಧ್ಯಕ್ಷರಲ್ಲ, ಅಡ್‌ಹಾಕ್ ಅಂದರೆ ಹೈಕಮಾಂಡ್‌ನಿಂದ ನೇಮಿಸಲ್ಪಟ್ಟ ಅಧ್ಯಕ್ಷ. ಇಲ್ಲಿಗೆ ವರ್ಷದ ಹಿಂದೆಯೇ ಪರಮೇಶ್ವರ್‌ರನ್ನು ಕಿತ್ತು ಆ ಜಾಗಕ್ಕೆ ಉತ್ತರ ಕರ್ನಾಟಕದ ಲಿಂಗಾಯತರೊಬ್ಬರನ್ನು ನೇಮಿಸಬೇಕಿತ್ತು, ಅಪ್ಪಾಜಿ ನಾಡಗೌಡರನ್ನು ಕೆಪಿಸಿಸಿ ಅಧ್ಯಕ್ಷ ಗಾದಿಗೆ ತರುವ ಎಲ್ಲಾ ತಯಾರಿಯೂ ಮುಗಿದಿತ್ತು, ಆದರೆ ಕೊನೇಗಳಿಗೆಯಲ್ಲಿ ನಾಡಗೌಡರೇ ಉಲ್ಟಾ ಹೊಡೆದರು. ತನ್ನ ಯೋಗ್ಯತೆಗದು ಒಗ್ಗದೆಂದೋ ಆ ಪಾಟ ಹೊಣೆಗಾರಿಕೆ ಹೊರುವುದು ತನ್ನ ಕೈಲಾಗದೆಂದೋ ಹಿಂದೇಟು ಹೊಡೆದ ನಾಡಗೌಡರ ಬದಲಿಗೆ ಮಾಜಿ ಯುವ ಕಾಂಗ್ರೆಸ್ ಅಧ್ಯಕ್ಷ ನಂಜಯ್ಯನ ಮಠರನ್ನು ಆಣೆಗೊಳಿಸಲಾಯಿತು.

ಹಾಗೆ ನೋಡಿದರೆ ನಂಜಯ್ಯನ ಮಠ್ ವರ್ಚಸ್ವಿ ನಾಯಕ ಮತ್ತು ಹೋರಾಟಗಾರ ಕೂಡ. ಆದರೆ ಪ್ರಶ್ನೆಯಿದ್ದದ್ದು ನಿರ್ಗಮಿತ ಪರಮೇಶ್ವರ್‌ರ ಪುನರ್ವಸತಿಯದ್ದು. ರಾಜ್ಯ ಕಾಂಗ್ರೆಸ್ ಅಧ್ಯಕ್ಷನಾಗಿ ತನ್ನದೇ ಕ್ಷೇತ್ರದಲ್ಲಿ ಗೆಲ್ಲಲಾಗದ ಅಧ್ಯಕ್ಷನಾದ ಮಾತ್ರಕ್ಕೇ ಎಮ್ಮೆಲ್ಸಿ ಪದವಿಯನ್ನೂ ಗಿಟ್ಟಿಸಿದ ಪರಮೇಶ್ವರ್ ಇಷ್ಟು ದಿನ ಅಧ್ಯಕ್ಷ ಗಾದಿಯಲ್ಲಿದ್ದ ತಪ್ಪಿಗಾದರೂ ಅಷ್ಟೇ ತೂಕದ ಏನಾದರೂ ಕೊಡಲೇಬೇಕಲ್ಲವೇ?

ಪಕ್ಷಾಧ್ಯಕ್ಷ ಪದವಿಗಿಂತಲೂ ಮಂತ್ರಿಗಿರಿಯಲ್ಲೇ ಅಧಿಕ ಲಾಭ ಮತ್ತು ಹಿತವೆಂಬ ದುರಾಶೆಗೆ ಬಿದ್ದು ತಾನೇ ಪರಮೇಶ್ವರ್ ಪ್ರತಿನಿತ್ಯ ಸರ್ಕಾರಕ್ಕೆ ತಲೆನೋವಾಗಿದ್ದು?

ಹೀಗಾಗಿ ರಾಜ್ಯ ಕಾಂಗ್ರೆಸ್‌ಗೆ ಹೊಸ ಅಧ್ಯಕ್ಷನನ್ನು ತರುವುದೆಂದರೆ ಅದು ಸಿದ್ದು ಸಂಪುಟದ ಪುನರ್ರಚನೆಯ ಪ್ರಶ್ನೆಯೇ ಆಗಿತ್ತು, ಹೈಕಮಾಂಡ್‌ನ ರಾಜ್ಯ ವೀಕ್ಷಕನಾಗಿದ್ದ ಮಧುಸೂದನ ಮಿಸ್ತ್ರಿಯನ್ನು ಬದಲಾಯಿಸಿ ಆ ಜಾಗಕ್ಕೆ ದಿಗ್ವಿಜಯ್‌ಸಿಂಗ್‌ರನ್ನು ತಂದಾಗಲೇ ಪರಮೇಶ್ವರರನ್ನೂ ಜಾಗ ಖಾಲಿ ಮಾಡಿಸಬೇಕಿತ್ತು, ಹಾಗಂತ ಪರಮೇಶ್ವರ್ ಒಬ್ಬರನ್ನೇ ಮಂತ್ರಿ ಮಾಡಲಾಗದು. ಸದ್ಯ ಸಿದ್ದು ಸಂಪುಟದಲ್ಲಿ ನಾಲ್ಕು ಸ್ಥಾನಗಳಷ್ಟೇ ಖಾಲಿಬಿದ್ದಿವೆ. ಆದರೆ ಆಕಾಂಕ್ಷಿಗಳ ಪಟ್ಟಿ ನಿರೀಕ್ಷೆ ಮೀರಿ ಬೆಳೆದಿದೆ. ಐದಾರು ಬಾರಿ ಗೆದ್ದು ಶಾಸಕರಾದವರು, ಕಾಂಗ್ರೆಸ್ಸಿಗೆ ಅಧಿಕಾರವಿಲ್ಲದಾಗ್ಯೂ ವಿರೋಧ ಪಕ್ಷದಲ್ಲಿ ಕೂತು ಕಾಂಗ್ರೆಸ್ ಪತಾಕೆ ಹಾರಿಸಿದವರದ್ದೇ ದೊಡ್ಡ ಪಟ್ಟಿಯಿದೆ.


ಕೋಳಿವಾಡ್, ತಹಶೀಲ್ದಾರ್, ಗುತ್ತೇದಾರ್, ಮಲಕಾರೆಡ್ಡಿ, ರಾಯರೆಡ್ಡಿ, ಅರಕಲಗೂಡು ಮಂಜು ಮುಂತಾದ ಹಿರಿಯ ಶಾಸಕರಲ್ಲದೆ ರಮೇಶ್‌ಕುಮಾರ್‌ರಂಥ ವರ್ಚಸ್ವೀ ನಾಯಕರೂ ಮಂತ್ರಿ ಪದವಿಯ ರೇಸಿಗಿಳಿದಿದ್ದಾರೆ. ಜೊತೆಗೆ ಕಾಗೋಡು ತಿಮ್ಮಪ್ಪರಂಥ ಹಿರಿಯ ನಾಯಕರಿಗೂ ಮಂತ್ರಿಗಿರಿಯಿಲ್ಲದೆ ಪಕ್ಷ ಕಟ್ಟಲಾಗದ ಸಂಕಟ. ಒಬ್ಬ ಪರಮೇಶ್ವರ್‌ರನ್ನು ಮಂತ್ರಿ ಮಾಡಲು ಹೋಗಿ ಇಂಥ ಬಲಾಢ್ಯ ನಾಯಕರನ್ನು ನಿರಾಶೆಗೆ ನೂಕುವುದು ಯಾವ ರೀತಿ?

ಈ ನಿಟ್ಟಿನಲ್ಲಿ ಕಾಂಗ್ರೆಸ್ ವರಿಷ್ಠರು ಬೇರೆಯದೇ ತಂತ್ರವೊಂದನ್ನು ರೂಪಿಸಿದ್ದು ಪರಮೇಶ್ವರ್ ಪಜೀತಿಯನ್ನು ಉಲ್ಬಣಿಸಿತು. ಅದು ಸಿದ್ದು ಸಂಪುಟದ ಅಂತಿಮ ರೀಷಫಲ್. ಅಂದರೆ ಈಗ ಖಾಲಿಬಿದ್ದ ನಾಲ್ಕು ಮಂತ್ರಿಸ್ಥಾನಗಳನ್ನೂ ಸೇರಿಸಿ ಈಗಿರುವ ನಿಷ್ಕ್ರಿಯ ಸಚಿವರನ್ನೂ ಬದಲಾಯಿಸಿ ಯಾವ ಭಿನ್ನಮತ ಬಂಡಾಯಕ್ಕೂ ಆಸ್ಪದವಿಲ್ಲದ ಮಾದರಿ ಸಂಪುಟ ರಚಿಸುವುದು. ಸದ್ಯ ನಿಷ್ಕ್ರಿಯ ಸಚಿವರೆಂದೇ ಅಭಯಚಂದ್ರ, ಚುಂಚನಸೂರು, ಖಮರುಲ್ ಇಸ್ಲಾಂ, ಅಂಬರೀಶ ಮುಂತಾದ ಮಂತ್ರಿಗಳ ಪ್ರತ್ಯೇಕ ಪಟ್ಟಿಯಿದೆ. ಈ ಪೈಕಿ ದಿನೇಶ್ ಗುಂಡೂರಾವ್ ಭೂಹಗರಣಕ್ಕೆ ಸಿಲುಕಿದ್ದಷ್ಟೇ ಅಲ್ಲದೆ ಭಾರೀ ಭರವಸೆಯಿಟ್ಟು ಸಿದ್ದು ಜಾರಿಗೆ ತಂದ ಅನ್ನಭಾಗ್ಯ ಯೋಜನೆಯ ವೈಫಲ್ಯಕ್ಕೂ ಕಾರಣರೆಂಬ ಅಪಖ್ಯಾತಿಗೀಡಾಗಿದ್ದಾರೆ.

ಇಂಥ ನಿಷ್ಕ್ರಿಯರು ಮತ್ತು ಅಪಖ್ಯಾತರನ್ನು ಏಕಾಏಕಿ ಬದಲಾಯಿಸಿ ಪಜೀತಿ ಮಾಡಿಕೊಳ್ಳುವುದಕ್ಕಿಂತ ಅವರನ್ನು ಎರಡು ವರ್ಷ ಪೂರ್ತಿ ಮಂತ್ರಿಯಾಗಿರಿಸಿ ತದನಂತರವೇ ಬದಲಾಯಿಸುವುದು ಸಿದ್ದು ತಂತ್ರ. ಮುಂಬರುವ ಮಾರ್ಚ್ ವೇಳೆಗೆ ಇಂಥವರ ಮಂತ್ರಿಗಿರಿಗೆ ಎರಡು ವರ್ಷ ತುಂಬಲಿದೆ. ಆ ಹೊತ್ತಿಗೆ ಸಿದ್ದು ಸಂಪುಟದ ಗ್ರಾಂಡ್ ರೀಷಫಲ್ ಮತ್ತು ರಾಜ್ಯ ಕಾಂಗ್ರೆಸ್ ಅಧ್ಯಕ್ಷಗಾದಿಗೆ ಹೊಸ ದಳಪತಿಯನ್ನು ತರುವುದು ಕಾಂಗ್ರೆಸ್ ವರಿಷ್ಠರ ತಂತ್ರ. ಒಂದೆಡೆ ನಿಷ್ಕ್ರಿಯ ಸಚಿವರನ್ನು ಇಳಿಸಿದಂತಾಯ್ತು, ಜೊತೆಗೆ ಅಂಥವರೆಲ್ಲ ಎರಡು ವರ್ಷ ಮಂತ್ರಿಗಳಾಗಿ ಅಧಿಕಾರ ಪೂರೈಸಿದಂತೆಯೂ ಆಯ್ತು, ನಿರಾಶ್ರಿತ ಪರಮೇಶ್ವರ್‌ಗೊಂದು ಗಂಜಿಕೇಂದ್ರವನ್ನೂ ಕಲ್ಪಿಸಿದಂತಾಯ್ತು ಮತ್ತು ಕಾಗೋಡು, ರಮೇಶ್‌ಕುಮಾರ್‌ರಂಥ ಹಿರಿಯ ನಾಯಕರ ಜೊತೆಗೆ

ಗುಂಡೂದಿನೇಶ್ ಬ್ರಾಹ್ಮಣ ಕೋಟಾ ಮತ್ತು ರಮೇಶ್‌ಕುಮಾರ್ ದುರ್ಗತಿ!





ಸದ್ಯ ಸಿದ್ದು ಸಂಪುಟದಲ್ಲಿ ಬ್ರಾಹ್ಮಣ ಸಮೂಹದ ಪ್ರತಿನಿಧಿಗಳೆಂದು ಸ್ಥಾನ ಗಿಟ್ಟಿಸಿದ ಆರ್.ವಿ. ದೇಶಪಾಂಡೆ ಮತ್ತು ದಿನೇಶ್ ಗುಂಡೂರಾವ್ ಪೈಕಿ ಒಬ್ಬರು ಜಾಗ ಖಾಲಿ ಮಾಡಲೇಬೇಕಾದ ಅನಿವಾರ್ಯತೆಯಿರುವುದು ಹಿರಿಯ ನಾಯಕ ರಮೇಶ್‌ಕುಮಾರ್ ಕಾರಣಕ್ಕೆ.

ರಮೇಶ್‌ಕುಮಾರ್ ಕರ್ನಾಟಕ ಕಂಡ ಪ್ರಜ್ಞಾವಂತ, ಜಾತ್ಯತೀತ ಪ್ರಗತಿಪರ ವರ್ಚಸ್ವೀ ನಾಯಕರೆಂಬ ಬಗ್ಗೆ ಎರಡು ಮಾತಿಲ್ಲ, ಇಲ್ಲದಿದ್ದರೆ ರೆಡ್ಡಿಗಳು ಮತ್ತು ದಲಿತರೇ ಬಹುಸಂಖ್ಯೆಯಲ್ಲಿರುವ ಶ್ರೀನಿವಾಸಪುರದಿಂದ ಗೆದ್ದು ಬರುವುದು ಸಾಧ್ಯವಿರಲಿಲ್ಲ, ಈ ಹಿಂದೆ ಸ್ಪೀಕರ್ ಸ್ಥಾನದಲ್ಲಿದ್ದೂ ಜನಪ್ರಿಯರಾಗಿದ್ದ ರಮೇಶ್‌ಕುಮಾರ್ ಜಾತಿ ಮೀರಿದ ಜನನಾಯಕ ಎಂಬುದನ್ನು ಅವರ ಶತ್ರುಗಳಿಂದಲೂ ನಿರಾಕರಿಸಲಾಗದು. ದುರಂತವೆಂದರೆ ರಮೇಶ್‌ಕುಮಾರ್ ಬ್ರಾಹ್ಮಣ ಕೋಟಾದ ಅಡಿಯಲ್ಲಿ ಮಂತ್ರಿ ಸ್ಥಾನಕ್ಕೆ ಬರಬೇಕಿರುವುದು!

ಹಾಗೆ ನೋಡಿದರೆ ದಿನೇಶ್ ಗುಂಡೂರಾವ್ ಪಾಲಿಗೆ ಸಿಕ್ಕ ಅವಕಾಶ ಕಮ್ಮಿಯದೇನಲ್ಲ, ಮುಖ್ಯಮಂತ್ರಿ ಸಿದ್ದು ಮಹತ್ವಾಕಾಂಕ್ಷೆಯಿಟ್ಟೇ ಜಾರಿಗೆ ತಂದ ಅನ್ನಭಾಗ್ಯ ಯೋಜನೆಯನ್ನೇ ನಿಭಾಯಿಸಲು ದಿನೇಶ್ ಕೈಲಾಗಲಿಲ್ಲ, ಸಾಲದ್ದಕ್ಕೆ ಭೂಕಬಳಿಕೆಯ ಆರೋಪ ಬೇರೆ.

ಈ ಎಲ್ಲ ಹಿನ್ನೆಲೆಯಲ್ಲೇ ದಿನೇಶ್ ಸ್ಥಾನಕ್ಕೆ ರಮೇಶ್‌ಕುಮಾರ್‌ರನ್ನು ತುಂಬಹೊರಟಿದೆ ಕಾಂಗ್ರೆಸ್ ಹೈಕಮಾಂಡ್. ರಮೇಶ್‌ಕುಮಾರ್ ಮತ್ತು ಕಾಗೋಡು ತಿಮ್ಮಪ್ಪರಂತಹ ಪರಿಣಿತ, ವರ್ಚಸ್ವೀ ನಾಯಕರಿದ್ದರೆ ಸದನದ ಒಳಗೂ ಹೊರಗೂ ಮುಖ್ಯಮಂತ್ರಿ ಸಿದ್ದು ಪರ ಕಹಳೆ ಮೊಳಗಿದಂತೆಯೆ. ಜಾತಿ ಮೀರಿದ ಇಂಥ ಜನನಾಯಕರೂ ಜಾತಿ ಸೋಂಕಿಗೆ ಈಡಾಗಲೇಬೇಕಾದ ದುರ್ಗತಿಗೆ ಏನೆನ್ನಬೇಕು?



...ರೆಡ್ಡಿ, ರಾಯರೆಡ್ಡಿಯಂಥ ಸೀನಿಯರ್ ...ಗೊ ಗೌರವ ಸಂದಂತಾಯ್ತು!

...ಮ ಕಾಂಗ್ರೆಸ್ ಬೇಗುದಿಗೆ ಹೈಕಮಾಂಡ್‌ನ ...ರ ಮಂತ್ರ. ಸಮಸ್ಯೆಯಿರುವುದು ರಾಜ್ಯ ...ಸ್ ಸಾರಥ್ಯ ಯಾರಿಗೊಪ್ಪಿಸಬೇಕೆಂಬುದರಲ್ಲಿ. ಸಿದ್ದರಾಮಯ್ಯ ...ಮಂತ್ರಿಯಾಗಿದ್ದಾರಾದ್ದರಿಂದ ಉತ್ತರ ಕರ್ನಾಟಕದ ...ಯತರೊಬ್ಬರನ್ನು ಕೆಪಿಸಿಸಿಯ ...ನ್ನಾಗಿಸುವುದು ಹೈಕಮಾಂಡ್ ...ಯೋಚನೆಯಂತೆ. ಜಾತಿರಾಜಕಾರಣವನ್ನೂ ...ವಲ್ಲಿಟ್ಟುಕೊಂಡೇ ರೂಪಿಸಬೇಕಾದ ತಂತ್ರವಿದು. ...ರ್ಯುನ ಮತ್ ನಿಗಮ ಮಂಡಳಿಗಳ ಪಾರುಪತ್ತೆಗೆ ...ಮೇಲೆ ಉ.ಕ.ದ ಲಿಂಗಾಯತ ನಾಯಕರ ಪೈಕಿ ...ಸ್ ಅಧ್ಯಕ್ಷಗಾದಿಗೆ ಕೇಳಿಬರುತ್ತಿರುವುದು ಹಾಲಿ ... ಎಸ್.ಆರ್. ಪಾಟೀಲ್ ಮತ್ತು ಪ್ರಕಾಶ್ ...)!

... ಪೈಕಿ ಯಾರೇ ರಾಜ್ಯ ಕಾಂಗ್ರೆಸ್‌ನ ಸಾರಥ್ಯ ...ಬಹುದು. ಆದರೆ ಲಾಭವೇನು? ಉತ್ತರ ...ಟಕ ಮಾತ್ರವಲ್ಲದೆ ದಕ್ಷಿಣ ಕರ್ನಾಟಕದ ...ಯತ ಸೇರಿದಂತೆ ಸಮಸ್ತ ಲಿಂಗವಂತ ...ಹವೀಗ ಬಿಜೆಪಿ ತೆಕ್ಕೆಯಲ್ಲಿದೆ. ಬಿಜೆಪಿ ... ಯಡಿಯೂರಪ್ಪ ಸದ್ಯದ ಮಟ್ಟಿಗೆ ...ಟಕದ ಲಿಂಗಾಯತರ ಪಾಲಿಗೆ ...ಾದ್ವಿತೀಯ ನೇತಾರ. ಕೆಜೆಪಿ ಮತ್ತು ... ವಿಭಜನೆಯಾಗದೇ ಹೋಗಿದ್ದರೆ ಈ ...ಿ ಲಿಂಗಾಯತರದ್ದೇ ಸರ್ಕಾರವಿರಬೇಕಿತ್ತು. ...ಅದರೂ ಕಾಂಗ್ರೆಸ್ ದಲಿತರು, ...ಳಿದವರು, ಅಲ್ಪಸಂಖ್ಯಾತರ ಹಿತಾಸಕ್ತಿಯ ...ಂಥಾದ್ದರಲ್ಲಿ ರಾಜ್ಯ ಕಾಂಗ್ರೆಸ್ ಸಾರಥ್ಯವನ್ನು ...ಯತನೊಬ್ಬ ವಹಿಸಿಕೊಂಡ ಮಾತ್ರಕ್ಕೆ ...ಯತರ ಬಿಜೆಪಿ ನಿಷ್ಠೆ ಬದಲಾಗುತ್ತಾ?

...ಕ್ಕಲಿಗನೊಬ್ಬ ರಾಜ್ಯ ಕಾಂಗ್ರೆಸ್ ...ತಿಯಾದ ಮಾತ್ರಕ್ಕೆ ಹೇಗೆ ಮೈಸೂರು ...ವ. ಒಕ್ಕಲಿಗರ ನಿಷ್ಠೆ ದೇವೇಗೌಡರನ್ನು ಬಿಟ್ಟು ...ವುದಿಲ್ಲವೋ ಹಾಗೆ ಲಿಂಗಾಯತನೊಬ್ಬ ...ಸ್ ಅಧ್ಯಕ್ಷನಾದ ಮಾತ್ರಕ್ಕೆ ಲಿಂಗಾಯತರ ... ನಿಷ್ಠೆಯೂ ಬದಲಾಗುವುದಿಲ್ಲ. ಜೊತೆಗೆ ...ಡಿ, ಬ್ರಾಹ್ಮಣ, ವೈಶ್ಯ ಜೈನರೂ ...ಮುಂದಾಚೆಗೆ ಯೋಚಿಸಲಾರರು. ಇದು ಸಿದ್ಧ ...ಾದು ಗೊತ್ತಿದ್ದೇ ಮುಖ್ಯಮಂತ್ರಿ ಸಿದ್ದು ... ತಂತ್ರಕ್ಕೆ ಕಟ್ಟು ಬಿದ್ದದ್ದು ಮತ್ತು ರಾಜ್ಯ ...ಸ್ ಸಾರಥ್ಯದ ವಿಷಯದಲ್ಲೂ ಇದೇ ಸೂತ್ರ ...ತ್ತಿರುವುದು. ಸದ್ಯ ಸಿದ್ದು ಮಾತ್ರವಲ್ಲದೆ ...ಯಂಥ ಹಿರಿಯ ನಾಯಕರು ಕೂಡ ...ಶ್ವರ್ ಜಾಗಕ್ಕೆ ಉಗ್ರಪ್ಪ ಎಂಬ ಕಟ್ಟರ್ ...ಳಿದ ಹೋರಾಟಗಾರನ ಹೆಸರನ್ನು ...ಟ್ಟಿರುವುದೂ ಈ ಕಾರಣಕ್ಕೇ!

...ದು ಲಿಂಗಾಯತರಿಗೆ ಪರ್ಯಾಯವಾಗಿ ಕುರುಬ, ...ಕಿ, ದಲಿತ ಮತ್ತು ಅಲ್ಪಸಂಖ್ಯಾತರ ಹೊಸ ...ಬ್ಯಾಂಕ್ ಸೃಷ್ಟಿಯ ತಂತ್ರ. ಪರಮೇಶ್ವರ್ ಏನೇ ...ಂದರೂ ಖರ್ಗೆಯ ಮುಂದೆ ನಿಲ್ಲಲಾರ. ...ಕ್ಕೆ ದಲಿತರಲ್ಲೇ ಎಡಗೈ, ಬಲಗೈ, ಲಂಬಾಣಿ, ...ರ, ಬೋವಿ, ವಡ್ಡ ಇತ್ಯಾದಿ ಒಳ ...ಗಳಾಗಿವೆ. ಹೊಲೆಯ ಅಂದರೆ ಬಲಗೈ ...ವನ್ನು ಹೇಗೆ ಎಡಗೈ ಮಾದಿಗ ಸಮೂಹ ...ದಿಲ್ಲವೋ ಹಾಗೇ ಬೋವಿಗಳನ್ನು ಬಂಜಾರರೂ ...ವುದಿಲ್ಲ, ಅದಿ ಕರ್ನಾಟಕರೂ ...ವುದಿಲ್ಲ, ಸದ್ಯ ಎಡಗೈ ಮಾದಿಗ

ಜೈಲುಪಾಲಾದ ಯಡ್ಡಿ-ರೆಡ್ಡಿ ಜೋಡಿಯೂ ಉಗ್ರಪ್ಪರ ಸದ್ದಿಲ್ಲದ ಹೋರಾಟವೂ..!

ಹಿಂದಿದ್ದ ಬಿಜೆಪಿ ಸರ್ಕಾರದ ಕೇಸರಿ ಓಟ್‌ಬ್ಯಾಂಕ್ ಛಿದ್ರಗೊಳ್ಳದೇ ಹೋಗಿದ್ದರೆ, ಯಡ್ಡಿಯ ಕೆಜೆಪಿ ಮತ್ತು ಗಣಿಕಳ್ಳರ ಬಿಎಸ್‌ಆರ್ ಕಾಂಗ್ರೆಸ್‌ಗಳು ಬಿಜೆಪಿಯ ಓಟುಗಳನ್ನು ಹಂಚಿಕೊಳ್ಳದೆ ಹೋಗಿದ್ದರೆ ಇವತ್ತು ಕಾಂಗ್ರೆಸ್ ಅಧಿಕಾರಕ್ಕೆ ಬರಲು ಸಾಧ್ಯವಿತ್ತೆ?







ಇದಕ್ಕೆ ಯಡ್ಡಿ ಮತ್ತು ಜನಾರ್ದನ ರೆಡ್ಡಿ ಜೈಲು ಪಾಲಾಗಿದ್ದು ಎಷ್ಟು ಕಾರಣವೋ ಅವರನ್ನು ಜೈಲಿಗೆ ಹಾಕುವಲ್ಲಿ ಆಗ ವಿರೋಧಿ ನಾಯಕರಾಗಿದ್ದ ಸಿದ್ದರಾಮಯ್ಯ ಮತ್ತು ಉಗ್ರಪ್ಪರ ಶ್ರಮವೂ ಅಷ್ಟೇ ಕಾರಣ. ಒಂದೆಡೆ ಸಿದ್ದು ಬಳ್ಳಾರಿ ಪಾದಯಾತ್ರೆಯ ಮೂಲಕ ಗಣಿ ಲೂಟಿಯ ವಿರುದ್ಧ ಬೀದಿಗಿಳಿದರೆ ಆಗ ಪರಿಷತ್ ವಿರೋಧಿ ನಾಯಕರಾಗಿದ್ದ ಉಗ್ರಪ್ಪ ಗಣಿ ಲೂಟಿಯ ಒಂದೊಂದೇ ದಾಖಲೆಗಳನ್ನು ಹೆಕ್ಕಿಹೆಕ್ಕಿ ತೆಗೆದರು. ಜಿಂದಾಲ್ ಕಂಪೆನಿಯಿಂದ ಯಡ್ಡಿ ಪಡೆದ ಕಮಿಷನ್ ಮತ್ತು ಅದಕ್ಕೆ ಪ್ರತಿಯಾಗಿ ಯಡ್ಡಿ ಲೂಟಿಗೆ ನೆರವಾಗಿದ್ದರ ವಿರುದ್ಧ ಲೋಕಾಯುಕ್ತಕ್ಕೆ ದಾಖಲೆ ಸಮೇತ ದೂರು ಕೊಟ್ಟದ್ದೇ ವಿ.ಎಸ್. ಉಗ್ರಪ್ಪ.


ಜೊತೆಗೆ ಜನಾರ್ದನ ರೆಡ್ಡಿ ನಡೆಸಿದ ಅರಣ್ಯ ಭೂಮಿಯ ಗಣಿ ಲೂಟಿ, ಕರ್ನಾಟಕದ ಗಡಿ ನಕ್ಷೆಯನ್ನೇ ತಿದ್ದಿ ನಡೆಸಿದ ಗಣಿ ದಕಾಯಿತಿ, ದೋಚಿದ ಅದಿರನ್ನು ಆಂಧ್ರಕ್ಕೆ ಸಾಗಿಸಿದ್ದ ಲಾರಿಗಳ ನಂಬರ್, ಫೋಟೋಗಳು, ದಾಖಲೆಗಳೆಲ್ಲವನ್ನೂ ಪಟ್ಟಿ ಮಾಡಿದ ಉಗ್ರಪ್ಪ ಗಾಲಿ ರೆಡ್ಡಿ ವಿರುದ್ಧ ರಾಜ್ಯಪಾಲರಿಗೂ ದೂರಿತ್ತರು. ಲೋಕಾಯುಕ್ತರಿಗೂ ಬರೆದರು. ಇದರ ಫಲವಾಗೇ ಯಡ್ಡಿ ಮತ್ತು ರೆಡ್ಡಿ ಜೈಲು ಪಾಲಾಗಬೇಕಾಯಿತು. ಸಿಬಿಐ ತನಿಖೆ, ಸುಪ್ರೀಂಕೋರ್ಟ್ ತೀರ್ಪು, ಲೋಕಾಯುಕ್ತರ ವರದಿಗಳೆಲ್ಲದರ ಜೊತೆಜೊತೆಗೆ ಸದನದ ಒಳಹೊರಗೆ ಉಗ್ರಪ್ಪ ನಡೆಸಿದ ಹೋರಾಟವೂ ಅಷ್ಟೇ ಪರಿಣಾಮಕಾರಿಯಾಗಿತ್ತು. ಇದರ ವಿರುದ್ಧ ರೊಚ್ಚಿಗೆದ್ದ ರೆಡ್ಡಿ ಗ್ಯಾಂಗ್ ಬಳ್ಳಾರಿಯ ಬಹಿರಂಗ ಸಭೆಯಲ್ಲೇ ಉಗ್ರಪ್ಪ ಮೇಲೆ ಹಲ್ಲೆ ನಡೆಸಿತ್ತು.

ಇದೆಲ್ಲದರ ಫಲವಾಗೇ ಇವತ್ತು ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ ನಿಜ. ಯಾರ್‍ಯಾರೋ ಮಂತ್ರಿಗಳಾಗಿರಬಹುದು. ಆದರೆ ಸಿದ್ದು ಹೆಗಲಿಗೆ ಹೆಗಲು ಕೊಟ್ಟು ಅವತ್ತು ಉಗ್ರಪ್ಪ ನಡೆಸಿದ ಹೋರಾಟವಿತ್ತಲ್ಲ; ಅದು ಕೂಡ ಕಮ್ಮಿಯದೇನಲ್ಲ.

ಸಮೂಹದ ದೊಡ್ಡ ಗುಂಪೊಂದು ಬಿಜೆಪಿ ನೆರಳಲ್ಲಿರುವಂತೆ ಬೋವಿಗಳು ಗಣನೀಯವಾಗಿ ಬಿಜೆಪಿ ತೆಕ್ಕೆಗೆ ಜಾರಿದ್ದಾರೆ.

ಮಿಕ್ಕಂತೆ ಹಿಂದುಳಿದ ವರ್ಗದ ದೊಡ್ಡ ಗುಂಪುಗಳೆಂದರೆ ಕುರುಬರು, ವಾಲ್ಮೀಕಿ ಬೇಡರು ಮತ್ತು ಈಡಿಗರು. ಸಿದ್ದು ಕಾರಣಕ್ಕೆ ಕುರುಬರೆಲ್ಲ ನಿಸ್ಸಂಶಯವಾಗಿ ಕಾಂಗ್ರೆಸ್ ಬೆಂಬಲಕ್ಕೆ ನಿಂತಿರಬಹುದು. ಈಡಿಗರ ಪೈಕಿ ಕರಾವಳಿ ಭಾಗದವರೆಲ್ಲ ಕೇಸರಿಕರಣಕ್ಕೆ ಒಳಪಟ್ಟಿರಲೂಬಹುದು. ದಲಿತ, ಲಿಂಗಾಯತ ಮತ್ತು ಒಕ್ಕಲಿಗರ ಹೊರತಾಗಿ ಕರ್ನಾಟಕದ ದೊಡ್ಡ ಸಂಖ್ಯೆಯ ಹಿಂದುಳಿದ


















ವರ್ಗಗಳೆಂದರೆ ಅದು ವಾಲ್ಮೀಕಿ ಬೇಡರು ಮತ್ತು ಕುರುಬರೆ. ಚಿನ್ನಪ್ಪರೆಡ್ಡಿ ವರದಿ ಮತ್ತು 2010ರ ಜನಗಣತಿಯ ಪ್ರಕಾರ ಕುರುಬರು ಮತ್ತು ವಾಲ್ಮೀಕಿ ಜನಾಂಗಗಳು ಹೆಚ್ಚೂ ಕಮ್ಮಿ ಸರಿಸಮದ ಪ್ರಮಾಣದಲ್ಲಿವೆ. ಶೇ.17ರಷ್ಟಿರುವ ದಲಿತರಲ್ಲೇ ನೂರಕ್ಕೂ ಅಧಿಕ ಉಪಜಾತಿಗಳಿವೆ. ಶೇ. 16ರಷ್ಟಿರುವ ಲಿಂಗಾಯತರಲ್ಲೂ ಹಲವಾರು ಉಪಗುಂಪುಗಳಾಗಿವೆ. ಒಕ್ಕಲಿಗರು ಮತ್ತು ಮುಸ್ಲಿಮರು ಶೇ. 11ರಷ್ಟಿರಬಹುದು.

ಆದರೆ ತಲಾ ಶೇ.6.5ರಿಂದ 7ರಷ್ಟಿರುವ ಕುರುಬರು ಮತ್ತು ವಾಲ್ಮೀಕಿ ನಾಯಕರ ದ್ರುವೀಕರಣವಾದರೆ ಅದೇ ಶೇ. 12ಕ್ಕಿಂತಲೂ ಅಧಿಕ ಸಂಖ್ಯೆಯಾಗುತ್ತವೆ. ದೇವರಾಜ ಅರಸು ಮತ್ತು ಎಲ್.ಜಿ. ಹಾವನೂರ್ ಕಾಲಕ್ಕೆ ವಾಲ್ಮೀಕಿ ನಾಯಕರು ಸಾರಾಸಗಟಾಗಿ ಕಾಂಗ್ರೆಸ್ ಬೆಂಬಲಕ್ಕಿದ್ದವರೆ. ಈಗಲೂ ಅಷ್ಟೇ ದೊಡ್ಡ ಮಟ್ಟದಲ್ಲಿ ಬೇಡನಾಯಕರು ಕಾಂಗ್ರೆಸ್ಸನ್ನು ಬೆಂಬಲಿಸಿದ್ದಾರೆ. ಸಿರಗುಪ್ಪೆಯ ನಾಗರಾಜ್, ದೇವದುರ್ಗದ ರಾಜಾ ವೆಂಕಟೇಶ್ ನಾಯ್ಕ, ರಾಯಚೂರು ಗ್ರಾಮಾಂತರದ ರಾಜಾ ವೆಂಕಟಪ್ಪ ನಾಯಕ, ಮಧುಗಿರಿಯ ಕೆ.ಎನ್. ರಾಜಣ್ಣ ರಾಯಚೂರಿನ ಭಗವಂತ ನಾಯ್ಕ, ಗೋಕಾಕ್‌ನ ಸತೀಶ್ ಜಾರಕಿಹೊಳಿ; ಯಮಕನಮರಡಿಯ ರಮೇಶ್ ಜಾರಕಿಹೊಳಿ, ಮಸ್ಕಿಯ ಪ್ರತಾಪ್‌ಗೌಡ ಪಾಟೀಲ್, ಮಾಸ್ತಿಯ ಹಂಪಯ್ಯ ನಾಯ್ಕ, ಜಗಳೂರಿನ ರಾಜೇಶ್, ಚಳ್ಳಕೆರೆಯ ರಘುಮೂರ್ತಿ ಮತ್ತು ಬಳ್ಳಾರಿ ಗ್ರಾಮಾಂತರದ ಎಸ್.ವೈ. ಗೋಪಾಲಕೃಷ್ಣ ಸೇರಿದಂತೆ ಹನ್ನೆರಡು ಮಂದಿ ಕಾಂಗ್ರೆಸ್ ಶಾಸಕರು ವಾಲ್ಮೀಕಿ ಸಮೂಹದಿಂದಲೇ ಗೆದ್ದಿದ್ದಾರೆ.

ಲಿಂಗಾಯತರನ್ನು ಹೊರತುಪಡಿಸಿದರೆ ಸದ್ಯ ಕಾಂಗ್ರೆಸ್ ಮಟ್ಟಿಗೆ ಅತಿ ದೊಡ್ಡ ಗುಂಪೆಂದರೆ ಅದು ನಾಯಕರೆ. ಇಬ್ಬರು ಸಂಸದರು, ಇಬ್ಬರು ಎಮ್ಮೆಲ್ಸಿಗಳು, 12 ಮಂದಿ ಶಾಸಕರ ವಾಲ್ಮೀಕಿ ನಾಯಕರಿಗೆ ಹೋಲಿಸಿದರೆ ಕುರುಬರು, ಒಕ್ಕಲಿಗರೂ ನಂತರದ್ದ ಸ್ಥಾನಕ್ಕೆ ನಿಲ್ಲುತ್ತಾರೆ. ಇಲ್ಲಿ ಸಮಸ್ಯೆಯಿರುವುದು ಬಿಜೆಪಿ ಕೂಡ ಇದೇ ವಾಲ್ಮೀಕಿ ಸಮೂಹದ ಬುಟ್ಟಿಗೆ ಕೈಯಿಟ್ಟಿರುವುದು. ಬಳ್ಳಾರಿ ಶ್ರೀರಾಮುಲು ಸೇರಿದಂತೆ ಕಂಪ್ಲಿಯ ಸುರೇಶ್‌ಬಾಬು, ಕೂಡ್ಲಿಗಿಯ ನಾಗೇಂದ್ರ, ಅರಬಾವಿಯ ಬಾಲಚಂದ್ರ ಜಾರಕಿಹೊಳಿ ಇತ್ಯಾದಿಯಾಗಿ ಒಂದು ಗುಂಪಿನ ವಾಲ್ಮೀಕಿ ಜನಾಂಗದ ಶಾಸಕರು ಬಿಜೆಪಿಯಲ್ಲಿದ್ದಾರೆ. ಏನೇ ಲಗಾಟ ಹೊಡೆದರೂ ಗಣಿಕಳ್ಳರ ಕೈಗೊಂಬೆ ಶ್ರೀರಾಮುಲುವನ್ನು ಕರ್ನಾಟಕದ ನಾಯಕರ್‍ಯಾರೂ ಒಪ್ಪಲಾರರು. ಶ್ರೀರಾಮುಲು ಕರ್ನಾಟಕದ ವಾಲ್ಮೀಕಿಗಳ ಪಾಲಿಗೆ ಪರಕೀಯ, ಆಂಧ್ರ ಮೂಲದವ ಮತ್ತು ಕರ್ನಾಟಕದ ಗಣಿಲೂಟಿ ಗೈದ ರೆಡ್ಡಿಗಳ ಸಾಕು ಪ್ರಾಣಿ.


ಅಷ್ಟಿಲ್ಲದೆ ದೊಡ್ಡಮಟ್ಟದ ವಾಲ್ಮೀಕಿ ಸಮೂಹ ಬಿಜೆಪಿಯನ್ನು ಧಿಕ್ಕರಿಸಿ ಕಾಂಗ್ರೆಸ್ ಬೆಂಬಲಕ್ಕೆ ನಿಲ್ಲುತ್ತಿರಲಿಲ್ಲ. ಈಗ ಅಳಿದುಳಿದ ವಾಲ್ಮೀಕಿ ಮತಗಳಿಗೂ ಕಾಂಗ್ರೆಸ್ ಗಾಳ ಹಾಕದೆ ಹೋದರೆ ಅದರ ಲಾಭಕ್ಕಾಗಿ ಬಿಜೆಪಿ ಹೊಂಚಿ ಕೂತಿದೆ. ದಲಿತ, ಮುಸ್ಲಿಂ, ಕುರುಬರೆಲ್ಲ ಕಾಂಗ್ರೆಸ್ ಬೆನ್ನಿಗೆ ಸಾರಾಸಗಟಾಗಿ ನಿಂತಿರುವಾಗ ಈ ಸಾಲಿನಲ್ಲಿ ವಾಲ್ಮೀಕಿಗಳನ್ನು ಗಟ್ಟಿಗೊಳಿಸಲೇಬೇಕಿದೆ. ಏಕೆಂದರೆ ಕುರುಬ ಮತ್ತು ನಾಯಕರ ಓಟ್‌ಬ್ಯಾಂಕ್ ಕಾಂಗ್ರೆಸ್ ಪರವಾಗಿ ಬಲಗೊಂಡಿತೆಂದರೆ ಅದರ ಪ್ರಭಾವ ಸಹಜವಾಗೇ ಇತರೇ ಹಿಂದುಳಿದ, ಅಸ್ಪೃಶ್ಯ ಅಹಿಂದ ವರ್ಗಗಳ ಮೇಲಾಗುತ್ತದೆ.

ಈ ನಿಟ್ಟಿನಲ್ಲಿ ಪರಮೇಶ್ವರ್ ಖಾಲಿ ಮಾಡಿದ ಜಾಗವನ್ನು ತುಂಬಲು ಕಾಂಗ್ರೆಸ್ ವರಿಷ್ಠರ ಪಾಲಿಗೆ ಗೋಚರಿಸುತ್ತಿರುವುದು ವಿ.ಎಸ್. ಉಗ್ರಪ್ಪ. ವಾಲ್ಮೀಕಿ ಸಮೂಹದ ಬೇರೆಲ್ಲ ನಾಯಕರಿಗಿಂತಲೂ ಉಗ್ರಪ್ಪ ವರ್ಚಸ್ವಿ, ಹೋರಾಟಗಾರ, ವಾಗ್ಮಿ ಮತ್ತು ಮಾಸ್ ಲೀಡರ್. ಕಾಂಗ್ರೆಸ್ ಸರ್ಕಾರದ ಮಟ್ಟಿಗೆ ಸಿದ್ದು ನಂತರದ 'ಅಹಿಂದ ವ್ಯಕ್ತಿತ್ವ' ಅಂತಿದ್ದರೆ ಅದರ ಮಂಚೂಣಿಯ ಹೆಸರೇ ಉಗ್ರಪ್ಪ.

ಸದ್ಯಕ್ಕಂತೂ ಪರಮೇಶ್ವರ್‌ಗೆ ಪರ್ಯಾಯವಾಗಿ ಕಾಣಿಸುತ್ತಿರುವುದು ಉಗ್ರಪ್ಪ ಎಂಬ ಹೋರಾಟಗಾರನ ಹೆಸರೇ...!

● ರಾ. ಸೋಮನಾಥ್

ಮೋದಿ ನಿರಾ'ಬ್ರಹ್ಮ' ಕೂತಿದ್ಯಾಕೆ



ಚಲನಶೀಲವಾದ ಬದುಕಿನಲ್ಲಿ ಬದಲಾವಣೆ ಅನಿವಾರ್ಯ. ಶಾಸನಸಭೆ ಸಂಸತ್ತಿನಲ್ಲಿ ಇತ್ತೀಚಿನವರೆವಿಗೂ ಬಿಳಿ ಉಡುಪು ಧರಿಸುವವರು ಕಾಣಿಸುತ್ತಿದ್ದರು. ಬಿಳಿ ಪ್ರಾಮಾಣಿಕತೆಯ ನಿರ್ಮಲ ಮನಸ್ಸಿನ ಸಂಕೇತ ಆಗಿತ್ತು. ಕಾಲ ಕಳೆದಂತೆ ಅವರೆಲ್ಲ ಸುಳ್ಳಿನ ಸರದಾರರಾಗಲಾರಂಭಿಸಿದರು. ಇತ್ತೀಚೆಗೆ ಬಿಳಿ ಉಡುಪನ್ನು ಕೇಸರಿ ಉಡುಪು ಆವರಿಸುತ್ತಿದೆ. ಸಂತರು, ಸಾಧ್ವಿಗಳು, ಸ್ವಾಮಿಗಳು, ಮಹಾರಾಜ್‌ಗಳು ಶಾಸನಸಭೆಗಳಿಗೆ, ಸಂಸತ್ತಿಗೆ ಬರುತ್ತಿದ್ದಾರೆ. ಕೇಸರಿ ತ್ಯಾಗದ ಸಂಕೇತ. ಅರಿಷಡ್ವರ್ಗಗಳನ್ನು ಗೆದ್ದವನು ಸಂತ. ಆದರೆ ಇವರು ಅದಕ್ಕೆ ಹೊರತು. ಇವರ ಕೇಸರಿ. ನಿಜವಾದ ಕೇಸರಿ ಅಲ್ಲ, ಖೊಟ್ಟಿ ಕೇಸರಿ; ಭಜರಂಗಿ ಕೇಸರಿ; ಭಾಜಪ ಕೇಸರಿ ತುಂಬಿದೆ ಇವರಲ್ಲಿ ಅಡಿಯಿಂದ ಮುಡಿಯವರೆಗೆ ದ್ವೇಷ. ಅದಕ್ಕಾಗಿ ಈ ವೇಷ. ಇವರ, ಇಂಥವರ ನಾಲಿಗೆಗೆ ಇಲ್ಲ ಲಗಾಮು. ಸೌಹಾರ್ದ ಸೌಧದ ಮೇಲೆ ಎಸೆಯುತ್ತಲೇ ಇರುತ್ತಾರೆ ಬಾಂಬು. ಸಂಸತ್ತಿನ ಒಳಗೆ ಹೊರಗೆ ನಡೆಯುತ್ತಿದೆ ಇವರ ಆರ್ಭಟ.

ಮೂರು ಕೋತಿಗಳ ಬೊಂಬೆಯಂತೆ ಆದರೆ ಪ್ರಧಾನಿ?

2002ರಲ್ಲಿ ಗುಜರಾತಿನಲ್ಲಿ ಕೋಮುಗಲಭೆ ನಡೆಯಿತು. ಸಾವಿರಾರು ಜನರು ಸಾವು-ನೋವು ಅನುಭವಿಸಿದರು. ಆಗ ಆದ ಗಾಯ ಇನ್ನೂ ಮಾಗಿಲ್ಲ. ಮೋದಿ ಆಗ ಗುಜರಾತಿನ ಮುಖ್ಯಮಂತ್ರಿ. ಇಡೀ ದೇಶ ಈ ಘಟನೆ ಮರೆತಂತೆ ನಟಿಸುತ್ತಿದೆ. ಇದಕ್ಕೆ ಕಾರಣವೂ ಇದೆ. ಮೋದಿ ಗಲಭೆಯನ್ನು ಪ್ರಚೋದಿಸಿದರು, ಬೆಂಬಲಿಸಿದರು ಎಂದರೆ ಮೋದಿ 'ಪಾತಕಿ' ಎಂದಾಗುತ್ತದೆ. ಗಲಭೆ ನಿಯಂತ್ರಿಸಲು ಪ್ರಯತ್ನಿಸಿ ವಿಫಲರಾದರು ಎಂದರೆ ಮೋದಿ ದುರ್ಬಲ ನಾಯಕ ಎಂದು ಸಾಬೀತು ಪಡಿಸಿದಂತಾಗುತ್ತದೆ ಎಂದೇ ಮಾರಣಹೋಮ ಮರೆತು ಅಭಿವೃದ್ಧಿ ಮಂತ್ರ ಪಠಣ!

ಅನಂತಮೂರ್ತಿಯವರು ಒಂದು ಪ್ರತಿಮೆ ನೀಡುತ್ತಾರೆ. ಯಜ್ಞದಲ್ಲಿ ಎಲ್ಲರೂ ಯಾವುದಾದರೂ ಕಾರ್ಯದಲ್ಲಿ ತೊಡಗಿಸಿಕೊಂಡು ಇರುತ್ತಾರೆ. ಒಬ್ಬ ಪ್ರಮುಖ ಮಂತ್ರಜ್ಞ ಇರುತ್ತಾನೆ. ಅವನು ಯಾವ ಕೆಲಸವನ್ನೂ ಮಾಡುವುದಿಲ್ಲ, ಸುಮ್ಮನೆ ಕೂತಿರುತ್ತಾನೆ. ಅವನನ್ನು 'ಬ್ರಹ್ಮ' ಎನ್ನುತ್ತಾರೆ. ಅವನು ಬ್ರಹ್ಮ ಕೂತಿರುತ್ತಾನೆ. ಅವನು ಸುಮ್ಮನೆ ಕೂತಿರುತ್ತಾನೆ. ಆದರೂ ಅವನ ಇಷ್ಟದಂತೆಯೇ ಎಲ್ಲವೂ ನೆರವೇರುತ್ತದೆ.

ಗುಜರಾತಿನ ಕೋಮುಗಲಭೆಯಲ್ಲಿ ಆದದ್ದೂ ಅದೆ. ಮೋದಿ 'ಬ್ರಹ್ಮ' ಕೂತಿದ್ದರು!

ಸಾಧ್ವಿಗಳು, ಸಂತರುಗಳು, ಕೇಸರಿಗಳು ಸಮಾಜದ ಸ್ವಾಸ್ಥ್ಯ ಕೆಡಿಸುವ ಕೆಲಸವನ್ನು ಮಾಡುತ್ತಲೇ ಇದ್ದರೂ ಮೋದಿ ಯಾಕೆ ನಿಯಂತ್ರಿಸುತ್ತಿಲ್ಲ?

ಅವರು 'ಬ್ರಹ್ಮ' ಕೂತಿದ್ದಾರೆ!

ದೇಶದ ಹಲವೆಡೆ 'ಘರ್ ವಾಪಸಿ' ಸುದ್ದಿ.

ರಾಜ್ಯಸಭೆಯಲ್ಲಿ ಕೋಲಾಹಲ. ಮೋದಿ ಹೇಳಿಕೆಗಾಗಿ ಪಟ್ಟು.

ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಿದರೆ ಮೋದಿ?

'ಬ್ರಹ್ಮ' ಕೂತಿದ್ದರು!

ಭಜರಂಗಿ ಬ್ರಾಹ್ಮಣರು!

'ಘರ್ ವಾಪಸಿ'

'ಮರಳಿ ಮನೆಗೆ.'

ವಿಶ್ವ ಹಿಂದೂ ಪರಿಷತ್ತಿನ ಮಹತ್ವಾಕಾಂಕ್ಷಿ ಯೋಜನೆ.

ಎಲ್ಲಿದೆ ನಿನ್ನ ಮನೆ?

ಹಿಂದೂ ಧರ್ಮದಲ್ಲಿ!

ತಿಳಿವಳಿಕೆ ಇಲ್ಲದ ಪೂರ್ವಿಕರು ಬೇರೆ ಧರ್ಮ ಅವಲಂಬಿಸಿದ್ದಾರೆ. ಈಗಿನ ಅವರ ವಂಶದ ಕುಡಿಗಳು ನೋವು ಅನುಭವಿಸಬಾರದು. ಅದಕ್ಕೇ ಮರು ಮತಾಂತರ. ಅಲ್ಲ ಅಲ್ಲ, ಇದು ಮತಾಂತರ ಅಲ್ಲ, ಮರಳಿ- ಮನೆಗೆ. ಅಪ್ಪನೊಂದಿಗೆ ಜಗಳ ಆಡಿಕೊಂಡು ಮನೆ ಬಿಟ್ಟು ಹೋದ ಮಗ ಮತ್ತೆ ಮನೆಗೆ ಬಂದ ಹಾಗೆ!

ಪೂರ್ವಿಕರು ಎಂದರೆ ಎಷ್ಟು ತಲೆಮಾರಿನವರಿಗೆ?

ಎಂಟು ನೂರು ವರ್ಷಗಳಿಂದ ಈಚೆಗೆ.

ಯಾಕೆ ಈ ನಿರ್ಬಂಧ?

ಸಾಬರು, ಕಿರಿಸ್ತಾನೀಯರು ಬಂದದ್ದೇ ಅಲ್ಲಿಂದ ಅಲ್ಲವೆ?

ವೇದ ಕಾಲದ ಹಿಂದಿನ ಪೂರ್ವೀಕರು ಬೇಡವೆ?

ಬೇಡ ಬೇಡ ಖಂಡಿತ ಬೇಡ. ಎಲ್ಲಿತ್ತು ಆಗ ವೈದಿಕ ಧರ್ಮ?

ಅದೇ ಅಲ್ಲವೆ ಹಿಂದೂ ಧರ್ಮ!?

ಗೊತ್ತುಂಟು 'ಘರ್ ವಾಪಸಿ' ಬಂದವರು ಬರುವುದು ಯಾವ ಜಾತಿಗೆ ಎಂಬ ನಿಮ್ಮ ಹಳಸಲು ಪ್ರಶ್ನೆ! ಅದು ಅವರದೇ ಆಯ್ಕೆ. ಯಾವ ಜಾತಿಗಾದರೂ ಸೇರಬಹುದು.

ಎಂತಹ ಉದಾರ ನೀತಿ. ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಏಕ್‌ದಂ ಮೇಲೇರುವ ಅವಕಾಶ. ಸಂಸ್ಕೃತೀಕರಣ ಶಾರ್ಟ್‌ಕಟ್!

ಸ್ವಲ್ಪ ನಿಧಾನಿಸಿ. ಕೇರಳ ಬ್ರಾಹ್ಮಣ ಮಹಾಸಭಾ ಒಪ್ಪಿಗೆ ಇದಕ್ಕೆ ಇಲ್ಲವಂತೆ. ಜಾತಿ ಜಾಲಾಡಿ ಪರೀಕ್ಷಿಸುವರಂತೆ.

ಇದು ಹೆಂಗಾಗುತ್ತೆ ಅಂದರೆ...

ಮತಾಂತರ ಯಾವುದೇ ಧರ್ಮಕ್ಕೆ ಆಗಲಿ. ಆಗುವವರು ಸಾಮಾನ್ಯವಾಗಿ ಬಡವರು, ಅಸ್ಪೃಶ್ಯರು, ಜಾತಿ ದೌರ್ಜನ್ಯಕ್ಕೆ ಒಳಗಾದವರು. ಯಾವ ಧರ್ಮಕ್ಕೆ ಹೋದರೂ ಅದು ಸುಲಭವಾಗಿ ಪರಿಹಾರವಾಗುವಂತಹದ್ದಲ್ಲ. ತಳ ಸಮುದಾಯದ ಬಡವರು ಕ್ರೈಸ್ತ ಧರ್ಮಕ್ಕೆ ಸೇರಿದಾಗ ಅವರನ್ನು Rice Christians ಎಂದು ಹೀಯಾಳಿಸುತ್ತಾರಂತೆ. ಇಸ್ಲಾಂ ಧರ್ಮದಿಂದಲೋ, ಕ್ರೈಸ್ತ ಧರ್ಮದಿಂದಲೋ ಮರು ಮತಾಂತರಗೊಂಡು ಬ್ರಾಹ್ಮಣ ಆದರೆ, ಬ್ರಾಹ್ಮಣ ಸಮೂಹ ಇವರೊಂದಿಗೆ ಮಿಳಿತ ಆಗುತ್ತಾರೆಯೆ? ಎಂದಿಗೂ ಆಗದ ಮಾತು. Rice Christians ಇದ್ದಂಗೆ ಇವರು 'ಭಜರಂಗಿ ಬ್ರಾಹ್ಮಣ' ಆಗಬಹುದು!

ರಜದಿನವೇ ಉತ್ತಮ ಆಡಳಿತ!

ಮೋದಿ ಮನಸ್ಸಿಗೆ ತುಂಬ ನೋವಾಗಿತ್ತು.

ಡಿಸೆಂಬರ್ 25, ಕ್ರಿಸ್ತ ಜಯಂತಿ.

ಅವತ್ತ ವಾಜಪೇಯಿ ಜನಿಸಿದ್ದು

ಹಾಳಾದ ಕ್ರಿಸ್ತ ಮೊದಲೇ ಹುಟ್ಟಿದ್ದ; ಬ್ರಿಟಿಷ್ ಸರ್ಕಾರ ರಜ ಘೋಷಿಸಿತ್ತು.

ರಜದ ದಿವಸ ಹುಟ್ಟಿದ್ದರು ವಾಜಪೇಯಿ. ಅವರ ಜಯಂತಿಗೆ ಸಾರ್ವಜನಿಕ ರಜೆ ಘೋಷಿಸಬೇಕು ಎಂಬ ಮನದಾಸೆ. ಆದರೆ ಒಂದೇ ದಿನಕ್ಕೆ ಎರಡು ರಜ ಘೋಷಿಸುವಂತಿಲ್ಲ! ಕ್ರಿಸ್ತ ಜಯಂತಿ ರಜ ಕ್ಯಾನ್ಸಲ್ಲಾಗದ ಇರೋದೇನಿದ್ರೂ ವಾಜಪೇಯಿ ರಜ ಅನ್ನುವಂತಿಲ್ಲ, ಅದಕ್ಕೆ ಮೋದಿಯೋರು ಅವತ್ತು 'ಉತ್ತಮ ಆಡಳಿತ ದಿನ' ಮಾಡ್ತೀನಿ ಅಂದುಬುಟ್ರು.

ರಜದ ದಿನ ಎಂತಹ ಉತ್ತಮ ಆಡಳಿತ ಕೊಡ್ತಾನಿ ಇವ್ನು, ಒಳ್ಳೆ ಅಸಂಗತ ನಾಟಕ ಇದ್ದ ಹಾಗೆ ಇದೆಯಲ್ಲ ಇವನ ಆಟ ಅನ್ನುವವರೂ ಇದ್ರು. ಆದ್ರೂ ಮೋದಿ ಕೇರೇ ಮಾಡ್ದೆ ಉತ್ತಮ ಆಡಳಿತ ದಿನಾನ ತಮ್ಮ ಮಾತು ನಡೆಯೋ ಕಡೆ ಎಲ್ಲ ನಡ್ಸಿದ್ರು. ಮದುವೆಯಾಗಿಯೂ ಬ್ರಹ್ಮಚಾರಿ ಆದಂಗಾಯ್ತು ಮೋದಿಯ ಉತ್ತಮ ಆಡಳಿತದ ಕತ್ತರಿಗೆ ಸಿಕ್ಕಿದವರಿಗೆ. ಯಾರೂ ಏನಾದರಾಗಲಿ ಮೋದಿಗೆ ಅಂತೂ ಖುಷಿಖುಷಿ ಆಯಿತು. ಇದನ್ನ ಬೇಕಾದರೆ ವಿಕೃತ ಸಂತೋಷ ಅನ್ನುವವರು ಅಂದುಕೊಳ್ಳಲಿ.

ಉತ್ತಮ ಆಡಳಿತದ ದಿನ ಆಚರಿಸಲು ಯುಗಾದಿ ಹಬ್ಬ ಪ್ರಶಸ್ತ ದಿನವಾಗಿತ್ತು, ಹಿಂದೂ ಸಂಪ್ರದಾಯದಂತೆ ಅಂದು ಹೊಸ ವರ್ಷದ ಆರಂಭ. ಅವತ್ತು ಆಚರಿಸಿದ್ದರೆ ಅರ್ಥಪೂರ್ಣವಾಗಿರುತ್ತಿತ್ತು ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಸಲಹೆಯಲ್ಲಿ ಕೆಲವು ಅಡಚಣೆಗಳಿವೆ. ಯುಗಾದಿ ಹಿಂದೂಗಳ ಹಬ್ಬ, ಕಿರಿಸ್ತಾನದ ಹಬ್ಬ ಅಲ್ಲ. ಓಟುಗಳು ಹೆಚ್ಚು ಇರುವುದು ಹಿಂದೂಗಳ ಬಳಿ. ಅವರ ಹಬ್ಬದ ರಜಾ ವಜಾ ಮಾಡುವುದು ವಿವೇಕವಲ್ಲ. ಇದು ಧರ್ಮ ಸೂಕ್ಷ್ಮ! ಅಲ್ಲದೆ ಕ್ರಿಸ್ತ ಜಯಂತಿ ಆದರೆ ನಿಖರವಾದ ದಿನ ಬರುತ್ತದೆ. ಆದರೆ ಯುಗಾದಿ ಹಾಗಿಲ್ಲವಲ್ಲ. ಇವನ್ನು ಅವರಿಗೆ ಹೇಳಿದರೆ ನಿಖರವಾದ ದಿನಾಂಕ ತಿಳಿಸುವುದರ ಬದಲು ಪ್ರತಿ ಯುಗಾದಿ ದಿನವೂ ಉತ್ತಮ ಆಡಳಿತದ ದಿನ ಎಂದು ಘೋಷಿಸಬಹುದಲ್ಲಾ ಎಂದು ಮರು ಪ್ರಶ್ನಿಸುತ್ತಾರೆ. ಅದೊಂದೇ ಅಲ್ಲರೀ. ವಾಜಪೇಯಿಯವರನ್ನು ನೆನಪಿಸಿಕೊಳ್ಳಬೇಕು. ಅವತ್ತೇ ಅಲ್ವ ಅವರು ಹುಟ್ಟಿದ್ದು. ಬೇರೆ ದಿನ ಹುಟ್ಟಸೋಕೆ ಸಾಧ್ಯಾನ ಅಂದರೆ ಏನು ಹೇಳುತ್ತಾರೆ ಗೊತ್ತೆ, ಹಿಂದಿನ ಕಾಲದಲ್ಲಿ ರಾಜರನ್ನು ನೆನಪಿಟ್ಟುಕೊಳ್ಳುತ್ತಿದ್ದುದು ಅವರ ಹುಟ್ಟಿದ ದಿನದಿಂದ ಅಲ್ಲ, ಪಟ್ಟಾಭಿಷೇಕಕ್ಕೆ ಬಂದ ದಿನದಿಂದ: ಹಾಗೇನೆ ವಾಜಪೇಯಿ ಪ್ರಧಾನಿ ಆದ ದಿವಸವನ್ನೇ ಉತ್ತಮ ಆಡಳಿತ ದಿನವನ್ನಾಗಿ ಆಚರಿಸಬಹುದಿತ್ತಲ್ಲಾ ಎನ್ನುತ್ತಾರಲ್ರಿ....

● ಎಚ್ಚೆಲ್ಕೆ

ಜೀವನಾಡಿಗಳು


ಸ್ವೇಚ್ಛಂದ ವಿಹಾರದ ಮಾನವತೆಯ ನೇಯ್ಗೆ
ಹೊಸೆಯುತ್ತಾ
ನೆಲದ ಬೇರುಗಳಾಗಿ
ಪುಟಿದೇಳುವ ಜ್ವಾಲೆಗಳ ಮುಡಿಕಟ್ಟಿ
ನುಂಗಿ, ಸಂತನಂತೆ ತಪಸ್ಸಿನೊಳಗೆ
ಪಾತಾಳಕ್ಕಿಳಿಯುತ್ತವೆ ನಾಡಿಗಳು

ಮಿಂಚು ಹೊಡೆಯುತ್ತವೆ ನಾಡಿಗಳು
ಮೋಡವು ಬಾಯಗಲಿಸಿ
ಮನಬಿಚ್ಚಿ ಆಲಿಸುವಂತೆ ....

ಬದುಕ ಕೊಕ್ಕೆಯಲಿ ಬೆಳಕ ಕುಕ್ಕಲು
ದಾರಿಯುದ್ದ ಜೊಂಡುಗಟ್ಟಿ ಜೋಲಿಯೊಡೆ
ಎದೆಯ ಕದಗಳ
ದಿಕ್ಕೆಟ್ಟ ಕಿವಿಗಳ ಕಾವಿಗೆ
ಸಮತಾದೀಪದ ನಗಾರಿ ಲೇಪಿಸಿ
ಕುಣಿದಾಡುತ್ತವೆ ನಕ್ಷತ್ರಗಳ ಹಬ್ಬದಂತೆ

ಜಡಗೊಂಡ ಬರದ ಕೊಳಲೊಳಗೆ
ದಣಿವರಿಯದ ಕಾವ್ಯವಾಗಿ
ನೇತಾಡುತ್ತವೆ
ವಸಂತದ ಗೊಂಚಲುಗಳಾಗಿ
ಕುಲುಮೆಯ ತಿದಿಯೊಳಗೆ
ಹುಚ್ಚೆದ್ದಿದ ಕೊಬ್ಬಿಗೆ ಪುಟದಾಡುವ ಇದ್ದಿಲಾಗಿ
ತುಕ್ಕು ಹಿಡಿದ ಮನಗಳ ಕಾಯಿಸಿ ಬೇಯಿಸಿ
ಬೂದಿಯಾಗಿಯೂ ನೆಲದ ಗುಟ್ಟು ಹಿಗ್ಗಿಸುತ್ತವೆ

ಸಾವಿರ ಸಾವಿರ ವರಾಹಗಳಾಗಿ
ಪ್ರತಿ ಯುಗದ ಜೀವಕೂಪವ್ರ ಹುಚ್ಚೇರಿಸುವಂತೆ



ಮತ್ತೊಂದು
ಚರಿತ್ರೆಯ ಶಾಸನವಾಗಿ ನೆಲಗಂಬದಂತೆ ಅಚ್ಚಾಗುತ್ತವೆ

ಯಾರಿಗೂ ಗೊತ್ತಾಗದಂತೆ ಒಳಗೊಳಗೆ
ಸುಗಂಧ ಗೈಯುವ
ಬ್ರಹ್ಮ ಕಮಲದಂತೆ ಅರಳಿ
ಕತ್ತಲ ರಾಜ್ಯಕ್ಕೆ ರಂಗೇರಿಸಿ
ರೆಕ್ಕೆಯಗಲಿಸಿ
ಬಾನಂಗಳ ಮಹಲಿನೊಳಗೆ
ಜಗದ ನೆತ್ತಿಯ ಕಾವು ತಣಿಸುವ ನಾಡಿಗಳು
ಮಾನವ ಯುಗದ ಜೀವಬಡಿತಗಳು



● ಕಿರಸೂರ ಗಿರಿಯಪ್ಪ

ಲಂಕೇಶ್ ಮತ್ತು ಕ್ರಾಂತಿ ಬಂತು ಕ್ರಾಂತಿ



ನ್ನಡ ಸಾಹಿತ್ಯ ಜಗತ್ತಿನ ದೈತ್ಯ ಲಂಕೇಶ್ ರುತ್ತಿದ್ದರೆ ಬರುವ ಮಾರ್ಚ್ 10ಕ್ಕೆ ಅವರಿಗೆ 80 ತುಂಬುತ್ತಿತ್ತು. ನಾಡು ರಾಜಕೀಯವಾಗಿ ಸಂದಿಗ್ಧ ಯಲ್ಲಿದ್ದಾಗೆಲ್ಲಾ ಲಂಕೇಶ್ ಅಭಿಮಾನಿಗಳು "ಲಂಕೇಶ್ ಬದುಕಿರುತ್ತಿದ್ದರೆ......?" ಎಂದು ಆಗಾಗ ಕೊಳ್ಳುವುದಿದೆ. ಅದಕ್ಕೆ ಕಾರಣ ಅವರು ಓರ್ವ ದ್ದಾರಿಯುತ ಸಾಹಿತಿಯಾಗಿ ನಾಡಿನ ರಾಜಕೀಯ ಸಾಮಾಜಿಕ ಆಗುಹೋಗುಗಳಲ್ಲಿ ತನ್ನ ಕೆಲಸವನ್ನು ರ್ಣವಾಗಿ ನಿರ್ವಹಿಸುತ್ತಿದ್ದರು. ಕನ್ನಡದ ಇತರ ಗಳಂತೆ ಒಂದು ಪತ್ರಿಕಾ ಹೇಳಿಕೆಗೆ, ಒಂದು ಾಟದಲ್ಲಿನ ಪಾಲ್ಗೊಳ್ಳುವಿಕೆಗೆ, ಒಂದು ಲೇಖನಕ್ಕೆ ತನ್ನ ಕೆಲಸವನ್ನು ಸೀಮಿತಗೊಳಿಸುತ್ತಿರಲಿಲ್ಲ. ದಾದರೂ ಒಂದು ಮಹತ್ವದ ರಾಜಕೀಯ ಸ್ಥಿತ್ಯಂತರಕ್ಕೆ ನಿರಂತರವಾಗಿ ಪ್ರತಿಕ್ರಿಯಿಸುತ್ತಿದ್ದರು. ಕೆಲವೊಮ್ಮೆ ಬರಹಗಳೇ ಜನಾಭಿಪ್ರಾಯ ರೂಪಿಸುತ್ತಿತ್ತು. ಹರಣೆಗೆ: ಕರ್ನಾಟಕದಲ್ಲಿ 1983ರ ಕಾಂಗ್ರೆಸ್ಸೇತರ ರ ಆಡಳಿತಕ್ಕೆ ಬರುವಲ್ಲಿ ಲಂಕೇಶರ ಪಾತ್ರ ಯಕವಾಗಿತ್ತು. 1992 ರಲ್ಲಿ ಬಾಬರೀ ಯನ್ನು ಕರಸೇವಕರು ಧ್ವಂಸಗೊಳಿಸಿದ ಸಂದರ್ಭದಲ್ಲಿ ರು ಬರೆದ "ಇಟ್ಟಿಗೆ ಪವಿತ್ರವಲ್ಲ, ಜೀವ ಪವಿತ್ರ" ಲೇಖನ ನಾಡಿನಾದ್ಯಂತ ಸಂಚಲನ ಮೂಡಿಸಿತ್ತು. ಿ ಧ್ವಂಸದ ಕುರಿತಂತೆ ತಾಟಸ್ಥ್ಯ ಧೋರಣೆ ತಾಳಿದ್ದ ಲ್ಲೂ ಪಶ್ಚಾತ್ತಾಪದ ಛಾಯೆ ಮೂಡಿಸಿತ್ತು. ಇಂತಹದ್ದನ್ನು ರು ತನ್ನ ಜೀವಿತಾವಧಿಯುದ್ದಕ್ಕೂ ಮಾಡುತ್ತಾ ದ್ದರು. ಆದುದರಿಂದಲೇ ಲಂಕೇಶ್ ಕಾಲವಾಗಿ ಮೆ ದಶಕ ಸಂದ ಬಳಿಕವೂ ನಾಡಿನ ಪ್ರಜ್ಞಾವಂತ ವಲಯಕ್ಕೆ ಲಂಕೇಶ್ ಆಗಾಗ ನೆನಪಾಗುತ್ತಿರುತ್ತಾರೆ. ಾನಂತರ ಲಂಕೇಶರಷ್ಟು ತೀವ್ರವಾಗಿ ನಾಡಿನ ಿತ ಜನತೆಯನ್ನು ಮತ್ತೆ ಮತ್ತೆ ಕಾಡಿದ, ಕಾಡುತ್ತಿರುವ ಗಳು ಅಪರೂಪ. ಲಂಕೇಶರ ಸೃಜನಶೀಲ ಬರಹಗಳು ಾಲಿಕ ಪ್ರಸ್ತುತತೆ ಪಡಕೊಂಡಷ್ಟು ದಟ್ಟವಾಗಿ ಕನ್ನಡದ ಸಾಹಿತಿಯ ಬರಹಗಳೂ ಪಡೆದುಕೊಂಡಿಲ್ಲ. ಗೆ ಅಂಕೋಲಾದ ಸಂಗಾತಿ ರಂಗಭೂಮಿಯ ಹವ್ಯಾಸಿ ಾವಿದರು ಮಂಗಳೂರಿನಲ್ಲಿ ಪ್ರದರ್ಶಿಸಿದ ಕ್ರಾಂತಿ ಕ್ರಾಂತಿ ನಾಟಕವನ್ನು ವೀಕ್ಷಿಸಿದಾಗ ಮತ್ತೆ ಲಂಕೇಶ್ ನೆನಪಾದರು.

ಾಟಕದಲ್ಲಿ ನಕ್ಸಲ್ ಚಳವಳಿ ಬೇರೂರುವ ಮುನ್ನವೇ ಕಾಲವಾಗಿದ್ದರು. ಲೋಹಿಯಾವಾದಿಯಾಗಿದ್ದ ನಕ್ಸಲರ ಮತ್ತು ಪೊಲೀಸರ ಗುಂಡಿನ ಮೊರೆತ, ಕಡೆಯ ಸಾವುನೋವು, ಪೊಲೀಸರು ಮತ್ತು ನಡುವೆ ಅಪ್ಪಚ್ಚಿಯಾಗುತ್ತಿದ್ದ ಗಿರಿಜನರು ಇದೆಲ್ಲವನ್ನೂ ಕದಲ್ಲಿ ನೋಡಲು ಅವರು ಬದುಕುಳಿದಿರಲಿಲ್ಲ. ದ ಹೆಚ್ಚಿನೆಲ್ಲಾ ಲೋಹಿಯಾವಾದಿಗಳು ಸಶಸ್ತ್ರ ಟದ ಬಗ್ಗೆ ಉಪೇಕ್ಷೆ ತೋರುತ್ತಿದ್ದರು.

ಾಟಕದಲ್ಲಿನ್ನೂ ನಕ್ಸಲ್ ಚಳವಳಿಯ ಬಿಸಿಯೇ ಬಹುದಾದ ಕಾಲದಲ್ಲಿ – ಅಂದರೆ 70ರ ಆಜುಬಾಜಿನಲ್ಲಿ – ಲಂಕೇಶರು ಕ್ರಾಂತಿ ಬಂತು ನಾಟಕವನ್ನು ಬರೆದಿದ್ದರು. ಆ ಕಾಲದಲ್ಲಿ ಪಶ್ಚಿಮ , ಪಂಜಾಬ್, ಉತ್ತರಪ್ರದೇಶ, ತಮಿಳುನಾಡು, ಪ್ರದೇಶದಲ್ಲಿ ನಕ್ಸಲ್ ಚಳವಳಿ ಕಾವು ಕೊಂಡಿತ್ತು. ಹಸಿವು, ಬಡತನ, ನಿರುದ್ಯೋಗ ಇವು ಯಾದರೆ ಶ್ರೀಮಂತಿಕೆ, ಜಮೀನ್ದಾರಿ ದರ್ಪ, ಾಮಿ ಬದುಕು ಇನ್ನೊಂದೆಡೆ ಗೊಳ್ಳುವುದನ್ನು ಸಹಿಸದ ಅಧ್ಯಾಪಕರುಗಳ ಬೋಧನೆಗಳು ತಳಸಮುದಾಯದ, [illegible] ಯುವಮನಸ್ಸು ಕ್ರಾಂತಿಯ ಕನಸಲ್ಲಿ [illegible] ಮುಖ್ಯವಾಗಿಸಿ ಲಂಕೇಶ್ ಕ್ರಾಂತಿ ಬಂತು ಕ್ರಾಂತಿ ನಾಟಕ ಬರೆದರು. ವಾಸ್ತವದಲ್ಲಿ ಲಂಕೇಶರು ನಕ್ಸಲಿಸಂನ ಬೆಂಬಲಿಗರಾಗಿ ಈ ನಾಟಕವನ್ನು ಬರೆದಿರುವ ಸಾಧ್ಯತೆಯಿಲ್ಲ ಎಂಬುವುದಕ್ಕೆ ಅವರ ಒಟ್ಟು ಸಾಮಾಜಿಕ ಚಿಂತನೆಗಳು ಸಾಕ್ಷಿ ಒದಗಿಸುತ್ತವೆ. ಲಂಕೇಶರು ನಕ್ಸಲ್‌ಪರ ಬುದ್ಧಿಜೀವಿಗಳನ್ನು ವಿಡಂಬಿಸಿ ಈ ನಾಟಕವನ್ನು ಬರೆದಿದ್ದಾರೆ ಎಂಬುವುದನ್ನು ಆ ನಾಟಕವೇ ಸಾಬೀತುಪಡಿಸುತ್ತದೆ. ನಕ್ಸಲರ ಹೋರಾಟದ ಗುರಿ ಮತ್ತು ಅವರ ಬದ್ಧತೆಯ ಬಗ್ಗೆ ಸಹಾನುಭೂತಿಯಿರುವ ನಮ್ಮಂತವರಿಗೆ ಮೇಲ್ನೋಟಕ್ಕೆ ಇದೊಂದು ವಿಡಂಬನಾತ್ಮಕ ನಾಟಕವೆಂಬಂತೆ ಭಾಸವಾಗುವುದಿಲ್ಲ. ಸ್ವಲ್ಪ ಆಳವಾಗಿ ಯೋಚಿಸುತ್ತಾ ಹೋದಂತೆ ಲಂಕೇಶರು ನಕ್ಸಲ್‌ಪರ ಬುದ್ಧಿಜೀವಿಗಳನ್ನು ವಿಡಂಬಿಸಿರುವುದು ಸ್ಪಷ್ಟವಾಗುತ್ತದೆ. ಆದರೆ ಅವರೆಲ್ಲೂ ನಕ್ಸಲ್ ಚಳವಳಿಕಾರರ ಬಗ್ಗೆ ತೀರಾ ಸಿನಿಕತನದ ದಾಳಿ ಮಾಡಿದ್ದು ಕಾಣಸಿಗುವುದಿಲ್ಲ. ಲಂಕೇಶರ ಸಮಕಾಲೀನರಾದ ಲೋಹಿಯಾವಾದಿ ಚಿಂತಕ, ಲೇಖಕ ಪೂರ್ಣಚಂದ್ರ ತೇಜಸ್ವಿಯವರು ಬದುಕಿದ್ದ ಕಾಲದಲ್ಲೇ ಹಾಜಿಮಾ, ಪಾರ್ವತಿ, ಸಾಕೇತ್‌ರಾಜನ್ ಮುಂತಾದವರು ಮಲೆನಾಡಿನಲ್ಲಿ ಪೊಲೀಸ್ ಎನ್‌ಕೌಂಟರ್‌ಗೆ ಬಲಿಯಾಗಿದ್ದರು. ಮಲೆನಾಡಿನಲ್ಲೇ ವಾಸಿಸುತ್ತಿದ್ದ ತೇಜಸ್ವಿ ಆ ಬಗ್ಗೆ ತಾಟಸ್ಥ್ಯ ಧೋರಣೆ ತಾಳಿದ್ದರು. ಆದರೆ ಅನಂತಮೂರ್ತಿ, ಪ್ರೊಫೆಸರ್ ನಂಜುಂಡಸ್ವಾಮಿ, ರವಿವರ್ಮ ಕುಮಾರ್‌ರಂತಹ ಲೋಹಿಯಾವಾದಿ ಚಿಂತಕರು ನಕ್ಸಲ್ ಕಾಮ್ರೇಡುಗಳ ಸಾವಿಗೆ ಶೋಕ ವ್ಯಕ್ತಪಡಿಸಿ, ತೀವ್ರವಾಗಿ ಸ್ಪಂದಿಸಿದ್ದರು. ಒಟ್ಟಿನಲ್ಲಿ ತೇಜಸ್ವಿ ಒಬ್ಬರನ್ನು ಹೊರತುಪಡಿಸಿ ಉಳಿದ ಕೆಲವು ಮಹತ್ವದ ಲೋಹಿಯಾವಾದಿ ಚಿಂತಕರಿಗೆ ನಕ್ಸಲ್ ಕಾಮ್ರೇಡ್‌ಗಳ ಗುರಿ ಮತ್ತು ಬದ್ಧತೆಯ ಬಗ್ಗೆ ಸಹಮತವಿತ್ತು (ಹೋರಾಟದ ಹಾದಿಯ ಬಗ್ಗೆಯಲ್ಲ). ಒಟ್ಟಿನಲ್ಲಿ ಲೋಹಿಯಾವಾದಿಗಳಲ್ಲಿ ನಕ್ಸಲ್ ಹೋರಾಟಗಾರರ ಬಗ್ಗೆ ಎರಡು ವಿಧದ ಅಭಿಪ್ರಾಯಗಳಿದ್ದವು.

ಲಂಕೇಶರ 80ನೇ ಹುಟ್ಟುಹಬ್ಬದ ಪ್ರಯುಕ್ತ ಚಳವಳಿಯಲ್ಲಿನ ನನ್ನ ಸಂಗಾತಿ ರಮೇಶ್ ಅಂಕೋಲ ಅವರು ರಾಜ್ಯದಾದ್ಯಂತ ಕ್ರಾಂತಿ ಬಂತು ಕ್ರಾಂತಿಯ 80 ಪ್ರದರ್ಶನ ನಡೆಸುವ ಯೋಜನೆ ಹಾಕಿದ್ದಾರೆ. ಇತ್ತೀಚೆಗೆ ಮಂಗಳೂರಿನ ಡಾನ್ ಬಾಸ್ಕೊ ಹಾಲ್‌ನಲ್ಲಿ 49ನೇ ಪ್ರದರ್ಶನ ನೀಡಿದರು. ರಮೇಶರ ಸಂಗಾತಿ ರಂಗಭೂಮಿಯ ಹೆಚ್ಚಿನೆಲ್ಲಾ ಕಲಾವಿದರು ಕಾಲೇಜು ವಿದ್ಯಾರ್ಥಿಗಳು. ವಿದ್ಯಾರ್ಥಿ ಕಲಾವಿದರನ್ನು ಕಟ್ಟಿಕೊಂಡು ರಾಜ್ಯವಿಡೀ ತಿರುಗಾಡಿ ಒಂದು ನಾಟಕದ 80 ಪ್ರದರ್ಶನಗಳನ್ನು ನೀಡುವುದು ಬಹುದೊಡ್ಡ ಸವಾಲಿನ ಕೆಲಸ. ರಮೇಶ ಅವರು ಈ ಪ್ರದರ್ಶನಗಳಿಗಾಗಿ ಬಂಡವಾಳಶಾಹಿಗಳಿಂದ, ರಾಜಕಾರಣಿಗಳಿಂದ ಒಂದು ಪೈಸೆಯ ದೇಣಿಗೆಯನ್ನು ಪಡೆದಿಲ್ಲ. ಕೆಲವು ಹಿತೈಷಿಗಳು, ಗೆಳೆಯರು ನೀಡುವ ಸಹಾಯ ಮತ್ತು ಗೆಳೆಯರಿಂದ ಸಾಲ ಪಡಕೊಂಡು ಚಳವಳಿಯ ಭಾಗವಾಗಿ ಈ ನಾಟಕ ಪ್ರದರ್ಶನ ನೀಡುತ್ತಾ ಬಂದಿದ್ದಾರೆ. ಈಗಾಗಲೇ 50 ಪ್ರದರ್ಶನಗಳನ್ನು ನೀಡಿದ ರಮೇಶರ ಕೆಲಸ ಶ್ಲಾಘನೀಯ.

ಅತ್ಯಂತ ಸರಳ ವೇಷ ಭೂಷಣ, ಕನಿಷ್ಠ ಪರಿಕರಗಳ ಮೂಲಕ ಗರಿಷ್ಠ ಕೆಲಸ ಮಾಡುವಲ್ಲಿ ರಮೇಶ್ ಮತ್ತವರ ತಂಡ ಯಶಸ್ಸು ಕಂಡಿದೆ.

ಆಧುನಿಕ ಬುದ್ಧಿ ಜೀವಿಯ ದ್ವಂದ್ವವನ್ನು ಬಿಂಬಿಸುವ ಈ ನಾಟಕದಲ್ಲಿ ಬುದ್ಧಿಜೀವಿ ಪ್ರೊಫೆಸರ್ ಭಗವಾನ್‌ನ ಅಭಿನಯ ಸ್ವಲ್ಪಮಟ್ಟಿಗೆ ಕಳೆಗುಂದಿದಂತಿತ್ತು. ಮೂಲತಃ ಭಗವಾನ್ ಪಾತ್ರವೇ ದ್ವಂದ್ವದಲ್ಲಿರುವಂತಹದ್ದು. ಆತ ತಾನು ನಂಬಿದ ಸಿದ್ಧಾಂತ ಮತ್ತು ತನ್ನ ಪತ್ನಿ ಇವೆರಡರ ಮಧ್ಯೆ ಸಮತೋಲನ ಕಾಯ್ದುಕೊಳ್ಳಬೇಕಾದುದು ವಸ್ತು ವಿಷಯದ ಅಗತ್ಯ. ಇಂತಹ ಸಂದರ್ಭದಲ್ಲಿ ಆತನ ಅಭಿನಯದುದ್ದಕ್ಕೂ ಆತ ಒಂಥರಾ ಆಂತಕದಲ್ಲಿರಬೇಕಾದುದು ಅಗತ್ಯವೇ ಸರಿ. ಆದರೆ ಭಗವಾನ್ ಪಾತ್ರಧಾರಿ ಮನೆಯಲ್ಲಿ ತನ್ನ ಹೆಂಡತಿಯನ್ನು ಎದುರುಗೊಳ್ಳುವಾಗಲೂ, ಗೆಳೆಯರನ್ನು ಎದುರುಗೊಳ್ಳುವಾಗಲೂ, ತನ್ನ ವಿದ್ಯಾರ್ಥಿಯೊಂದಿಗೆ ಸಂಭಾಷಿಸುವಾಗಲೂ, ಸಾರ್ವಜನಿಕ ಭಾಷಣ ಮಾಡುವಾಗಲೂ ಏಕತಾನತೆಯನ್ನು ಪಾಲಿಸಿದ್ದು ಆತನ ಪಾತ್ರವನ್ನು ಸ್ವಲ್ಪಮಟ್ಟಿಗೆ ಕಳಾಹೀನಗೊಳಿಸಿದೆ. ಉದಾಹರಣೆಗೆ: ಸಾರ್ವಜನಿಕ ಭಾಷಣದಲ್ಲಿ "ಬಿರ್ಲಾನ ಮನೆಯ ನಾಯಿಯೂ ಕಮ್ಯುನಿಸಂ ಬೊಗಳುತ್ತದೆ" ಎಂಬ ಸೈದ್ಧಾಂತಿಕ ಡೈಲಾಗ್ ಹೊಡೆಯುವಾಗಲೂ, ಮನೆಯಲ್ಲಿ ಪತ್ನಿಯೊಂದಿಗೆ ಮಾತನಾಡುವಾಗಲೂ ಒಂದೇ ರೀತಿಯ ಹಾವಭಾವ, ದೇಹ ಚಲನೆಯಿರುವುದು ಒಪ್ಪತಕ್ಕದ್ದಲ್ಲ.

ಕ್ರಾಂತಿಯ ಕನಸು ಹೊತ್ತ ವಿದ್ಯಾರ್ಥಿ ದಿನಕರ ಸಾಹುಕಾರನ ಕೊಲೆಯ ಆರೋಪ ಹೊತ್ತಾಗ ಆತನನ್ನು ಒಂದು ರಾತ್ರಿಗೆ ತನ್ನ ಮನೆಯಲ್ಲಿ ಬಚ್ಚಿಟ್ಟುಕೊಳ್ಳಬೇಕಾದ ಸನ್ನಿವೇಶ ಭಗವಾನ್‌ನಿಗೆ ಎದುರಾಗುತ್ತದೆ. ಆ ಸಂದರ್ಭದಲ್ಲಿ ಭಗವಾನ್ ಮಧ್ಯಮ ವರ್ಗದ ಸ್ವಾರ್ಥಿ ಗೃಹಿಣಿ (ಪತ್ನಿ) ಸುಧಾಳ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಆಗ ಸಿದ್ಧಾಂತ ಮತ್ತು ವೈಯಕ್ತಿಕ ಬದುಕು ಮುಖಾಮುಖಿಯಾಗುತ್ತದೆ. ಇಡೀ ನಾಟಕದ ಸೈದ್ಧಾಂತಿಕ ತಾಕಲಾಟವಿರುವುದೇ ಇಲ್ಲಿ. ಆ ಸನ್ನಿವೇಶವನ್ನು ಭಗವಾನ್ ಪಾತ್ರಧಾರಿ ತಕ್ಕಮಟ್ಟಿಗೆ ಚೆನ್ನಾಗಿಯೇ ನಿರ್ವಹಿಸಿದ್ದಾನೆ.

ಇಡೀ ನಾಟಕದಲ್ಲಿ ಎದ್ದು ಕಾಣುವ ಅಭಿನಯ ಪ್ರೊಫೆಸರ್ ಭಗವಾನ್‌ನ ಪತ್ನಿ ಸುಧಾಳದ್ದು. ಆಕೆಗೆ ತನ್ನ ಮನೆ, ಒಡವೆ, ಸೀರೆ, ಸಿನಿಮಾ ಮುಂತಾದ ಐಷಾರಾಮಿ ಬದುಕಿನ ಕನಸುಗಳು. ಒಂದೆಡೆ ಪ್ರೊಫೆಸರ್ ತನ್ನ ತರಗತಿಗಳಲ್ಲಿ, ಸಾರ್ವಜನಿಕ ಭಾಷಣಗಳಲ್ಲಿ ಮೇಲ್ಮಧ್ಯಮ ಮತ್ತು ಶ್ರೀಮಂತ ವರ್ಗದ ಸ್ವಾರ್ಥವನ್ನು ಹಿಗ್ಗಾಮುಗ್ಗಾ ಟೀಕಿಸುತ್ತಾನೆ. ಆದರೆ ಆತನ ಮನೆಯಲ್ಲಿ ಆತನ ಪತ್ನಿ ಅದಕ್ಕೆ ತದ್ವಿರುದ್ಧವಾಗಿ ಸ್ವಾರ್ಥಿ ಮೇಲ್ಮಧ್ಯಮ ವರ್ಗವನ್ನು ಪ್ರತಿನಿಧಿಸುತ್ತಾಳೆ.

ಸುಧಾಳ ಸಿಡುಕು, ಹಾವಭಾವ, ಅಳುಮೋರೆ, ಸ್ವಾರ್ಥ ಎಲ್ಲವೂ ಆ ಪಾತ್ರಕ್ಕೆ ನ್ಯಾಯವೊದಗಿಸಿದೆ. ನಾಟಕದ ಕೇಂದ್ರ ಪಾತ್ರ ಕ್ರಾಂತಿಕಾರಿ ವಿದ್ಯಾರ್ಥಿ ದಿನಕರನದ್ದು. ದಿನಕರ ಪಾತ್ರಧಾರಿ ರಮೇಶರ ಅಭಿನಯ ಆತನ ಡೈಲಾಗ್‌ಗಳು, ಶ್ರೀಮಂತರ, ಜಮೀನ್ದಾರರ, [illegible] ಯುವಕ್ರಾಂತಿಕಾರಿಗಳಿಗಿರುವ [illegible] ಸಮರ್ಥವಾಗಿ ಬಿಂಬಿಸುತ್ತಿತ್ತು.

ಸಾಹುಕಾರನ ಕೊಲೆ ಆರೋಪ ಹೊತ್ತ ದಿನಕರನು ಪ್ರೊಫೆಸರ್ ತನ್ನ ಮನೆಯೊಳಗೆ ಬಚ್ಚಿಟ್ಟು, ಬೀಗ ಹಾಕಿ ಪತ್ನಿ ಸಮೇತ ಸಿನಿಮಾಕ್ಕೆ ಹೋಗುತ್ತಾನೆ. ಆ ಸಂದರ್ಭ ಮನೆಗೆ ನುಗ್ಗುವ ಕಳ್ಳನ ಪಾತ್ರಧಾರಿಯ ಮೂಲಕ ಲಂಕೇಶರು ಸಮಾಜದ ಸಮಸ್ತ ದುಷ್ಟರಾದ ಪೋಲಿಸರು, ರಾಜಕಾರಣಿಗಳು, ಶ್ರೀಮಂತರು, ಕಾವಿಧಾರಿಗಳು ಎಲ್ಲರನ್ನೂ ಸಂಕೇತಿಸಿದ್ದಾರೆ. ಕಳ್ಳ ಇವೆಲ್ಲವನ್ನೂ ತನ್ನ ಕಳ್ಳನ ಪಾತ್ರದಲ್ಲಿ ಮತ್ತು ದಿನಕರನೊಂದಿಗಿನ ಸಂಭಾಷಣೆ ಮತ್ತು ಜಗಳದ ಮೂಲಕ ಸಮರ್ಥವಾಗಿ ಸಂಕೇತಿಸಿದ್ದಾನೆ. ತಮಾಷೆಯೇನೆಂದರೆ ಪಾತ್ರಧಾರಿಯ ಕೊರತೆಯಿಂದ ಒಮ್ಮೆ ಕಳ್ಳನ ಪಾತ್ರದಲ್ಲಿ ಅಭಿನಯಿಸಿದಾತನೇ ಮತ್ತೆ ಪೊಲೀಸನ ಪಾತ್ರದಲ್ಲಿ ರಂಗಕ್ಕೆ ಬರುತ್ತಾನೆ. ಒಂದರ್ಥದಲ್ಲಿ ಇದು ವ್ಯವಸ್ಥೆಗೆ ನೀಡುವ ಟಾಂಗ್ ಕೂಡ ಹೌದು. ಈ ವ್ಯವಸ್ಥೆಯಲ್ಲಿ ಕಳ್ಳನಿಗೂ, ದರೋಡೆಕೋರನಿಗೂ, ಪೊಲೀಸರಿಗೂ ಯಾವ ವ್ಯತ್ಯಾಸವೂ ಇಲ್ಲ ಎಂಬುದನ್ನು ಅದು ಚಿತ್ರಿಸಿದೆ.

ಹಲವಾರು ಮಿತಿಗಳ ಮಧ್ಯೆಯೂ ಈ ತಂಡದ ಪ್ರಯತ್ನವನ್ನು ನಾವು ಮೆಚ್ಚಲೇಬೇಕು. ಹವ್ಯಾಸಿ ಕಲಾವಿದರಿಂದ ವೃತ್ತಿಪರ ಕಲಾವಿದರ ಮಟ್ಟವನ್ನು ನಾವು ನಿರೀಕ್ಷಿಸಬಾರದು.



ಕ್ರಾಂತಿ ಬಂತು ಕ್ರಾಂತಿ ನಾಟಕವನ್ನು ವೀಕ್ಷಿಸಲು ಬಂದವರಲ್ಲಿ ಬಹುಪಾಲು ಮಂದಿ ಬರಹಗಾರರು, ಅಧ್ಯಾಪಕರು, ಎಡ ಮತ್ತು ಪ್ರಗತಿಪರ ಚಳವಳಿಗಳ ಕಾರ್ಯಕರ್ತರು. ಇದು ಸಮಕಾಲೀನ ರಾಜಕೀಯ ವಿಷಮುಗಳು ಮತ್ತು ಸ್ಥಿತ್ಯಂತರಗಳು ಸ್ವಘೋಷಿತ ಬುದ್ಧಿವಂತರಾದ ಮಂಗಳೂರಿಗರ ಮೇಲೆ ಯಾವುದೇ ಪ್ರಭಾವವನ್ನೂ ಬೀರಿಲ್ಲ ಎನ್ನುವುದನ್ನು ಸ್ಪಷ್ಟಪಡಿಸಿದೆ. ಮಂಗಳೂರಿನಲ್ಲಿ ಡಬಲ್ ಮೀನಿಂಗ್ ಕಾಮಿಡಿ ನಾಟಕಗಳಿಗೆ ಸಭಾಂಗಣ ಭರ್ತಿ ಪ್ರೇಕ್ಷಕರಿರುತ್ತಾರೆ. ಗಂಭೀರ ರಾಜಕೀಯ ವಸ್ತು ವಿಷಯ ಹೊಂದಿದ ಯಾವುದೇ ನಾಟಕಗಳಿಗೂ ಇತ್ತೀಚಿನ ವರ್ಷಗಳಲ್ಲಿ ಮಂಗಳೂರಿನಲ್ಲಿ ಪ್ರೇಕ್ಷಕರು ತೀರಾ ಕಡಿಮೆ ಎನ್ನುವುದು ನಮ್ಮ ಸಂವೇದನಾರಾಹಿತ್ಯವನ್ನು ಎತ್ತಿ ತೋರಿಸುತ್ತದೆ.

● ಇಸ್ಮತ್ ಪಜೀರ್

ಕಾಡನ್ನು ರಕ್ಷಿಸಿರುವವರು ಜನರೇ ಹೊರತು ಪರಿಸರವಾದಿಗಳಲ್ಲ



'ಪ್ರಜಾವಾಣಿ' ಪತ್ರಿಕೆಯ ಡಿಸೆಂಬರ್ 22, 2014ರ ಸಂಚಿಕೆಯಲ್ಲಿ 'ಪಶ್ಚಿಮಘಟ್ಟಗಳ ಸಂರಕ್ಷಣೆಗೆ ವಿರೋಧ ಸರಿಯೇ' ಎಂಬ ತಲೆಬರಹದ ಲೇಖನ ಪ್ರಕಟವಾಗಿತ್ತು. ಈ ಲೇಖನದ ಕರ್ತೃ ಡೋಂಗಿ ಪರಿಸರ ವಾದಿಗಳಲ್ಲಿ ಒಬ್ಬರಾದ ಹೆಚ್.ಎ.ಕಿಶೋರ್‌ಕುಮಾರ್ ಎಂಬುದು ಗಮನಾರ್ಹ. ಕಸ್ತೂರಿರಂಗನ್ ವರದಿಗೆ ವಿರೋಧ ಅಂದರೆ ಪಶ್ಚಿಮಘಟ್ಟಗಳ ಸಂರಕ್ಷಣೆಗೆ ವಿರೋಧ ಎಂಬ ಕುಚೋದ್ಯದ ಅಂಶ ಆ ಲೇಖನದಲ್ಲಿ ಎದ್ದು ಕಾಣುತ್ತದೆ. ಕಸ್ತೂರಿರಂಗನ್ ವರದಿಯನ್ನ ವಿರೋಧಿಸುವವರು ಪಶ್ಚಿಮಘಟ್ಟಗಳ ಸಂರಕ್ಷಕರೇ ವಿನಹ, ಸಂರಕ್ಷಣೆಯನ್ನು ವಿರೋಧಿಸುವವರಲ್ಲ. ಪಶ್ಚಿಮಘಟ್ಟಗಳು ಮಾತ್ರವಲ್ಲ, ಇಡೀ ದೇಶದ ಪರಿಸರವನ್ನ ಉಳಿಸಿ, ಬೆಳೆಸಿಕೊಂಡು ಬಂದವರು ಈ ಭೂ ಪ್ರದೇಶದ ನಿವಾಸಿಗಳಲ್ಲದೆ, ಡೋಂಗಿ ಪರಿಸರವಾದಿಗಳಲ್ಲ. ಪರಿಸರ ರಕ್ಷಣೆಯನ್ನು ಡೋಂಗಿ ಪರಿಸರವಾದಿಗಳಿಗೆ ಯಾರೂ ಗುತ್ತಿಗೆಗೆ ಬರೆದುಕೊಟ್ಟಿಲ್ಲ. ಕಸ್ತೂರಿರಂಗನ್ ವರದಿಯನ್ನ ವಿರೋಧಿಸುತ್ತಿರುವುದು ಪಶ್ಚಿಮಘಟ್ಟ ತಪ್ಪಲು ಪ್ರದೇಶದ ನಿವಾಸಿಗಳ ಹಿತ ಕಾಯುವುದಕ್ಕೆ ಮಾತ್ರ ಅಲ್ಲ, ಪರಿಸರ ರಕ್ಷಣೆ ಗುರಿಯನ್ನೂ ಕಸ್ತೂರಿರಂಗನ್ ವರದಿಯ ವಿರೋಧಿಗಳು ಇಟ್ಟುಕೊಂಡಿದ್ದಾರೆ. ಕಸ್ತೂರಿರಂಗನ್ ವರದಿಯನ್ನು ಸ್ವಾಗತಿಸುವ ಡೋಂಗಿ ಪರಿಸರವಾದಿಗಳು ಪರಿಸರ ರಕ್ಷಣೆಯ ಕಾಳಜಿಯಿಂದ ಅದನ್ನು ಸ್ವಾಗತಿಸುತ್ತಿಲ್ಲ. ಕೇವಲ ತಮ್ಮ ಸ್ವಾರ್ಥಕ್ಕಾಗಿ, ತಮ್ಮ ಬದುಕನ್ನ ಬೆವರಿಳಿಸದೆ ಬಂಗಾರ ಮಾಡಿಕೊಳ್ಳುವುದಕ್ಕಾಗಿ ವಿದೇಶಿ ದೇಣಿಗೆಯ ಮೇಲೆ ಕಣ್ಣಿಟ್ಟು, ಮಾಧವ ಗಾಡ್ಗಿಲ್ ವರದಿ ಮತ್ತು ಕಸ್ತೂರಿರಂಗನ್ ವರದಿಯನ್ನ ಸ್ವಾಗತಿಸುತ್ತಿದ್ದಾರೆ ಎಂಬುದಕ್ಕೆ ಸಾಕಷ್ಟು ಸಮರ್ಥನೆಗಳನ್ನು ನೀಡಬಹುದು.

ಪಶ್ಚಿಮಘಟ್ಟ ಅಂದರೆ ಯಾವುದು? ಇದರ ವ್ಯಾಖ್ಯಾನ ಏನು? ಇದರ ಗಡಿ ಪ್ರದೇಶ ಯಾವುದು? ಈ ಯಾವ ಪ್ರಶ್ನೆಗೆ ಸ್ಪಷ್ಟ ಉತ್ತರ ದೊರೆಯುತ್ತಿಲ್ಲ, ಪಶ್ಚಿಮಘಟ್ಟದ ನೇರೆಯನ್ನು ಗುರುತಿಸಿ, ಒಂದು ನಕ್ಷೆ ಕೂಡ ಇದುವರೆಗೆ ತಯಾರಿಸಿರುವುದಿಲ್ಲ, ಪಶ್ಚಿಮಘಟ್ಟ ಎಂಬ ಶಬ್ದದ ವ್ಯಾಖ್ಯಾನ ಸಂದರ್ಭಕ್ಕೆ ತಕ್ಕಂತೆ ಮಾಡಲ್ಪಟ್ಟಿದೆ. ಪಶ್ಚಿಮಘಟ್ಟ ಅಂದರೆ ಯಾವುದು? ಅದರ ಗಡಿ ಯಾವುದು? ಎಂಬುದರ ಬಗ್ಗೆ ಸ್ಪಷ್ಟೀಕರಣ ಮೊದಲು ನೀಡಬೇಕಾಗಿದೆ. ಕಸ್ತೂರಿರಂಗನ್ ವರದಿ ಪ್ರಕಾರವೇ ಮಹಾರಾಷ್ಟ್ರದ ಗಡಿಯಲ್ಲಿರುವ ತಪ್ತಿ ನದಿ ಕಣಿವೆಯಿಂದ ತಮಿಳುನಾಡಿನ ಕನ್ಯಾಕುಮಾರಿಯವರೆಗೆ ಪಸರಿಸಿರುವ 1,600 ಕಿ.ಮೀ. ಉದ್ದದ ಮತ್ತು 10 ಕಿ.ಮೀ. ಅಗಲದ ಭೂಪ್ರದೇಶ ಪಶ್ಚಿಮಘಟ್ಟ ಎಂದು ಕರೆಯಲ್ಪಡುತ್ತದೆ. ಪಾಲಘಾಟ್‌ನಲ್ಲಿ ಒಂದು ಸಣ್ಣ ಗ್ಯಾಪ್ ಬಿಟ್ಟರೆ ಪಶ್ಚಿಮಘಟ್ಟ 1,600 ಕಿ.ಮೀ ದೂರದವರೆಗೆ ನಿರಂತರವಾಗಿ ಸಾಗುತ್ತದೆ. ಈ 1,600 ಕಿ.ಮೀ. ಉದ್ದದ 10 ಅಗಲದ ಭೂ ಪ್ರದೇಶದ ಮೇರೆಯನ್ನು ಗುರುತಿಸಿ, ನಕ್ಷೆಯನ್ನು ತಯಾರಿಸಬೇಕಾದ್ದು ಸಂಬಂಧಪಟ್ಟವರ ಆದ್ಯ ಕರ್ತವ್ಯವಾಗಿದೆ. ಈ ಭೂಪ್ರದೇಶದಲ್ಲಿ ಶೇ. 37ರಷ್ಟು ಪ್ರದೇಶವನ್ನ ನ್ಯಾಚುರಲ್ ಲ್ಯಾಂಡ್‌ಸ್ಕೇಪ್ ಎಂದು ಕಸ್ತೂರಿ ರಂಗನ್ ವರದಿ ಹೇಳಿದೆಯಾದರೂ, ಶೇ. 37ರಷ್ಟು ನ್ಯಾಚುರಲ್ ಲ್ಯಾಂಡ್‌ಸ್ಕೇಪ್‌ನ ಗಡಿಯ ಬಗ್ಗೆ ಸ್ಪಷ್ಟೀಕರಣ ಇಲ್ಲ.

ವಾಸ್ತವದಲ್ಲಿ ಕಸ್ತೂರಿರಂಗನ್ ವರದಿಯಲ್ಲಿ ನ್ಯಾಚುರಲ್ ಲ್ಯಾಂಡ್‌ಸ್ಕೇಪ್ ಎಂದು ಯಾವ ಭೂಪ್ರದೇಶಕ್ಕೆ ಹೇಳಲಾಗಿದೆಯೋ ಅದು ಮಾತ್ರ ಪಶ್ಚಿಮಘಟ್ಟ. ಉಳಿದದ್ದು ಪಶ್ಚಿಮಘಟ್ಟದ ತಪ್ಪಲು ಪ್ರದೇಶ. ಅದನ್ನ ಕಸ್ತೂರಿರಂಗನ್ ವರದಿಯಲ್ಲಿ ಕಲ್ಚರಲ್ ಲ್ಯಾಂಡ್ ಸ್ಕೇಪ್ ಎನ್ನುವುದಾದರೆ, ಇದರ ಗಡಿ ನಿಗದಿಪಡಿಸಿರುವುದಿಲ್ಲ, ಈ ಬಗ್ಗೆ ಪ್ರತ್ಯೇಕ ನಕ್ಷೆ ಕೂಡ ದೊರೆಯುವುದಿಲ್ಲ, ಹೀಗೆ ಎಲ್ಲವನ್ನ ಅಸ್ಪಷ್ಟವಾಗಿಟ್ಟು ವರದಿಯ ಶಿಫಾರಸ್ಸುಗಳನ್ನ ನ್ಯಾಚುರಲ್ ಲ್ಯಾಂಡ್‌ಸ್ಕೇಪ್‌ಗೆ ಮಾತ್ರ ಜಾರಿಗೊಳಿಸಬೇಕೆಂದು ಕಸ್ತೂರಿರಂಗನ್ ವರದಿ ಹೇಳಿರುವುದಾದರೂ, ಅದೇ ವರದಿಯಲ್ಲಿ ಪರಿಸರ ಸೂಕ್ಷ್ಮ ಪ್ರದೇಶವೆಂದು ಘೋಷಿಸಲು ಶಿಫಾರಸ್ಸು ಮಾಡಿ ಪಟ್ಟಿ ಮಾಡಿರುವ ಎಲ್ಲಾ ಭೂಪ್ರದೇಶಗಳು ಕಲ್ಚರಲ್ ಲ್ಯಾಂಡ್‌ಸ್ಕೇಪ್‌ನ ವ್ಯಾಪ್ತಿಯೊಳಗೆ ಬರುತ್ತವೆ ಎಂಬುದನ್ನ ಗಮನಿಸಿದಾಗ, ಕಸ್ತೂರಿರಂಗನ್ ವರದಿ ಕೇವಲ ಶೇ. 37ರಷ್ಟು ಪಶ್ಚಿಮಘಟ್ಟದ ಭೂಪ್ರದೇಶಗಳಿಗೆ ಅನ್ವಯ ಆಗುತ್ತದೆ ಎನ್ನುವುದು ಜನರ ದಾರಿ ತಪ್ಪಿಸುವುದಾಗಿದೆ. ನಿಜಸ್ಥಿತಿಯಲ್ಲಿ ಪಶ್ಚಿಮಘಟ್ಟ ಬೇರೆ, ಪಶ್ಚಿಮ ಘಟ್ಟದ ತಪ್ಪಲು ಪ್ರದೇಶ ಬೇರೆ. ಪಶ್ಚಿಮಘಟ್ಟದ ತಪ್ಪಲು ಪ್ರದೇಶವನ್ನೇ ಕಲ್ಚರಲ್ ಲ್ಯಾಂಡ್‌ಸ್ಕೇಪ್ ಎಂದು ಹೇಳಬೇಕಾಗಿದೆ. ಈ ತಪ್ಪಲು ಪ್ರದೇಶದಲ್ಲಿ ಕಳೆದ ಸುಮಾರು ಎರಡು ಸಾವಿರ ವರ್ಷಗಳಿಗೂ ಮೇಲ್ಪಟ್ಟು ಜನ ವಸತಿ ಇದೆ. ಭೂ ಹಿಡುವಳಿಯ ಒಡೆತನ ಹೊಂದಿದ ಕೃಷಿಕರಿದ್ದಾರೆ. ಕೃಷಿ ಕಾರ್ಮಿಕರಿದ್ದಾರೆ. ಭೂರಹಿತ ಕುಶಲಕರ್ಮಿಗಳಿದ್ದಾರೆ ಹಾಗೂ ಆದಿವಾಸಿಗಳಿದ್ದಾರೆ. ನ್ಯಾಚುರಲ್ ಲ್ಯಾಂಡ್‌ಸ್ಕೇಪ್ ಎನ್ನುವ ಪಶ್ಚಿಮಘಟ್ಟದ ಭೂ ಪ್ರದೇಶದಲ್ಲಿ ಕೆಲವು ಎನ್‌ಕ್ಲೋಸರ್ ಗಳನ್ನ ಬಿಟ್ಟರೆ ಖಾಸಗಿ ಮಾಲಿಕತ್ವದ ಜಮೀನುಗಳಿಲ್ಲ. ಅವುಗಳೆಲ್ಲವೂ ಅರಣ್ಯ ಇಲಾಖೆಯ ಅಧೀನದಲ್ಲಿರುವ ದಾಖಲಾಗಿರುವ ಅರಣ್ಯ ಪ್ರದೇಶಗಳಾಗಿವೆ. ಅಲ್ಲಿ ಆದಿವಾಸಿಗಳನ್ನ ಬಿಟ್ಟರೆ ಉಳಿದ ಜನನಿವಾಸವಿಲ್ಲ, ಈ ಕಾರಣದಿಂದ ನ್ಯಾಚುರಲ್ ಲ್ಯಾಂಡ್‌ಸ್ಕೇಪ್ ಮತ್ತು ಕಲ್ಚರಲ್ ಲ್ಯಾಂಡ್‌ಸ್ಕೇಪ್ ಇದರ ನಡುವಿನ ನೇರೆಯನ್ನ ಸರ್ವೆಯಿಂದ ಗುರುತಿಸಿ ಅದರ ನಕ್ಷೆಯನ್ನ ಬಿಡುಗಡೆ ಮಾಡದ ಹೊರತು ಕಸ್ತೂರಿರಂಗನ್ ವರದಿ ಜಾರಿ ಮಾಡುವ ಪ್ರಶ್ನೆ ಉದ್ಭವಿಸಲೇಬಾರದು.


ಈಗ ಮತ್ತೊಂದು ಪ್ರಾಮುಖ್ಯವಾದ ಪ್ರಶ್ನೆ ಏನೆಂದರೆ ಕಸ್ತೂರಿರಂಗನ್ ವರದಿ ಪಶ್ಚಿಮಘಟ್ಟಗಳ ಸಂರಕ್ಷಣೆಗೆ ಜಾರಿಯ ಅಗತ್ಯವಿದೆಯೇ. ಅದಿಲ್ಲದಿದ್ದರೆ ಪಶ್ಚಿಮಘಟ್ಟದ ರಕ್ಷಣೆ ಸಾಧ್ಯವಿಲ್ಲವೆ? ಹಾಲಿ ಕಾನೂನಿನ ಅಡಿಯಲ್ಲಿಯೇ ಪಶ್ಚಿಮಘಟ್ಟವನ್ನ ರಕ್ಷಿಸಲು ಸಾಧ್ಯವಿಲ್ಲವೇ? ಹಾಲಿ ಕಾನೂನಿನ ಅಡಿಯಲ್ಲಿ ರಕ್ಷಿಸಲಾಗದ ಪಶ್ಚಿಮಘಟ್ಟವನ್ನ ಕಸ್ತೂರಿರಂಗನ್ ವರದಿ ರಕ್ಷಿಸುತ್ತದೆ ಎನ್ನುವುದು ಆತ್ಮವಂಚನೆಯಾಗುತ್ತದೆ. ಪಶ್ಚಿಮಘಟ್ಟ ಭೂಪ್ರದೇಶ ವಿನಾಶದ ಹಾದಿ ಏನಾದರೂ ಹಿಡಿದಿದ್ದರೆ ಅದಕ್ಕೆ ಕಾನೂನಿನ ಕೊರತೆ ಕಾರಣ ಅಲ್ಲ, ಆಡಳಿತದಲ್ಲಿನ ಭ್ರಷ್ಟಾಚಾರ, ದುರಾಡಳಿತ, ದಕ್ಷತೆಯ ಕೊರತೆ, ಇಚ್ಛಾಶಕ್ತಿಯ ಕೊರತೆ ಇದಕ್ಕೆ ಕಾರಣ. ಇದನ್ನು ನೀಗಿಸದೇ ಕಸ್ತೂರಿರಂಗನ್ ವರದಿಯಿಂದ ಪಶ್ಚಿಮಘಟ್ಟ ರಕ್ಷಣೆಯಾಗುತ್ತದೆ ಎನ್ನುವುದು ಸೋಗಲಾಡಿತನವಲ್ಲದೆ ಮತ್ತೇನೂ ಅಲ್ಲ, ಪಶ್ಚಿಮಘಟ್ಟಗಳ ರಕ್ಷಣೆಗೆ ಮಾಧವ ಗಾಡ್ಗಿಲ್ ವರದಿಯ ಅಗತ್ಯವಾಗಲಿ, ಕಸ್ತೂರಿರಂಗನ್ ವರದಿಯ ಅಗತ್ಯವಾಗಲಿ ಕಂಡುಬರುವುದಿಲ್ಲ, ಹೀಗಿದ್ದರೂ ಇಂತಹ ವರದಿಗಳನ್ನ ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಹಿತ ಕಾಯ್ದುಕೊಳ್ಳುವ ದೃಷ್ಟಿಯಿಂದ ಮಾತ್ರ ಹುಟ್ಟು ಹಾಕಿದ್ದಾರೆ ಎನ್ನುವುದನ್ನ ತಿಳಿದುಕೊಳ್ಳಲಾರದಷ್ಟು ದಡ್ಡರು ನಾವಲ್ಲ.



ಮಾಧವ ಗಾಡ್ಗಿಳ್ ಸಮಿತಿ ನೇಮಕ ಯಾರು ಮಾಡಿದರು? ಏತಕ್ಕಾಗಿ ಈ ಸಮಿತಿಯ ರಚನೆಯಾಯಿತು? ಇದರ ಅವಶ್ಯಕತೆ ಏನಿತ್ತು? ಇವುಗಳೆಲ್ಲವೂ ನಿಗೂಢ. ಇದ್ದಕ್ಕಿದ್ದಂತೆ ಮಾಧವ ಗಾಡ್ಗಿಳ್ ಸಮಿತಿ ರಚನೆಯಾಯಿತು. ಇದು ಬಹಿರಂಗವಾಗಿ ಪ್ರಕಟವಾದಾಗಲೇ ಪಶ್ಚಿಮಘಟ್ಟದ ತಪ್ಪಲಿನಲ್ಲಿ ವಾಸಿಸುವ 20 ಮಿಲಿಯ ಜನಗಳಿಗೆ ಇದು ತಿಳಿದದ್ದು, ಅಂದರೆ ಈ ಪ್ರದೇಶದ ನಿವಾಸಿಗಳ ಜೊತೆ ವಿಚಾರ ವ್ಯವಸ್ಥೆ ಮಾಡದೆಯೇ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇನೇ ಮತ್ತು ಅವರನ್ನು ಸಂಪೂರ್ಣ ಕತ್ತಲಲ್ಲಿಟ್ಟು ಮಾಧವ ಗಾಡ್ಗಿಳ್ ಸಮಿತಿ ರಚನೆಯಾಯಿತು. ಡೋಂಗಿ ಪರಿಸರವಾದಿಗಳು ಸರಕಾರದ ಜೊತೆಯಲ್ಲಿ ವ್ಯವಹಾರ ಕುದುರಿಸಿಕೊಂಡು ಈ ಸಮಿತಿ ರಚನೆಗೆ ಕಾರಣರಾದರು ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ.

ಹೀಗೆ ಸರಕಾರದ ಮೇಲೆ ಪ್ರಭಾವ ಬೀರಿ ಒಂದು ಸಮಿತಿಯನ್ನ ರಚಿಸಿ, ಆ ಸಮಿತಿಯ ಮೂಲಕ ಡೋಂಗಿ ಪರಿಸರವಾದಿಗಳು ತಮ್ಮ ಸ್ವಂತ ಹಿತ ಕಾಯ್ದುಕೊಳ್ಳುವ ಉದ್ದೇಶ ಹೊಂದಿದ್ದಾರೆ ಎಂದು ನಾನು ದೃಢವಾಗಿ ನಂಬುತ್ತೇನೆ. ಅಷ್ಟಕ್ಕೂ ಮಾಧವ ಗಾಡ್ಗಿಳ್ ಯಾರು? ಅವರು ಅನೇಕ ಸರಕಾರೇತರ ಸಂಸ್ಥೆಯಲ್ಲಿ ಸಹಭಾಗಿತ್ವ ಹೊಂದಿದವರಾಗಿದ್ದಾರೆ. ಆ ಮೂಲಕ ಲೆಕ್ಕಕ್ಕೆ ದೊರೆಯದಷ್ಟು ವಿದೇಶಿ ದೇಣಿಗೆಯ ಲಾಭ ಪಡೆಯುವುದರಲ್ಲಿ ಒಬ್ಬರಾಗಿದ್ದಾರೆ. ಹೀಗೆ ಲಾಭಕೋರ, ವಿದೇಶಿ ದೇಣಿಗೆಯ ಮೇಲೆ ಕಣ್ಣಿಟ್ಟಿರುವ ಸರಕಾರೇತರ ಸಂಸ್ಥೆಯ ಜೊತೆ ಸಂಪರ್ಕ ಇರುವ ಡೋಂಗಿ ಪರಿಸರವಾದಿಗಳಲ್ಲಿ ಅಗ್ರಗಣ್ಯರಲ್ಲೊಬ್ಬರಾದ ಮಾಧವ ಗಾಡ್ಗಿಲ್‌ರನ್ನ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸುವ ಅಗತ್ಯವಂತೂ ಇರಲಿಲ್ಲ, ಪಶ್ಚಿಮಘಟ್ಟದ ರಕ್ಷಣೆ ಯಾವ ಸಮಿತಿಯಿಂದಲೂ ಮತ್ತು ಯಾವ ಡೋಂಗಿ ಪರಿಸರವಾದಿಗಳಿಂದಲೂ ಸಾಧ್ಯವಾಗುವುದಿಲ್ಲ, ಇದು ಸಾಧ್ಯವಾಗಬೇಕಾದರೆ ಈ ಭೂ ಪ್ರದೇಶದಲ್ಲಿ ವಾಸಿಸುವ ಜನರ ಸಹಕಾರ, ಸಹಭಾಗಿತ್ವ, ಪಾಲುಗಾರಿಕೆ ಅಗತ್ಯವಾಗಿ ಬೇಕಾಗಿದೆ. ಹೀಗಿರುವಾಗ ಸಂಪೂರ್ಣವಾಗಿ ಈ ಜನರನ್ನ ಕತ್ತಲೆಯಲ್ಲಿಟ್ಟು, ಕೆಲವು ಡೋಂಗಿ ಪರಿಸರವಾದಿಗಳು ಸರಕಾರದ ಮೇಲೆ ಪ್ರಭಾವಬೀರಿ, ಬೇಕಿಲ್ಲದ ಸಮಿತಿಗಳ ಮೂಲಕ ತಮಗೆ ಅನುಕೂಲವಾಗುವಂತೆ ವರದಿಯನ್ನು ಸೃಷ್ಟಿಸಿಕೊಂಡು ಪಶ್ಚಿಮಘಟ್ಟ ರಕ್ಷಿಸುವುದು ಸಾಧ್ಯವಿಲ್ಲ, ಯಾವ ವರದಿಯೂ ಇಲ್ಲದೆ ಡೋಂಗಿ ಪರಿಸರವಾದಿಗಳನ್ನ ದೂರ ಇಟ್ಟು, ಸಂಬಂಧಪಟ್ಟವರು ಈ ಭೂ ಪ್ರದೇಶದಲ್ಲಿ ವಾಸಿಸುವ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರನ್ನು ಮೋಟಿವೇಟ್ ಮಾಡಿ ಅವರ ಪಾಲುಗಾರಿಕೆ ಮತ್ತು ಸಹಕಾರದಿಂದ ಪಶ್ಚಿಮಘಟ್ಟ ರಕ್ಷಣೆ ಮಾಡುವ ದಿಸೆಯಲ್ಲಿ ಕಾರ್ಯಕ್ರಮಗಳನ್ನ ರೂಪಿಸಿದರೆ, ಪಶ್ಚಿಮಘಟ್ಟದ ರಕ್ಷಣೆ ಮತ್ತು ಆ ಮೂಲಕ ಪರಿಸರದ ರಕ್ಷಣೆ ಮತ್ತು ವೃದ್ಧಿ ಅಭಿವೃದ್ಧಿಯ ಜೊತೆಯಲ್ಲಿಯೇ ಆಗುತ್ತದೆ. ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರಕಾರದವರು ಎಲ್ಲಾ ಸಮಿತಿಗಳನ್ನ ಮತ್ತು ಅದರ ವರದಿಗಳನ್ನ ರದ್ದು ಪಡಿಸಿ, ಜನಸಂಪರ್ಕದ ಮೂಲಕ, ಜನರನ್ನ ವಿಶ್ವಾಸಕ್ಕೆ ತೆಗೆದುಕೊಂಡು, ಜನರ ಸಹಭಾಗಿತ್ವದಲ್ಲಿ ಪಶ್ಚಿಮಘಟ್ಟ ರಕ್ಷಣೆಯ ಕಾರ್ಯಕ್ರಮಗಳನ್ನ ರೂಪಿಸಬೇಕೇ ವಿನಹ, ಕಸ್ತೂರಿರಂಗನ್ ವರದಿಯಂತಹ ಹಾನಿಕಾರಕ ವರದಿಗಳನ್ನ ಜಾರಿ ಮಾಡುವುದರ ಬಗ್ಗೆ ಮಾತನಾಡಬಾರದು ಎಂಬುದು ನನ್ನ ದೃಢವಾದ ನಂಬಿಕೆಯಾಗಿದೆ.

ಪಶ್ಚಿಮಘಟ್ಟ ತಪ್ಪಲು ಪ್ರದೇಶದಲ್ಲಿ ಕೃಷಿಕರು ಈಗಾಗಲೇ ಸಂಕಷ್ಟದಲ್ಲಿದ್ದು ಕೃಷಿಯಿಂದ ಪಲಾಯನ ಮಾಡಲು ಅನ್ಯ ಮಾರ್ಗದ ಅನ್ವೇಷಣೆಯಲ್ಲಿ ತೊಡಗಿದ್ದಾರೆ. ಈ ಕೃಷಿಕರಿಗೆ, ಕೃಷಿ ಕಾರ್ಮಿಕರಿಗೆ ಮತ್ತು ಈ ಪ್ರದೇಶದಲ್ಲಿ ವಾಸಿಸುವ ಆದಿವಾಸಿಗಳಿಗೆ ಹಾಗೂ ಭೂಹೀನ ಕುಶಲಕರ್ಮಿಗಳಿಗೆ ಉಸಿರು ಕಟ್ಟುವ ವಾತಾವರಣ ನಿರ್ಮಾಣ ಮಾಡಿ, ಅವರು ತಾವಾಗಿಯೇ ಈ ಪ್ರದೇಶದಿಂದ ಪಲಾಯನ ಮಾಡಿ, ಇಡೀ ಭೂಪ್ರದೇಶವನ್ನ ಅರಣ್ಯವನ್ನಾಗಿಸಿ, ಅದರ ಆಡಳಿತದಲ್ಲಿ ಹಿಡಿತ ಸಾಧಿಸುವ ದೂರಗಾಮಿ ಕಾರ್ಯಕ್ರಮ ಡೋಂಗಿ ಪರಿಸರವಾದಿಗಳದ್ದಾಗಿದೆ ಎನ್ನುವುದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ. ಈ ಬಗ್ಗೆ ಅಂತರರಾಷ್ಟ್ರೀಯ ಪಿತೂರಿ ಒಂದಿದೆ ಎಂದು ನಾನು ಮನಗಾಣುತ್ತಿದ್ದೇನೆ. ಆ ಪಿತೂರಿಯ ಅಂತಿಮ ಗುರಿಯೇನೆಂದರೆ, ಪಶ್ಚಿಮಘಟ್ಟ ಭೂ ಪ್ರದೇಶದಲ್ಲಿರುವಂತಹ ಎಲ್ಲಾ ಜನರನ್ನ ಅವರಿಗೆ ಪರೋಕ್ಷ ಹಿಂಸೆ ನೀಡುವುದರ ಮೂಲಕ ಅವರೇ ಪಲಾಯನ ಮಾಡುವಂತೆ ಮಾಡಿ, ಆ ಮೂಲಕ ಇಡೀ ಭೂಪ್ರದೇಶವನ್ನ ಅರಣ್ಯವನ್ನಾಗಿಸಿ ಅದರ ಆಡಳಿತದಲ್ಲಿ ಹಿಡಿತ ಸಾಧಿಸುವುದಾಗಿದೆ. ಅವರ ಈ ಗುರಿಯನ್ನ ಡೋಂಗಿ ಪರಿಸರವಾದಿಗಳು ತಲುಪಿದರೆ, ಪಶ್ಚಿಮಘಟ್ಟದ ಭೂಪ್ರದೇಶದ ಆಡಳಿತ ಪರೋಕ್ಷವಾಗಿ ವಿದೇಶಿಯರ ಕೈಸೇರಿ, ಈ ಭೂಪ್ರದೇಶ ವಿದೇಶಿ ವಸಾಹತು ಆಗುತ್ತದೆ. ಅದು ಆದಾಗ ವಿದೇಶಿ ದೇಣಿಗೆ ಪಡೆಯುವ ಸರಕಾರೇತರ ಸಂಸ್ಥೆಗಳಿಗೆ ಸುಗ್ಗಿಯಾಗಿ ಅದರಲ್ಲಿ ತೊಡಗಿಸಿಕೊಂಡವರ ಬದುಕು ಬಂಗಾರವಾಗುತ್ತದೆ. ಇತಿಹಾಸದಲ್ಲಿ ಇಂತಹ ಬೆಳವಣಿಗೆ ಹೊಸದೇನೂ ಅಲ್ಲ, ಹಿಂದೆಯೂ ನಡೆದಿದೆ, ಮುಂದೆಯೂ ನಡೆಯುತ್ತದೆ. ಇದನ್ನ ಮನಸ್ಸಿನಲ್ಲಿಟ್ಟುಕೊಂಡು, ಈ ಡೋಂಗಿ ಪರಿಸರವಾದಿಗಳ ಪಿತೂರಿಯನ್ನ ವಿಫಲಗೊಳಿಸಿ, ದೇಶದ ಹಿತವನ್ನ ಕಾಪಾಡ ಬೇಕಾದದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ದೃಷ್ಟಿಯಿಂದ



ಕಸ್ತೂರಿರಂಗನ್ ವರದಿ ಜಾರಿಯನ್ನ ತಡೆಯುವುದು ಅತ್ಯವಶ್ಯಕವಾಗಿದೆ.

ಕೊಡಗು ಜಿಲ್ಲೆಯ ಎಲ್ಲಾ ಪ್ರದೇಶವನ್ನು ಸೂಕ್ಷ್ಮ ಪರಿಸರ ತಾಣ ಎಂದು ಘೋಷಣೆ ಮಾಡಬೇಕೆಂದು ಡೋಂಗಿ ಪರಿಸರವಾದಿ ಕರ್ನಲ್ ಮುತ್ತಣ್ಣ ಹೇಳಿಕೆ ನೀಡಿದ್ದಾರೆ. ಅಂದರೆ ಕೊಡಗಿನಲ್ಲಿ ಸಾಂಸ್ಕೃತಿಕ ವಲಯ (ಜನ ವಾಸಿಸುವ ಪ್ರದೇಶ) ಇಲ್ಲ ಎಂದು ಅವರು ಹೇಳಿದಂತೆ ಆಗುತ್ತದೆ. ಇದರಿಂದಲೇ ಈ ಕಪಟ ಪರಿಸರವಾದಿಗಳ ಡೋಂಗಿತನ ಬಯಲಾಗುತ್ತದೆ. ಅವರ ಕಪಟತನಕ್ಕೆ ಇದಕ್ಕಿಂತಲೂ ಸಾಕ್ಷಿ ಬೇಕೇ?

ಅರಣ್ಯನಾಶದ ಬಗ್ಗೆ ಸಾಕಷ್ಟು ಚರ್ಚೆ ಎಲ್ಲೆಡೆ ನಡೆದಿದೆ. ನಡೆಯುತ್ತಿದೆ. ಗೋದಾವರ್ಮನ್ ಪ್ರಕರಣದಲ್ಲಿ ನೀಡಿದ ಸುಪ್ರೀಂ ಕೋರ್ಟಿನ ತೀರ್ಪಿನ ಅನ್ವಯ ಅರಣ್ಯ ಪರಿಸ್ಥಿತಿಯನ್ನು ಅಧ್ಯಯನ ನಡೆಸಿ ವರದಿ ನೀಡಲು ಕರ್ನಾಟಕ ಸರಕಾರ ಒಂದು ತಜ್ಞರ ಸಮಿತಿಯನ್ನು ನೇಮಿಸಿತ್ತು, ಆ ತಜ್ಞರ ಸಮಿತಿ ಅರಣ್ಯನಾಶದ ಬಗ್ಗೆ ಈ ರೀತಿ ಹೇಳಿದೆ: "ದಾಖಲಾದ ಅರಣ್ಯ ಇಲಾಖೆಯ ಹಿಡಿತದಲ್ಲಿರುವ ಅರಣ್ಯಗಳ ಪೈಕಿ ಶೇ. 40ರಷ್ಟು ಅರಣ್ಯ ಪ್ರದೇಶ ನಾಶವಾಗಿದೆ."

ಮತ್ತೆ ಅದೇ ಸಮಿತಿ ಮುಂದುವರೆದು "ಖಾಸಗಿ ಒಡೆತನಕ್ಕೆ ಒಳಪಟ್ಟಿರುವ ಭೂ ಪ್ರದೇಶದಲ್ಲಿ ವಾಣಿಜ್ಯ ಚಟುವಟಿಕೆ ಹಾಗೂ ಮರಗಳ ಹನನ ನಡೆದಿರುವುದರ ಮೂಲಕ ಅರಣ್ಯ ನಾಶವಾಗಿದೆ. ಮರಗಳಿರುವ ಖಾಸಗಿ ಭೂ ಪ್ರದೇಶಗಳೆಲ್ಲವನ್ನೂ ಸರಕಾರ ಅರಣ್ಯವನ್ನಾಗಿ ಪರಿವರ್ತಿಸಬೇಕು."

ಮರಗಳಿರುವ ಖಾಸಗಿ ಜಮೀನುಗಳೆಲ್ಲವನ್ನೂ ಅರಣ್ಯವನ್ನಾಗಿ ಪರಿವರ್ತಿಸ ಬೇಕು ಎನ್ನುವುದರ ಬಗ್ಗೆ ಈ ತಜ್ಞರ ವರದಿ ಒತ್ತು ನೀಡುತ್ತಿದೆಯೇ ವಿನಹ, ಅರಣ್ಯ ಇಲಾಖೆಯ ಆಡಳಿತಕ್ಕೆ ಒಳಪಟ್ಟ ದಾಖಲಾದ ಅರಣ್ಯ ಪ್ರದೇಶದಲ್ಲಿ ಅರಣ್ಯ ನಾಶವಾಗಿರುವುದನ್ನ ಸರಿಪಡಿಸಿ, ಆ ಭೂ ಪ್ರದೇಶವನ್ನು ಮತ್ತೆ ಪೂರ್ಣ ಅರಣ್ಯವನ್ನಾಗಿ ಪರಿವರ್ತಿಸುವ ಕಾರ್ಯಕ್ರಮದ ಬಗ್ಗೆಯಾಗಲಿ, ಅರಣ್ಯ ಇಲಾಖೆಯ ಆಡಳಿತದಲ್ಲಿರುವ ಅರಣ್ಯ ಪ್ರದೇಶ ನಾಶವಾಗಿರುವುದಕ್ಕೆ ಕಾರಣ ಏನು? ಇದಕ್ಕೆ ಹೊಣೆಗಾರರು ಯಾರು? ಎಂಬುದನ್ನ ತನಿಖೆ ನಡೆಸಿ ತಿಳಿದುಕೊಳ್ಳುವುದರ ಬಗ್ಗೆಯಾಗಲಿ, ಯಾವುದೇ ಕಾರ್ಯಕ್ರಮವನ್ನು ಸೂಚಿಸುತ್ತಿಲ್ಲ. ಅಂದರೆ ನಾಶವಾಗಿರುವ ಅರಣ್ಯ ಪ್ರದೇಶವನ್ನ ಮತ್ತೆ ಸರಿಪಡಿಸುವ ಯೋಚನೆ ಈ ತಜ್ಞರ ಸಮಿತಿಗೆ ಇಲ್ಲ. ಕೇವಲ ಖಾಸಗಿ ಜಮೀನುಗಳ ಮೇಲೆ ಕಣ್ಣಿಟ್ಟು ಖಾಸಗಿ ಜಮೀನುಗಳನ್ನು ಅಡ್ಡ ಮಾರ್ಗದ ಮೂಲಕ ಅರಣ್ಯವನ್ನಾಗಿ ಪರಿವರ್ತಿಸುವುದರ ಬಗ್ಗೆ ಅವರು ಇಲ್ಲಿ ಒತ್ತು ನೀಡುತ್ತಿರುವುದು ನಾನು ಮೇಲೆ ವಿವರಿಸಿದ ಅಂತರರಾಷ್ಟ್ರೀಯ ಪಿತೂರಿಗೆ ಸಾಕ್ಷಿಯಾಗಿದೆ.

ಅರಣ್ಯಕ್ಕೆ ಬೆಂಕಿ ಬಿದ್ದದ್ದೂ ಸೇರಿ ಅರಣ್ಯ ಪ್ರದೇಶದಲ್ಲಿ ಮರಗಳ ಲೂಟಿಯಿಂದಾಗಿ ಅರಣ್ಯ ನಾಶವಾಗಿದೆ. ಅರಣ್ಯವನ್ನು ನಾಶ ಮಾಡಿ ಈಗ ಖಾಸಗಿ ಜಮೀನನ್ನು ಅರಣ್ಯ ಎಂದು ಘೋಷಿಸುವ ಕುತಂತ್ರಗಳನ್ನು ಪರಿಸರವಾದಿಗಳು ಮಾಡುತ್ತಿದ್ದಾರೆ. ಅವರೇ ಹೇಳಿದ ಶೇ. 40ರಷ್ಟು ಹಾಳಾಗಿರುವ ಅರಣ್ಯವನ್ನು ಪುನಶ್ಚೇತನಗೊಳಿಸಲು ಯಾವ ಕಾರ್ಯಕ್ರಮವನ್ನು ಪರಿಸರವಾದಿಗಳು ಅಥವಾ ಅರಣ್ಯ ಇಲಾಖೆ ಹಾಕಿಕೊಂಡಿದೆ? ತಮ್ಮ ಸ್ವಾರ್ಥಕ್ಕಾಗಿ ಖಾಸಗಿ ಜನರ ಜೀವನಕ್ಕೆ ಬೆಂಕಿ ಇಡುವ ಪ್ರಯತ್ನವನ್ನು ಈ ಡೋಂಗಿ ಪರಿಸರವಾದಿಗಳು ಮಾಡುತ್ತಿದ್ದಾರೆ.

ಖಾಸಗಿ ಜಮೀನುಗಳಲ್ಲಿ ವ್ಯಾಪಕವಾಗಿ ಮರಗಳಿವೆ ಎನ್ನುವುದನ್ನ ಈ ತಜ್ಞರ ಸಮಿತಿ ಒಪ್ಪಿಕೊಳ್ಳುವುದಾದರೆ, ಖಾಸಗಿ ಜಮೀನುಗಳಲ್ಲಿ ಮರಗಳನ್ನು ಉಳಿಸಲು ಕಸ್ತೂರಿರಂಗನ್ ವರದಿ ಜಾರಿ ಮಾಡುವ ಅಗತ್ಯವಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಖಾಸಗಿ ಜಮೀನುಗಳಲ್ಲಿ ಮರಗಳನ್ನು ಬೆಳೆಸಲು ಹಿಡುವಳಿದಾರರಿಗೆ ಉತ್ತೇಜನಕಾರಿ ಕಾರ್ಯಕ್ರಮಗಳನ್ನ ರೂಪಿಸಬೇಕಲ್ಲದೆ, ಈ ಪ್ರದೇಶಗಳನ್ನ ಅರಣ್ಯವನ್ನಾಗಿ ಪರಿವರ್ತಿಸುವುದು ಸಮಾಜ ದ್ರೋಹದ

...ಅರಣ್ಯ ಎಂದು ದಾಖಲಾಗಿರುವ ಅರಣ್ಯ ಪ್ರದೇಶ ಆಗಿರುವುದಕ್ಕೆ ಅರಣ್ಯ ಇಲಾಖೆಯೇ ಜವಾಬ್ದಾರಿ. ...ವನ್ಯಜೀವಿ ತಾಣ ಸೇರಿದಂತೆ ನಾಗರಹೊಳೆಯಿಂದ ...ಪುರದವರೆಗೆ ತೇಗದ ಪ್ಲಾಂಟೇಶನ್ ಮಾಡಲಾಗಿದೆ. ...ಂದ ಸಂಪೂರ್ಣವಾಗಿ ನೈಸರ್ಗಿಕ ಅರಣ್ಯನಾಶವಾಗಿದೆ. ...ಕ್ಕೆ ಯಾರು ಜವಾಬ್ದಾರರು? ಇತ್ತೀಚೆಗೆ ಕೊಡಗಿನ ...ಯಿಂದ ಬಂಡೀಪುರದವರೆಗೆ ಅರಣ್ಯಕ್ಕೆ ಬೆಂಕಿ ...ದೆ. ಲಕ್ಷಾಂತರ ಮರಗಳ ಹನನವಾಗಿದೆ. ಈ ರೀತಿ ...ಗಳು ಹನನವಾಗುವ ಹಿಂದೆ ಡೋಂಗಿ ಪರಿಸರವಾದಿಗಳ ...ಡವಿದೆ ಎಂಬ ಬಲವಾದ ಶಂಕೆ ಇದೆ. ಕಾರಣ ...ಗೆ ಬೆಂಕಿ ಬಿದ್ದಾಗ ಅಲ್ಲಿದ್ದ ಆನೆಗಳು ಪಕ್ಕದ ಕಾಫಿ ...ಟಗಳಿಗೆ ವಲಸೆ ಹೋಗುತ್ತವೆ. ಹಾಗೆ ಆದಾಗ ಆ ...ಶವನ್ನು ಆನೆ ಕಾರಿಡಾರ್ ಎಂದು ಘೋಷಿಸಬಹುದು. ... ದಾಖಲಾದಾಗ ಮತ್ತೆ ಡೋಂಗಿ ಪರಿಸರವಾದಿಗಳಿಗೆ ...ವಾಗುತ್ತದೆ. ಪಶ್ಚಿಮಘಟ್ಟ ತಪ್ಪಲಿನ ಭೂ ಪ್ರದೇಶದ ...ಗಳಿಗೆ ಕೊಡಬಾರದ ಹಿಂಸೆಗಳನ್ನ ಅರಣ್ಯ ...ಖೆಯವರು ನೀಡುತ್ತಿರುವುದು ನಮ್ಮೆಲ್ಲರ ದಿನನಿತ್ಯದ ...ಭವವಾಗಿದೆ. ಕೊಡಗಿನ ಬಾಣೆ ಜಮೀನು ಮತ್ತು ...ರಿ ಜಮೀನುಗಳನ್ನ ಡೀಮ್ಡ್ ಫಾರೆಸ್ಟ್ ಎಂದು ...ಷಿಸಿ ಅದನ್ನು ಜಿಲ್ಲಾ ಅರಣ್ಯವಾಗಿಸಬೇಕು ಎಂದು ...ರ ರಚನೆ ಮಾಡಿದ ತಜ್ಞರ ಎರಡು ಸಮಿತಿಗಳು ...ವಾಗಿ ಒತ್ತಾಯ ಮಾಡಿವೆ. ಬಾಣೆ ಜಮೀನು ಖಾಸಗಿ ...ತನದ ಜಮೀನುಗಳಾಗಿದ್ದು, ಆ ಜಮೀನುಗಳನ್ನ ...ಾನಿಗನುಗುಣವಾಗಿ ಅನುಭವಿಸಿ ಕೊಂಡು ಬರುವ ... ಬಾಣೆ ಜಮೀನಿನ ಹಿಡುವಳಿದಾರ ನದ್ದಾಗಿದೆ. ಈ ...ೀನುಗಳಲ್ಲಿ ಇನ್ನೂ ಮರ ಗಿಡಗಳು ವ್ಯಾಪಕವಾಗಿ ...ದಿದ್ದರೆ, ಆದಕ್ಕಾಗಿ ಬಾಣೆ ಹಿಡುವಳಿದಾರರನ್ನು ...ನಂದಿಸಬೇಕಾಗಿದೆ. ಇನ್ನಷ್ಟು ಹಸಿರುಗಳನ್ನ ಈ ...ೀನುಗಳಲ್ಲಿ ಉಳಿಸಿಕೊಂಡು ಬೆಳೆಸಿಕೊಂಡು ಬರುವುದಕ್ಕೆ ...ೇಜನಕಾರಿಯಾದ ಕಾರ್ಯಕ್ರಮಗಳನ್ನ ಸರಕಾರ ...ಸಬೇಕಾಗಿದೆ. ಅದನ್ನು ಬಿಟ್ಟು, ಬಾಣೆ ಜಮೀನುಗಳಲ್ಲಿ ...ಗಳನ್ನು ಉಳಿಸಿಕೊಂಡು ಬಂದದ್ದೇ ಅಪರಾಧವೆಂಬಂತೆ ...ಜಮೀನುಗಳನ್ನ ಡೀಮ್ಡ್ ಫಾರೆಸ್ಟ್ ಎಂದು ಘೋಷಿಸಿ, ...ವಳಿದಾರರಿಗೆ ಟೋಪಿ ಹಾಕಬೇಕೆಂಬ ಶಿಫಾರಸ್ಸುಗಳನ್ನು ... ಸಮಿತಿಗಳು ಮಾಡುತ್ತವೆ. ಇದಕ್ಕೆ ಸಮಾಜಘಾತುಕ ...ವಟಿಕೆಯಲ್ಲದೆ ಮತ್ತೇನೆನ್ನಬೇಕು? ಬಾಣೆ ಜಮೀನಿನ ...ಬಾಧ್ಯತೆಯ ಸಂಬಂಧ ಚೆಕ್ಕೇರ ಪೂವಯ್ಯ ಪ್ರಕರಣದಲ್ಲಿ ...ಾಟಕ ಉಚ್ಚ ನ್ಯಾಯಾಲಯದ ಪೂರ್ಣ ಪೀಠ ...3ರಲ್ಲಿಯೇ ತನ್ನ ತೀರ್ಪು ನೀಡಿ, ಬಾಣೆ ಜಮೀನು ...ರಿ ಹಿಡಿತದ ಜಮೀನಲ್ಲ, ಅದು ಖಾಸಗಿ ಒಡೆತನದ ...ೀನುಗಳಾಗಿದ್ದು, ಅದನ್ನು ಕಂದಾಯಕ್ಕೆ ಒಳಪಡಿಸಿದ ...ರ ಅದಕ್ಕೆ ಹಿಡುವಳಿಯ ಸಂಪೂರ್ಣ ಹಕ್ಕನ್ನು ...ಯುತ್ತಾನೆಂದೂ, ಅಲ್ಲಿಯವರೆಗೆ ಸೀಮಿತ ಹಕ್ಕನ್ನು ...ದಿರುತ್ತಾರೆಂದೂ, ಸಂಪೂರ್ಣ ಹಕ್ಕು ಬೇಕಾದಾಗ ...ಜಮೀನುಗಳನ್ನು ವ್ಯವಸಾಯ ಮಾಡಿ ಕಂದಾಯಕ್ಕೆ ...ಪಡಿಸಿಕೊಳ್ಳಬಹುದೆಂದೂ ಸ್ಪಷ್ಟಪಡಿಸಿದೆ. ಕೊಡಗಿನ ... ಕಾಫಿ ತೋಟಗಳು ಈ ಬಾಣೆ ಜಮೀನುಗಳಲ್ಲಿ ...ವುದಾಗಿದೆ. ಈಗಾಗಲೇ ಬಾಣೆ ಜಮೀನುಗಳಲ್ಲಿ ಶೇ. ...ಷ್ಟು ವ್ಯವಸಾಯಕ್ಕೆ ಒಳಪಟ್ಟಿದ್ದು, ಸುಮಾರು ಶೇ. 15ರಷ್ಟು ಮಾತ್ರ ಇನ್ನೂ ವ್ಯವಸಾಯಕ್ಕೆ ಒಳಪಡದ ಜಮೀನು ಇರಬಹುದು. ಇವುಗಳಿಗೂ ಕಂದಾಯ ವಿಧಿಸಬೇಕೆಂದು ಈಗಾಗಲೇ ಕರ್ನಾಟಕ ಕಂದಾಯ ಕಾಯ್ದೆಗೆ ತಿದ್ದುಪಡಿಯನ್ನು ಸಹ ತರಲಾಗಿದೆ. ಆದ್ದರಿಂದ ಕೊಡಗಿನ ಎಲ್ಲಾ ಬಾಣೆ ಜಮೀನುಗಳು ಕಂದಾಯಕ್ಕೆ ಒಳಪಟ್ಟು, ಹಿಡುವಳಿದಾರ ಸಂಪೂರ್ಣ ಹಿಡುವಳಿ ಹಕ್ಕನ್ನು ಹೊಂದಿರುತ್ತಾನೆ. ಇದೆಲ್ಲವನ್ನೂ ಮರೆಮಾಚಿ, ಬಾಣೆ ಜಮೀನುಗಳು ಡೀಮ್ಡ್ ಫಾರೆಸ್ಟ್ ಎಂದು ವಾದಿಸುವ ಜನ ಈ ದೇಶದವರೋ ಅಥವಾ ವಿದೇಶಿ ಏಜೆಂಟರೋ ಎಂದು ಅನುಮಾನಿಸಬೇಕಾಗಿದೆ. ಆದರೆ ಕೇವಲ ಜನಗಳಿಗೆ ಹಿಂಸೆ ನೀಡುವುದಕ್ಕಾಗಿಯೇ ಜನದ್ರೋಹಿ ಅಧಿಕಾರಿ ವರ್ಗ, ಡೋಂಗಿ ಪರಿಸರವಾದಿಗಳ ಜೊತೆ ಕೈಜೋಡಿಸಿಕೊಂಡು ಬಾಣೆ ಜಮೀನಿನ ಹಕ್ಕುದಾರಿಕೆಯಿಂದ ಜನರನ್ನು ವಂಚಿಸಲು ಬಗೆ ಬಗೆಯ ಕುತಂತ್ರದಲ್ಲಿ ತೊಡಗಿರುವುದು ಏನಾಗಬೇಕು? ವಿಧಿಇಲ್ಲದೆ ಇಲಿಂದ ಪಲಾಯನ ಮಾಡಬೇಕು. ಇದಾಗಬೇಕೆನ್ನುವುದೇ ಡೋಂಗಿ ಪರಿಸರವಾದಿಗಳು ಮತ್ತು ಇವರೊಡನೆ ಶಾಮೀಲಾಗಿರುವ ಅರಣ್ಯ ಇಲಾಖೆಯ ಅಧಿಕಾರಿಗಳ ಮುಖ್ಯ ಉದ್ದೇಶವಾಗಿದೆ.

ಕಸ್ತೂರಿರಂಗನ್ ವರದಿ ಜಾರಿ ಆಗದೇನೇ ಅರಣ್ಯ ಇಲಾಖೆಯ ಸಿಬ್ಬಂದಿಗಳು ಜನದ್ರೋಹಿಗಳಾಗಿ ಕಾಣಿಸಿಕೊಂಡು, ಈ ಭೂಪ್ರದೇಶದ ಜನಗಳಿಗೆ ಕೊಡಬಾರದ ಹಿಂಸೆ ಕೊಡುತ್ತಿರುವಾಗ, ಇನ್ನು ಕಸ್ತೂರಿರಂಗನ್ ವರದಿ ಎಂಬ ಇನ್ನೊಂದು ಬಡಿಗೆ ಅವರ ಕೈಗೆ ಸಿಕ್ಕಿದರೆ ಏನಾಗಬಹುದೆಂಬುದನ್ನ ಊಹಿಸಿಕೊಂಡಾಗ ಗಾಬರಿಯಾಗುತ್ತದೆ. ಕಲ್ಚರಲ್ ಲ್ಯಾಂಡ್‌ಸ್ಕೇಪ್‌ನಲ್ಲಿ ಜನಗಳು ಪರಿಸರಸ್ನೇಹಿ ಕ್ರಮಗಳನ್ನ ವ್ಯವಸಾಯದಲ್ಲಿ ಅಳವಡಿಸಿಕೊಂಡು ಹಸಿರನ್ನ ಉಳಿಸಿಕೊಂಡು ಬಂದಿದ್ದಾರೆ. ಮತ್ತಷ್ಟು ಹಸಿರು ಬೆಳೆಸುವುದಕ್ಕೆ ಈ ಪ್ರದೇಶದ ಜನಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಗ್ರೀನ್ ಗ್ರೋಥ್ ಕಾರ್ಯಕ್ರಮ ಅಳವಡಿಸಿಕೊಂಡು ಮರ ಬೆಳೆಸುವುದಕ್ಕೆ ಉತ್ತೇಜನಕಾರಿ ಕಾರ್ಯಕ್ರಮಗಳನ್ನ ಹಮ್ಮಿಕೊಳ್ಳಬೇಕೆಂದು ಕಸ್ತೂರಿರಂಗನ್ ವರದಿಯೇ ಹೇಳುತ್ತದೆ. ಆದರೆ ಇಲ್ಲಿ ನಡೆಯುತ್ತಿರುವುದು ತದ್ವಿರುದ್ಧ. ಕಸ್ತೂರಿರಂಗನ್ ವರದಿಯ ಆಧಾರದ ಮೇಲೆನೇ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಯವರು ಜಮೀನಿನ ಹಿಡುವಳಿದಾರರಿಗೆ ಅಲ್ಲಿನ ಮರದ ಹಕ್ಕು ಇದೆ ಎಂದು ಒಪ್ಪಿಕೊಳ್ಳಬೇಕಾಗಿತ್ತು. ಆದರೆ ಅದಕ್ಕೆ ತದ್ವಿರುದ್ಧವಾಗಿ ಮರದ ಹಕ್ಕು ಮಾತ್ರವಲ್ಲ, ಜಮೀನಿನ ಹಕ್ಕೂ ಇಲ್ಲ ಎಂದು ವಾದಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹೀಗಿರುವಾಗ ಕಸ್ತೂರಿರಂಗನ್ ವರದಿ ಜಾರಿ ಮಾಡಿ ಈ ಭಾಗದ ಜನಗಳ ಬದುಕಿಗೆ ಬೆಂಕಿ ಇಡಲು ಜನ ವಿರೋಧಿ ಅಧಿಕಾರಿ ವರ್ಗಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ಪರಿಸರ ರಕ್ಷಣೆಯ ಕೆಲಸದಲ್ಲಿ ನಾವು ಯಾರಿಗೂ ಎರಡನೆಯವರಲ್ಲ. ಪರಿಸರ ರಕ್ಷಣೆಯನ್ನ ನಾವೇ ಮಾಡುತ್ತೇವೆ. ಇದುವರೆಗೆ ರಕ್ಷಣೆ ಮಾಡಿಕೊಂಡು ಬಂದವರೇ ನಾವಾಗಿದ್ದೇವೆ. ಇನ್ನು ಮುಂದೆಯೂ ನಾವೇ ಪರಿಸರ ರಕ್ಷಣೆ ಮಾಡುವವರಾಗಿದ್ದೇವೆ. ಈ ಕೆಲಸದಲ್ಲಿ ಡೋಂಗಿ ಪರಿಸರವಾದಿಗಳಿಗಾಗಲಿ, ಅವರೊಡನೆ ಕೈಜೋಡಿಸಿ ಜನಗಳ ನಿತ್ಯ ಬದುಕಿನ ಜೊತೆ ಚೆಲ್ಲಾಟವಾಡುವ ಇಲಾಖಾ ಅಧಿಕಾರಿಗಳಿಗಾಗಲಿ ಅವಕಾಶವಿಲ್ಲ ಎನ್ನುವುದನ್ನ ಸ್ಪಷ್ಟಪಡಿಸುತ್ತಾ, ಜನ ಪಕ್ಷ ಬೇಧಗಳನ್ನ ಮರೆತು, ತಮ್ಮ ಹಿತರಕ್ಷಣೆಗೆ ಒಟ್ಟಾಗಿ ಹೋರಾಡಬೇಕಾಗಿದೆ.

ಡೋಂಗಿ ಪರಿಸರವಾದಿಗಳು ವಿದೇಶದಿಂದ ಹಣ ಬರುತ್ತಿರುವುದರ ಬಗ್ಗೆ ದಾಖಲೆಯನ್ನು ಕೇಳುತ್ತಿದ್ದಾರೆ. ಅವರಿಗೆ ಯಾವ ದಾಖಲೆ ಬೇಕು? 13 ಹುಲಿಗಳನ್ನು ರೇಡಿಯೋ ಕಾಲರ್ ಹಾಕುವ ಮೂಲಕ ಕೊಂದು, ಹುಲಿ ತಜ್ಞ ಎಂದು ಕರೆಸಿಕೊಳ್ಳುತ್ತಿರುವ ಪರಿಸರವಾದಿಗಳು ಓಡಾಡುತ್ತಿರುವ ಐಷಾರಾಮಿ ವಿದೇಶಿ ಕಾರು ಎಲ್ಲಿಂದ ಬಂತು? ಈ ಕಾರು ಅವರು ಸ್ವಂತ ಹಣದಿಂದ ಕೊಂಡುಕೊಂಡದ್ದೋ ಅಥವಾ ವಿದೇಶದಿಂದ ಬಿಟ್ಟಿ ಬಂದದ್ದೊ ಎಂದು ಅವರೇ ಸ್ಪಷ್ಟಪಡಿಸಬೇಕು. ಸಂಸ್ಥೆಗೆ ಬಂದ ಕಾರನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಂಡರೋ ಎಂಬುದರ ಬಗ್ಗೆ ಅವರೇ ವಿವರಣೆಯನ್ನು ನೀಡಬೇಕು.



ಕಂಡುಬರುತ್ತದೆ.

ಇನ್ನು ಪೈಸಾರಿ ಜಮೀನುಗಳ ಬಗ್ಗೆ ಹೇಳುವುದಾದರೆ ಇದು ಕೊಡಗಿನ ಕಂದಾಯ ಇಲಾಖೆಯ ಆಡಳಿತಕ್ಕೆ ಒಳಪಟ್ಟಿರುವ ಜಮೀನಾಗಿದ್ದು, ಬಡಬಗ್ಗರಿಗೆ ಮತ್ತು ಸಾರ್ವಜನಿಕ ಹಿತರಕ್ಷಣೆಗೆ ಮಂಜೂರು ಮಾಡುವುದಕ್ಕೆ ಲಭ್ಯವಿರುವ ಜಮೀನಾಗಿದೆ. ಈ ಜಮೀನುಗಳಲ್ಲಿ ಈಗಾಗಲೇ ಸಾವಿರಾರು ಜನ ಮಂಜೂರು ಮಾಡಿಸಿಕೊಂಡೋ ಅಥವಾ ಬಗರ್ ಹುಕುಂ ಸಾಗುವಳಿ ಮಾಡಿಕೊಂಡೋ ವಾಸಿಸುತ್ತಿದ್ದಾರೆ. ಇನ್ನು ಖಾಲಿ ಇರುವ ಬಾಣೆ ಜಮೀನುಗಳು ಅರ್ಹರಿಗೆ ಮಂಜೂರು ಮಾಡಲು, ಅಗತ್ಯವಾಗಿ ಬೇಕಾಗಿರುವ ಜಮೀನುಗಳಾಗಿವೆ. ಈ ಜಮೀನುಗಳಲ್ಲಿಯು ಮರಗಿಡಗಳಿವೆ ಎನ್ನುವ ಕಾರಣಕ್ಕೆ ಅದನ್ನು ಡೀಮ್ಡ್ ಫಾರೆಸ್ಟ್ ಮಾಡಿ ಜಿಲ್ಲಾ ಅರಣ್ಯವನ್ನಾಗಿ ಪರಿವರ್ತಿಸುವ ಬಗ್ಗೆ ಪಟ್ಟಭದ್ರ ಹಿತಾಸಕ್ತಿಗಳು ಉತ್ಸಾಹ ತೋರಿಸುತ್ತಿರುವುದು ಇವರ ಜನದ್ರೋಹಿ ಚಟುವಟಿಕೆಗಳಿಗೆ ಇನ್ನೊಂದು ಸಾಕ್ಷಿಯಾಗಿದೆ. ಕೊಡಗಿನ ಬಾಣೆ ಮತ್ತು ಪೈಸಾರಿ ಜಮೀನುಗಳನ್ನ ಡೀಮ್ಡ್ ಫಾರೆಸ್ಟ್ ಎಂದು ಘೋಷಿಸಿದರೆ, ಕೊಡಗಿನ ಎಲ್ಲಾ ಕಾಫಿತೋಟಗಳು ಅರಣ್ಯವಾಗುತ್ತವೆ. ಕೊಡಗಿನಲ್ಲಿ ಮತ್ತೇನು ಉಳಿಯುತ್ತದೆ? ಇಡೀ ಕೊಡಗು ಅರಣ್ಯವಾಗುತ್ತದೆ. ಇಲ್ಲಿರುವ ಜನ

ಇನ್ನು ಡೋಂಗಿ ಪರಿಸರವಾದಿಗಳು ಮತ್ತು ಅವರ ಸಂಸ್ಥೆಗಳಲ್ಲಿ ಇರುವಂತಹ ಪದಾಧಿಕಾರಿಗಳು ಸಂಸ್ಥೆಯ ಕಳೆದ 10 ವರ್ಷದ ಲೆಕ್ಕಪತ್ರಗಳನ್ನು ಸಾರ್ವಜನಿಕವಾಗಿ ಮಂಡಿಸಬೇಕು. ಹಾಗೆಯೇ ಅವರು ತಮ್ಮ ಖಾಸಗಿ ಲೆಕ್ಕಪತ್ರಗಳನ್ನು ಕೂಡ ಸಾರ್ವಜನಿಕರಿಗೆ ಮಂಡಿಸಬೇಕು. ಕೆ.ಎಂ.ಚಿಣ್ಣಪ್ಪ ಹಾಗೂ ತಮ್ಮು ಪೂವಯ್ಯರಂತಹವರು ತಿಂಗಳ ಸಂಭಾವನೆಯನ್ನು ಪಡೆಯುತ್ತಿದ್ದಾರೋ ಇಲ್ಲವ್ರೋ ಎಂಬುದನ್ನು ಅವರೇ ಸ್ಪಷ್ಟಪಡಿಸಬೇಕು. ಗಿರಿಜನರ ಪುನರ್ ವಸತಿಯು ಕೇಂದ್ರ ಸರಕಾರದ್ದು. ಈ ಯೋಜನೆ ತಮ್ಮದು ಎಂದು ಹೇಳಿಕೊಂಡು ವಿದೇಶದಿಂದ ಹಣ ಪಡೆಯುತ್ತಿರುವುದು ಸುಳ್ಳೋ, ಸತ್ಯವೋ ಎಂಬುದನ್ನು ಅವರೇ ಸ್ಪಷ್ಟಪಡಿಸಬೇಕು. ಯಾವುದೇ ಉದ್ಯೋಗವಿಲ್ಲದೆ ಐಷಾರಾಮಿ ಬದುಕು ಸಾಗಿಸುತ್ತಿರುವುದಕ್ಕಿಂತಲೂ ಸಾಕ್ಷಿ ಬೇರೆ ಬೇಕೇ?

ಕಡೆಗೆ ಗೆಲ್ಲುವುದು ಜನಶಕ್ತಿಯೇ ವಿನಹ, ಯಾವುದೇ ಪಿತೂರಿ ಅಲ್ಲ. ನಮ್ಮ ವ್ಯವಸ್ಥೆಯಲ್ಲಿ ಜನರೇ ಯಜಮಾನರು. ಜನರೇ ಯಜಮಾನಿಕೆಯನ್ನು ಪ್ರಶ್ನಿಸುವ ಎಲ್ಲಾ ಶಕ್ತಿಗಳು ನುಚ್ಚುನೂರಾಗುತ್ತದೆ ಎಂಬುದನ್ನ ಅರ್ಥಮಾಡಿಕೊಂಡು, ಕಸ್ತೂರಿರಂಗನ್ ವರದಿಯನ್ನ ವಿರೋಧಿಸಿ, ನಮ್ಮ ಹೋರಾಟವನ್ನ ಮುಂದುವರೆಸೋಣ.


● ಎ.ಕೆ.ಸುಬ್ಬಯ್ಯ

...ಪಂಜರದ ಗಿಣಿ ಈಗಲೂ ಪಂಜರದ ಗಿಣಿಯೇ

ಸೊಹರಾಬುದ್ದೀನ್ ಎನ್ಕೌಂಟರ್ ಪ್ರಕರಣದ ...ಖ್ಯ ಆರೋಪಿಯಾಗಿರುವ ಬಿಜೆಪಿ ಅಧ್ಯಕ್ಷ ಅಮಿತ್ ...ಗೆ ಮುಂಬಯಿನ ಸಿಬಿಐ ನ್ಯಾಯಾಲಯವೊಂದು ...ಚಿಟ್ ನೀಡಿದೆ. ಶಾ ವಿರುದ್ಧ ಅಷ್ಟೊಂದು ಬಲವಾದ ...ವೆಗಳಿದ್ದ ಹೊರತಾಗಿಯೂ ವಿಚಾರಣೆಯೆ ಇಲ್ಲದೆ ... ಖುಲಾಸೆಗೊಂಡಿದ್ದಾನೆಂದರೆ ಇದರಲ್ಲಿ ರಾಜಕೀಯ ...ಎಂದು ವಾದಿಸಲು ಸಾಧ್ಯವೇ ಇಲ್ಲ. ಎನ್ಕೌಂಟರ್‌ಗೆ ...ಗಿದ್ದ ತುಳಸಿರಾಂ ಪ್ರಜಾಪತಿ ಸಾಯುವ ಮುನ್ನ ...ಎಚ್‌ಆರ್‌ಸಿ ಮತ್ತು ಮ್ಯಾಜಿಸ್ಟ್ರೇಟರಿಗೆ ನೀಡಿದ್ದ ...ಕೆಯನ್ನು ಕೋರ್ಟು ಪರಿಗಣಿಸಲೇ ಇಲ್ಲವೆಂಬುದು ...ಾರ್ಹವಾಗಿದೆ. ಅಂದು ಶಾನನ್ನು ಮೂರು ತಿಂಗಳ ಸೆರೆಮನೆಯಲ್ಲಿ ಇರಿಸುವಷ್ಟು ಪ್ರಬಲವಿದ್ದ ...ವೆಗಳು ಇಂದು ದುರ್ಬಲವಾದುದು ಹೇಗೆಂಬ ...ಮೂ ಇದೆ. ಒಂದೆ ಶಾ ನ್ಯಾಯಾಲಯಕ್ಕೆ ...ರಾಗಬೇಕಿದ್ದ ಸಂದರ್ಭಗಳಲ್ಲಿ ಆತನ ಮೇಲೆ ಗರಂ ... ನ್ಯಾಯಾಧೀಶರ ಎತ್ತಂಗಡಿ ಆಗಿದೆ. ಮತ್ತೊಬ್ಬ ...ಬಿ.ಎಚ್. ಲೋಯಾ ಎಂಬುವವರ ಸಾವು ...ಸಂಶಯಾಸ್ಪದವಾಗಿದೆ. ಗಮನಾರ್ಹ ವಿಚಾರವೆಂದರೆ ... ಕೋರ್ಟು ಯಾವ ಅಂಶಗಳ ಆಧಾರದ ... ತೀರ್ಪು ನೀಡುವ ಸಮಯದಲ್ಲಿ ಶಾ ಗುಜರಾತಿಗೆ ...ದಿಸದಂತೆ ತಾಕೀತು ಮಾಡಿತ್ತೋ ಅದೇ ...ಗಳನ್ನು ಸಿಬಿಐ ನ್ಯಾಯಾಲಯ ತಿರಸ್ಕರಿಸಿದೆ! ...ರವಾಗಿ ಸಿಬಿಐ, ಶಾ ವಿರುದ್ಧ ಬಲವಾದ ವಾದ ...ಸುವುದರಲ್ಲಿ ವಿಫಲವಾಗಿದೆ. ಶಾ ಪರವಾಗಿ ವಾದಿಸಲು ...ತ್ತಮ ಲಾಯರ್‌ಗಳಿದ್ದರೆ ಸಿಬಿಐ ವಿಶೇಷ ...ಕೀಲರನ್ನು ಕೂಡ ನೇಮಿಸಿರಲಿಲ್ಲ. ಶಾ ಲಾಯರುಗಳು ...ರು ಗಂಟೆಗಳ ಕಾಲ ವಾದ ಮಾಡಿದರೆ ಇವರದು


ಖುಲಾಸೆಯಾದ ಸುದ್ದಿಯಿಂದ ಪ್ರಗತಿಪರ ವಲಯದಲ್ಲಿ ಒಂದಿಷ್ಟೂ ಆಶ್ಚರ್ಯವಾಗಿಲ್ಲ. ಅವರ ಪಾಲಿಗೆ ಅದು ನಿರೀಕ್ಷಿತವೇ ಆಗಿತ್ತು. ಏಕೆಂದರೆ ಮೋದಿ ಸರ್ಕಾರ ಕೂಡ ಸಿಬಿಐ ಮತ್ತಿತರ ತನಿಖಾ ಸಂಸ್ಥೆಗಳನ್ನು ಪಂಜರದೊಳಗೇ ಇರಿಸಲಿದೆ ಎಂಬುದು ಬಹಳ ಸ್ಪಷ್ಟವಿತ್ತು.

ವಾಸ್ತವದಲ್ಲಿ ಈ ಸೊಹರಾಬುದ್ದೀನ್ ಶೇಕ್ ಕುಟುಂಬಸ್ಥರು ಸಾಕಷ್ಟು ಹಿಂದಿನಿಂದಲೂ ಬಿಜೆಪಿಯ ಸಕ್ರಿಯ ಬೆಂಬಲಿಗರಾಗಿದ್ದವರು; ಚುನಾವಣೆಗಳ ವೇಳೆ ಬಿಜೆಪಿ ಪರವಾಗಿ ಪ್ರಚಾರ ಮಾಡಿದವರು. 2014ರ ಚುನಾವಣೆಗಳಲ್ಲಿ ಸಮೇತ! ಸಿಬಿಐ ಆರೋಪಿಸಿರುವಂತೆ ಅಮಿತ್ ಶಾ, ಪೊಲೀಸ್ ಅಧಿಕಾರಿಗಳು ಮತ್ತು



ಸೊಹರಾಬುದ್ದೀನ್ ಶೇಕ್ ಒಟ್ಟಾಗಿ ಸುಲಿಗೆ ದಂಧೆಯೊಂದನ್ನು ನಡೆಸುತ್ತಿದ್ದರು. ನಂತರ ಯಾವುದೋ ಕಾರಣಕ್ಕೆ ಮನಸ್ತಾಪ ಉಂಟಾಗಿ ಸೊಹರಾಬುದ್ದೀನ್‌ನನ್ನು ಕೊಲ್ಲಿಸಲು ಸಂಚು ರೂಪಿಸಲಾಯಿತು. ನವಂಬರ್ 2005ರಲ್ಲಿ ಸೊಹರಾಬುದ್ದೀನ್ ಮತ್ತು ಆತನ ಪತ್ನಿ ಕೌಸರ್‌ಬಿಯನ್ನು ಅಪಹರಿಸಿ ನಕಲಿ ಎನ್‌ಕೌಂಟರ್ ಮೂಲಕ ಮುಗಿಸಲಾಯಿತು. ಪ್ರಕರಣದ ಸಾಕ್ಷಿ ತುಳಸಿರಾಂ ಪ್ರಜಾಪತಿಯನ್ನೂ ಡಿಸೆಂಬರ್ 2006ರಲ್ಲಿ ನಕಲಿ ಎನ್‌ಕೌಂಟರ್‌ನಲ್ಲಿ ಕೊಲ್ಲಲಾಯಿತು. ಈ ತುಳಸೀರಾಂನನ್ನು ಮುಗಿಸಲು ಇನ್ನೊಂದು ಬಲವಾದ ಕಾರಣವೂ ಇತ್ತೆನ್ನಲಾಗಿದೆ. ಆ ಕುರಿತು ಹೈದರಾಬಾದಿನಲ್ಲಿ ಚಿಲ್ಲರೆ ಕ್ರಿಮಿನಲ್ ಆಗಿದ್ದ ಅಸ್ಗರ್ ಅಲಿ ಎಂಬಾತ ಪೊಲೀಸ್ ಅಧಿಕಾರಿ ಸಂಜೀವ್ ಭಟ್‌ಗೆ ಕೆಲವು ಆಘಾತಕಾರಿ ಅಂಶಗಳನ್ನು ತಿಳಿಸಿದ್ದ. ಅಸ್ಗರ್ ಅಲಿ ಪ್ರಕಾರ ಸೊಹರಾಬುದ್ದೀನ್ ಅಂದು ಮೋದಿ ಸಂಪುಟದ ಸಚಿವನಾಗಿದ್ದ ಹರೇನ್ ಪಾಂಡ್ಯನನ್ನು ಕೊಲೆ ಮಾಡಲು ನಿರಾಕರಿಸಿದ್ದ. ನಂತರ ಆ ಕೆಲಸವನ್ನು ಅಸ್ಗರ್ ಅಲಿಗೆ ವಹಿಸಿದಾಗ ಆತನೂ ನಿರಾಕರಿಸಿದ. ಕೊನೆಗೆ ಪಾಂಡ್ಯನ ಹತ್ಯೆ ಮಾಡಿದಾತ ಇದೇ ತುಳಸಿರಾಂ ಪ್ರಜಾಪತಿ ಎಂಬ ಆಶ್ಚರ್ಯಕರ ಮಾಹಿತಿಯನ್ನು ಅಸ್ಗರ್ ಅಲಿ ಹೊರಗೆಡವಿದ್ದ!


ಮುಂದೆ ಖುದ್ದು ಗುಜರಾತ್ ಸರ್ಕಾರವೆ ಎನ್‌ಕೌಂಟರ್‌ಗಳು ನಕಲಿ ಎಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಒಪ್ಪಿಕೊಂಡಿತು. ನಂತರ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಎರಡೂ ಪ್ರಕರಣಗಳನ್ನು ಅಹಮದಾಬಾದಿನಿಂದ ಮುಂಬಯಿನ ವಿಶೇಷ ಸಿಬಿಐ ನ್ಯಾಯಾಲಯಕ್ಕೆ ವರ್ಗಾಯಿಸಲಾಯಿತು. ಶಾ ಮೂರು ತಿಂಗಳು ಸೆರೆಮನೆಯಲ್ಲಿ ಕಳೆದ ಬಳಿಕ ಜಾಮೀನು ಪಡೆದುಕೊಂಡಿದ್ದ. ಆದರೆ ನಕಲಿ ಎನ್ಕೌಂಟರ್ ಪ್ರಕರಣಗಳಲ್ಲಿ ಜೈಲು ಸೇರಿದ್ದ ಮಿಕ್ಕ ಪೊಲೀಸ್ ಅಧಿಕಾರಿಗಳಲ್ಲಿ ಯಾರೊಬ್ಬನಿಗೂ ಜಾಮೀನು ಸಿಕ್ಕಿರಲಿಲ್ಲ. ಇದು ಆರೋಪಿಗಳಲ್ಲೊಬ್ಬನಾದ ವಂಜಾರನಿಗೆ ಭಾರಿ ಸಿಟ್ಟು ತರಿಸಿತ್ತು. ಆತ ಜೈಲಿನೊಳಗಿಂದಲೆ ರಾಜೀನಾಮೆ ಬರೆದು ಬಿಸಾಕಿದ್ದ. ಆದರೀಗ ಅದೃಷ್ಟಚಕ್ರ ತಿರುಗಿದೆ. ಮೋದಿ ಸರ್ಕಾರದ ಕೃಪೆಯಿಂದಾಗಿ ಅನೇಕ ಅಧಿಕಾರಿಗಳಿಂದು ಜಾಮೀನಿನ ಮೇಲೆ ಬಿಡುಗಡೆ ಗೊಂಡಿದ್ದಾರೆ. ಅವರೆಲ್ಲರೂ



ಇಂದು ರಾಜಾರೋಷವಾಗಿ ಓಡಾಡುತ್ತಿದ್ದಾರೆ. ಮಾತ್ರವಲ್ಲ ಒಳ್ಳೊಳ್ಳೆ ಹುದ್ದೆಗಳನ್ನು ಕೂಡ ಪಡೆದುಕೊಂಡಿದ್ದಾರೆ!

ಗುಜರಾತಿನಲ್ಲಿ 2002ರ ಬಳಿಕ ನಡೆದಿದ್ದ 20ಕ್ಕೂ ಅಧಿಕ ಎನ್ಕೌಂಟರ್‌ಗಳಲ್ಲಿ ಸತ್ತವರೆಲ್ಲ ತನ್ನನ್ನು ಹತ್ಯೆ ಮಾಡಲು ಬಂದ ಮುಸ್ಲಿಂ ಉಗ್ರರೆಂದು ಬಿಂಬಿಸಿದ ನರೇಂದ್ರ ಮೋದಿ ಹೇಗೆ ಅದನ್ನು ತನ್ನ ಭಾಷಣಗಳಲ್ಲಿ ಬಳಸಿಕೊಂಡು ಚುನಾವಣೆಗಳಲ್ಲಿ ಭಾರಿ ಅನುಕಂಪದ ಮತಗಳನ್ನು ಗಳಿಸಲು ಯಶಸ್ವಿಯಾಗಿದ್ದನೆಂಬ ವಿಚಾರ ಜನಜನಿತವಿದೆ. ಮುಸ್ಲಿಮರನ್ನು ಉಗ್ರರೆಂದು ಬಿಂಬಿಸುವ ದುಷ್ಟ ಬುದ್ಧಿಯನ್ನು ಪೊಲೀಸರು ಇಂದಿಗೂ ಮುಂದುವರಿಸುತ್ತಿರುವುದಕ್ಕೆ ಇತ್ತೀಚಿನ ಸೂರತ್‌ನ ಅಣಕು ಕಾರ್ಯಾಚರಣೆಯೆ ಸಾಕ್ಷಿ. ಇದು ಪೊಲೀಸ್ ಇಲಾಖೆಯ ಕೇಸರೀಕರಣ ಎಷ್ಟೊಂದು ಅಪಾಯಕಾರಿ ಮಟ್ಟವನ್ನು ತಲುಪಿದೆ ಎಂಬುದನ್ನೂ ತೋರಿಸುತ್ತದೆ.

(ಆಧಾರ: www.truthofgujarat.com - http://www.truthofgujarat.com)



ಕನ್ನಡಿಯ ಹಿಂದಿನ ಕಾಣದ ಕಥನ

ಮಾನವರಲ್ಲಿ ವೈಯಕ್ತಿಕ ಸೌಂದರ್ಯ ಪ್ರಜ್ಞೆಯನ್ನು ಹುಟ್ಟಿಸಿದ್ದೇ ಅಲ್ಲದೆ, ಅದನ್ನು ಹೆಚ್ಚಿಸಿದ್ದೇ ಕನ್ನಡಿ. ಇದಕ್ಕೆ ಯಾವುದೇ ಅನುಮಾನವೇ ಇಲ್ಲ. ಏಕೆಂದರೆ ಅಷ್ಟರಮಟ್ಟಿಗೆ ಕನ್ನಡಿಯು ಎಲ್ಲರ ದಿನನಿತ್ಯದ ಅವಲಂಭನೆಯಾಗಿದೆ. ಮಾತ್ರವಲ್ಲ ನಮ್ಮನ್ನೇ ನೋಡಿ ಮೆಚ್ಚಿ ಮತ್ತಷ್ಟು ಸುಂದರವಾಗಿ ಕಾಣಲು ಹುಡುಕಾಟ ನಡೆಸುವಂತೆ ಮಾಡುತ್ತದೆ ಕನ್ನಡಿ. ಕನ್ನಡಿಯಲ್ಲಿ ಮುಖ ನೋಡದವರು ಯಾರಿದ್ದಾರು ಹೇಳಿ! ದಿನಕ್ಕೊಮ್ಮೆಯಾದರೂ ನೋಡುವವರಂತೂ ಇದ್ದೇ ಇರುತ್ತಾರೆ! ಕನಿಷ್ಠ ತಲೆಯನ್ನು ಬಾಚಿಕೊಳ್ಳಲಾದರೂ ಕನ್ನಡಿಯನ್ನು ನೋಡುವುದುಂಟು. ಜತೆಗೆ ತಮ್ಮನ್ನು ತಾವು ಮೆಚ್ಚಿಕೊಳ್ಳಲೂ ಕನ್ನಡಿಯ ನಂಟೂ ಸಹಜವೇ. ಇದು ಇವತ್ತಿನದಲ್ಲ. ಈಗಾಗಲೇ ಸುಮಾರು 8,000 ವರ್ಷಗಳಿಂದಲೂ ಕನ್ನಡಿಯು ಮನುಕುಲಕ್ಕೆ ಪರಿಚಿತವೇ. ಅರೇ! ಇದೇನಿದು 8,000 ವರ್ಷಗಳೆಂದರೆ ಅಷ್ಟು ಹಿಂದಿನಿಂದ ಇದೇ ನಾವೀಗ ನೋಡುತ್ತಿರುವಂತಹ ಕನ್ನಡಿಯೇ ಇತ್ತೆ ಎಂಬ ಪ್ರಶ್ನೆ ಸಹಜ. ಆದರೆ ಮನುಷ್ಯ ಮೊದಲು ಕಂಡಿರಬಹುದಾದ ಕನ್ನಡಿ ಎಂಬುದು ಇವತ್ತಿನಂತಹದ್ದಲ್ಲ. ಇವತ್ತು ನಾವು ಕಾಣುವ ಕನ್ನಡಿಯ ಬಗ್ಗೆ ತುಸು ನಂತರ ಚರ್ಚಿಸೋಣ. ಹಳೆಯ ನಂಟೆಂದರೆ ಕನ್ನಡಿಯು ಪ್ರಶಾಂತ ಕೊಳದ ತಿಳಿನೀರು ಎಂದೇ ಭಾವಿಸಲಾಗಿದೆ ಅಥವಾ ನೀರನ್ನು ಹಿಡಿದೆತ್ತುವ ಯಾವುದೇ ಪಾತ್ರೆಯಲ್ಲೂ ಕಂಡ ಮುಖವೂ ಕನ್ನಡಿಯ ನಂಟನ್ನು ತಂದಿಟ್ಟಿದೆ. ಆದಾಗ್ಯೂ ಪ್ರಶಾಂತವಾದ ಕೊಳದಲ್ಲಿ ಹುಣ್ಣಿಮೆಯ ರಾತ್ರಿಯ ಬೆಳದಿಂಗಳಲ್ಲಿ ನೀರು ಪ್ರತಿಫಲಿಸುವ ಚಂದಿರನ ಬಿಂಬವಂತೂ, ಅಂತಹದ್ದೊಂದರ ಆಸೆಯ ಕುತೂಹಲಕ್ಕೆ ಹಚ್ಚಿರುವ ಎಲ್ಲಾ ಸಾಧ್ಯತೆಗಳಂತೂ ಇವೆ.

ಕನ್ನಡಿಗಳು ಕಥೆಯ ಹೇಳುವುದುಂಟು. ಆದರೆ ನೋಡುಗರ ಕಥೆಯನ್ನು ಸಹಜವಾಗಿ ಹೇಳಬಲ್ಲವು. ಅದೆಲ್ಲಾ ನಮ್ಮನ್ನು ನಾವು ಕಾಣುವ ಕಥೆ. ಮತ್ತೆ ಮತ್ತೆ ಕಂಡ ಕಥೆ! ಕನ್ನಡಿಯಲ್ಲಿ ಕಂಡದ್ದೆಲ್ಲಾ ನಿಜವಲ್ಲ ಎನ್ನುವ ಮಾತೂ ಇದೆ. ಅದು ಭ್ರಮೆ ಅಷ್ಟೇ ಎನ್ನುವುದುಂಟು. ಕಂಡದ್ದು ಬಿಡಿ ನಮ್ಮದೇ ಬಿಂಬ, ನಾವು ನೋಡಿದಾಗ ಕಂಡದ್ದಂತೂ ನಿಜವೇ! ಹಾಗಾಗಿ ಕನ್ನಡಿಯಲ್ಲಿ ಕಂಡದ್ದೇ ಆದರೆ ಅದು ಆಗಲಾದರೂ ನಿಜವೇ! ಉಳಿದಂತೆ ಕನ್ನಡಿಯಲ್ಲಿ ಕಂಡ ಸಂಗತಿ ನಿಜವೋ ಅಲ್ಲವೋ ಆ ವಿಚಾರ ಬಿಡೋಣ. ಆದರೆ ಅದರ ಹಿಂದೆ ಕಾಣದೆ ಇರುವಂತಹ ಅದೆಷ್ಟೋ ಸಂಗತಿಗಳಂತೂ ನಿಜದ ಸರಮಾಲೆಗಳೇ ಆಗಿವೆ. ಈ ಸರಮಾಲೆಯ ಹಿಂದೆ ಹೋದ ಕುತೂಹಲದ ಮನಸ್ಸು ಬಹು ದೂರವೇ ಓಡಿದೆ, ಅದು ಏನೆಲ್ಲಾ ಮಾಹಿತಿಗಳನ್ನು ತುಂಬಿ ಕೊಟ್ಟಿದೆ.


ನಾವೀಗ ನಿತ್ಯ ಬಳಸುತ್ತಿರುವ ಕನ್ನಡಿಗೆ ಸುಮಾರು ಒಂದು ನೂರ ಎಂಭತ್ತು ವರ್ಷಗಳಾಗಿವೆ. ಅಂದರೆ ಇದೀಗ ನಮಗೆಲ್ಲಾ ಕನ್ನಡಿ ಎನ್ನಿಸುವ ಒಂದು ವಸ್ತುವನ್ನು ಅವಿಷ್ಕರಿಸಿದ್ದು ಜರ್ಮನಿಯ ಜಸ್ಟಸ್ ವಾನ್ ಲೀಬಿಗ್ ಎಂಬ ರಸಾಯನಶಾಸ್ತ್ರಜ್ಞ. 1835ರಲ್ಲಿ ಈಗ ಬಳಸುತ್ತಿರುವಂತೆ ಗಾಜಿಗೆ ಹಿಂದೆ ಬೆಳ್ಳಿಲೇಪನದ ಮಾದರಿಯನ್ನು ಕಂಡುಹಿಡಿದರು. ಲೀಬಿಗ್ ಅವರನ್ನು ಕೃಷಿರಸಾಯನಶಾಸ್ತ್ರದ ಪಿತಾಮಹನೆಂದೇ ಕರೆಯಲಾಗುತ್ತದೆ. ಮೊಟ್ಟಮೊದಲ ರಸಗೊಬ್ಬರವನ್ನೂ ಕಂಡುಹಿಡಿದ ಆತ ಸಸ್ಯಗಳ ಅಗತ್ಯಗಳ ಕುರಿತಂತೆ ಬಲುದೊಡ್ಡ ಕ್ರಾಂತಿಯನ್ನೇ ಮಾಡಿದರು. ವಾಸ್ತವವಾಗಿ ಜಗತ್ತಿನ ಆಧುನಿಕತೆಯ ಬೆಳಕಿಗೆ ರಸಾಯನ ಶಾಸ್ತ್ರೀಯ ಕನ್ನಡಿಯನ್ನು ನಿಜಕ್ಕೂ ಹಿಡಿದ ಮಹಾ ಮೇಧಾವಿ ವಿಜ್ಞಾನಿ.

ಕನ್ನಡಿ ಎಂದರೆ ನಾವೀಗ ಕಾಣುತ್ತಿರುವ ವಸ್ತು ಮಾತ್ರವೇ ಅಲ್ಲ! ಕನ್ನಡಿ ಎಂದರೆ ಯಾವುದೇ ವಸ್ತು ಬೆಳಕನ್ನು ಪ್ರತಿಫಲಿಸುವಂತಹದ್ದಾದರೆ ಸಾಕು, ಅದಕ್ಕೆ ಕನ್ನಡಿ ಎನ್ನಬಹುದು. ಅದೂ ಎಂತಹ ಪ್ರತಿಫಲನವೆಂದರೆ ಪ್ರತಿಫಲಿಸಿದ ಬೆಳಕಿಗೆ ಮತ್ತೆ ಕನ್ನಡಿ ಹಿಡಿದರೆ ಹೆಚ್ಚೂಕಡಿಮೆ ಮೂಲ ಬೆಳಕಿನ ತದ್ರೂಪು ಸಿಗುವಂತಹದ್ದಾಗಿರಬೇಕು, ಅದಕ್ಕೆ ಕನ್ನಡಿ ಎನ್ನುತ್ತೇವೆ. ಇಂತಹದ್ದೊಂದು ಬೆಳಕಿಗೆ ಬರುವ ಮುನ್ನವೇ ಕನ್ನಡಿ ವೈವಿಧ್ಯಮಯ ರೂಪಗಳು ಮಾನವನ ಬಳಕೆಯಲ್ಲಿದ್ದವು. ಮೂಲತಃ ನೀರಿನ ಬೆಳಕಿನ ಪ್ರತಿಫಲನ ಮನುಷ್ಯ ಮೊದಲು ಕಂಡಿರಬಹುದಾದ ಕನ್ನಡಿಯ ಮೊದಲ ಕುರುಹು. ಜತೆಗೆ ನಂತರದಲ್ಲಿ ಕಲ್ಲಿನ ಮೇಲ್ಮೈಯಲ್ಲಿನ ಹೊಳಪಿನಿಂದಾಗುವ ಪ್ರತಿಫಲನವೂ ಸೇರಿಕೊಂಡಿದೆ. ಹಾಗಾಗಿ ಮಾನವರ ಮೊದಲ ಬಳಕೆಯಲ್ಲಿ ಬಂದಂತಹ ಕನ್ನಡಿಯು ಬಳಪದ ಕಲ್ಲಿನ ನುಣುಪಾದ ಮೇಲ್ಮೈಯ ರೂಪದವಾಗಿರಬಹುದು ಎಂದು ನಂಬಲಾಗಿದೆ. ಏಕೆಂದರೆ ನುಣುಪಾದ ಹೊಳಪಿನ ಮೇಲ್ಮೈಯ ಅನೇಕ ವಸ್ತುಗಳು ಈ ಪ್ರತಿಫಲಿಸುವ ಕೆಲಸವನ್ನು ಮಾಡಬಲ್ಲವು. ಅದು ಪೂರ್ಣವಾದ ಪ್ರತಿಫಲನವಾಗಿರಬಹುದು ಅಥವಾ ಭಾಗಶಃವಾಗಿರಲೂಬಹುದು. ಏಕೆಂದರೆ ಸಾಮಾನ್ಯವಾಗಿ ಕನ್ನಡಿಗಳು ಪ್ರತಿಫಲಿಸುವ ಕೆಲಸವನ್ನೇ ನಿರ್ವಹಿಸುತ್ತವಾದರೂ, ಅವುಗಳು ತಮ್ಮಲ್ಲೇ ಕೆಲವು ತರಂಗದೂರದ ಬೆಳಕನ್ನು ಸ್ವಲ್ಪವೇ ಇಟ್ಟುಕೊಳ್ಳುವುದೂ ಉಂಟು. ಅಂತಹದರಲ್ಲಿ ಕನ್ನಡಿಯೂ ಪೂರ್ಣಪ್ರಮಾಣದ ಬೆಳಕು ಪ್ರತಿಫಲಿಸುವುದಿಲ್ಲ. ಇವೆಲ್ಲಾ ಕನ್ನಡಿಯಾಗಿ ಕಾರ್ಯ ನಿರ್ವಹಿಸುವ ವೈವಿಧ್ಯಮಯ ವಸ್ತುಗಳನ್ನು ಅವಲಂಬಿಸಿದೆ. ಆ ಮೂಲಕ ಪ್ರತಿಫಲನದ ವೈವಿಧ್ಯವನ್ನು ಕಾಣಬಹುದು.

ಸಾಮಾನ್ಯವಾಗಿ ಕಾಣಬರುವ ಬಹುತೇಕ ಕನ್ನಡಿಗಳು ಸಮತಟ್ಟಾದ ಮೇಲ್ಮೈಯ ಕನ್ನಡಿಗಳು, ಹಲವು ಬಾಗಿರುವ ಮೇಲ್ಮೈಯವೂ ಇರುತ್ತವೆ. ಈ ಬಾಗಿದ ಮೇಲ್ಮೈಯವು ಪ್ರತಿಫಲನದ ಹೆಚ್ಚಿಸುವಿಕೆ, ಕಡಿಮೆಮಾಡುವಿಕೆ ಮತ್ತಿತ್ತರ ಅಗತ್ಯಗಳ ಪೂರೈಕೆಯಲ್ಲಿ ಸಹಾಯಕ್ಕೆ ಬರುತ್ತವೆ. ವೈವಿಧ್ಯಮಯ ಮೇಲ್ಮೈಯ ಕನ್ನಡಿಗಳು ವಿವಿಧ ಕಾರ್ಯನಿರ್ದೇಶನದ ಅಗತ್ಯಗಳ ಹಿನ್ನೆಲೆಯಲ್ಲಿ ಆವಿಷ್ಕಾರಗೊಂಡವು. ಇಂದು ಸಾಮಾನ್ಯವಾಗ ತಲೆ ಬಾಚಿಕೊಳ್ಳಲು ಬಳಸುವ ಕನ್ನಡಿಗಳಿಂದ ಹಿಡಿದು, ಉಪಗ್ರಹಗಳ ಮೇಲ್ಮೈಯಲ್ಲಿ ಲೇಸರ್‌ಗಳ ಒಳಗೋಡೆಯಲ್ಲಿ ಅಲ್ಲದೆ ಕ್ಯಾಮರ, ಟೆಲಿಸ್ಕೋಪ್ ಮುಂತಾದ ಅನೇಕ ಅತ್ಯಾಧುನಿಕ ಉಪಕರಣಗಳ ನಿರ್ಮಾಣದಲ್ಲಿಯೂ ಬಳಸಲಾಗುತ್ತದೆ. ತುಂಬಾ ಸಾಮಾನ್ಯವಾದ ಕನ್ನಡಿಗಳನ್ನು ಕಾಣುವ ತರಂಗದೂರದ ಬೆಳಕಿನ ಪ್ರತಿಫಲನಕ್ಕೆ ಬಳಸಲಾಗುತ್ತಿದ್ದರೂ, ಕಣ್ಣಿಗೆ ಕಾಣದ ತರಂಗದೂರದ ಬೆಳಕಿನ ಪ್ರತಿಫಲನಕ್ಕೂ ವಿಶೇಷ ಬಗೆಯ ಕನ್ನಡಿಗಳಿರುತ್ತವೆ. ಆದರೆ ಇವೆಲ್ಲಾ ದೃಷ್ಟಿಯಾಚೆಯ ಗ್ರಹಿಕೆ ಮತ್ತಿತರ ಸೌಲಭ್ಯಕ್ಕಾಗಿ ಬಳಸಲಾಗುತ್ತದೆ.

ನಮ್ಮ ರಾಜ್ಯದ ಬೇಲೂರಿನ ಚೆನ್ನಕೇಶವ ದೇವಾಲಯದಲ್ಲಿರುವ ಕೈಯಲ್ಲಿ ಕನ್ನಡಿ ಹಿಡಿದ ಶಿಲಾಬಾಲಿಕೆ 'ದರ್ಪಣಸುಂದರಿ'ಯು ತುಂಬಾ





ಪ್ರಸಿದ್ಧವಾದದ್ದು. ಆ ಕಾಲದಲ್ಲಿನ ಕನ್ನಡಿಗಳು ಹೊಲಪುಳ್ಳ ಕಲ್ಲಿನವೇ ಆಗಿದ್ದಿರಲು ಸಾಧ್ಯವಿದೆ. ಆದ್ದರಿಂದಲೇ ಅಂತಹ ಸಾಧ್ಯತೆಗಳ ಪ್ರತಿನಿಧಿಸುವ ಮೂರ್ತಿಯು ಕೆತ್ತನೆಗೊಂಡಿರಬೇಕು. ಇನ್ನೂ ಇತಿಹಾಸ ಪೂರ್ವದ ಕಾಲದಲ್ಲಿ ನಿಸರ್ಗವೇ ಉಂಟುಮಾಡುವ ಅಗ್ನಿಪರ್ವತಗಳ ಗಾಜು, ಅಲ್ಲದೆ ಕೆಲವು ಹೊಳಪಿನ ಶಿಲೆಗಳು ನಮ್ಮ ಪುರಾತನರ ಕನ್ನಡಿಯ ಅವಶ್ಯಕತೆಯನ್ನು ಪೂರೈಸಿವೆ. ಅನಂತರ ಲೋಹದ ಮೇಲ್ಮೈಗಳೂ ಕನ್ನಡಿಯ ಸ್ಥಳವನ್ನು ತುಂಬಿಕೊಟ್ಟಿವೆ. ಮೆಸೆಪಟೋಮಿಯಾ, ಈಜಿಪ್ಟಿನ ನಾಗರಿಕತೆಗಳು ಲೋಹದ ಅದರಲ್ಲೂ ತಾಮ್ರದ ಕನ್ನಡಿಗಳ ಬಳಸಿರುವ ಬಗೆಗೆ ಆಧ್ಯಯನಗಳು ತಿಳಿಸುತ್ತವೆ. ಕನ್ನಡಿಗಳ ಇತಿಹಾಸದಲ್ಲಿ ರೋಮನ್ನರು ಆರಂಭಿಕ ಕುರುಹುಗಳನ್ನು ಕೊಟ್ಟವರು. ಗಾಜಿನ ಲೇಪನಗಳ ಮೂಲಕ ಕನ್ನಡಿಗಳ ನಿರ್ಮಾಣಕ್ಕೆ ತೊಡಗಿದವರು. ಅದಲ್ಲದೆ ಚೀನಿಯರು ಸುಮಾರು ಕ್ರಿಸ್ತಶಕ 500ರ ಸುಮಾರಿಗೆ ಬೆಳ್ಳಿ ಮತ್ತು ಪಾದರಸದ ಮಿಶ್ರಣದ ಬಳಕೆಯಿಂದ ಕನ್ನಡಿಗಳ ನಿರ್ಮಾಣಕ್ಕೆ ಮೊದಲಾದರು. ಹೀಗೆ ವೈವಿಧ್ಯಮಯ ಆಸಕ್ತಿ ಮತ್ತು ಸೌಂದರ್ಯದ ರಸಾನುಭವದ ಸೃಷ್ಟಿಗಾಗಿ ಕನ್ನಡಿಯ ಕಥಾನಕ ಬೆಳೆದುಬಂದಿದೆ. ಇದರ ಹಾದಿಯಲ್ಲಿ ಆರಂಭಿಕ ರಸಾಯನ ಶಾಸ್ತ್ರದ ಬೆಳವಣಿಗೆಗಳಿಗೆ ಇದು ಅನುವು ಮಾಡಿಕೊಟ್ಟಿದೆ. ಹಾಗೆಂದೇ ಪ್ರಸ್ತುತ ಬಳಕೆಯಲ್ಲಿರುವ ಕನ್ನಡಿಯು ಆವಿಷ್ಕಾರವೂ ರಸಾಯನಶಾಸ್ತ್ರಜ್ಞರಿಂದ ಸಾಧ್ಯವಾಗಿದೆ. ಇವತ್ತು ಬಳಕೆಯಲ್ಲಿನ ಬೆಳ್ಳಿ ಲೇಪಿತ ಕನ್ನಡಿಗಳು ಅಪ್ಪಟ ರಸಾಯನ ಶಾಸ್ತ್ರೀಯ ಬೆಳವಣಿಗೆಗಳಲ್ಲಿ ಒಂದು. ಇದು ಬೆಳ್ಳಿ ಲೇಪನ ಎನ್ನುವಂತಹ ಕ್ರಿಯೆಯನ್ನೇ ವಿಕಾಸಗೊಳಿಸಿದ್ದು ಈಗ ವಿಜ್ಞಾನದ ಐತಿಹಾಸಿಕ ಸಂಗತಿ. ತೀರಾ ಇತ್ತೀಚೆಗೆ ಅಲ್ಯುಮಿನಿಯಂ ಬಳಸಿಯೂ ಲೇಪನಗೊಳ್ಳುವ ಕನ್ನಡಿಗಳು ಕಂಡುಹಿಡಿಯಲ್ಪಟ್ಟಿವೆ.

ಕನ್ನಡಿಯ ಬಳಕೆಯು ಆಧುನಿಕ ಜಗತ್ತಿನಲ್ಲಿ ವೈವಿಧ್ಯಮಯವಾಗಿವೆ. ಮಾತ್ರವಲ್ಲ ವೈಜ್ಞಾನಿಕ ತಂತ್ರಜ್ಞಾನಗಳ ಬೆಳವಣಿಗೆಯಲ್ಲಿ ಬಹುಮುಖ್ಯ ಪಾತ್ರವನ್ನೂ ವಹಿಸಿದೆ. ಹೆಚ್ಚೂ ಕಡಿಮೆ ಎಲ್ಲಾ ಬಗೆಯ ದರ್ಶಕಗಳೂ ಕನ್ನಡಿಯ ವಿವಿಧ ರೂಪವನ್ನು ತಮ್ಮಲ್ಲಿಟ್ಟುಕೊಂಡೇ ವೈವಿಧ್ಯಮಯ ಬಳಕೆಗೆ ಸ್ಥಾನವನ್ನು ಪಡೆದಿವೆ. ಬಹಳ ಮುಖ್ಯವಾಗಿ ಕನ್ನಡಿಯ ಮೇಲ್ಮೈಯು ತನ್ನ ವಿನ್ಯಾಸದಲ್ಲಿ ಬದಲಾಗುವ ಮೂಲಕ ಅದರ ಬಳಕೆಯಿಂದಾಗುವ ಉಪಯೋಗಗಳನ್ನು ವಿಕಸಿಸಲಾಗಿದೆ. ಇವತ್ತಿನ ಡಿಜಿಟಲ್ ಪ್ರಪಂಚದ ಅನೇಕ ಉಪಯೋಗಿ ಸಲಕರಣೆಗಳು ಕನ್ನಡಿಗಳ ಒಳಗೊಂಡೇ ಕಾರ್ಯನಿರ್ವಹಿಸುತ್ತಿವೆ. ಒಂದು ಅರ್ಥದಲ್ಲಿ ಕನ್ನಡಿಗಳ ಕೆಲಸವು ಜಗತ್ತಿನ ಆಧುನಿಕತೆಗೆ ಹಿಡಿದ "ಕನ್ನಡಿ"ಗಳೇ ಆಗಿವೆ. ಸೂಕ್ಷ್ಮದರ್ಶಕ, ದೂರದರ್ಶಕ ಎಲ್ಲವೂ ಕನ್ನಡಿಯನ್ನು ಒಡಲಲ್ಲಿಟ್ಟುಕೊಂಡೇ ಕೆಲಸ ನಿರ್ವಹಿಸುತ್ತಿವೆ. ಮೂಲಭೂತವಾಗಿ ಬೆಳಕಿನ ಪ್ರತಿಫಲನವನ್ನು ಬೇಕಾದ ಕಡೆ, ಬೇಕಾದ ಹಾಗೆ ಪಡೆಯುವ ಮೂಲಕ ಜಗತ್ತಿನ ದರ್ಶನಕ್ಕೆ ಕನ್ನಡಿಗಳು ನೆರವಾಗುತ್ತಲೇ ಇವೆ. ಸೂರ್ಯನನ್ನು ಭೂಮಿಯ ಮೇಲೆ ನಮ್ಮ ಅಗತ್ಯಗಳಿಗೆ ಹೊಂದಿಸಿಕೊಳ್ಳುವ ನವೀನ ಸೌರಶಕ್ತಿ ಉಪಕರಣಗಳಲ್ಲಿ ಕನ್ನಡಿಗಳು ಬಲುದೊಡ್ಡ ಉಪಕಾರವನ್ನೇ ಮಾಡುತ್ತಿವೆ. ಸೂರ್ಯನ ಬೆಳಕನ್ನು ಕೇಂದ್ರೀಕರಿಸಿ ಶಕ್ತಿಯನ್ನು ಹೆಚ್ಚು ಪಡೆಯುವಂತಾಗಲೂ ಕನ್ನಡಿಗಳು ನೆರವಾಗುತ್ತಿವೆ. ಆ ಮೂಲಕ ಕನ್ನಡಿಗಳು ಶಕ್ತಿವರ್ಧನೆಯ ಕೆಲಸಕ್ಕೂ ಕೈಹಾಕಿವೆ.

ಮುಖಾ-ಮುಖಿಯಾದ ಕನ್ನಡಿಗಳನ್ನು ನಾವು ನೋಡಿರುತ್ತೇವೆ. ಒಂದನ್ನೊಂದು ಎದುರು ನೋಡುವ ಕನ್ನಡಿಗಳು ನವೀನ ವಿನ್ಯಾಸಗಳಲ್ಲಿ ಸಾಮಾನ್ಯವಾಗಿವೆ. ವಾಣಿಜ್ಯವಹಿವಾಟಿನ ಸ್ಥಳಗಳಲ್ಲಿ ಆಕ್ರಮಿಸಿಕೊಂಡಿರುವ ಈ ಬಗೆಯ ಒಂದನ್ನೊಂದು ಎದುರುನೋಡುವ ಕನ್ನಡಿಗಳು ಇರುವ ಸ್ಥಳವನ್ನೇ ಹಿಗ್ಗಿ ತೋರಿಸುವ ಕೆಲಸವನ್ನು ಸುಸೂತ್ರವಾಗಿ ಮಾಡುತ್ತಿವೆ.

ಇಷ್ಟೇ ಅಲ್ಲ, ಕನ್ನಡಿಗಳು ಶತ್ರುಗಳ ಸಂಹಾರದಲ್ಲೂ ಮುಖಕೊಟ್ಟಿವೆಯಂತೆ. ದಾರ್ಶನಿಕ ವಿಜ್ಞಾನಿ ಆರ್ಕಿಮಿಡಿಸ್ ತನ್ನ ದೊರೆಗೆ ಯುದ್ಧದಲ್ಲಿ ಬಳಸುವಂತಹ ಕನ್ನಡಿಗಳ ರೂಪಿತ ಕೊಲ್ಲುವ ಯಂತ್ರಗಳನ್ನು ರೂಪಿಸಿದ್ದನೆಂದು ಪ್ರತೀತಿ. ದೊಡ್ಡ ದೊಡ್ಡ ಕನ್ನಡಿಗಳ ಸಹಾಯದಿಂದ ಬಹಳ ಬೆಳಕನ್ನು ದೂರದಲ್ಲಿ ಬರುತ್ತಿರುವ ನಾವೆಗೆ ಪ್ರತಿಫಲಿಸಿ ಅಗಾಧ ಸೂರ್ಯಶಕ್ತಿಯನ್ನು ಹಾಯಿಸುವಂತೆ ಮಾಡಿ ಶತ್ರುಗಳ ನಾಶ ಮಾಡವಂತೆ ರೂಪಿಸಿದ್ದನಂತೆ. ಇದೊಂದು ಮಿಥ್ ಎಂದೇ ಭಾವಿಸಲಾಗಿದೆ. ಇದನ್ನು "ಆರ್ಕಿಮಿಡಿಸನ ಸಾವಿನ ಕಿರಣಗಳು" ಎಂದೇ ಕರೆಯಲಾಗುತ್ತಿತ್ತು. ಇದನ್ನೇ ಮೆಸಾಚುಸೆಟ್ಸ್ ತಾಂತ್ರಿಕ ವಿದ್ಯಾಲಯದವರು ಮತ್ತೆ ಅಂತಹದೇ ಕಿರಣಗಳ ಪುನರ್-ಸೃಷ್ಟಿಮಾಡುವ ಪ್ರಯತ್ನ ಮಾಡಿ ಸೋತಿದ್ದಾರೆ. ಆದ್ದರಿಂದ ಕನ್ನಡಿಯಿಂದ ಆರ್ಕಿಮಿಡಿಸ್ ಸೃಷ್ಟಿಸಿದ್ದ ಸಾವಿನ ಕಿರಣಗಳು ಒಂದು ಕಟ್ಟುಕಥೆಯಿರಬೇಕೆಂದು ಅನುಮಾನಿಸಲಾಗುತ್ತಿದೆ.

ವರ್ತನೆಗಳ ಅಧ್ಯಯನದಲ್ಲಿ ಕನ್ನಡಿಯ ಪಾತ್ರ ಬಹಳ ಮುಖ್ಯವಾದುದಾಗಿದೆ. ಮಾನವರು ಸಹ ಎಳೆಯ ವಯಸ್ಸಿನಲ್ಲಿ ಕನ್ನಡಿಯ ಚಿತ್ರವನ್ನು ತಮ್ಮದೇ ಎಂದು ಭಾವಿಸಲಾರರು. ಅದಕ್ಕೇ ಎಳೆಯ ಮಕ್ಕಳನ್ನು ಕನ್ನಡಿಯ ಹತ್ತಿರ ಕೊಂಡೊಯ್ದು ಅದೇ ಪಾಪು, ನೋಡು ಎನ್ನುತ್ತಾ ಸಮಾಧಾನಪಡಿಸುವ ಸಂದರ್ಭಗಳು ಸಮಾನ್ಯವಾದ ಸಂಗತಿಗಳು. ಹೀಗೆ ವಿವಿಧ ಪ್ರಾಣಿಪಕ್ಷಿಗಳೂ ಸಹ ಕನ್ನಡಿಯ ಪ್ರತಿಬಿಂಬಕ್ಕೆ ವೈವಿಧ್ಯಮಯವಾಗಿ ಸ್ಪಂದಿಸುತ್ತವೆ. ಮಾನವರಲ್ಲೂ 18 ತಿಂಗಳ ನಂತರದ ವಯಸ್ಸನ್ನು ಕನ್ನಡಿಯ ಪ್ರತಿಫಲನವನ್ನು ಗುರುತಿಸುವ ವಯಸ್ಸೆಂದೇ ಪರಿಗಣಿಸಲಾಗಿದೆ. ನಮ್ಮ ನಡುವಿರುವ ಪ್ರಾಣಿಗಳಲ್ಲಿ ಆನೆಯು ಕನ್ನಡಿಯ ಚಿತ್ರವನ್ನು ತನ್ನದೇ ಎಂದು ಗುರುತಿಸುತ್ತದೆ. ಅನೇಕ ಮಂಗನ ಜಾತಿಯ ಪ್ರಾಣಿಗಳು ಕನ್ನಡಿಯ ಚಿತ್ರವನ್ನು ಗುರುತಿಸುತ್ತವೆ. ಆದರೆ ಹಕ್ಕಿಗಳು ತಮ್ಮದೇ ಚಿತ್ರ ಎಂದುಕೊಳ್ಳಲಾರವು. ಅದಕ್ಕೆ ಗುಬ್ಬಚ್ಚಿಗಳು ಕನ್ನಡಿಯ ಕುಕ್ಕುತ್ತಾ ಇರುವುದನ್ನು ಗಮನಿಸಿರುತ್ತೇವೆ. ಹಾಗೆ ಹಕ್ಕಿಗಳು ಕನ್ನಡಿಯ ಒಳಗೆ ಯಾವುದೋ ಹಕ್ಕಿಯಿದೆ ಎಂದೇ ಭಾವಿಸುತ್ತವೆ. ಇದನ್ನು ಹೀಗೆ ವರ್ತನೆಗಳ ಅಧ್ಯಯನಕ್ಕೆ ಬಳಸುವುದನ್ನು ಕನ್ನಡಿ ಪರೀಕ್ಷೆ ಎಂದೇ ಹೆಸರು. ಕನ್ನಡಿ ಪರೀಕ್ಷೆಯನ್ನು ಪಾಸದ ಪ್ರಾಣಿಗಳಲ್ಲಿ ಮಂಗಗಳು ಮತ್ತು ಆನೆ ಮುಖ್ಯವಾದವು.

ಅಂದಂತೆ ವೈವಿಧ್ಯಮಯ ಕನ್ನಡಿಗಳು ಬಳಕೆಯಲ್ಲಿವೆ. ಬಿಸಿ ಕನ್ನಡಿಗಳು ಒಂದು ರೀತಿಯಲ್ಲಿ ಅಪ್ಪಟ ಗಾಜಿನ ತರಹ ವರ್ತಿಸುವ ಕನ್ನಡಿಗಳಾಗಿವೆ. ಇವು ನಮ್ಮ ಕಣ್ಣು ಗುರುತಿಸುವ ಮಾಮೂಲಿ ಬೆಳಕನ್ನು ಹಾದುಹೋಗಲು ಬಿಡುತ್ತದೆ. ಆದರೆ ಅವೆಗೆಂಪು ಬಣ್ಣದ (ಇನ್‌ಫ್ರಾರೆಡ್) ಬೆಳಕನಷ್ಟೇ ಪ್ರತಿಫಲಿಸುತ್ತವೆ. ಅದೇ ರೀತಿ ತಂಪು ಕನ್ನಡಿಗಳೂ ಇವೆ. ಇವು ಬಿಸಿ ಕನ್ನಡಿಗಳಿಗೆ ವಿರುದ್ಧ ದಿಕ್ಕಿನಲ್ಲಿ ಕೆಲಸಮಾಡುತ್ತವೆ. ಅವೆಗೆಂಪು ಬಣ್ಣದ ಕಿರಣ ಅಥವಾ ಬೆಳಕನ್ನು ಹಾದು ಹೋಗಲು ಬಿಟ್ಟು ಮಾಮೂಲಿ ಬೆಳಕನ್ನು ಪ್ರತಿಫಲಿಸುತ್ತವೆ. ಅದೇ ರೀತಿಯಲ್ಲಿ ಕ್ಷ-ಕಿರಣಗಳನ್ನು ಮಾತ್ರವೇ ಪ್ರತಿಫಲಿಸುವಂತಹ ಕನ್ನಡಿಗಳೂ ಇವೆ. ನಿರ್ವಾತವನ್ನು ಬಿಸಿ ಮಾಡುವಲ್ಲಿ ಸಹಾಯವಾಗುವ ಕನ್ನಡಿಗಳೂ ಇವೆ. ಮೈಕ್ರೋ ವೇವ್ ಮಾದರಿಗಳಲ್ಲಿ ಬಳಸುವ ಇಂತಹ ಕನ್ನಡಿಗಳು ಲೋಹದ ಪ್ರತಿಫಲಕಗಳು. ಇವೆಲ್ಲಾ ಅಗತ್ಯಗಳಿಗೆ ತಕ್ಕ ಸಂದರ್ಭಕ್ಕೆ ವಿನ್ಯಾಸಗೊಳಿಸದ ಕನ್ನಡಿಗಳು. ಕೆಲವಂತೂ ಮೂಲ ಬೆಳಕಿಗೆ ಪ್ರತಿಫಲಿಸುವಂತಹ ಕನ್ನಡಿಗಳನ್ನೂ ವಿನ್ಯಾಸಗೊಳಿಸಲಾಗಿದೆ.

ಮಾನವರ ಸೃಜನಶೀಲತೆಗೆ, ಭಾವನಾತ್ಮಕ ಸಂಗತಿಗಳಿಗೆ, ಅನುಮಾನಗಳಿಗೆ, ಹಾಗೆ ಜಗಳಗಳನ್ನು ಹುಟ್ಟು ಹಾಕುವ ಬಗೆಗೂ ಸಹ ಕನ್ನಡಿಯನ್ನು ರೂಪಕವಾಗಿ ಬಳಸುವುದುಂಟು. ಅದಕ್ಕೆ ಸರಿ ಎಂಬಂತೆ ಅನೇಕ ವೈಜ್ಞಾನಿಕ ತಿರ್ಮಾನಗಳೂ, ಸಂಗತಿಗಳೂ ಇವುಗಳನ್ನು ಬೆಂಬಲಿಸಿವೆ. ಮುಖ್ಯವಾಗಿ ಕನ್ನಡಿಯು ನಮ್ಮನ್ನು ಕೆಲಕಾಲ ಹಿಡಿದಿಡುವಲ್ಲಿ ತುಂಬಾ ಸಹಕಾರಿ. ಹಾಗೇಯೇ ನಮ್ಮ ಒಂಟಿತನವನ್ನೂ ಕ್ಷಣಕಾಲ ದೂರಮಾಡುವ, ಹಾಗೆಯೇ ಒಂಟಿತನವನ್ನೂ ಖುಷಿಪಟ್ಟುಕೊಳ್ಳುವಂತೆ ಮಾಡುವಲ್ಲಿ ಕನ್ನಡಿಯು ಸಹಕಾರವನ್ನು ಅನೇಕ ಅಧ್ಯಯನಕಾರರು ಗುರುತಿಸುತ್ತಾರೆ. ಇವೆಲ್ಲವನ್ನೂ ಒಳಗೊಳ್ಳುವಂತಹ ಸಂಗತಿಯೊಂದು ಸುಪ್ರಸಿದ್ಧವಾದುದು. ಬಹು ಮಹಡಿ ಕಟ್ಟಡಗಳು ನಿರ್ಮಾಣಗೊಳ್ಳುತ್ತಿದ್ದಂತೆಯೇ ಅದರ ಮೇಲು ಮಹಡಿಯನ್ನು ತಲುಪಲು ಮತ್ತು ಕೆಳ ಮಹಡಿಗೆ ಇಳಿಯಲೂ ಲಿಫ್ಟ್‌ಗಳು ಅನ್ವೇಷಣೆಗೊಂಡವು. ಇದೀಗ ನಾವು ಗಮನಿಸಿರಬಹುದು, ಸಾಮಾನ್ಯವಾಗಿ ಲಿಫ್ಟ್‌ಗಳಲ್ಲಿ ಕನ್ನಡಿಗಳಿರುತ್ತವೆ. ಅದಕ್ಕೊಂದು ದೊಡ್ಡ ತಗಾದೆಯ ಉದಾಹರಣೆಯಿದೆ. ಮೊದಮೊದಲು ಲಿಫ್ಟ್ ಬಳಕೆಯಾಗುತ್ತಿದ್ದಂತೆ ಕನ್ನಡಿಗಳೇನೂ ಒಳಹೊಕ್ಕಿರಲಿಲ್ಲ. ಆಗ ಪಯಣಿಸುತ್ತಿದ್ದವರು ಲಿಫ್ಟ್‌ನ ವೇಗದ ಬಗ್ಗೆ ದೂರು ಕೊಡಲು ಆರಂಭಿಸಿದ್ದರಂತೆ. ಸರಿ ಲಿಫ್ಟ್ ತಯಾರಕರು ವೇಗ ಹೆಚ್ಚಿಸುತ್ತಾ ಅಭಿವೃದ್ಧಿಪಡಿಸಿದರು. ಆದರೂ ದೂರುಗಳು ಕಡಿಮೆಯಾಗಲಿಲ್ಲ. ಆಗ ಒಂದು ಲಿಫ್ಟ್ ತಯಾರಿಸುವ ಕಂಪನಿ ಅದರೊಳಗೊಂದು ಕನ್ನಡಿ ಇಡುವ ಉಪಾಯವನ್ನು ರೂಪಿಸಿತು. ಒಳಗೆ ಒಬ್ಬರೇ ಚಲಿಸುವಾಗ ಅವರ ಗಮನವನ್ನು ಸೆಳೆದು ಒಂದಷ್ಟು ಆಲೋಚನೆ ಹಚ್ಚಲು ಕನ್ನಡಿ ನೆರವಾಯಿತು. ಅಷ್ಟರಲ್ಲಿ ತಲುಪಬೇಕಾದ ಮಹಡಿ ಬಂದಾಗಿರುತ್ತದೆ. ಒಬ್ಬರೇ ಚಲಿಸುವಾಗ ಭಾವನಾತ್ಮಕವಾಗಿ ಲಿಫ್ಟ್‌ನ ಸಮಸ್ಯೆಗಳ ಕಡೆಗೆ ಅನುಮಾನಗಳು ಆರಂಭವಾಗಿ ಅದರ ವೇಗದ ಬಗ್ಗೆ ಚಿಂತಿಸಲು ಮನಸ್ಸು ಆರಂಭಿಸುವುದನ್ನು ತಡೆಯಲು ಕನ್ನಡಿ ನೆರವಾಯಿತು. ಅಂತೂ ಕನ್ನಡಿಯೂ ಲಿಫ್ಟ್ ಸೇರಿತು.

ಕನ್ನಡಿಯು ನಮ್ಮ ಮನಸ್ಸಿನ ಆಲೋಚನೆಗಳ ಚಿಂತನೆಗೆ ಹಚ್ಚಿಸಿ, ಆಧುನಿಕತೆಯ ಬೆರಗನ್ನೂ ಹೆಚ್ಚಿಸಿ ಸೌಂದರ್ಯದ ಸೊಬಗನ್ನೂ ಕೊಡವ ಮುಖವನ್ನು ಹೊತ್ತ ಸಾಧನವಾಗಿದೆ. ಅದಕ್ಕೇ ಚಿತ್ರಕಾರರನ್ನು ಕನ್ನಡಿಯು ಅತಿ ಹೆಚ್ಚೇ ಕಾಡಿದೆ. ಒಟ್ಟಿನಲ್ಲಿ ಕನ್ನಡಿಯ ಹಿಂದಿನ ಕಾಣದ ಮುಖ ಅನೇಕ ಕಥನಗಳನ್ನು ಒಳಗೊಂಡಿದೆ. ಅವೆಲ್ಲವೂ ಅನೇಕ ಸಂತತಿಗಳನ್ನು ದಾಟಿ ಶತಮಾನಗಳ ಸವೆಸಿ ನಮ್ಮನ್ನೆಲ್ಲಾ ಇಲ್ಲಿಯವರೆಗೂ ತಂದಿವೆ. ಕನ್ನಡಿಯ ಪುಟ್ಟ ಉಪಕಾರದಿಂದ ಜಗತ್ತಿನ ಅನೇಕ ಆಧುನಿಕ ಆಗುಹೋಗುಗಳು ಸಾಧ್ಯವಾಗಿಸಿವೆ. ನಮ್ಮೆಲ್ಲಾ ಆಲೋಚನೆಗಳಿಗೆ ಕನ್ನಡಿ ಹಿಡಿಯುತ್ತಾ, ನಮ್ಮನ್ನೇ ಮೆಚ್ಚುತ್ತಾ ಜಗತ್ತನ್ನು ಮುಂದೆ ಮುಂದೆ ಪಯಣಿಸಲು ದಾರಿಯ ಸಾಧ್ಯತೆಗಳನ್ನು ಕೊಟ್ಟಿದೆ.

ಯೋಗೇಶ್ ಮಾಸ್ಟರ್

ಸುರಾಣದ ಹೂರಣ

ಹೆಣ್ಣು ಮತ್ತು ಗಂಡು; ಸಾಂಸ್ಕೃತಿಕ ಪರಿಕಲ್ಪನೆಗಳ ಮೇಲೆ ಧಾರ್ಮಿಕ ಕಲ್ಪನೆಗಳ ದಾಳಿ

ಹೆಣ್ಣು ಮತ್ತು ಗಂಡು: ಇವುಗಳ ನಡುವಿನ ಭೇದವು ...ಕೃತಿಯಲ್ಲಿಯೇ ಸ್ವಾಭಾವಿಕವಾಗಿ ತೋರುವಂತದ್ದು. ...ನುಷ್ಯರು, ಪ್ರಾಣಿ, ಪಕ್ಷಿ ಮತ್ತು ಕೀಟಗಳಲ್ಲಿ ಮಾತ್ರವಲ್ಲದೇ ...ಮರಗಳಲ್ಲಿ ಕೂಡ ಗಂಡು ಮತ್ತು ಹೆಣ್ಣುಗಳನ್ನು ...ರುತಿಸುತ್ತಾರೆ. ಇದಕ್ಕೂ ಒಂದು ಹೆಜ್ಜೆ ಮುಂದೆ ಹೋಗುವ ...ಾಚೀನ ಸ್ಥಪತಿಗಳು ಅಥವಾ ಶಿಲ್ಪ ಕಲಾ ನಿಪುಣರು ...ಲ್ಲುಗಳಲ್ಲಿ ಕೂಡ ಗಂಡು ಮತ್ತು ಹೆಣ್ಣುಗಳನ್ನು ಗುರುತಿಸು ...ವಲ್ಲದೇ, ಹೆಣ್ಣಿನ ವಿಗ್ರಹಗಳನ್ನು ಮಾಡಲು ಹೆಣ್ಣುಗಲ್ಲು, ...ಡು ಮೂರ್ತಿಗಳನ್ನು ಮಾಡಲು ಗಂಡುಗಲ್ಲುಗಳನ್ನು ...ಯ್ದುಕೊಳ್ಳುತ್ತಿದ್ದರು. ಅಷ್ಟೇ ಅಲ್ಲದೇ ಬಳ್ಳಿ, ಹೂವು, ...ಕ್ಕ ಇತ್ಯಾದಿಗಳನ್ನು ಕೆತ್ತಲು ಹೆಣ್ಣು ಕಲ್ಲುಗಳನ್ನೂ ಮತ್ತು ...ಯುದ್ಧ ಕತ್ತಿ, ಗುರಾಣಿ, ನಗಾರಿ, ಮದ್ದಲೆ ಇತ್ಯಾದಿಗಳನ್ನು ...ಯಲು ಗಂಡು ಕಲ್ಲುಗಳನ್ನೂ ಬಳಸುತ್ತಿದ್ದರು. ವಸ್ತುಗಳ ...ಣಾಗಳಿಗೂ, ಪ್ರಾಕೃತಿಕವಾದಂತಹ ವಸ್ತು ಮತ್ತು ...ನ್ಯಮಾನಗಳನ್ನು ಹೆಣ್ಣು ಮತ್ತು ಗಂಡುಗಳ ಸ್ವಭಾವಗಳಿಗೆ ...ರೋಪಿಸುವುದು ಯಾವಾಗಲಿಂದಾದರೂ, ಯಾರಿಂದ ...ದರೂ ಪ್ರಾರಂಭವಾಗಿರಲಿ, ಇಂದಿಗೂ ನಮ್ಮಲ್ಲಿ ರೂಢಿ ...ಲ್ಲಿರುವುದಂತೂ ನಿಜ.

ಗುಂಡ್ಲುಪೇಟೆಯ ಹಳ್ಳಿಯೊಂದರಲ್ಲಿ ಸುಮಾರು ...ಭತ್ತಕ್ಕೂ ವಯಸ್ಸಾಗಿರುವ ಅಜ್ಜಿಯೊಬ್ಬರು ಟಿವಿಯಲ್ಲಿ ...ಡುಗಿಯೊಬ್ಬಳು ಸಿಗರೇಟ್ ಸೇದುವುದನ್ನು ನೋಡಿ ...ನಾಗಿದೆ ಅವಳಿಗೆ. ಗಂಡಸರ ತರ ಹೊಗೆ ...ಡ್ತಾಳೆ'' ಎಂದರು. ಅವರ ...ಪದಲ್ಲಿಯೇ ಇದ್ದ ಆಕೆಯ ಮರಿ ...ಮ್ಮಗ "ಇಲ್ಲಿ ನಮ್ಮೂರಲ್ಲಿ ಸೇದಲ್ಲ. ...ಗಳೂರು ತರದ ಊರಲ್ಲಿ ಎಲ್ಲಾ ...ಮತ್ತಾರೆ. ಮೇಷ್ಟ್ರನ್ನ ಕೇಳು" ಎಂದು ... ಕಡೆ ತೋರಿಸಿದ.

ಅಜ್ಜಿ ನನ್ನ ಕಡೆ ತಿರುಗಿ "ಏನಪ್ಪಾ ...ಮಿ, ನಿಮ್ಮೂರಲ್ಲಿ ಗಂಡಸರು, ಹೆಂಗಸರು ...ತೇನೂ ಇಲ್ಲವಾ? ಎಲ್ಲಾ ಏಕಾಬೀಕಿನಾ? ...ಮ್ಮಲ್ಲಿ ಅಂಗಿಲ್ಲಪ್ಪಾ" ಎಂದರು.

ಗಂಡಸರು ಮತ್ತು ಹೆಂಗಸರು ಅಂದರೆ ...ರವರ ಲಿಂಗಸ್ವಭಾವಕ್ಕೆ ಸಂಬಂಧಿಸಿದಂತೆ ...ಯಾ ಉಡುಪುಗಳನ್ನು ತೊಡಬೇಕು, ...ಯಾ ಕೆಲಸಗಳನ್ನು ಮಾಡಬೇಕು, ಆಯಾ ...ವಾಬ್ದಾರಿಗಳನ್ನು ಹೊರಬೇಕು ಎಂದೆಲ್ಲಾ ...ಕಲ್ಪನೆ ಯಲ್ಲಿಯೇ ಹಣ್ಣಾಗಿರುವ ವೃದ್ಧೆಗೆ ...ನು ಹೇಳುವುದು ಅಥವಾ ಹೇಗೆ ...ಳುವುದು ಎಂದು ತಿಳಿಯದೇ ...ಗರೇಟ್ ಸೇದುವುದು, ಕುಡಿಯುವುದು ...ವರವರ ಇಷ್ಟ ಅಜ್ಜೀ. ಇದರಲ್ಲಿ ...ಡಾದರೇನು, ಹೆಣ್ಣಾದರೇನು?" ಎಂದೇನೋ ಹೇಳಲು ...ಯತ್ನಿಸಿದೆ.

"ಕುಡಿಬೋದು, ಆದರೆ ಸೇದಬಾರದು" ಎಂದಿತು ...ಜ್ಜಿ. ಹೆಂಗಸರು ಕುಡಿಯಬಹುದು ಎನ್ನುವುದಕ್ಕೆ ...ಾಯತಿ ಏಕೆಂದು ಕೇಳಿದರೆ "ನಮ್ಮ ದುರುಗಮ್ಮನೂ ... ಕುಡಿದೇ ರಾಕ್ಷಸರನ್ನ ಸಾಯಿಸ್ತಾ ಇದ್ದದ್ದು" ಎಂದು ...ಳಿದರು.



ಅಜ್ಜಿಯ ದುರುಗಮ್ಮ ಹೆಂಡ ಕುಡಿದಳು ಎಂಬ ...ರಣಕ್ಕೆ ಹೆಣ್ಣುಮಕ್ಕಳು ಹೆಂಡ ಕುಡಿಯಬಹುದು ಎಂದು ...ಾಯತಿ ಇದೆ. ಆದರೆ ಅಜ್ಜಿಗೆ ಆಕೆಯ ದುರುಗಮ್ಮ ...ರೇಟ್ ಸೇದಿದ್ದಾಳೆ ಎಂಬ ಕೇಳಿಕೆಯಾಗಿಲ್ಲ. ಹಾಗಾಗಿ ...ರೇಟ್ ಹೆಂಗಸರಿಗೆ ನಿಷಿದ್ಧ.

...ಟಿ ನರಸೀಪುರದ ಬಳಿಯ ಮಾದಾಪುರದ ಗಾಣಿಗರ ...ಡುಗನೊಬ್ಬ ಕಾರ್ಯಕಾರಣವಾಗಿ ಸುತ್ತಾಡುತ್ತಿದ್ದಾಗ ...ಡಿಕೇರಿಯಲ್ಲಿ ಸಿಕ್ಕಿದ. ಅವನನ್ನು ನಮ್ಮ ಜೊತೆ ಊಟಕ್ಕೆ ...ರಿಸಿಕೊಂಡಾಗ ನಾವು ತಿನ್ನುತ್ತಿದ್ದ ಹಂದಿಯ ಫ್ರೈ ...ನೊಂದಿಗೆ ಹಂಚಿಕೊಂಡೆವು. ಆತ ಕೂಡಲೇ "ನಮ್ಮಲ್ಲಿ ...ದಿ ತಿನ್ನುವುದಿಲ್ಲ" ಎಂದು ನಿರಾಕರಿಸಿದ. ಕಾರಣ ಕೇಳಿದರೆ ...ಡ ಮನೆ ದೇವರು ಮಾದೇಶ್ವರ ಎಂದೂ, ಮಾದೇಶ್ವರನಿಗೆ ...ದಿ ಆಗಿ ಬರುವುದಿಲ್ಲವೆಂದೂ, ನಾವ್ಯಾರೂ ತಿನ್ನುವುದಿಲ್ಲ ...ದೂ ಹೇಳಿದ. ಸರಿ, ಮಾದೇಶ್ವರನಿಗೆ ಹಂದಿ ಏಕೆ ...ಬರುವುದಿಲ್ಲವೆಂದರೆ ಆತನಿಗೆ ಅದಕ್ಕೆ ಸಂಬಂಧಪಟ್ಟಂತಹ ...ಣವಾಗಲಿ, ಐತಿಹ್ಯವಾಗಲಿ ಏನೂ ತಿಳಿದಿಲ್ಲ, ಒಟ್ಟಾರೆ ...ವು ತಿನ್ನುವುದಿಲ್ಲ, ತಿನ್ನುವುದಕ್ಕೆ ಹೋದರೆ ಆದೇ ...ವುದಿಲ್ಲ, ಎಷ್ಟೋ ಬಾರಿ ಪ್ರಯತ್ನಪಟ್ಟಿದ್ದೇನೆ ಎಂದೂ ...ಳಿದ. ನಾವು ತಿಂದರೆ ನಿನಗೇನೂ ಬೇಜಾರಿಲ್ಲವೇನಪ್ಪಾ ...ದು ಕೇಳಿದೆವು. ಆದಕ್ಕವನು "ನೀವು ತಿನ್ನಿ ಸಾರ್. ...ಗೆ ತಿನ್ನಕ್ಕೆ ಮನಸೊಪ್ಪಲ್ಲ" ಅಂದ.

...ಪುರಾಣಗಳ ಸುಳಿಗಳಲ್ಲಿ ಕಳೆದುಹೋಗಿರುವ ಚಾತ್ರಿಯ

ಎಳೆಗಳನ್ನು ಹುಡುಕುತ್ತಾ, ಒಂದು ಮುಖ್ಯವಾದ ಪುಸ್ತಕದ ಸಂಪಾದನೆಗೆ ಪಿರಿಯಾಪಟ್ಟಣದಲ್ಲಿನ ದೇವಸ್ಥಾನವೊಂದಕ್ಕೆ ಹೋಗಿದ್ದೆವು. ಆ ದೇವಾಲಯದ ವೈದಿಕ ಅರ್ಚಕರಿಗಾಗಿ ಕಾಯುತ್ತಾ ನಿಂತಿರುವಾಗ ಪೂಜೆಗೆ ಹೋಗುತ್ತಿದ್ದ ಆ ಅರ್ಚಕ "ಹಾಗೆ ನಿಂತ್ಕೊಳ್ಳಬೇಡಿ" ಎಂದು ಹೇಳಿ ಒಳಗೆಹೋದರು. ನಾನು ನಿಲ್ಲಬಾರದಂತಹ ಯಾವ ರೀತಿಯಲ್ಲಿ ನಿಂತಿದ್ದೆ ಎಂದು ನೋಡಿಕೊಂಡರೆ, ಅಂತಹದ್ದೇನೂ ಅಸಭ್ಯತನವೇನೂ ಕಾಣಲಿಲ್ಲ. ಮತ್ತೆ ಹೊರಗೆ ಬಂದ ಅರ್ಚಕರು ನಾನು ಹಾಗೆಯೇ ನಿಂತಿರುವುದನ್ನು ನೋಡಿ "ಒಂದು ಸಲ ಹೇಳಿದರೆ ಅರ್ಥವಾಗಲ್ವೇನ್ರೀ. ದೇವಸ್ಥಾನದಲ್ಲಿ ಕೈ ಕಟ್ಟಿಕೊಂಡು ನಿಂತ್ಕೊಳ್ಳಬಾರದು" ಎಂದು ಗದರಿಯೇ ಹೇಳಿ ಹೋದರು. ನನ್ನ ಜೊತೆಯಲ್ಲಿದ್ದವರು ಆಗ ತಿಳಿಸಿದರು. ದೇವಸ್ಥಾನದಲ್ಲಿ ಕೈ ಮುಗಿದುಕೊಂಡು ನಿಂತುಕೊಳ್ಳಬೇಕು. ನೀವು ಕೈ ಕಟ್ಟಿಕೊಂಡು ನಿಂತಿದ್ದೀರಿ, ಆದಕ್ಕೇ ಅವರು ಹೇಳಿದ್ದು ಎಂದು.

ಹಂದಿ ತಿನ್ನದ ಹುಡುಗ, ಹೆಂಗಸು ಸಿಗರೇಟ್ ಸೇದುವುದನ್ನು ಒಪ್ಪಲಾರದ ಅಜ್ಜಿ; ಈ ಇಬ್ಬರೂ ತಮ್ಮ ರೂಢಿಯ ಪ್ರಕಾರವೇ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ಈ ಇಬ್ಬರೂ "ನಮ್ಮಲ್ಲಿ" ಎಂಬ ಶಬ್ದವನ್ನು ಉಪಯೋಗಿಸಿದ್ದರು. ನಾವು ಹೀಗೆ ಮಾಡುವುದಿಲ್ಲ, ನಮ್ಮಲ್ಲಿ ಈ ರೂಢಿ ಇಲ್ಲ ಎಂದೂ, ನೀವು ಮಾಡಿಕೊಳ್ಳಬೇಕಾ



ದುದನ್ನು ಮಾಡಿಕೊಳ್ಳಿ ಎಂಬ ಸ್ವಾತಂತ್ರ್ಯವೂ ಅಲ್ಲಿ ಉಸಿರಾಡಿದೆ. ಆದರೆ, ದೇವಸ್ಥಾನದಲ್ಲಿ ನಾನು ನಿಂತ ಭಂಗಿಯನ್ನು ಅರ್ಚಕನು ಸಹಿಸಿಕೊಳ್ಳಲಿಲ್ಲ. ಅವರು ಕೈ ಮುಗಿದುಕೊಂಡು ನಿಲ್ಲುತ್ತಾರೆಂದರೆ ನಾನೂ ಕೈ ಮುಗಿಯಬೇಕು. ಕೈ ಕಟ್ಟಿಕೊಂಡು ನಿಲ್ಲುವಂತಿಲ್ಲ. ತಮ್ಮಲ್ಲಿರುವ ಸಂಪ್ರದಾಯವನ್ನು ನಾನೂ ಅನುಸರಿಸಬೇಕೆಂಬ ದಬ್ಬಾಳಿಕೆ ಅಲ್ಲಿ ಕಾಣುತ್ತಿತ್ತು. ನಾನು ಸಲ್ಲಿಸಲೇ ಬೇಕಾದ ಗೌರವವನ್ನು ಆತನ ಶ್ರದ್ಧೆಗೆ ಅನುಗುಣವಾಗಿ ಪಡೆದುಕೊಳ್ಳಲೇ ತೀರಬೇಕಾದ ಒತ್ತಡವನ್ನು ಆತ ಸೃಷ್ಟಿಸಿದ್ದ ಈ ಯಜಮಾನಿಕೆ ಪುರೋಹಿತ ವರ್ಗಗಳಲ್ಲಿ ಮತ್ತು ಆ ಬಗೆ ಮನಸ್ಥಿತಿಯವರಲ್ಲಿ ಮಾತ್ರ ಕಾಣಬಹುದು. ಸಾಮಾನ್ಯ ಜನರ ಸಾಮಾಜಿಕ ಮತ್ತು ತಾತ್ವಿಕತೆಗಳಲ್ಲಿ "ನಮ್ಮಲ್ಲಿ" ಎಂಬ ಉಪಾದಿಯೊಂದಿಗೆ ವಿಷಯಗಳು ಅಭಿವ್ಯಕ್ತವಾಗುತ್ತದೆ.

ಯಜಮಾನಿಕೆಯ ಹುಂಬತನ

ಯಾವುದೇ ಒಂದು ವಿಷಯವು ರೂಢಿಗತವಾಗಿರುವಾಗ ಅದನ್ನು ನಿರಾಕರಿಸುವುದಾಗಲಿ, ರೂಢಿಯಲ್ಲಿರದ ವಿಷಯವನ್ನು ಒಪ್ಪುವುದಕ್ಕಾಗಲಿ ಪಡುವ ಪಾಡಿನಂತೆಯೇ ಹೆಣ್ಣು ಮತ್ತು ಗಂಡುಗಳಿಗೂ ಆರೋಪಿಸಿರುವ ಅನೇಕ ವಿಷಯಗಳನ್ನು ಗಮನಿಸಬೇಕಾಗುತ್ತದೆ. ತಾವು ರೂಢಿಯಲ್ಲಿ ನಡೆದು ಬಂದಿರುವುದೂ, ಮತ್ತೊಬ್ಬರನ್ನು ತಾವು ಇಚ್ಚಿಸುವ ರೂಢಿಗೆ ಒಳಗಾಗಲು ಒತ್ತಾಯಿಸುವುದು ಯಜಮಾನಿಕೆಯ ಹುಂಬತನ.

ಇರಲಿ, ಇಲ್ಲಿ ವಿಚಾರ ಮಾಡುವ ವಿಷಯವೆಂದರೆ ಸಂಬಂಧಗಳ ಮೇಲೆ ಸಮಾಜದಲ್ಲಿ ಉಂಟಾಗುವ ಪರಿಣಾಮಗಳು. ಯಾವುದೇ ಕಾರಣದಿಂದ ಹುಟ್ಟುವ ಕೆಲವು ಶಿಷ್ಟಾಚಾರದ ಪರಿಕಲ್ಪನೆಗಳು ಹಳತಕ್ಕೆ ಸ್ಥಾನಾಂತರವಾಗುತ್ತವೆ. ಬಹುಪಾಲು ವ್ಯಾಪಕದಲ್ಲಿದ್ದ ಮಾತೃಪ್ರಧಾನ ಸಂಸ್ಕೃತಿಯು ಪಿತೃವಿನ ಕಡೆಗೆ ಹೊರಳಿದಂತೆ, ಮುಕ್ತ ಸಂಬಂಧಗಳು ಇದ್ದಂತಹ ಕಾಲಘಟ್ಟವನ್ನು ದಾಟು ಸಂಬಂಧಗಳಿಗೆ ಒಂದು ಸೀಮಿತ ಚೌಕಟ್ಟನ್ನು ಒಳಪಡಿಸಿದಂತಹ ಕಾಲಘಟ್ಟಕ್ಕೆ ಬರುವಷ್ಟರಲ್ಲಿ ಹಲವಾರು ಬಗೆಯ ಗೊಂದಲಗಳೂ, ಗೋಜಲುಗಳೂ ಮತ್ತು ಸ್ಥಿತ್ಯಂತರಗಳೂ ಉಂಟಾಗಿರುತ್ತವೆ. ಆಗ ಹೊಸತೊಂದನ್ನು ಸಮಾಜಕ್ಕೆ ನೀಡುವ ವ್ಯಕ್ತಿಯು ಹೇಗೆ ಸಮೂಹದಿಂದ ಅಥವಾ ಸಮಾಜದಿಂದ ಅಡ್ಡಿಆತಂಕಗಳನ್ನು, ವಿರೋಧಗಳನ್ನು ಎದುರಿಸಬೇಕೋ, ಹಾಗೆಯೇ ಹೊಸ ಶಿಷ್ಟಾಚಾರವನ್ನು ಒಪ್ಪದೇ, ಅಪ್ಪದೇ ಹಳೆಯದರಲ್ಲಿ ಉಳಿವ ವ್ಯಕ್ತಿಯೂ ಕೂಡ ಸಮಾಜದಿಂದ ವಿರೋಧವನ್ನು ಎದುರಿಸಬೇಕಾಗುತ್ತದೆ.

ಭಾರತದ ಈಶಾನ್ಯ ಭಾಗದಲ್ಲಿರುವ ಮೇಘಾಲಯದ ಖಾಸಿ ಬುಡಕಟ್ಟು ಜನಾಂಗವು ಮಾತೃ ಪ್ರಧಾನ ಬುಡಕಟ್ಟೇ ಆಗಿತ್ತು. ಪುರಾತನದ ಕಾಲಕ್ಕೆ ಸಲ್ಲುವ ಸಂದರ್ಭದಲ್ಲಿ ತಂದೆಯಿಲ್ಲದೇ ಬರಿಯ ಮಕ್ಕಳೊಂದಿಗೆ ಅಲೆದಾಡುವಂತಹ ತಾಯಿಯ ಮುಂದಾಳುತನವಿದ್ದಂತಹ ಸ್ಥಿತಿಯು, ಗಂಡು ಮತ್ತು ಹೆಣ್ಣಿನ ನಿರ್ದಿಷ್ಟ ವರ್ಗೀಕರಣಕ್ಕೆ ಒಳಪಟ್ಟಿದ್ದು ಒಂದು ಸೋಜಿಗದ ಸಂಗತಿ.

ಖಾಸಿಯ ಒಂದು ಕಥೆಯಂತೆ ಈ ಹಿಂದೆ ಒಬ್ಬಾಕೆಗೆ ನಾಲ್ಕು ಮಕ್ಕಳಿದ್ದರು. ಸೂರ್ಯ, ನೀರು, ಬೆಂಕಿ ಮತ್ತು ಚಂದ್ರರೇ ಈ ನಾಲ್ಕು ಮಕ್ಕಳು. ಇವರಲ್ಲಿ ಸೂರ್ಯ ಹೆಣ್ಣು, ಚಂದ್ರ ಗಂಡು ಮತ್ತು ಸೂರ್ಯಳ ತಮ್ಮ. ಅಣ್ಣ ತಂಗಿ ಎಂಬ ಹೆಸರುಗಳಿಂದ ಗುರುತಿಸಲ್ಪಡದೇ ಹೆಣ್ಣು ಗಂಡುಗಳಾಗಿ ಕೂಡುತ್ತಿದ್ದ ಇವರ ಮುಕ್ತ ಸಂಬಂಧವು ಅದಾವ ಶಿಷ್ಟ ಸಮಾಜದ ಪರಿಕಲ್ಪನೆಯ ನೈತಿಕ ಚೌಕಟ್ಟಿಗೆ ಬಂಧಿತವಾಯ್ತೋ, ಈ ಕಥೆಯನ್ನು ಗಮನಿಸಿ.

ಆಗ ನೃತ್ಯದ ಕಾರ್ಯಕ್ರಮವೊಂದನ್ನು ಏರ್ಪಡಿಸಲಾಗಿತ್ತು. ಆಗ ಎಲ್ಲಾ ಭಾಷೆಯನ್ನು ಮಾತಾಡುವ ಜನರನ್ನೂ ಆಹ್ವಾನಿಸಲಾಗಿತ್ತು. ಸೂರ್ಯಳೂ ಮತ್ತು ಆಕೆಯ ಸಹೋದರ ಚಂದ್ರನೂ ಇಬ್ಬರೂ ಕೂಡಿ ಒಟ್ಟಿಗೆ ನೃತ್ಯ ಮಾಡಿದರು. ಅವರಿಬ್ಬರ ನೃತ್ಯದಲ್ಲಿ ಯಾವುದೇ ತಪ್ಪುಗಳಿರಲಿಲ್ಲ. ಆದರೆ ಆಹ್ವಾನಿತರು ನಕ್ಕು ಬಿಟ್ಟರು. ಏಕೆಂದರೆ ಅಕ್ಕ ಮತ್ತು ತಮ್ಮ (ಅಥವಾ ಗಂಡು ಮತ್ತು ಹೆಣ್ಣು) ಹೀಗೆ ಜೊತೆಜೊತೆಯಾಗಿ ಕುಣಿಯುವುದು ಅವರಿಗೆ ವಿಚಿತ್ರವೂ ಮತ್ತು ವಿನೋದವೂ ಅನ್ನಿಸಿ ಅವಹೇಳನಕಾರಿಯಾಗಿ 'ಬಂದಿದ್ದವರು' ನಕ್ಕುಬಿಟ್ಟರು. ಇದರಿಂದ ಸೂರ್ಯಳಿಗೆ ನಾಚಿಕೆಯಾಗಿ ಅಲ್ಲಿಂದ ಓಡಿಹೋಗಿಬಿಟ್ಟಳು.

ಇನ್ನೊಂದು ಕಥೆಯಲ್ಲಿ ಚಂದ್ರನೂ ಸೂರ್ಯಳಂತೆ ಯಾವುದೇ ಕಪ್ಪು ಮಚ್ಚೆಗಳಿಲ್ಲದೇ ಹೊಳೆಯುತ್ತಿರುತ್ತಾನೆ. ಆದರೆ ಒಮ್ಮೆ ಚಂದ್ರನಿಗೆ ಸೂರ್ಯಳ ಮೇಲೆ ಲೈಂಗಿಕವಾದಂತಹ ಬಯಕೆ ಉಂಟಾಗುತ್ತದೆ. ಸೂರ್ಯಳಿಗೆ ಈ ವಾಸನೆ ತಟ್ಟುತ್ತದೆ. ಅವಳು ಇಂಥಾ ಬಯಕೆಯನ್ನು ಹೊಂದಿದ ಚಂದ್ರನಿಗೆ ಬೂದಿ ಎಸೆದು ಶಪಿಸುತ್ತಾಳೆ. ಅಂದಿನಿಂದ ಚಂದ್ರ ಕಳಂಕಿತನಾಗುತ್ತಾನೆ. ಈ ಕಥೆಯು ಒಂದು ಸ್ವತಂತ್ರ ತಾಯಿಯ ಯಜಮಾನಿಕೆಯಲ್ಲಿ ಸ್ವಚ್ಛಂದವಾಗಿದ್ದ ಗಂಡು ಹೆಣ್ಣುಗಳೆಂಬ ಸಂತಾನವು ಮುಂದೆ ನೈತಿಕ ಚೌಕಟ್ಟಿಗೆ ಒಳಗಾದ ನಂತರ ಬೆಳೆದುಬಂದಿರುವ ಕತೆಯಾಗಿ ತೋರುತ್ತದೆ.

ಸೂರ್ಯಳು ಇತರರ ಅಭಿಪ್ರಾಯಕ್ಕೆ ಒಳಗಾಗಿ ತಾನು ಅಪಮಾನಗೊಂಡ ಭಾವ ಹೊಂದಿದ ಮೇಲೆ, ವಿಧಿಸಿದಂತಹ ನೈತಿಕತೆಯನ್ನು ಒಪ್ಪಿಕೊಂಡು ತಾನೇ ಸಮ್ಮತಿಸದೇ ಮುಂದೆ ಹೋದಳು. ಖಾಸಿ ಬುಡಕಟ್ಟಿನಲ್ಲಿ ಹೆಣ್ಣು ಮತ್ತು ಗಂಡು ಒಟ್ಟಾಗಿ ಕುಣಿಯುವ ಪರಂಪರೆ ಪ್ರಾರಂಭದಲ್ಲೇ ಎಂದೋ ಮುರಿದುಬಿದ್ದು ಹೋಗಿದೆ. ಅವರು ಜೋಡಿಯಾಗಿ ನೃತ್ಯವನ್ನು ಮಾಡುವುದಿಲ್ಲ, ಗಂಡಸರೇ ಪ್ರತ್ಯೇಕ ಮತ್ತು ಹೆಂಗಸರೇ ಪ್ರತ್ಯೇಕವಾಗಿ ಕುಣಿಯುತ್ತಾರೆ.

ಹೀಗೆ ಮುಕ್ತವಾಗಿ ಬೆರೆಯುತ್ತಿದ್ದ ಗಂಡು ಮತ್ತು ಹೆಣ್ಣುಗಳನ್ನು ನೈತಿಕತೆಯ ಆಧಾರದ ಮೇಲೆ ಅಥವಾ ಅನೈತಿಕತೆಯ ಭಯದಲ್ಲಿ ಪ್ರತ್ಯೇಕವಾಗಿಸುವ ಒಂದು ಅನೈಸರ್ಗಿಕ ಪದ್ಧತಿಯು ಬೆಳೆದುಬಂದಿತು. ಗಂಡಸರಿಗೆ ಮತ್ತು ಹೆಂಗಸರಿಗೆ ಎಂಬ ಪ್ರತ್ಯೇಕತೆಯ ಫಲಕಗಳ ಅಡಿಯಲ್ಲಿ ಗುರುತಿಸಿಕೊಂಡು ಸೇರುವುದು ಒಂದು ನಿಯಮವಾಯಿತು. ಈ ನಿಯಮ ಪಾಲನೆ ಮಾಡುವವರಿಗೆ ಅರ್ಧನಾರೀಶ್ವರ ಅರ್ಥವಾಗುವುದು ಕಷ್ಟ.

ಬುಡಕಟ್ಟುಗಳು ತಮ್ಮ ಮುಕ್ತ ಸಮಾಜದ ಬದುಕಿನಿಂದ ಹೊಸ ಶಿಷ್ಟ ಧಾರ್ಮಿಕ ಪ್ರಭಾವಕ್ಕೆ ಒಳಗಾಗುವುದರ ಹಂತಗಳಲ್ಲಿ ಹೊಸ ಬಗೆಯ ರೀತಿನೀತಿಗಳೂ ನುಸುಳತೊಡಗುತ್ತದೆ.


ಅಸ್ಸಾಮಿನ ಬೋಡೋ ಬುಡಕಟ್ಟಿನವರು ಇತರ ಬುಡಕಟ್ಟಿನವರಂತೆಯೇ ತಮ್ಮ ಭೌಗೋಳಿಕ ಪರಿಸರವನ್ನಾಧರಿಸಿ ಕಟ್ಟಿಕೊಂಡಿದ್ದಂತಹ ಸಂಸ್ಕೃತಿಯಲ್ಲಿ ಬದುಕುತ್ತಿದ್ದವರು 15ನೆಯ ಶತಮಾನದಿಂದೀಚೆಗೆ ನವ ವೈಷ್ಣವ ಪ್ರಭಾವವು ಉಂಟಾಗಿ ಅವರಲ್ಲಿ ಸಂಸ್ಕೃತಿಯ ಬದಲಾಗಿ ಧಾರ್ಮಿಕತೆಯು ನುಸುಳಿತು. ಸಾಂಸ್ಕೃತಿಕವಾಗಿ ವಿಧಿಸುವ ನೈತಿಕತೆಯು ಸಮಾಜಮುಖಿಯಾಗಿರುವುದಾದರೆ, ಧಾರ್ಮಿಕವಾಗಿ ವಿಧಿಸುವ ನೈತಿಕತೆಯು ಅಷ್ಟು ಮಾತ್ರವಲ್ಲದೇ ಲೌಕಿಕ ಬದುಕಿನ ಆಚೆಗೂ ತನ್ನ ವ್ಯಾಪ್ತಿಯನ್ನು ವಿಸ್ತರಿಸಿ ಸಾಂಸ್ಕೃತಿಕ ಬದುಕಿನ ಘನತೆಯನ್ನು ಮಡಿವಂತಿಕೆಗೆ ಬದಲಾಯಿಸಿಬಿಡುತ್ತವೆ.

ಬುಡಕಟ್ಟುಗಳ ಸಾಂಸ್ಕೃತಿಕ ಬದುಕುಗಳು ಧಾರ್ಮಿಕತೆಯ ಪ್ರಭಾವಕ್ಕೆ ಸಿಗುವುದರ ಮೂಲಕ ತನ್ನ ಸ್ವಾಭಾವಿಕತೆಯನ್ನು ಕಳೆದುಕೊಂಡವು. ಅದರಲ್ಲೂ ಧಾರ್ಮಿಕ ದೃಷ್ಟಿಯ ಯಜಮಾನ ಸಂಸ್ಕೃತಿಯು ಮೂಲ ಆಚರಣೆಗಳನ್ನು ಮತ್ತು ಗುರುತುಗಳನ್ನು ಮಸುಕುಗೊಳಿಸುತ್ತಾ ಬಂದು ಕೆಲವೊಂದು ಪೂರ್ತಿ ಇಲ್ಲವಾಗಿವೆ.

ಸಂಸ್ಕೃತಿಯೆಂಬುದು ಆಯಾ ಭೌಗೋಳಿಕ ವ್ಯಾಪ್ತಿಯಲ್ಲಿ ಪರಿಸರಗನುಗುಣವಾಗಿ ಮೂಡಿ ಬೆಳೆದುಬಂದಿದ್ದು ಅವುಗಳೆಲ್ಲವೂ ಕೂಡ ಧಾರ್ಮಿಕತೆಯ ನೆರಳು ಆವರಿಸುತ್ತಿದ್ದಂತೆ ತನ್ನ ಪ್ರಾಯೋಗಿಕತೆ ಮತ್ತು ಸಹಜತೆಗಳನ್ನು ಕಳೆದುಕೊಂಡು ಕಂದಾಚಾರದ ಧಾರ್ಮಿಕಾಚರಣೆಗಳಾಗಿಬಿಡುತ್ತವೆ. ಹಾಗೆಯೇ ಸಾಂಸ್ಕೃತಿಕ ಮನಸ್ಥಿತಿಯೆಂಬುದು ಧಾರ್ಮಿಕ ಮನಸ್ಥಿತಿಯಾಗುವ ಬಿಗುವಿನ ಮತ್ತು ಇಕ್ಕಟ್ಟಿನ ವಾತಾವರಣ ಉಂಟಾಗಿಬಿಡುತ್ತದೆ.


ಇಂಥಾ ಸನ್ನಿವೇಶದಲ್ಲಿ ಕ್ರಾಂತಿಕಾರಿಯಂತೆ ಬಂದ ಸಿದ್ಧಾಂತ ಮತ್ತು ಆಚರಣೆಗಳೆಂದರೆ ತಂತ್ರ. ಶಾಕ್ತವಾದರೂ ಅಥವಾ ಶೈವವಾದರೂ ಬುಡಕಟ್ಟುಗಳ ಮೂಲ ಭಾವನೆಯನ್ನು ಉಳಿಸಿಕೊಂಡಿರುವಂತಹ, ಧಾರ್ಮಿಕತೆಯ ನೈತಿಕತೆಯನ್ನು ಒಳಗೊಳ್ಳದ, ಆದರೆ ನೈಸರ್ಗಿಕವಾಗಿರುವುದನ್ನು ಸೂಕ್ಷ್ಮವಾಗಿ ಅಳವಡಿಸಿಕೊಳ್ಳುವ ಬಹುಸೂಕ್ಷ್ಮ ತರಂಗದ ಅಭ್ಯಾಸದ ಅನುಭವಕ್ಕೆ ತಂತ್ರವೆಂಬುದು ಹುಟ್ಟಿತು. ಇದರಲ್ಲಿ ಸಂಬಂಧವೇ ಮುಖ್ಯ, ಸಂಬಂಧಗಳ ಹೆಸರುಗಳಲ್ಲ, ಪರಿಕಲ್ಪನೆಯೇ ಮುಖ್ಯ, ಕಲ್ಪನೆಗಳಲ್ಲ.

ಸಂಬಂಧದ ಅನುಭವವನ್ನು ಉಂಟುಮಾಡುವ ಪರಿಕಲ್ಪನೆಗಳು ಬುಡಕಟ್ಟು ಜನಾಂಗದ ಸಂಸ್ಕೃತಿಗಳಲ್ಲಿ ಮೂಡಿದರೆ, ಅವುಗಳನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡ ಧಾರ್ಮಿಕತೆಗಳು ಕಲ್ಪನೆಗಳನ್ನು ಹೊಸೆದುಕೊಂಡವು...



ಪೇಜಾವರರ ಅಸಂಬದ್ಧ 'ಸಂಶೋಧನೆ'!

ಭಾರತದ ಮೂಲ ನಿವಾಸಿಗಳಾದ ದ್ರಾವಿಡರಲ್ಲಿ ಜಾತಿ ವ್ಯವಸ್ಥೆ ಇರಲೇ ಇಲ್ಲ, ಅದು ಆರ್ಯರು ಬಂದಮೇಲೆ ಶುರುವಾಗಿದ್ದು ಎಂಬುದು ಎಲ್ಲ ಇತಿಹಾಸಕಾರರ ಅಂಬೋಣ. ಆದರೆ ನಮ್ಮ ಉಡುಪಿಯಲ್ಲಿ ಈಗ ಒಬ್ಬ ಪ್ರಚಂಡ ಸಂಶೋಧಕರು ಉದ್ಭವಿಸಿದ್ದಾರೆ. ಅದೂ ಅವರಿಗೆ ಎಂಬತ್ತೈದು ವರ್ಷ ವಯಸ್ಸಾದ ಮೇಲೆ ಅವರು ಇತ್ತೀಚಿಗೆ ಒಂದು ಭಾರಿ ಐತಿಹಾಸಿಕ ಸಂಶೋಧನೆ ಮಾಡಿದ್ದಾರೆ. ಅವರೇ ಪೇಜಾವರ ಶ್ರೀಗಳು. ಅವರ ಇತ್ತೀಚಿನ ಭಯಂಕರ ಸಂಶೋಧನೆ ಎಂದರೆ ಅಸ್ಪೃಶ್ಯತೆ ಆರಂಭವಾಗಿದ್ದು ದ್ರಾವಿಡರ ಕಾಲದಲ್ಲೇ ಹೊರತು ವೈದಿಕ ಕಾಲದಲ್ಲಿ ಅಲ್ಲವಂತೆ!



ಅಸ್ಪೃಶ್ಯತೆ-ಅನಕ್ಷರತೆ ಇದು ಆರ್ಯ ಬ್ರಾಹ್ಮಣರ ಕೊಡುಗೆಯಲ್ಲ; ಮೂಲತಃ ಇದು ದ್ರಾವಿಡರದೇ ಕೊಡುಗೆಯಂತೆ! ಭಾರತವಿಡೀ ದ್ರಾವಿಡ ಸಮಾಜ ಇರುವಾಗಲೇ ಮೂಲ ದ್ರಾವಿಡರನ್ನು ಮೇಲ್ವರ್ಗದ ದ್ರಾವಿಡರು ಅಸ್ಪೃಶ್ಯರೆಂದು ಕರೆದರಂತೆ! ದ್ರಾವಿಡರ ಕಾಲದಲ್ಲೇ ಆರಂಭವಾದ ಜಾತಿಪದ್ಧತಿಗೆ ವಿನಾಕಾರಣ ಆರ್ಯ ಬ್ರಾಹ್ಮಣರನ್ನು ಗುರಿ ಮಾಡಲಾಗಿದೆ ಹಾಗೂ ಇದನ್ನು ಎಲ್ಲಿ ಬೇಕಾದರೂ ನಿರೂಪಿಸುತ್ತೇನೆ ಎಂದು ಪೇಜಾವರ ಶ್ರೀ ಸವಾಲು ಬೇರೆ ಒಡ್ಡಿದ್ದಾರೆ!

ಪೇಜಾವರರ ಸವಾಲನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ ಎಂಬುದು ಬೇರೆ ಮಾತು. ಆದರೆ ಹೀಗೆ ಹೇಳುವ ಮೂಲಕ ಕೊನೆಗೂ ಪೇಜಾವರ ಶ್ರೀಗಳು ಹಾಗೂ ಅವರು ಪ್ರತಿನಿಧಿಸುವ ಆರೆಸ್ಸೆಸ್ ನಮ್ಮ ದೇಶದಲ್ಲಿ ಆರ್ಯ-ದ್ರಾವಿಡ ಎಂಬ ಮೂಲ ಜನಾಂಗ ಭೇದವಿದೆ ಎಂದು ಖಚಿತವಾಗಿ ಒಪ್ಪಿಕೊಂಡಂತೆ ಆಯಿತಲ್ಲವೇ!

ಹಿಂದಿನ 15-20 ವರ್ಷಗಳಿಂದ ಆರೆಸ್ಸೆಸ್ ಹಾಗೂ ಅವರ ಗೋಬೆಲ್ಸ್‌ಗಳು ಇತಿಹಾಸವನ್ನು ತಿರುಚಿ ಭಾರತದಲ್ಲಿ ಆರ್ಯ-ದ್ರಾವಿಡ ಜನಾಂಗ ಭೇದವೇ ಇಲ್ಲ, ಅದು ಕೇವಲ ಭಾಷಾ ಭೇದ ಅಷ್ಟೇ, ಬ್ರಿಟಿಷರು ಭಾರತೀಯ ಸಮಾಜದಲ್ಲಿ ಒಡಕು ಮೂಡಿಸಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಆರ್ಯ-ದ್ರಾವಿಡ ಜನಾಂಗ ಭೇದ ಹಾಗೂ ಆರ್ಯನ್ನರು ವಿದೇಶದಿಂದ ಬಂದ ಬರ್ಬರ ದಾಳಿಕೋರರು ಎಂಬ ಕಟ್ಟುಕಥೆ ಕಟ್ಟಿದ್ದಾರೆ ಎಂದು ವಾದಿಸುತ್ತಿದ್ದರು. ಮಹಂಜೋದಾರೋ-ಹರಪ್ಪಾ ಇದು ಮೂಲತಃ ದ್ರಾವಿಡ ಸಂಸ್ಕೃತಿಯ ಕೇಂದ್ರವಾಗಿರಲಿಲ್ಲ ಎಂಬುದು ಆರೆಸ್ಸೆಸ್ ವಾದ. ಅಷ್ಟೇ ಅಲ್ಲ, ಆರೆಸ್ಸೆಸ್‌ನವರು ತಮ್ಮ ಇದೇ ವಿತಂಡವಾದವನ್ನು ಗುಜರಾತಿನ ಶಾಲೆಗಳ ಪಠ್ಯದಲ್ಲೂ ಸೇರಿಸಿದ್ದಾರೆ. ಆದರೆ ಈಗ ಆರೆಸ್ಸೆಸ್ ಇತಿಹಾಸಕಾರರ ಕೆನ್ನೆಗೆ ಬಾರಿಸಿದಂತೆ ಪೇಜಾವರ ಶ್ರೀಗಳೇ ದ್ರಾವಿಡ- ಆರ್ಯಬ್ರಾಹ್ಮಣ ಭೇದದ ಸಿದ್ಧಾಂತಕ್ಕೆ ಪುಷ್ಟಿ ನೀಡಿದ್ದಾರೆ. ಇದಕ್ಕೆ ಆರೆಸ್ಸೆಸಿನ ಸೋ-ಕಾಲ್ಡ್ 'ಇತಿಹಾಸಕಾರರ ಪ್ರತಿಕ್ರಿಯೆ ಏನು?



ಕರಾವಳಿಯಲ್ಲಿ ಎಲ್ಲಾ ಜಾತಿಗಳಲ್ಲೂ ಸ್ವಯಂಘೋಷಿತ ಸ್ವಾಮಿಗಳಿದ್ದಾರೆ. ಕೇಸರಿ ಸಂಘಟನೆಗಳು ಆಗಾಗ ಆಯೋಜಿಸುವ ಸಮಾರಂಭಗಳಲ್ಲಿ ಈ ಎಲ್ಲ ಜಾತಿಯ ಸ್ವಾಮಿಗಳನ್ನು ಒಟ್ಟಿಗೆ ಒಂದೇ ವೇದಿಕೆಯಲ್ಲಿ ಸೇರಿಸಲಾಗುತ್ತದೆ. ಆದರೆ ವೇದಿಕೆಯಲ್ಲಿ ಈ ಸ್ವಾಮಿಗಳನ್ನು ಕುಳ್ಳಿರಿಸುವ ರೀತಿಯಲ್ಲೂ ಮೇಲು-ಕೀಳೆಂಬ ಜಾತಿಭೇದ ತೋರಿಸಲಾಗುತ್ತದೆ! ಯಾವಾಗಲೂ ವೇದಿಕೆಯ ಮಧ್ಯ ಭಾಗದಲ್ಲಿ ಬ್ರಾಹ್ಮಣ ಸ್ವಾಮಿ ಹಾಗೂ ಜೈನ ಧರ್ಮದರ್ಶಿ ಯನ್ನು ಪ್ರತಿಷ್ಠಾಪಿಸಲಾಗುತ್ತದೆ. ಅವರ ಬದಿಗೆ ಎರಡನೆಯ ಶ್ರೇಣಿಯ ಜಾತಿಯಾದ ಬಂಟ ಸ್ವಾಮಿಗಳನ್ನು ಕುಳ್ಳಿರಿಸಲಾಗುತ್ತದೆ. ಇತರ ಹಿಂದುಳಿದ ಜಾತಿಯ ಸ್ವಾಮಿಗಳಿಗೆ ಅದೇ ಸಾಲಿನ ಕೊನೆಯ ಕುರ್ಚಿಗಳು ಮೀಸಲಾಗಿರುತ್ತವೆ.

ಸನ್ಯಾಸ ಸ್ವೀಕರಿಸಿದ ಮೇಲೆ ಎಲ್ಲರೂ ಒಂದೇ ಜಾತಿಯವರಾಗುತ್ತಾರೆ. ಅವರವರ ಪೂರ್ವಾಶ್ರಮದ ಜಾತಿ ಅವರಿಗೆ ಅನ್ವಯಿಸುವುದಿಲ್ಲ, ಹಾಗಾದರೆ ಮೇಲ್ಜಾತಿ ಬ್ರಾಹ್ಮಣ-ಜೈನ ಸ್ವಾಮಿಗಳನ್ನು ಮಧ್ಯದಲ್ಲಿ ಸಿಂಹಾಸನದಂತಿರುವ ಕುರ್ಚಿಗಳಲ್ಲಿ ಕುಳ್ಳಿರಿಸಿ ಪೂರ್ವಾಶ್ರಮದಲ್ಲಿ ಕೆಳಜಾತಿಯಲ್ಲಿದ್ದ ಸ್ವಾಮಿಗಳಿಗೆ ಯಾಕೆ ಯಾವಾಗಲೂ ಪ್ಲಾಸ್ಟಿಕ್ ಕುರ್ಚಿಕೊಟ್ಟು ಸಾಲಿನ ಕೊನೆಯಲ್ಲಿ ಕುಳ್ಳಿರಿಸಲಾಗುತ್ತದೆ? ಕೆಳ ಜಾತಿಯ ಸ್ವಾಮಿಗಳು ಮಧ್ಯದಲ್ಲಿ ಸಿಂಹಾಸನದ ಮೇಲೆ ಯಾಕೆ ಕುಳಿತುಕೊಳ್ಳಬಾರದು? ಪೇಜಾವರ ಶ್ರೀ ಸಹಿತ ಈ ಎಲ್ಲ ಸ್ವಾಮಿಗಳು ಯಾವಾಗಲಾದರೂ ಒಂದೇ ಪಂಕ್ತಿಯಲ್ಲಿ ಊಟ ಮಾಡಿದ್ದಾರೆಯೇ? ಕಾವಿಧಾರಿಗಳ ಒಳಗೂ ಪಂಕ್ತಿ ಭೇದ ಇದೆಯೇ?

ಜಗತ್ತಿನೆಲ್ಲೆಡೆ ಇರುವ ಸನ್ಮಾನ ಸಮಾರಂಭದ ಪ್ರೋಟೋಕಾಲ್‌ನಂತೆ ಸನ್ಮಾನಿಸುವವನು ಸ್ವಾಮಿಯಾಗಿರಲಿ ಅಥವಾ ದೇಶದ ರಾಷ್ಟ್ರಪತಿಯಾಗಿರಲಿ ಅವನು ಎದ್ದು ನಿಂತು ಸಾಧಕನನ್ನು ಕುಳ್ಳಿರಿಸಿ ಸನ್ಮಾನಿಸುವ ಪದ್ಧತಿಯೇ ಸರ್ವತ್ರ ಇರುವುದು. ಆದರೆ ನಮ್ಮ ಕರಾವಳಿಯಲ್ಲಿ ಸ್ವಾಮಿಗಳ ಕೈಯಿಂದ ಯಾವುದಾದರೂ ಸಾಧಕರಿಗೆ ಸನ್ಮಾನ ಮಾಡಿಸುವಾಗ ಸನ್ಮಾನಿಸುವವನು (ಸ್ವಾಮಿ) ಕಾಲ ಮೇಲೆ ಕಾಲು ಹಾಕಿ ಕುಳಿತೇ ಇರುತ್ತಾನೆ ಹಾಗೂ ಸನ್ಮಾನಗೊಳ್ಳುವ ಎಂಬತ್ತು ವರ್ಷದ ಸಾಧಕ ಬಗ್ಗಿ ನಿಂತುಕೊಂಡು ಕುಳಿತಿರುವ ಸ್ವಾಮಿಯಿಂದ ಸನ್ಮಾನ ಪಡೆದುಕೊಳ್ಳುವ ವಿಚಿತ್ರ ಕಥೆ ಇದೆ! ಇದೇಕೆ ಹೀಗೆ? ನಮ್ಮ ಕರಾವಳಿಯೇನು ಸಮಸ್ತ ಜಗತ್ತಿನಿಂದ ಬೇರೆಯಾಗಿದೆಯೇ?


-ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಕತ್ತಿ ಹಿಡಿದು, ಮುಚ್ಕೊಂಡ್ ಕಾವಲು ಕಾಯಲಷ್ಟೇ ದಲಿತರು

ರಾಘವೇಶ್ವರ ಸ್ವಾಮಿಯ "ಅತಿ ಆಚಾರ"ದ ಪ್ರಕರಣ (ಆಚಾರ ಹೇಳಲಿಕ್ಕೆ ಬದನೆಕಾಯಿ ತಿನ್ನಲಿಕ್ಕೆ ಅಷ್ಟೆ. ಆಚರಣೆಗೆ ತರಲೇ ಬೇಕೆಂದೇನಿಲ್ಲ) ಕ್ಲೈಮ್ಯಾಕ್ಸ್ ಹಂತದಲ್ಲಿದೆ. ಇಲ್ಲಿ ಯಾರೋ ಒಬ್ಬ ಬಲಾಢ್ಯನನ್ನು ರಕ್ಷಿಸೋ ನೆಪದಲ್ಲಿ ಮೇಲ್ನೋಟಕ್ಕೆ ಯಾರ ಅರಿವಿಗೂ ಬಾರದ ರೀತಿಯಲ್ಲಿ ದೊಡ್ಡ ದೊಡ್ಡ ತಪ್ಪುಗಳನ್ನು ಎಸೆಯಲಾಗುತ್ತಿದೆ. ಅದರಲ್ಲಿ ಮೊದಲನೆಯದು ಮಹಿಳೆಯೊಬ್ಬಳ ಹಾಗು ಅವರ ಅವಿವಾಹಿತ ಹೆಣ್ಣು ಮಕ್ಕಳ ಎಗ್ಗಿಲ್ಲದ ಮಾನಹಾನಿ ಪ್ರಯತ್ನಗಳು. ಎದುರಾಳಿಯ ನೈತಿಕ ಸ್ಥೈರ್ಯ ಕುಗ್ಗಿಸುವ ಸಲುವಾಗಿ ರಾಘವನ ಧೂರ್ತ ಪಡೆ ಶುರುವಿಟ್ಟುಕೊಂಡ ಈ ನೀಚ ಕಾರ್ಯ ರಾಘವ ಪ್ರತಿನಿಧಿಸುವ ಧರ್ಮನೀತಿಗಳ ಮಾರ್ಗಕ್ಕೆ ಯಾವ ರೀತಿಯಲ್ಲಿ ಒಪ್ಪಿತವೋ ಅವರಿಗೇ ಗೊತ್ತು, ನಾಳೆಯ ದಿನ ರಾಘವನ ಆರೋಪ ಸಾಬೀತಾದ (ಸದ್ಯದ ಮಾಹಿತಿಯಂತೆ ಅನ್ಯಾಯದ ತಕ್ಕಡಿ ರಾಘವನೆಡೆಗೇ ಮುಖ ಮಾಡಿದೆ ಎನ್ನುವ ಸುದ್ದಿಯಿದೆ) ತೀರ್ಪು ಹೊರಬಂದರೆ ಈ ಹೆಣ್ಣುಗಳ ಮೇಲೆ ನಡೆದ ಸರಣಿ ಅಕ್ಷರ ಅತ್ಯಾಚಾರವನ್ನು ರಾಘವನ ಈ ಪೇಮೆಂಟ್ ಪಡೆ ಯಾವ ರೀತಿಯಲ್ಲಿ ಸಮರ್ಥಿಸೀತು?

ಇನ್ನು ಇದೇ ಕೇಸಿನಲ್ಲಿ ಕಾನೂನುರೀತ್ಯಾ ಪ್ರಕರಣ ದಾಖಲಿಸಲು ಪೊಲೀಸರು ಕೆಕ್ಕಾರು ಮಠಕ್ಕೆ ಬಂದಾಗ ಈ ರಾಘವ ತನ್ನ ಸುತ್ತ ಕೋಟೆಯಾಗಿ ಬಳಸಿಕೊಂಡದ್ದು ತನ್ನ ಹವ್ಯಕ ಶಿಷ್ಯಂದಿರನ್ನಲ್ಲ ಬದಲಿಗೆ ಮಂಕಾಳ ವೈದ್ಯನಂತಹ ಅಬ್ರಾಹ್ಮಣ ರಾಜಕಾರಣಿ-ಶಾಸಕರುಗಳನ್ನು. ಅದಕ್ಕೂ ಮುಖ್ಯವಾಗಿ ಸ್ಥಳೀಯ ದಲಿತರಾದ ಮುಕ್ರಿ ಜನಾಂಗದ ಪ್ರಚೋದಿತ ಪಡೆಯನ್ನು ರಾಘವನೆಂಬ ಢೋಂಗಿ ಭಗವಂತನ (ಈತ ಭಗವಂತನಲ್ಲ ಭಗದಾಸ. ಭಗ ಎಂದರೆ ಮೂಲದಲ್ಲಿ ಬೇರೆಯದೇ ಅರ್ಥವಿದೆ.) ರಕ್ಷಣೆಗಾಗಿ ನಿಯೋಜಿಸಲಾಗಿತ್ತು.

'ನೀವು ಮಾಡುತ್ತಿರುವುದು ಭಗವಂತನ ಸೇವೆ. ಪೊಲೀಸರನ್ನು ಎದುರು ಹಾಕಿಕೊಳ್ಳುವುದೆಂದ ಮಾತ್ರಕ್ಕೆ



ಇದು ಕಾನೂನು ವಿರೋಧಿ ಎಂದು ಭಾವಿಸಬಾರದು. ಈ ಪುಣ್ಯ ಪ್ರಾಪ್ತಿಯ ಕೆಲಸವೇ ಒಂದು ಪೂರ್ವ ಜನ್ಮದ ಭಾಗ್ಯ ಎಂದು ತಿಳಿಯಬೇಕು' ಎಂದು ಆ ಮುಗ್ಧರನ್ನು ಪ್ರಚೋದಿಸಲಾಗಿತ್ತು. (ರಾಮನ ಸೇವೆಯ ಹೆಸರಲ್ಲೇ ಹೆಣ್ಣೊಂದಿಗೆ ಆಟವಾಡಿದ ಇವರೆಲ್ಲ ಹೇಗೂ ಇಮೋಷನಲ್ ಬ್ಲಾಕ್‌ಮೇಲ್ ಎಕ್ಸ್‌ಪರ್ಟ್ ತಾನೆ?) ಯಾಕೆಂದರೆ ದಲಿತರ ಮೈಮುಟ್ಟಿ ಅನವಶ್ಯಕವಾಗಿ ತೊಂದರೆಗೆ ಸಿಕ್ಕಿಕೊಳ್ಳುವ ಧೈರ್ಯವನ್ನು ಯಾರೂ ಮಾಡಲಾರರು. ಜೊತೆಗೆ ಜಾತಿ ಮತ ಮೀರಿ ಎಲ್ಲರೂ ರಾಘವನ ಜೊತೆಗಿದ್ದಾರೆ ಎಂದು ಬಿಂಬಿಸುವ ಪ್ರಕ್ರಿಯೆ ಇಲ್ಲಿ ರಾಘವನ ಕ್ರಿಮಿನಲ್ ಪಡೆ ಹಣೆದಿತ್ತು, ಇದರ ಇನ್ನೊಂದು ಮುಖವಾಗಿ ಮೊನ್ನೆ ಸಾಗರದಲ್ಲಿ ರಾಘವನ ಅಳಿದುಳಿದ ಬೆಂಬಲಿಗರು ಸಭೆ ನಡೆಸುತ್ತಿದ್ದಾಗ ಮೊದಲಿಂದಲೂ ರಾಘವನ ವಂಚನೆಗಳನ್ನು ವಿರೋಧಿಸುತ್ತಾ ಬಂದಿದ್ದ ದಲಿತ ನಾಯಕ ದೂಗೂರ್ ಅವರ ಪ್ರತಿಭಟನೆ ನೋಡಿ ರಾಘವನ ಪಡೆ ಅವರನ್ನು ಹಿಡಿದು ಚೆನ್ನಾಗಿ ಥಳಿಸಿದೆ. ಅಂದರೆ ಈ ವಂಚಕರಿಗೆ ದಲಿತರು ಕತ್ತಿ ಹಿಡಿದು ತಮ್ಮ ಗುರುವನ್ನು ಕಾಯಲಷ್ಟೇ ಬೇಕೇ ವಿನಹ ಗುರುವಿನ ಗುರುತರ ತಪ್ಪುಗಳನ್ನು ಎತ್ತಿ ತೋರಿಸಲಿಕ್ಕಲ್ಲ ಎಂದಾಯ್ತು.

ದನದ ಹೆಸರಲ್ಲಿ, ಶ್ರೀರಾಮನ ಹೆಸರಲ್ಲಿ ತಿಂದುಂಡು ಕೊಬ್ಬಿದ ರಾಘವನ ಆಟಕ್ಕೂ ತೆರೆಬೀಳುವ ಸಂದರ್ಭ ಬಂದಿದೆ. ರಾಘವ ಮಠ ಬಿಟ್ಟು ಸಂಸಾರಿಯಾಗಲು 'ಘರ್ ವಾಪಸಿ' ಸೂತ್ರವೊಂದನ್ನು ಸಮಾನ ಮನಸ್ಕ ಹವ್ಯಕರ ಗುಂಪೊಂದು ಇದೀಗ ಹೆಣೆಯುತ್ತಿದೆ. ಸಂಸಾರಿ ರಾಘವನಿಗೆ ಶುಭವೆನ್ನೋಣ.

-ಅವಿನಾಶ್ ಎಂ.ಎಸ್. ನೆಲ್ಲಿಕಾರ್

ಬಸವ ಮೂರ್ತಿಯ ಅನಾವರಣಕ್ಕೆ ಆಚಾರ್ಯರ ಹಸ್ತವೆ??

ಜನವರಿ 11, 2015 ರಂದು ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಹುಣಸಗಿ ಕಾರ್ಯಕ್ರಮದಲ್ಲಿ ಬಸವ ಮೂರ್ತಿ ಅನಾವರಣಕ್ಕೆ ರಂಭಾಪುರಿ ಸ್ವಾಮಿಗಳನ್ನು ಕರೆದಿರುವುದು ಸರಿಯಲ್ಲ, ಯಾಕೆಂದರೆ ಬಸವ ವಿರೋಧಿಗಳಾದ ಪಂಚಪೀಠ ಸ್ವಾಮಿಗಳು - ಅದರಲ್ಲೂ ಬಸವಣ್ಣ ಮತ್ತು ಬಸವ ತತ್ವವನ್ನು ಅಗ್ರವಾಗಿ ವಿರೋಧಿಸುವ ರಂಭಾಪುರಿ ಜಗದ್ಗುರು - ಎಂಬ ಸನಾತನಿಗಳ ಕೈಯಲ್ಲಿ ಬಸವ ಮೂರ್ತಿಯ ಅನಾವರಣ ಸಮಂಜಸವಲ್ಲ.

ಇವರು ಮೊದಲು ಶರಣರ ಚರಿತ್ರೆಗೆ ಮಸಿ ಬಳಿದಿರುವುದರಿಂದ ಜನರಲ್ಲಿ ಇವರು ಕ್ಷಮೆ ಕೇಳಬೇಕಿದೆ. 12ನೇ ಶತಮಾನದ ಅಪ್ಪ ಬಸವಾದಿ ಶರಣರೊಳಗೊಬ್ಬ ಶರಣ ಸೊಲ್ಲಾಪುರದ ಸಿದ್ರಾಮೇಶ್ವರ ಚರಿತ್ರೆಯಲ್ಲಿ 50 ಪುಟಕ್ಕೂ ಮೀರಿ ಮುನ್ನುಡಿ ಬರೆದು, ಆ ಮುನ್ನುಡಿಯಲ್ಲೆಲ್ಲ ಬಸವಣ್ಣಾದಿಯಾಗಿ ಬಹುತೇಕ ಶರಣರನ್ನ, ಅವರ ಹುಟ್ಟನ್ನ ಕೆಟ್ಟ ಕೆಟ್ಟ ಅಶ್ಲೀಲ ಪದಗಳಿಂದ ಬರೆದು ಮುದ್ರಿಸಿ ಈ ಪುಸ್ತಕಕ್ಕೆ ಆಶೀರ್ವಚನ ಬರೆದವರಲ್ಲಿ ಈ ರಂಭಾಪುರಿಗಳೂ ಒಬ್ಬರು. ಜಗದ್ಗುರುವೆನಿಸಿಕೊಂಡವರ ಭಾವಚಿತ್ರವನ್ನೆ ಹಾಕಿ ಮುದ್ರಿಸಿರುವ ಈ ಪುಸ್ತಕ ಮಾರುಕಟ್ಟೆಗಳಲ್ಲಿ ಎಗ್ಗಿಲ್ಲದೆ ಮಾರಾಟವಾಗುತ್ತಿವೆ.

ಇವರು ನಿಜವಾಗಿ ಬಸವಣ್ಣನ ಬಗ್ಗೆ, ಬಸವ ತತ್ವದ ಬಗ್ಗೆ ವೈಚಾರಿಕ ನಿಲುವಿನ ಬಗ್ಗೆ ಅಭಿಮತ ಉಳ್ಳವರಾಗಿದ್ದರೆ ಸಂತೋಷ. ಅವರು ಮೊದಲು ಬಸವಣ್ಣನವರ ಬಗ್ಗೆ, ಶರಣರ ಬಗ್ಗೆ ಅವಹೇಳನವಾಗಿ ಬರೆದಿರುವ ಈ ಪುಸ್ತಕದ ಮುಟ್ಟುಗೋಲಿಗೆ ಮುಂದಾಗಲಿ. ಆಗ ಅವರು ಬಸವ ಮೂರ್ತಿ ಅನಾವರಣದಲ್ಲಿ ಭಾಗವಹಿಸಲು ಯೋಗ್ಯರೆನಿಸಿಕೊಳ್ಳುವರು.


-ಡಾ ಶಶಿಕಾಂತ ಪಟ್ಟಣ, ಪೂನಾ

ಏನು ಉತ್ಸಾಹ..! ಅದೇನು ಕಾತರ?!!

ಟಿವಿ ಇನ್ನಿತರ ಮಾಧ್ಯಮಗಳಲ್ಲಿ ಸದಾ ಸುದ್ದಿಯಲ್ಲಿರ ಬಯಸುವವರಿಗೆ ಆ ಅವಕಾಶ ಕೈ ತಪ್ಪಿದಂತಾದಾಗ ಮಂಡೆ ಕೆಟ್ಟು ಹನ್ನೆರಡಾಣೆಯಂತಾಗುವುದುಂಟು. ವರ್ಷವಿಡೀ ಬೇರಿನ್ಯಾವುದೋ ಕಾರಣಕ್ಕೆ ಸುದ್ದಿಯಲ್ಲಿದ್ದ ಕರಾವಳಿಯ ಸ್ಟೇಟ್‌ಮೆಂಟ್ ಪ್ರವೀಣ ಕೇಂದ್ರ ಮಂತ್ರಿಯೊಬ್ಬರು ಮೊನ್ನೆ ಬೆಂಗಳೂರಲ್ಲಿ ಯಾವನೋ ತಲೆಕೆಟ್ಟವನೊಬ್ಬ ಬಾಂಬ್ ಸ್ಫೋಟಿಸಿದಾಗ ಕಾಲಿಗೆ ಚಕ್ರ ಕಟ್ಟಿಕೊಂಡು ಬೆಂಗಳೂರು-ಡೆಲ್ಲಿ ಎಂದು ನಿದ್ದೆ ಬಿಟ್ಟು ಓಡಾಡಿ ದೇಶಾದ್ಯಂತ ಮಾಧ್ಯಮಗಳಲ್ಲಿ ಮಿಂಚಿದ ರೀತಿಯಿದೆಯಲ್ಲ ಅದು ಅವರ ಉಳಿದ ಸಹೋದ್ಯೋಗಿಗಳನ್ನೇ ಕುರುಬುವಂತೆ ಮಾಡಿತ್ತು.

1999 ರಲ್ಲಿ ಪ್ರಳಯದ ಕುರಿತ ಪುಸ್ತಕ ಹಾಗು ಪತ್ರಿಕೆಯ ಲೇಖನವೊಂದು ಭಾರೀ ಸುದ್ದಿ ಮಾಡಿತ್ತು, ಇದನ್ನು ಬರೆದವರಿಗೆ ಹಾಗು ಪ್ರಕಟಿಸಿದವರಿಗೆ 2000 ಕ್ಕೆ ಪ್ರಳಯ ಆಗೇ ಆಗಲಿ ಎಂಬ ಮಹದಾಸೆ ಮನಸ್ಸಿನಲ್ಲಿತ್ತು. ಯಾಕೆಂದರೆ ತಾವು ಇಷ್ಟು ದೊಡ್ಡ ಮಟ್ಟದಲ್ಲಿ ಪ್ರಚಾರ ಕೊಟ್ಟ ಸುದ್ದಿ ಹುಸಿಯಾಗಬಾರದಲ್ಲ ಅದಕ್ಕೆ.

ಅದೇರೀತಿ ಈ ಸಚಿವರಿಗೊಂದು ಮೇಲ್ ಬಂದಿತ್ತಂತೆ. ಅದರಲ್ಲಿ 'ಈ ಸ್ಫೋಟ ಮೆಹದಿ ಬಂಧನಕ್ಕೆ ಪ್ರತೀಕಾರ. ಇನ್ನೆರಡು ಸ್ಫೋಟಗಳು ಮುಂದೆ ಬಾಕಿ ಇವೆ. ತಾಕತ್ತಿದ್ದರೆ ನನ್ನನ್ನು ಹಿಡಿಯಿರಿ' ಎಂದು ಮುಸಲ್ಮಾನನ ಹೆಸರಲ್ಲಿ ಅಸಭ್ಯವಾಗಿ ಟ್ವೀಟ್ ಮಾಡಿದ್ದನಂತೆ. ಅದನ್ನೇ ಹಿಡಿದು ಜೋತಾಡಿದ ಈ ಸಚಿವರು ಆ ಬಗ್ಗೆ ಹೇಳಿಕೆ ಕೊಟ್ಟಿದ್ದೇ ಕೊಟ್ಟಿದ್ದು. ಬೆಂಗಳೂರು ನಗರ ಪೊಲೀಸ್ ಆಯುಕ್ತ ಎಮ್.ಎನ್.ರೆಡ್ಡಿ ಸಾಹೇಬರು ಇದನ್ನು ತಳ್ಳಿ ಹಾಕಿ 'ಇವೆಲ್ಲ ಹುಸಿ ಸಂದೇಶಗಳು; ಇಂಥವಕ್ಕೆಲ್ಲ ಅರ್ಥ ವಿರುವುದಿಲ್ಲ' ಎಂದರೂ ಸಚಿವರು ತಮ್ಮ ವಾದವನ್ನೇ ಮುಂದುವರೆಸಿದ್ದರು.



ಆದರೆ ತನ್ನನ್ನು ಹಿಡಿಯಿರಿ ಎಂದು ಛಾಲೆಂಜ್ ಹಾಕಿದ್ದ ಭೂಪ ಸಿಕ್ಕೇ ಬಿಟ್ಟಿದ್ದಾನೆ. ಹದಿನೇಳರ ಈತ ಅಬ್ದುಲ್ಲನೂ ಅಲ್ಲ, ಖಾನನೂ ಅಲ್ಲ. ಅಸಲಿಗೆ ಆತ ಹಿಂದೂ ಧರ್ಮದ ಸತೀಶ! ಆಗ ಸಚಿವರು ಗಪ್ ಚುಪ್!

-ಓದುಗ, ಮಂಗಳೂರು

ದೊಡ್ಡಿಪಾಳ್ಯ ನರಸಿಂಹಮೂರ್ತಿಯವರು ಬರೆದ 'ಗಾಂಧಿವಾದವನ್ನು ಕೊಲ್ಲುತ್ತಿರುವ ಗೋಡ್ಸೆವಾದ' ಲೇಖನವು ವಾಸ್ತವವಾಗಿದೆ. ದೇಶ ಬಹಳಷ್ಟು ಸಮಸ್ಯೆಗಳನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ಕಪಟ ನಾಟಕವಾಡುತ್ತಿರುವ ಸಂಘಗಳಿಗೆ ಸರಿಯಾಗಿ ಬುದ್ಧಿ ಕಲಿಸಬೇಕಿದೆ. ಅವರನ್ನು ಎಚ್ಚರಿಸುವ ಕೆಲಸವನ್ನು ನಾವೆಲ್ಲರೂ ಮಾಡಬೇಕಿದೆ. ಯಾಕೆಂದರೆ ಮಿಥ್ಯ ಬಹಳ ದಿನ ಉಳಿಯುವುದಿಲ್ಲ.

-ಮುತ್ತುರಾಜ್, ಮಂಡ್ಯ

ಗೌರಿಯವರ ಕಂಡಹಾಗೆ (ಹುಚ್ಚರ ಸಂತೆಯೂ, ಜಾತ್ಯತೀತರ ವಿವೇಕವೂ) ಅದ್ಭುತವಾಗಿದೆ. ಸೂಫಿ ಕತೆಯ ಮೂಲಕ ವಾಸ್ತವ ಸ್ಥಿತಿಯನ್ನು ನಿರೂಪಿಸಿರುವ ರೀತಿ ಮೆಚ್ಚುವಂತದ್ದು. ಆ ಲೇಖನ ನನಗೆ ತುಂಬಾ ಇಷ್ಟವಾಯಿತು.

-ರವಿಕುಮಾರ್, ಹಾಸನ


ಪತ್ರಿಕೆ ತುಂಬಾ ಚೆನ್ನಾಗಿ ಬರುತ್ತಿದೆ. ಕನ್ನಡದ ಕೆಲವೇ ಕೆಲವು ಮೌಲ್ಯಯುತ ವಾರಪತ್ರಿಕೆಗಳಲ್ಲಿ ಇದೂ ಒಂದು.

ಇತ್ತೀಚೆಗೆ ಡಾ.ವಾಸು ಅವರ 'ಅಂಚಿನಿಂದ' ಅಂಕಣದಲ್ಲಿ ಎನ್‌ಎಸ್‌ಎಸ್‌ಒ ಕುರಿತ ಲೇಖನ ಚೆನ್ನಾಗಿತ್ತು, ಆದರೆ ಎನ್‌ಎಸ್‌ಎಸ್‌ಒ ಎಂಬುದು ನ್ಯಾಷನಲ್ ಸ್ಯಾಂಪಲ್ ಸರ್ವೆ ಆರ್ಗನೈಸೇಶನ್ ಬದಲಾಗಿ ನ್ಯಾಷನಲ್ ಸ್ಯಾಂಪಲ್ ಸರ್ವೆ ಆಫೀಸ್ ಆಗಿದೆ.

-ರಾಜಣ್ಣ ದಿ. ಬಡಕನಹಳ್ಳಿ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು **lankesh70@rediffmail.com** ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು **9980331427** ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ **SMS** ಕಳುಹಿಸಬಹುದು.

ನನ್ನೊಳಗಿನ ಸಂಗೀತಗಾರನನ್ನು ಗುರ್ತಿಸಿದ್ದು ನನ್ನ ತಾಯಿ: ಎ.ಆರ್.ರೆಹಮಾನ್



ರೋಜಾ', 'ದಿಲ್ ಸೇ', 'ಬಾಂಬೆ', 'ಲಗಾನ್', ಡಾಗ್ ಮಿಲೇನಿಯರ್', 'ರಂಗ್ ದೇ ಬಸಂತಿ', ಯಾ' ಸೇರಿದಂತೆ ನೂರಾರು ಚಿತ್ರಗಳಿಗೆ ಅದ್ಭುತ ...ೀತ ನೀಡುವ ಮೂಲಕ ವಿಶ್ವಮಟ್ಟದಲ್ಲಿ ಕೀರ್ತಿ ...ದಿರುವ, ಪ್ರತಿಷ್ಠಿತ ಆಸ್ಕರ್ ಪ್ರಶಸ್ತಿಯನ್ನು ಗಳಿಸಿರುವ, ...ವರಿ ಆರರಂದು ತಮ್ಮ ನಲವತ್ತೆಂಟನೆಯ ವಯಸ್ಸಿಗೆ ...ಟ್ಟಿರುವ ಪದ್ಮಶ್ರೀ, ಪದ್ಮಭೂಷಣ ಎ.ಆರ್.ರೆಹಮಾನ್ ... ಬಾಲ್ಯ, ಹೆತ್ತವರು, ಸಂಗೀತ, ಆಧ್ಯಾತ್ಮ, ಕೌಟುಂಬಿಕ ...ಕಿನ ಬಗ್ಗೆ ಮಾತಾಡಿರುವ ಮಾತುಗಳನ್ನು ಇಲ್ಲಿ ...ಪ್ಪಿಸಿ ಕೊಡಲಾಗಿದೆ...

ಪ್ರಶ್ನೆ: ಸಂಗೀತದೆಡೆಗಿನ ಆಸಕ್ತಿ ಯಾವಾಗ ಶುರುವಾಯ್ತು?

ರೆಹಮಾನ್: ನನ್ನೊಳಗಿನ ಸಂಗೀತಗಾರನನ್ನು ಗುರ್ತಿಸಿದ್ದು ... ತಾಯಿ ಕಸ್ತೂರಿ ಶೇಖರ್. ನನ್ನ ತಂದೆ ಮೂಲತಃ ...ಸಿಕ್ ಅರೇಂಜರ್ ಆಗಿದ್ದರು. ಆಗಿನ ದಿನಗಳಲ್ಲಿ ಬಹುತೇಕ ...ೋಸರ್‌ಗಳು ಕರ್ನಾಟಕ ಸಂಗೀತದ ಹಿನ್ನೆಲೆಯುಳ್ಳವರಾಗಿದ್ದರು. ...ಹ ಸಂಗೀತ ನಿರ್ದೇಶಕರಿಗೆ ನನ್ನ ತಂದೆ ಮ್ಯೂಸಿಕ್ ...ಂಜ್ ಮಾಡಿಕೊಡುತ್ತಿದ್ದರು. ನಮ್ಮಪ್ಪ ಆ ಕೆಲಸದಲ್ಲಿ ... ಬ್ಯುಸಿ ಇರುತ್ತಿದ್ದರೆಂದರೆ ಏಕಕಾಲಕ್ಕೆ ಎಂಟು ಮಂದಿ ...ತ ನಿರ್ದೇಶಕರಿಗೆ ಕೆಲಸ ಮಾಡುವಷ್ಟು, ಹಗಲುರಾತ್ರಿಗಳೆನ್ನದೆ ...ಯುತ್ತಿದ್ದರು. ಅಂತಹ ಅಪ್ಪ ತೀರಿಕೊಂಡಾಗ ನನಗೆ ... ಒಂಭತ್ತು ವರ್ಷ. ನನ್ನ ತಂದೆ ತೀರಿಕೊಂಡ ನಂತರ ...ೀಬ್ಬರಿ ಐದು ವರ್ಷಗಳ ಕಾಲ ನನ್ನ ತಾಯಿ ನನ್ನ ...ಯ ಸಂಗೀತ ವಾದ್ಯಗಳನ್ನು ಬಾಡಿಗೆಗೆ ಕೊಡುವ ಮೂಲಕ ...ಟುಂಬ ನಿಭಾಯಿಸುತ್ತಿದ್ದರು. ಆ ವಾದ್ಯಗಳನ್ನು ಕೆಲವ್ರೊಬ್ಬರು ...ದಿಗೆ ಕೊಂಡುಕೊಳ್ಳಲು ಕೇಳಿದಾಗ ನನ್ನ ತಾಯಿ ಹೇಳಿದ ...ೇ ಒಂದು ಮಾತೆಂದರೆ "ನನ್ನ ಮಗನಿಗೆ ಇವು ಬೇಕು" ...ಬುದು. ಆಕೆಗಿದ್ದ ಆಧ್ಯಾತ್ಮಿಕತೆ ...ಕ್ಕೂ ಬೆರಗು ಮೂಡಿಸುವಂಥದ್ದಾಗಿತ್ತು. ಆಕೆ ಯಾವ್ರೊಂದು ...ಯ ಕೈಗೊಳ್ಳುವ ಮುನ್ನ ನಾಲ್ಕಾರು ಸಲ ಆಲೋಚಿಸಿ ...ತರ ಕೈಗೊಳ್ಳುತ್ತಿದ್ದರು. ನಾನು ಹನ್ನೊಂದನೇ ...ತಿಯಲ್ಲಿದ್ದಾಗ ಶಾಲೆ ಬಿಡಿಸಿ ಸಂಪೂರ್ಣವಾಗಿ ಸಂಗೀತದತ್ತ ...ನಹರಿಸುವಂತೆ ಮಾಡಿದ್ದು ನನ್ನ ತಾಯಿ.

ಪ್ರಶ್ನೆ: ನಿಮ್ಮ ತಾಯಿ ಶಾಲೆ ಬಿಡಿಸಿದ್ದರ ಬಗ್ಗೆ ...ಗೆ ಬೇಸರವಾಯಿತಾ?

ರೆಹಮಾನ್: ಬೇಸರಕ್ಕಿಂತ ಮಿಗಿಲಾಗಿ ಭಯವಾಗಿ ...ಟು. ಈಗಿನ ಕಾಲದಲ್ಲಿ ಶಿಕ್ಷಣ ಇಲ್ಲದೆ ಹೋದರೆ ...ಷ್ಯದಲ್ಲಿ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ...ವ್ರೊಂದು ಉತ್ತಮ ಉದ್ಯೋಗ ಸಿಕ್ಕದೆ ಟ್ಯಾಕ್ಸಿ ಡ್ರೈವರ್, ... ಡ್ರೈವರ್ ತರಹದ ಕೆಲಸಗಳನ್ನು ಮಾಡಿಕೊಂಡು ...ಟ್ಟೆ ತುಂಬಿಸಿಕೊಳ್ಳಬೇಕಾಗುತ್ತದೆ... ಎಂದೆಲ್ಲಾ ಕೆಲವರು ... ನನ್ನನ್ನು ಹೆದರಿಸುತ್ತಿದ್ದರು. ಮುಂದೊಮ್ಮೆ ನಾನು ...ಸ್ವಲ್ಪ ಹಣ ಸಂಪಾದಿಸಲು ಆರಂಭಿಸಿದಾಗ ಮತ್ತೆ ...ವನ್ನು ಮುಂದುವರಿಸುವ ಆಲೋಚನೆಯನ್ನು ಮಾಡಿದ್ದೆ. ...ೀಲೆ ಅರ್ಥವಾಯಿತು, ಶಿಕ್ಷಣ ಅನ್ನುವುದು ಬದುಕಿನ ...ಕ್ಷಣದಲ್ಲೂ ಕಲಿಯುವಂಥದ್ದು, ಜೀವನವೇ ಪಾಠಶಾಲೆ, ...ನ್ನು ಕಲಿಯಲು ಕಾಲೇಜಿನ ಅಗತ್ಯವಿಲ್ಲ ಎಂದು ...ಗಂಡೆ. ಹಾಗಂತ ಶಾಲಾಕಾಲೇಜಿನಲ್ಲಿನ ಶಿಕ್ಷಣವನ್ನು ... ಕಡೆಗಣಿಸುತ್ತಿಲ್ಲ, ಅಲ್ಲಿ ಜ್ಞಾನವನ್ನು ಗಳಿಸಲು ದಾರಿ ...ದೆ. ಆದರೆ ಬದುಕಿನ ಶಾಲೆಯಲ್ಲಿ ಬುದ್ಧಿವಂತಿಕೆಯಿಂದ ... ಇಡಲು ತೆರೆದ ಅವಕಾಶವಿದೆ.

ಪ್ರಶ್ನೆ: ನೀವು ಚಿಕ್ಕಂದಿನಲ್ಲೇ ಸಂಗೀತಲೋಕ ...ಶಿಸಿದ್ದರಿಂದ ನಿಮ್ಮ ಶಾಲಾದಿನಗಳನ್ನು ಮಿಸ್ ...ಕೊಂಡ್ರಿ. ಇದರ ಬಗ್ಗೆ ದುಃಖವಿದೆಯಾ?

ರೆಹಮಾನ್: ಖಂಡಿತ ಇಲ್ಲ, ನನ್ನ ಹನ್ನೊಂದನೇ ...ಸ್ಸಿನ ನಂತರ ಸಂಗೀತದ ಜೊತೆಜೊತೆಗೇ ನಾನು ...ಥ ಬಾಲ್ಯ ನನ್ನ ಪಾಲಿಗೆ ಸದಾ ನೆನಪಿನಲ್ಲಿ ಉಳಿಯು...ದ್ದು. ಹಾಗೆಯೇ ನಾನು ಕಳೆದುಕೊಂಡ ಬಾಲ್ಯವನ್ನು ...ದ ನನ್ನ ಮ್ಯೂಸಿಕ್ ಕಾಲೇಜಿನಲ್ಲಿ ಸಂಗೀತಾಭ್ಯಾಸ ...ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ಕಾಣುತ್ತಿದ್ದೇನೆ.

ಪ್ರಶ್ನೆ: ನೀವು ನಿಮ್ಮ ತಾಯಿಯ ಮೇಲೆ ಇಟ್ಟಿರುವ ...ಯನ್ನು ಆಕೆಯ ಬಳಿ ವ್ಯಕ್ತಪಡಿಸಿದ್ದೀರಾ?


ರೆಹಮಾನ್: ನಾವು ಸಿನಿಮಾಗಳಲ್ಲಿ ಬರುವ ...ಸಂಗಳಂತಲ್ಲ, ನಮ್ಮಮ್ಮ ಯಾವತ್ತೂ 'ಓ ಮಗನೇ...' ... ನನಗೆ ಹೇಳಿದ್ದಿಲ್ಲ, ಹಾಗೆಯೇ ನಾನ್ಯಾವತ್ತೂ ನನ್ನ ತಾಯಿಯನ್ನು ಅಪ್ಪಿಕೊಂಡಿಲ್ಲ. ಅದು ತೀರಾ ನಾಟಕೀಯ ವೆನಿಸುತ್ತದೆ. ಸಾಧ್ಯವಾದರೆ ಮುಂದೆ ಹಾಲಿವುಡ್‌ನಲ್ಲಿ ಒಮ್ಮೆ ಆಕೆಯನ್ನು ಅಪ್ಪಿಕೊಳ್ಳುವ ಆಲೋಚನೆ ಇದೆ. ಯಾಕೆಂದರೆ ಅಲ್ಲಿ ಎಲ್ಲರೂ ಎಲ್ಲರನ್ನು ಅಪ್ಪಿಕೊಳ್ಳುತ್ತಾರೆ. ಹಾಗೊಂದು ವೇಳೆ ಅಲ್ಲಿ ನೀವು ವೇದಿಕೆಯ ಮೇಲೆ ಯಾರನ್ನಾದರೂ ಅಪ್ಪಿಕೊಳ್ಳದೆ ಹೋದರೆ ನೀವು ಅಹಂಕಾರದಿಂದ ವರ್ತಿಸುತ್ತಿದ್ದೀರಿ ಅಂತ ಅರ್ಥ!

ಪ್ರಶ್ನೆ: ನೀವು ನಿಮ್ಮ ತಂದೆಯನ್ನು ಮಿಸ್ ಮಾಡಿಕೊಂಡಿರಾ?

ರೆಹಮಾನ್: ಕೆಲವ್ರೊಂದು ಪ್ರಮುಖವಾದ ವಿಷಯಗಳಲ್ಲಿ ತೀರ್ಮಾನ ಕೈಗೊಳ್ಳುವಾಗ ಹಾಗನಿಸುತ್ತದೆ. ಉದಾಹರಣೆಗೆ ನನ್ನ ಸೋದರಿಯ ಮದುವೆ ಸಂದರ್ಭದಲ್ಲಿ ಒಂದು ಜವಾಬ್ದಾರಿಯುತ ಸ್ಥಾನದಲ್ಲಿ ಇದ್ದುಕೊಂಡು ಆ ಕ್ಷಣಗಳನ್ನು ಹೇಗೆ ನಿಭಾಯಿಸಬೇಕು ಅನ್ನುವುದು ನಿಜಕ್ಕೂ ಜಟಿಲವಾಗಿತ್ತು. ಅಂತಹ ರೋಲ್ ನನ್ನ ಬದುಕಿನಲ್ಲಿ ತೀರಾ ಹೊಸದು. ಅಂತಹ ಸಂದರ್ಭಗಳಲ್ಲೇ ಅಪ್ಪನ ಅನಿವಾರ್ಯತೆ ಸೃಷ್ಟಿಯಾಗುವುದು. ಇಷ್ಟಕ್ಕೂ ನಾನು ನನ್ನ ಮಕ್ಕಳೊಂದಿಗೆ ವಿದೇಶಗಳಿಗೆ ಹೋಗುವ ಸಂದರ್ಭದಲ್ಲಿ ನನಗೇ ಗೊತ್ತಿಲ್ಲದಂತೆ ನಾನೊಬ್ಬ ಅಪ್ಪನಾಗಿ ವರ್ತಿಸುತ್ತಿರುತ್ತೇನೆ. ನನ್ನ ಮಕ್ಕಳನ್ನು ಹುಷಾರಾಗಿ ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳುತ್ತಿರುತ್ತೇನೆ. ಯಾರಾದರೂ ನನ್ನ ಫೋಟೋ ತೆಗೆದುಕೊಂಡರೆ ಓಕೆ, ನನ್ನ ಮಕ್ಕಳ ಜೊತೆ ಫೋಟೋ ತೆಗೆದುಕೊಳ್ಳುವುದು ನನಗಿಷ್ಟವಾಗುವುದಿಲ್ಲ, ಯಾಕೆಂದರೆ ನನ್ನ ಮಕ್ಕಳು ಸಾರ್ವಜನಿಕ ಆಸ್ತಿಯಲ್ಲವಲ್ಲ. ಇವೆಲ್ಲ ಟಿಪಿಕಲ್ ಅಪ್ಪಂದಿರ ಸಹಜ ಗುಣಗಳು!

ಪ್ರಶ್ನೆ: ನಿಮ್ಮ ಸುದೀರ್ಘ ಪಯಣದಲ್ಲಿ ಬದುಕು ಏನೇನು ಕಲಿಸಿಕೊಟ್ಟಿದೆ?

ರೆಹಮಾನ್: ಪ್ರತಿಯೊಬ್ಬರೂ ತಂತಮ್ಮ ಬದುಕಿನ ಪಯಣದಲ್ಲಿ ಅದೆಷ್ಟೋ ಪರೀಕ್ಷೆಗಳಿಗೆ, ಸವಾಲುಗಳಿಗೆ ಗುರಿಯಾಗುತ್ತಾರೆ. ಆ ಪೈಕಿ ಕೆಲವ್ರೊಂದು ಎಲ್ಲರಿಗೂ ಕಾಮನ್ನಾಗಿರುತ್ತವೆ. ನಾವು ಅನುಭವಗಳಿಂದ ಪಾಠ ಕಲಿಯುತ್ತಾ ಹೋಗಬೇಕು. ಆಧ್ಯಾತ್ಮದ ವಿಷಯಕ್ಕೆ ಬಂದರೆ ನಮ್ಮೆಲ್ಲರ ಗುರಿಯೂ ಒಂದೇ ಆಗಿರುತ್ತದೆ. ಸಾಧ್ಯವಾದಷ್ಟು ಮತ್ತೊಬ್ಬರ ಸಂತೋಷಕ್ಕಾಗಿ, ಖುಷಿಗಾಗಿ ನಾವು ಪ್ರಯತ್ನಿಸಬೇಕು- ಅದು ಕುಟುಂಬದ ಸದಸ್ಯರಾಗಿರಬಹುದು, ಸಂಗಾತಿಯಾಗಿರಬಹುದು, ಸ್ನೇಹಿತರಾಗಿರಬಹುದು ಅಥವಾ ನೆರೆಹೊರೆಯವರಾಗಿರಬಹುದು. ನಾವು ಎಷ್ಟೋ ಬಾರಿ ಬುದ್ಧಿವಂತಿಕೆ ಅನ್ನುವುದು ಜ್ಞಾನದಿಂದ ಬರುವಂಥದ್ದು ಎಂದು ನಂಬಿರುತ್ತೇವೆ. ಆದರೆ ನಮ್ಮ ಅಂತರಂಗದ ಧ್ವನಿಯೇ ನಮ್ಮ ಆಧ್ಯಾತ್ಮದ ಧ್ವನಿಯಾಗಿರುತ್ತದೆ ಎಂಬುದನ್ನು



ಮನಗಾಣಬೇಕು. ಆ ಧ್ವನಿಯನ್ನು ದಟ್ಟಜನಸಂದಣಿಯ ಅಬ್ಬರದ ನಡುವೆಯೂ ಆಲಿಸುವಲ್ಲಿ ನಾವು ಗೆಲ್ಲಬೇಕು. ಜ್ಞಾನವೂ ಮುಖ್ಯವಾದುದೇ, ಆದರದು ಅಸಲಿಯಲ್ಲ, ಬುದ್ಧಿವಂತಿಕೆ ಎಲ್ಲಿಂದ ಬರುತ್ತದೆ ಅಂತ ಹೇಳಲು ಆಗುವುದಿಲ್ಲ, ಅದು ಬರಲು ಅವಕಾಶ ಮಾಡಿಕೊಡಬೇಕಷ್ಟೇ.

ಪ್ರಶ್ನೆ: ನೀವು ರಾತ್ರಿ ಹೊತ್ತಿನಲ್ಲೇ ಕೆಲಸ ಮಾಡುವ ಸೀಕ್ರೆಟ್ ಏನು?

ರೆಹಮಾನ್: ಅದು ಅನುಕೂಲಕರ. ನಾನು ದಿನಕ್ಕೆ ಐದು ಬಾರಿ ದೇವರ ಪ್ರಾರ್ಥನೆ ಮಾಡುತ್ತೇನೆ. ಬೆಳಗ್ಗೆ ಐದು ಮೂವತ್ತಕ್ಕೆ ಸರಿಯಾಗಿ ನಾನು ಪ್ರಾರ್ಥನೆ ಮಾಡಲೇಬೇಕು. ಒಂದು ವೇಳೆ ಬೆಳಗಿನ ಜಾವ ಮೂರು ಗಂಟೆಗೆ ನಾನು ಮಲಗಿಬಿಟ್ಟರೆ ಐದೂವರೆಗೆ ಏಳಲಾಗದೆ ಬೆಳಗ್ಗಿನ ಪ್ರಾರ್ಥನೆ ಮಿಸ್ ಆಗಿಬಿಡುತ್ತದೆ. ಐದೂವರೆಯ ನಮಾಜ್ ಮುಗಿಸಿದ ನಂತರ ನಾನು ಮಲಗಲು ಹೋಗುತ್ತೇನೆ. ಬೆಳಗ್ಗಿನ ನಮಾಜ್ ಮಾಡಿದ ದಿನ ನಾನು ಇಡೀ ದಿನ ಒಂದು ಪ್ರಸನ್ನತೆ, ಶಾಂತತೆಯ ಭಾವ ಅನುಭವಿಸುತ್ತೇನೆ. ನನ್ನ ಹೆಂಡತಿ ಹೇಳುತ್ತಿರುತ್ತಾಳೆ 'ಓ! ನೀವು ಇವತ್ತು ಸಿಡುಕುತ್ತಿದ್ದೀರಿ. ಬೆಳಗ್ಗಿನ ನಮಾಜ್ ಮಾಡಿಲ್ಲ ಅಂತ ಕಾಣುತ್ತೆ!' ಆಕೆಯ ಮಾತು ನಿಜ.

ಪ್ರಶ್ನೆ: ನೀವು ರಾತ್ರಿ ಪೂರಾ ಸಂಗೀತದಲ್ಲಿ ಮುಳುಗಿದ್ದರೆ ನಿಮ್ಮ ಹೆಂಡತಿಯ ಗತಿಯೇನು?

ರೆಹಮಾನ್: ನಾವಿಬ್ಬರೂ ಈ ಕುರಿತು ಮದುವೆಗೆ ಮುಂಚೆಯೇ ಮಾತಾಡಿಕೊಂಡಿದ್ದೇವೆ. ಇಲ್ಲದೆ ಹೋಗಿದ್ದರೆ ಇಷ್ಟರಲ್ಲಿ ಬೇರೆಬೇರೆಯಾಗಿರುತ್ತಿದ್ದೆವು ಅನ್ನಿಸುತ್ತದೆ!

ಪ್ರಶ್ನೆ: ನಿಮ್ಮ ಮಡದಿ ಸಾಯಿರಾಬಾನು ಬಗ್ಗೆ ಏನು ಹೇಳಲು ಬಯಸುತ್ತೀರಿ?

ರೆಹಮಾನ್: ಆಕೆ ನನ್ನ ಕುಟುಂಬದ ಮತ್ತು ಮಕ್ಕಳ ಪಾಲಿಗೆ ಪಿಲ್ಲರ್ ಇದ್ದ ಹಾಗೆ. ನಾನು ಸ್ಟೇಜ್ ಮೇಲೆ ಪರ್ಫಾರ್ಮ್ ಮಾಡಬೇಕಾಗಿ ಬಂದಾಗ ಆಕೆಯೇ ನನ್ನ ಕಾಸ್ಟ್ಯೂಮ್ಸ್ ಡಿಸೈನ್ ಮಾಡುವುದು. ಸಹಜ ಚೆಲುವು ಮತ್ತು ಸಹಜ ಸ್ಟೈಲ್ ಬಗ್ಗೆ ಆಕೆಗೆ ಚೆನ್ನಾಗಿ ಗೊತ್ತು.



ಪ್ರಶ್ನೆ: ನೀವು ಕಂಪೋಸ್ ಮಾಡುವ ವಿಧಾನ ಎಂಥಾದ್ದು?

ರೆಹಮಾನ್: ಪ್ರತಿಬಾರಿ ನಾನು ಹಾಡಿನ ನಿರೀಕ್ಷೆಯಲ್ಲಿ ದೇವರ ನೆನೆಯುತ್ತಾ ಕೂರುತ್ತೇನೆ, ಭಿಕ್ಷುಕನೊಬ್ಬ ಬಟ್ಟಲು ಹಿಡಿದು ಕೂರುವ ಹಾಗೆ. ನನ್ನ ಪ್ರತಿ ಹಾಡಿಗೂ ಆತನ ಮೊರೆ ಹೋಗುತ್ತೇನೆ. ಆತನ ಸಹಾಯಕ್ಕಾಗಿ ಅಂಗಲಾಚುತ್ತೇನೆ. ಒಂದು ಹಾಡು ಅದೆಷ್ಟೋ ಮನಸ್ಸುಗಳಿಗೆ ನಾಟಬೇಕೆಂದರೆ ನಮ್ಮಂತಹ ಮಾಮೂಲಿ ಮನುಷ್ಯರಿಂದ ಅದು ಸಾಧ್ಯವಾಗುವುದಿಲ್ಲ, ದೇವರ ಅನುಗ್ರಹ, ಸಹಾಯ ಬೇಕೇಬೇಕು.

ಪ್ರಶ್ನೆ: ಕಾಯಕ ಮತ್ತು ದೇವರತ್ತ ಮಾತ್ರ ನಿಮ್ಮ ಗಮನವೆಂದು ನೀವು ಯಾವಾಗಲೂ ಹೇಳುತ್ತಿರುತ್ತೀರಿ... ನಿಮ್ಮ ಇತರ ಆಸಕ್ತಿ ಕ್ಷೇತ್ರಗಳೇನು?

ರೆಹಮಾನ್: ನನ್ನ ಮನಸ್ಥಿತಿಗೆ ಹೊಂದುವಂತಹ ದಾರಿಯೊಂದನ್ನು ನಾನು ಈಗಾಗಲೇ ಕಂಡುಕೊಂಡಿದ್ದೇನೆ. ಕೆಲವ್ರೊಮ್ಮೆ ಈ ದಾರಿಯಿಂದ ತುಸು ವಿಶ್ರಮಿಸಲು ಹೋಗಿ ನೊಂದಿದ್ದೇನೆ. ಒಂದೇ ಬದುಕಿನಲ್ಲಿ ಭಿನ್ನಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಳ್ಳುವುದು ನಿಜಕ್ಕೂ ಕಷ್ಟ. ಆದ್ದರಿಂದ ಸಂಗೀತ ಮತ್ತು ಆಧ್ಯಾತ್ಮಕ್ಕೆ ನನ್ನ ಮೊದಲ ಆದ್ಯತೆ.

ಪ್ರಶ್ನೆ: ದರ್ಗಾ ಮತ್ತು ಸೂಫಿ ಸಂತರ ಬಗ್ಗೆ ನಿಮಗೆ ತೀವ್ರವಾದ ಆಸಕ್ತಿ. ಜೋಧಾ ಅಕ್ಬರ್ ಚಿತ್ರದಲ್ಲಿ 'ಖ್ವಾಜಾ ಮೇರೆ ಖ್ವಾಜಾ' ಹಾಡಿನ ಮೂಲಕ ಈ ಕುರಿತಂತೆ ನಿಮಗಿರುವ ಆಸಕ್ತಿ, ಅಭಿಮಾನವನ್ನು ತೆರೆದಿಟ್ಟದ್ದೀರಿ. ಅಂದಹಾಗೆ ಸಿನಿಮಾ ಹೊರತಾಗಿ ಅಭಿಮಾನಿಗಳಿಗಾಗಿ ಈ ಬಗೆಯ ಭಾವನೆಗಳನ್ನುಳ್ಳ ಪ್ರೈವೇಟ್ ಆಲ್ಬಮ್ ಮಾಡುವ ಉದ್ದೇಶವೇನಾದರು ಇದೆಯಾ?

ರೆಹಮಾನ್: ಇಷ್ಟಕ್ಕೂ 'ಖ್ವಾಜಾ ಮೇರೆ ಖ್ವಾಜಾ' ಜೋಧಾ ಅಕ್ಬರ್ ಚಿತ್ರಕ್ಕಾಗಿ ಮಾಡಿದ ಗೀತೆಯಲ್ಲ, ನನ್ನ ಖುಷಿಗಾಗಿ ಮಾಡಿಕೊಂಡಿದ್ದ ಹಾಡು. ಇನ್ನು 'ಸೂಫಿ' ಬಗ್ಗೆ ಹೇಳುವುದಾದರೆ ಆ ಕುರಿತು ನನಗೆ ಎಲ್ಲಿಲ್ಲದ ಆಸಕ್ತಿ. ಸಾಧ್ಯವಾದರೆ ಮುಂದೊಮ್ಮೆ ಅಂಥದೊಂದು ಆಲ್ಬಮ್ ಮಾಡುವ ಐಡಿಯಾ ಅಂತೂ ನನಗಿದೆ. ಆದರೆ ಯಾವಾಗ ಅಂತ ನಿಖರವಾಗಿ ಹೇಳುವುದು ಕಷ್ಟ.

ಪ್ರಶ್ನೆ: ನಿಮ್ಮ ಆದರ್ಶ ವ್ಯಕ್ತಿತ್ವದ ಬಗ್ಗೆ ಇಡೀ ಜಗತ್ತೇ ಮಾತಾಡುತ್ತದೆ. ಈ ಕುರಿತು ಏನು ಹೇಳುತ್ತೀರಿ?

ರೆಹಮಾನ್: ದೇವರ ಆಶೀರ್ವಾದ.

ಪ್ರಶ್ನೆ: ನೀವು ಈಗಾಗಲೇ ಹೆಸರಾಂತ ನಿರ್ದೇಶಕರ ಜೊತೆಯೆಲ್ಲಾ ಕೆಲಸ ಮಾಡಿದ್ದೀರಿ. ಈ ಬಗ್ಗೆ ಏನನ್ನಿಸುತ್ತದೆ?

ರೆಹಮಾನ್: ನನ್ನ ಅದೃಷ್ಟವೋ ಏನೋ... ಮಣಿರತ್ನಂ, ಶ್ಯಾಮ್ ಬೆನಗಲ್, ಅಶುತೋಷ್ ಗೌರೀಕರ್, ರಾಕೇಶ್ ಓಂ ಪ್ರಕಾಶ್ ಮೆಹ್ರಾ, ಸುಭಾಷ್ ಘಾಯ್ ತರಹದವರೊಂದಿಗೆ ಕೆಲಸ ಮಾಡುವ ಭಾಗ್ಯ ಒದಗಿಬಂತು.



ಪ್ರಶ್ನೆ: ಅಮೀರ್ ಖಾನ್ ಬಗ್ಗೆ ನಿಮಗೆ ಎಲ್ಲಿಲ್ಲದ ಪ್ರೀತಿ, ಯಾಕೆ?

ರೆಹಮಾನ್: ಅಮೀರ್ ಖಾನ್ ನೇರವಂತಿಕೆಯ ವ್ಯಕ್ತಿ. ಅವರೊಂದಿಗೆ ಕೆಲಸ ಮಾಡಲು ನನಗೆ ಖುಷಿಯಾಗುತ್ತದೆ.

ಪ್ರಶ್ನೆ: ನಿಮ್ಮ ಮತ್ತು ಸಚಿನ್ ತೆಂಡೂಲ್ಕರ್ ನಡುವಿನ ಸ್ನೇಹದ ಬಗ್ಗೆ ಹೇಳಿ...

ರೆಹಮಾನ್: ಸಚಿನ್ ನನ್ನ ಪಾಲಿಗೆ ಅನಿರೀಕ್ಷಿತ ಸ್ನೇಹಿತ. ಅವರ ಪ್ರತಿಭೆ ಮತ್ತು ಭಾವನಾತ್ಮಕ ಗುಣ ನನಗಿಷ್ಟ.

ಪ್ರಶ್ನೆ: ನೀವು ಯಾರ ಫ್ಯಾನ್?

ರೆಹಮಾನ್: ರಜನಿಕಾಂತ್! ಕೆಲವ್ರೊಂದು ವಿಷಯಗಳಲ್ಲಿ ನನಗೆ ಯಾವ್ಯಾವುದರಲ್ಲಿ ನಂಬಿಕೆ ಇದೆಯೋ ಅವರಿಗೂ ಅವುಗಳಲ್ಲಿ ನಂಬಿಕೆ ಇದೆ. ಏನನ್ನಾದರೂ ಕಲಿತರೆ ಜೀವನದಿಂದ ಕಲಿಯಬೇಕು ಅನ್ನುವುದನ್ನು ನಾನು ರಜನಿಕಾಂತ್ ಅವರಿಂದ ಕಲಿತಿದ್ದೇನೆ.

ಪ್ರಶ್ನೆ: ನೀವು ಮಣಿರತ್ನಂ ನಿರ್ದೇಶನದ 'ದಿಲ್ ಸೇ' ಹಾಗೂ ಅಶುತೋಷ್ ಗೌರೀಕರ್ ನಿರ್ದೇಶನದ 'ಸ್ವದೇಶ್' ಚಿತ್ರಗಳಿಗೆ ಸಂಗೀತ ಕೊಟ್ಟಿದ್ದೀರಿ. ಈ ಎರಡೂ ಚಿತ್ರಗಳಲ್ಲಿ ಶಾರುಖ್ ಖಾನ್ ನಟಿಸಿದ್ದರು. ಮುಂದೆ ಶಾರುಖ್ ಅಭಿನಯದ ಯಾವುದಾದರೂ ಚಿತ್ರಕ್ಕೆ ಸಂಗೀತ ಕೊಡುವ ಸೂಚನೆಗಳಿವೆ?

ರೆಹಮಾನ್: ಸದ್ಯಕ್ಕೆ ಗೊತ್ತಿಲ್ಲ, ಮುಂದೆ ನೋಡೋಣ.

ಪ್ರಶ್ನೆ: ಒಬ್ಬ ವಿಶ್ವಮಾನ್ಯ ಸೆಲೆಬ್ರಿಟಿಯಾಗಿದ್ದುಕೊಂಡು ವಿವಾದಗಳಿಂದ ದೂರವಿರಲು ಹೇಗೆ ಶ್ರಮಿಸುತ್ತೀರಿ?

ರೆಹಮಾನ್: ನನಗೆ ಬಹಳಷ್ಟು ಜವಾಬ್ದಾರಿಗಳು ಮತ್ತು ಸಿದ್ಧಾಂತಗಳಿವೆ. ವೃಥಾ ಮೈಮೇಲೆ ಒತ್ತಡಗಳನ್ನು ಎಳೆದುಕೊಳ್ಳಲು ನನಗೆ ಸಮಯವಿಲ್ಲ, ಅಷ್ಟೇ!

ಪ್ರಶ್ನೆ: ನಿಮಗೆ ಬೇಜಾರಾದಾಗ ಕಾಮಿಡಿ ಸೀನ್ಸ್ ನೋಡುವುದಾಗಿ ಹೇಳಿಕೊಂಡಿದ್ದೀರಿ. ಯಾವ್ಯಾವ ತರಹದ ಕಾಮಿಡಿ ಸೀನ್ಸ್ ನೋಡುತ್ತೀರಿ?

ರೆಹಮಾನ್: ಕಾಮಿಡಿ ಅನ್ನುವುದು ಯೂನಿವರ್ಸಲ್ ಲಾಂಗ್ವೇಜ್. ನಾನು ಚಿಕ್ಕಂದಿನಿಂದಲೂ ನಾಗೇಶ್, ಸುರುಲಿರಾಜನ್, ತೇಂಗ ಶ್ರೀನಿವಾಸನ್, ಎಸ್.ವಿ.ಶೇಖರ್ ಮುಂತಾದವರ ಕಾಮಿಡಿ ನೋಡುತ್ತಲೇ ಬೆಳೆದವನು. ಚಾರ್ಲಿ ಚಾಪ್ಲಿನ್ ಕೂಡ ನನಗಿಷ್ಟ. ಈ ಕಲಾವಿದರೆಲ್ಲ ವರಪುತ್ರರು, ಅವರು ಜನರನ್ನು ಖುಷಿಪಡಿಸುತ್ತಿದ್ದರು.

ಪ್ರಶ್ನೆ: 'ರಾವಣ್' ಚಿತ್ರಕ್ಕೆ ಅಷ್ಟು ಒಳ್ಳೊಳ್ಳೆಯ ಟ್ಯೂನ್ಸ್ ಕೊಟ್ಟಿದ್ರಿ. ನೀವು ರಾಮಾಯಣ ಓದಿದ್ದುಂಟಾ?

ರೆಹಮಾನ್: ರಾಮಾಯಣವನ್ನು ಓದಬೇಕಾದ ಅಗತ್ಯವಿಲ್ಲ, ಅದು ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿ ನೆಲೆಯಾಗಿರುವ ಮಹಾಕಾವ್ಯ.

ಪ್ರಶ್ನೆ: ಯಾವುದಾದರೂ ಪಶ್ಚಾತ್ತಾಪವಿದೆಯಾ?

ರೆಹಮಾನ್: ಮೈಕಲ್ ಜಾಕ್ಸನ್ ಅವರ ಜೊತೆ ಕೆಲಸ ಮಾಡುವ ಅವಕಾಶ ಸ್ವಲ್ಪದರಲ್ಲಿ ಕೈತಪ್ಪಿ ಹೋಯಿತು ಅನ್ನುವ ನೋವು ಈಗಲೂ ನನ್ನಲ್ಲಿದೆ. ನಾವಿಬ್ಬರು ಎರಡು ಬಾರಿ ಭೇಟಿಯಾಗಿದ್ದವು. ಮೊದಲನೆಯ ಭೇಟಿ ನಾನು ಆಸ್ಕರ್ ಪ್ರಶಸ್ತಿ ಸ್ವೀಕರಿಸುವ ಸಂದರ್ಭದಲ್ಲಿ. ನನ್ನ 'ಜೈ ಹೋ' ಹಾಡಿನ ಬಗ್ಗೆ ಅವರು ನನ್ನೊಂದಿಗೆ ಮಾತಾಡಿದ್ದರು. ಹಾಗೆಯೇ ಭಾರತವೆಂದರೆ ಅವರಿಗೆ ಎಷ್ಟು ಪ್ರೀತಿ ಎನ್ನುವುದರ ಬಗ್ಗೆಯೂ ನನ್ನೊಂದಿಗೆ ಹಂಚಿಕೊಂಡಿದ್ದರು. ಒಟ್ಟಿಗೆ 'ವೀ ಆರ್ ದಿ ವರ್ಲ್ಡ್' ತರಹದ ಒಂದು ಸಾಂಗ್ ಮಾಡೋಣ ಅಂತಲೂ ಹೇಳಿದ್ದರು. ಮೈಕಲ್ ಜಾಕ್ಸನ್ ಒಂಥರಾ ಮಗುವಿನಂತಹ ವ್ಯಕ್ತಿ. ನನ್ನೆದುರೇ ಡಾನ್ಸ್ ಮಾಡಿ ತಾವು ಮುಂದೆ ಪ್ರಯೋಗಿಸಬೇಕಿರುವ ಒಂದಿಷ್ಟು ಸ್ಟೆಪ್ಸ್ ಬಗ್ಗೆ ಹೇಳಿದ್ದರು. ಹಾಗೇನೇ ಜಗತ್ತಿನ ಬೆಸ್ಟ್ ಥಿಂಗ್ಸ್ ಬಗ್ಗೆ ಕೂಡ ಅವರು ನನ್ನೊಟ್ಟಿಗೆ ಮಾತಾಡಿದ್ದರು. ಅವರ ಜೊತೆ ಒಂದು ಫೋಟೋ ತೆಗೆದುಕೊಳ್ಳೋಣ ಅಂತ ಅಂದುಕೊಂಡೆ. ಆದರೆ ಅವರಿಗೆ ಇರಿಟೇಟ್ ಮಾಡುವುದು ಬೇಡ ಅಂತ ಸುಮ್ಮನಾದೆ. ಆದಾದ ನಂತರ ನಾಲ್ಕು ಬಾರಿ ಫೋನಿನಲ್ಲಿ ಮಾತಾಡಿದೆವು. ಮತ್ತೊಮ್ಮೆ ಅವರನ್ನು ಭೇಟಿಯಾದೆ. ಅದೇ ಅವರ ಕಡೆಯ ಭೇಟಿ. ಅಷ್ಟರಲ್ಲಿ ತೀರಿಕೊಂಡರು.

● ಹೃದಯಶಿವ

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 21-01-2015 RNI No. KARKAN2005/14648

ಗಣೇಶ್-ಯೋಗರಾಜ್ ಮತ್ತೆ ಒಂದಾದರು



ಅದೊಂದು ಕಾಲವಿತ್ತು. ಆಗ 'ಮಣಿ', 'ರಂಗ ಎಸ್ಸೆಸ್ಸೆಲ್ಸಿ' ಎಂಬ ಎರಡು ಸಿನಿಮಾಗಳನ್ನು ಮಾಡಿಯೂ ಸಕ್ಸಸ್ ಕಾಣದೆ ಗಾಂಧಿನಗರದ ಮಂದಿಯಿಂದ ಮೂಲೆಗೊತ್ತರಿಸಲ್ಪಟ್ಟಿದ್ದ ಯೋಗರಾಜ್ ಭಟ್ ಮುಂದೇನು ಮಾಡಬೇಕೆಂಬ ಚಿನ್ನನ್ನಿನಲ್ಲಿದ್ದರು.

ಅದೇ ಹೊತ್ತಿಗೆ ಸರಿಯಾಗಿ ಒಂದಿಷ್ಟು ಸತ್ವಹೀನ ಧಾರಾವಾಹಿಗಳು, ಸಣ್ಣಪುಟ್ಟ ರೋಲ್‌ಗಳಿಗೆ ಮೀಸಲಾಗಿದ್ದ ಗಣೇಶ್ 'ಕಾಮಿಡಿ ಟೈಮ್' ತರಹದ ಕೆಲಸಗಳನ್ನು ಮಾಡಿಕೊಂಡು ಹೊಟ್ಟೆ, ಬಟ್ಟೆ ನೋಡಿಕೊಳ್ಳುತ್ತಿದ್ದರು. ಅದೆಲ್ಲದರ ಮಧ್ಯೆ 'ಚೆಲ್ಲಾಟ' ಎಂಬ ಚಿತ್ರದಲ್ಲಿ ಹೀರೋ ಆಗಿ ನಟಿಸಿದ್ದರು. ಇಂದಿಗೂ ಚೆನ್ನಾಗಿದೆ ಎನ್ನಿಸುವಂಥ ಒಂದೇ ಒಂದು ಸಿನಿಮಾವನ್ನು ಕೊಡಲಾಗದಿದ್ದರೂ ಹೇಗೋ ಗಾಂಧಿನಗರದಲ್ಲಿ ನೆಲೆಯನ್ನು ಮೇಂಟೇನ್ ಮಾಡಿಕೊಂಡು ಹೋಗುತ್ತಿರುವ ಎಂ.ಡಿ.ಶ್ರೀಧರ್ ನಿರ್ದೇಶನದ 'ಚೆಲ್ಲಾಟ'ದಲ್ಲಿ ಗಣೇಶ್ ಹೀರೋ ಆಗಿ ನಟಿಸಿದ್ದರೂ ದೊಡ್ಡ ಬ್ರೇಕ್ ಎಂಬುದು ಸಿಕ್ಕಿರಲಿಲ್ಲ.

ಅಂತಹ ಸಂದಿಗ್ಧದಲ್ಲಿ ಅದು ಹೇಗೋ ಈ ಯೋಗರಾಜ್ ಭಟ್-ಗಣೇಶ್ ಜೋಡಿ ಒಂದಾಯಿತು. ಗಣೇಶ್ ತನ್ನ ಊರಿನ ಕೃಷ್ಣಪ್ಪರನ್ನು ಭಟ್ಟರಿಗೆ ಪರಿಚಯಿಸಿ 'ಮುಂಗಾರು ಮಳೆ' ಉದಯಕ್ಕೆ ದಾರಿ ಸಲೀಸು ಮಾಡಿದರು. ಮೊದಲೆರಡು ಚಿತ್ರಗಳಲ್ಲಿ ಪ್ರೇಕ್ಷಕ ತನ್ನ ತಲೆಯ ಮೇಲೆ ಬಲವಾಗಿ ಮೊಟಕಿದ್ದನ್ನು ಅರಿತಿದ್ದ ಯೋಗರಾಜ್ 'ಮುಂಗಾರು ಮಳೆ'ಯಲ್ಲಿ ಗೆಲ್ಲಲೇಬೇಕಾಗಿತ್ತು. ಗೆಲುವಿಗಾಗಿ ಏನೇನೆಲ್ಲಾ ಕಸರತ್ತು ಮಾಡಲು ಸಾಧ್ಯವಿತ್ತೋ ಅವನ್ನೆಲ್ಲ ಮಾಡಿದರು. ಅವರೆಗೆ ನಾಗತಿಹಳ್ಳಿ ಚಂದ್ರಶೇಖರ್ ಚಿತ್ರಗಳಿಗೆ ಮಾತ್ರ ಮೀಸಲಿದ್ದ ಮನೋಮೂರ್ತಿ ಮಳೆಗೆ ಒಳ್ಳೊಳ್ಳೆಯ ಹಾಡು ಮಾಡಿಕೊಟ್ಟರು. ಕೃಷ್ಣ ಒಳ್ಳೆಯ ಕ್ಯಾಮರಾ ವರ್ಕ್ ಮಾಡಿದರು, ಕೃಷ್ಣ ತೆಗೆದ ಅಪರೂಪದ ಶಾಟ್‌ಗಳನ್ನು ದೀಪು ಎಸ್ ಕುಮಾರ್ ಒಂದು ಆಯಕಟ್ಟಿನಲ್ಲಿ ಎಡಿಟ್ ಮಾಡಿದರು. ಗಣೇಶ್ ಜೊತೆಗೆ ಅನಂತ್ ನಾಗ್ ಒಳ್ಳೆಯ ಸ್ಕೋರ್ ಮಾಡಿದರು.

ಇವೆಲ್ಲದರ ದೆಸೆಯಿಂದ 'ಮುಂಗಾರು ಮಳೆ' ಒಂದು ವರ್ಷ ಕಾಲ ಬಿಡದೆ ಸುರಿಯಿತು. ರಾತ್ರೋರಾತ್ರಿ ಗಣೇಶ್, ಯೋಗರಾಜ್, ಪೂಜಾ ಗಾಂಧಿ, ಮನೋಮೂರ್ತಿ, ಕೃಷ್ಣ ಮುಂತಾದವರೆಲ್ಲ ಸ್ಟಾರ್ ವ್ಯಾಲ್ಯೂ ಪಡೆದರು. ಅಲ್ಲಿಗೆ ಗಣೇಶ್-ಭಟ್ ಜೋಡಿಯ ಬದುಕಿನಲ್ಲಿ ಹೊಸ ಸೂರ್ಯೋದಯ. ಆ ಜೋಡಿ 'ಗಾಳಿಪಟ' ಕೂಡ ಹಾರಿಸಿ ಒಂದು ಮಟ್ಟಿಗೆ ಗೆದ್ದಿತ್ತು. ಅಲ್ಲಿಂದಾಚೆಗೆ ಈ ಜೋಡಿ ಮತ್ತೆಂದೂ ಒಟ್ಟಿಗೆ ಸಿನಿಮಾ ಮಾಡಿರಲಿಲ್ಲ.

ಈ ಮಾತು ಇಲ್ಲಿ ಯಾಕೆ ಅಂದರೆ ಗಣೇಶ್-ಯೋಗರಾಜ್ ಏಳು ವರ್ಷಗಳ ಬಳಿಕ ಈಗ ಮತ್ತೆ ಒಂದಾಗಲು ಹೊರಟಿದ್ದಾರೆ. ಆ ಚಿತ್ರ ಮುಂದಿನ ಏಪ್ರಿಲ್‌ನಲ್ಲಿ ಆರಂಭವಾಗುವ ನಿರೀಕ್ಷೆಯಿದ್ದು ಬಿ.ಸುರೇಶ ದುಡ್ಡು ಹಾಕುತ್ತಾರಂತೆ. ಈ ಮೊದಲು ಗಣೇಶ್ ಹಾಕಿಕೊಂಡು ಅದ್ಯಾವುದೋ ಒಂದು ಸಿನಿಮಾ ನಿರ್ಮಿಸಿದ್ದ ಬಿ.ಸುರೇಶ ಲಾಸ್ ಅನುಭವಿಸಿದ್ದರು. ಹಾಗೆಯೇ ಯೋಗರಾಜ್ ನಿರ್ದೇಶನ ಒಂದು ಹಿಂದಿ ಸಿನಿಮಾ ಮಾಡುತ್ತೇನೆ ಅಂದಿದ್ದರು, ಅದು ಆಗಲಿಲ್ಲ.

ಈ ಚಿತ್ರವನ್ನು ನಿರ್ಮಿಸುವ ಅನಿವಾರ್ಯತೆ ಬಿ.ಸುರೇಶರಿಗೆ ಎಷ್ಟಿದೆಯೋ ಗೊತ್ತಿಲ್ಲ, ಗಣೇಶ್-ಯೋಗರಾಜರಿಗೆ ಈ ಚಿತ್ರದ ಅಗತ್ಯ ಖಂಡಿತವಾಗಿ ಇದೆ. ಏಕೆಂದರೆ ಯೋಗರಾಜ್ ಭಟ್ ಚಿತ್ರಗಳು ತಮ್ಮ ಎಂದಿನ ಖದರ್ ತೋರಿಸುವಲ್ಲಿ ಒಂದರ ಹಿಂದೆ ಒಂದರಂತೆ ಬೀಳುತ್ತಿವೆ. ಹಾಗೆಯೇ ಗಣೇಶ್ ಹಾಕಿಕೊಂಡು ಸಿನಿಮ ಮಾಡುವ ಧೈರ್ಯ ಇವತ್ತು ಯಾವೊಬ್ಬ ನಿರ್ಮಾಪನಿಗೂ ಇಲ್ಲ, ಥಿಯೇಟರಿನಲ್ಲಿ ಕಲೆಕ್ಷನ್ ಇಲ್ಲದೆ ಖಾಲಿ ಹೊಡೆಯುವ ಗಣೇಶ್ ಚಿತ್ರದ ಹಕ್ಕುಗಳನ್ನು ಖರೀದಿಸಲು ಟಿವಿ ಚಾನಲ್‌ಗಳು ಹಿಂದೆಮುಂದೆ ನೋಡುವ ವಾತಾವರಣ ನಿರ್ಮಾಣವಾಗಿದೆ.

ತಾವು ಮಾಡಿದ್ದೇ ಸಿನಿಮಾ ಎಂಬ ಹಠಕ್ಕೆ ಬಿದ್ದಿರುವ ಯೋಗರಾಜ್ ಭಟ್ಟರ 'ವಾಸ್ತು ಪ್ರಕಾರ' ಹೇಗೋ ಕಷ್ಟಪಟ್ಟು ತನ್ನ ಹಕ್ಕುಗಳನ್ನು ಯಾವುದೋ ಚಾನೆಲ್ಲಿಗೆ ಮಾರಿಕೊಳ್ಳುವಲ್ಲಿ ಹರಸಾಹಸ ನಡೆಸಿದೆ.

ಈಗ ಹೇಳಿ ಈ ಜೋಡಿಯ ಮೂರನೇ ಚಿತ್ರ ಇವರಿಬ್ಬರಿಗೂ ಅನಿವಾರ್ಯವಲ್ಲದೆ ಮತ್ತಾರಿಗೆ?

ಅಭಿನೇತ್ರಿ ಈಗ ಒಂಭತ್ತು ಅವತಾರಗಳಲ್ಲಿ

ನಟಿ ಕಲ್ಪನಾ ಅವರ ಜೀವನವನ್ನು ಆಧರಿಸಿ ತಯಾರಾಗಿರುವ 'ಅಭಿನೇತ್ರಿ' ಚಿತ್ರದ ಬಗ್ಗೆ ನಿಮಗೆ ಗೊತ್ತು, ಈ ಚಿತ್ರ ಈಗಾಗಲೇ ತಯಾರಾಗಿದ್ದು ಬಿಡುಗಡೆಗೆ ಸಿದ್ಧವಾಗಿರುವ ಸಂಗತಿಯೂ ನಿಮಗೆ ಗೊತ್ತು, ಈ ಚಿತ್ರಕ್ಕೆ ಸಂಬಂಧಿಸಿದಂತೆ ಮತ್ತೊಂದು ಸುದ್ದಿ ಇದೀಗ ಹೊರಬಿದ್ದಿದೆ. ಅದೇನೆಂದರೆ 'ಅಭಿನೇತ್ರಿ' ಸಿನಿಮಾ ಕನ್ನಡದ ಜೊತೆಗೆ ಇನ್ನಿತರ ಎಂಟು ಭಾಷೆಗಳಲ್ಲಿ ಬರಲಿದೆ. ಕನ್ನಡ ಆವೃತ್ತಿ ಸಿದ್ಧವಾಗಿದ್ದು ಇತರ ಭಾಷೆಗಳಿಗೆ ಡಬ್ ಮಾಡುವ ಕಾರ್ಯ ನಡೆಯುತ್ತಿದೆ. ತಮಿಳು, ತೆಲುಗು, ಮರಾಠಿ, ಬಂಗಾಳಿ, ಹಿಂದಿ, ಭೋಜ್ ಪುರಿ, ಪಂಜಾಬಿ ಮತ್ತು ಮಲಯಾಳಂ ಭಾಷೆಗಳಿಗೆ ಚಿತ್ರದ ಸ್ಕ್ರಿಪ್ಟಿನ



ಅನುವಾದ ಕಾರ್ಯ ಆರಂಭವಾಗಿದೆ. ಇಷ್ಟಕಲ್ಲ ಕಲ್ಪನಾ ಅವರ ಬದುಕಿನಲ್ಲಿ ಘಟಿಸಿದ ಘಟನೆಗಳು ಯೂನಿವರ್ಸಲ್ ಎನ್ನಿಸಿಕೊಳ್ಳುವುದರಿಂದ ಈ ನಿರ್ಧಾರ ಕೈಗೊಂಡಿರುವುದಾಗಿ ಪೂಜಾ ಗಾಂಧಿ ಹೇಳುತ್ತಾರೆ. ಕನ್ನಡ ವರ್ಶನ್ ಇದೇ ತಿಂಗಳು ಬಿಡುಗಡೆಯಾಗಲಿದ್ದು ಈಗಾಗಲೇ ಪಬ್ಲಿಸಿಟಿ ಕೆಲಸದಲ್ಲಿ ಚಿತ್ರತಂಡ ನಿರತವಾಗಿದೆ. ಆದರೆ ಚಿತ್ರ ಯಾವತ್ತು ಬಿಡುಗಡೆ ಅನ್ನೋದು ಮಾತ್ರ ಇನ್ನಷ್ಟೇ ಪ್ರಕಟವಾಗಬೇಕಿದೆ.



ಟೈಟ್ಟು ಬೇಕಾ ಬಾಸ್?



ಇತ್ತೀಚಿನ ವರ್ಷಗಳಲ್ಲಿ ಗಾಂಧಿನಗರದ ಮಂದಿಗೆ ತಮ್ಮ ಚಿತ್ರದ ಕತೆ, ಚಿತ್ರಕತೆ, ಸಂಭಾಷಣೆ, ನಿರ್ದೇಶನ, ಅಭಿನಯ, ಸಾಹಿತ್ಯ ಸಂಗೀತ, ಛಾಯಾಗ್ರಹಣ, ಸಂಕಲನ ಇತ್ಯಾದಿಗಳಿಗಿಂತಲೂ ಮುಖ್ಯವಾಗಿರುವುದು ಒಂದು ಕ್ಯಾಚಿ ಟೈಟಲ್! ಟೈಟಲ್ ಆಕರ್ಷಣೀಯವಾಗಿದ್ದರೆ ಸಿನಿಮಾ ಗೆಲ್ಲುತ್ತದೆ ಅನ್ನುವ ಮಂದಿಯೂ ಗಾಂಧಿನಗರದಲ್ಲಿದ್ದಾರೆ. ಕೆಲವರಿಗೆ ಈ ಟೈಟಲ್ ಮೇನಿಯಾ ಎಷ್ಟಿದೆ ಎಂದರೆ ತಮಗಿಷ್ಟವಾದ ಟೈಟಲ್ ಯಾರ ಹತ್ತಿರವಿದ್ದರೂ ಸರಿಯೇ ಎಷ್ಟು ಹಣ ಕೊಟ್ಟರೂ ಪರವಾಗಿಲ್ಲ ಆ ಟೈಟಲನ್ನು ತಮ್ಮದಾಗಿಸಿಕೊಳ್ಳಬೇಕು, ತಮ್ಮ ಚಿತ್ರಕ್ಕೆ ಇಟ್ಟುಕೊಳ್ಳಬೇಕು. ಹಾಗೆಯೇ ಟೈಟಲ್ ವಿಷಯಕ್ಕೆ ದೊಡ್ಡ ದೊಡ್ಡ ರಾದ್ಧಾಂತಗಳೇ ಆಗಿರುವ ಉದಾಹರಣೆಗಳೂ ಗಾಂಧಿನಗರದಲ್ಲಿವೆ.

ಇಷ್ಟೆಲ್ಲಾ ಯಾಕೆ ಬರೆಯಬೇಕಾಯಿತು ಎಂದರೆ ಇವೆಲ್ಲದರ ಮಧ್ಯೆ 'ಟೈಟ್ಟು ಬೇಕಾ' ಎಂಬ ಚಿತ್ರವೊಂದು ಕನ್ನಡದಲ್ಲಿ ತಯಾರಾಗುತ್ತಿದೆ ಎಂಬ ವಿಷಯವನ್ನು ನಿಮಗೆ ತಿಳಿಸುವ ಸಲುವಾಗಿ. ಹೌದು, ಇಂಥದೊಂದು ಸಿನಿಮಾ ಈಗಾಗಲೇ ರೆಡಿಯಾಗಿದೆ. ಆನಂದ್.ಜೆ.ಕೆ. ಎಂಬಾತ ಈ 'ಟೈಟ್ಟು ಬೇಕಾ'ದ ನಿರ್ದೇಶಕ. ತಾವು ಅಸಿಸ್ಟೆಂಟ್ ಡೈರೆಕ್ಟರ್ ಆಗಿದ್ದಾಗಿನಿಂದಲೂ ಬಹಳ ಕಷ್ಟಪಟ್ಟು ಮೇಲೆ ಬಂದಿರುವುದಾಗಿ ಹೇಳಿಕೊಳ್ಳುವ ಆನಂದ್ "ಈ ಚಿತ್ರದಲ್ಲಿ ಲವ್ ಇರುತ್ತೆ ಆದರೆ ಫೀಲಿಂಗ್ಸ್ ಇರಲ್ಲ, ಇದೊಂದು ಮಾಸ್ ಅಪೀಲಿಂಗ್ ಸಿನಿಮಾ, ಆದರೆ ಫೈಟ್ ಇರಲ್ಲ, ಇದರಲ್ಲಿ ಸೆಂಟಿಮೆಂಟ್ ಇರುತ್ತೆ ಆದರೆ ಫ್ಯಾಮಿಲಿ ಡ್ರಾಮ ಅಲ್ಲ" ಎಂದು ತಮ್ಮ ಚಿತ್ರ ಎಂಥಾದ್ದು ಎಂದು ಬುದ್ಧಿವಂತಿಕೆಯಿಂದ ಹೇಳುವ ಪ್ರಯತ್ನದಲ್ಲಿ ಕಾಮಿಡಿ ಮಾಡುತ್ತಿದ್ದಾರೆ. ಅಂದಹಾಗೆ ಈ ಚಿತ್ರದ ಹೀರೋಯಿನ್ ನೇಹಾ ಪಾಟೀಲ್ ಪ್ರಕಾರ 'ಟೈಟ್ಟು ಬೇಕಾ' 2015ನೇ ಇಸವಿಯ ಮೋಸ್ಟ್ ಎಕ್ಸ್‌ಪೆಕ್ಟೆಡ್ ಮೂವಿಯಂತೆ!!

ಸಿದ್ದಪ್ಪಾಜಿ ಆಡಿಯೋ ಬಿಡುಗಡೆ



ಭಾರತದ ಮಟ್ಟಿಗೆ ರಾಮಾಯಣ ಮತ್ತು ಮಹಾಭಾರತಗಳು ಮಾತ್ರ ಮಹಾಕಾವ್ಯಗಳು ಎಂಬ ತಪ್ಪು ತಿಳಿವಳಿಕೆ ಇರುವ ಈ ಸಂದರ್ಭದಲ್ಲಿ ಪ್ರತಿಯೊಬ್ಬರೂ ಆಲೋಚಿಸಬೇಕಾದ ಒಂದು ಸಂಗತಿ ಇದೆ. ಅದೇನೆಂದರೆ ರಾಮಾಯಣ, ಮಹಾಭಾರತಗಳಷ್ಟೇ ಪ್ರಮುಖವಾಗಿ ಅಥವಾ ಅವೆರಡು ಕಾವ್ಯಗಳಿಗಿಂತಲೂ ಹೆಚ್ಚು ನೈಜ ಹಾಗೂ ಸ್ವಾಭಾವಿಕ ಕಾವ್ಯಗಳೆನ್ನಿಸಿಕೊಳ್ಳಬಲ್ಲ ಅದೆಷ್ಟೋ ಮೌಖಿಕ ಕಾವ್ಯಗಳು, ಜಾನಪದ ಕಾವ್ಯಗಳು ಈ ದೇಶದಲ್ಲಿವೆ. ಈ ನಿಟ್ಟಿನಲ್ಲಿ ಕರ್ನಾಟಕದ ಮಟ್ಟಿಗೆ ನೋಡುವುದಾದರೆ 'ಮಲೆ ಮಾದೇಶ್ವರ ಕಾವ್ಯ', 'ಮೈಲಾರಲಿಂಗ ಕಾವ್ಯ', 'ಜುಂಜಪ್ಪ ಕಾವ್ಯ', 'ಹಾಲುಮತ ಪುರಾಣ' ಹಾಗೂ 'ಮಂಟೇಸ್ವಾಮಿ ಕಾವ್ಯ'ಗಳು ಸೇರಿದಂತೆ ತುಳುನಾಡಿನ ಒಂದಿಷ್ಟು ಜನಪದ ಕಾವ್ಯಗಳು ಪ್ರಮುಖವಾದುವು.

ಈಗ ಮಂಟೇಸ್ವಾಮಿಯ ಪ್ರಿಯ ಶಿಷ್ಯ ಸಿದ್ದಪ್ಪಾಜಿಯ ಬದುಕು, ಬೆರಗುಗಳ ಸುತ್ತ ಹೆಣೆಯಲ್ಪಟ್ಟಿರುವ 'ಶ್ರೀ ಸಿದ್ದಪ್ಪಾಜಿ' ಎಂಬ ಹೆಸರಿನ ಚಿತ್ರವೊಂದು ಕನ್ನಡದಲ್ಲಿ ತಯಾರಾಗಿದೆ. ಬಿ.ಎಸ್.ಪುರುಷೋತ್ತಮ ಈ ಚಿತ್ರದ ನಿರ್ದೇಶಕ. ಈ ಚಿತ್ರದ ಆಡಿಯೋ ಸಿಡಿಗಳನ್ನು ಮಂತ್ರಿ ಎಚ್.ಎಸ್.ಮಹಾದೇವಪ್ರಸಾದ್ ಇತ್ತೀಚೆಗಷ್ಟೇ ಬಿಡುಗಡೆ ಮಾಡಿದರು. ಆ ಸಮಾರಂಭದಲ್ಲಿ ಮಂಟೇಸ್ವಾಮಿ ಪಾತ್ರ ಮಾಡಿರುವ ಶ್ರೀನಿವಾಸಮೂರ್ತಿ ಹಾಗೂ ಸಿದ್ಧಪ್ಪಾಜಿ ಪಾತ್ರದಲ್ಲಿ ಕಾಣಿಸಿಕೊಂಡಿರುವ ನವೀನ ಕೃಷ್ಣ ಪಾಲ್ಗೊಂಡಿದ್ದು ತಂತಮ್ಮ ಪಾತ್ರಗಳ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದರು. ನಾಡಿನ ಸಂಸ್ಕೃತಿ, ಸ್ವಂತಿಕೆ, ನೆಲದ ಘಮಲನ್ನು ಎತ್ತಿ ಹಿಡಿಯಬಲ್ಲ ಇಂತಹ ಕಾವ್ಯಗಳು ಇನ್ನಷ್ಟು ಹೆಚ್ಚಿನ ಸಂಖ್ಯೆಯಲ್ಲಿ ತೆರೆಗೆ ಬರಲಿ ಎಂದು ಆಶಿಸೋಣ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com